
ಕಸ್ತೂರಿ



ಜೂನ್, ೧೯೬೧

ಬೆಲೆ : ೭೫ ನ.ಪೈ.

ಜ್ಞಾನ ಮತ್ತು ಮನೋರಂಜನ

"ಕಸ್ತೂರಿ ಬಳಗ"ದ ಹೊಸ ಯೋಜನೆ

೬೦ ಸಂಚಿಕೆಗಳು ಪುಕ್ಕಟೆ!

ಪ್ರತಿತಿಂಗಳ ೧ನೇ ದಿನಾಂಕ ಪ್ರಕಟವಾಗುವದು

ಲೋಕಶಿಕ್ಷಣ ಟ್ರಸ್ಟಿನ ಪ್ರಕಾಶನ

* "ಕಸ್ತೂರಿ" ಇಂದು ನಮ್ಮ ಸರ್ವಶ್ರೇಷ್ಠ ಡೈಜೆಸ್ಟ್-ಸಾರಸಾಹಿತ್ಯ.
* ಪ್ರತಿ ತಿಂಗಳೂ ಎಷ್ಟೋ ಓದುಗರು ಪ್ರತಿಗಳ ಬಗ್ಗೆ ನಿರಾಶೆಯಾಗುತ್ತಿದ್ದಾರೆ. ಅದಕ್ಕಾಗಿ ಈ ಯೋಜನೆ. ಇಂದಿನಿಂದಲೇ "ಕಸ್ತೂರಿ"ಯು ಮುಂದಿನ ೬೦ ಸಂಚಿಕೆಗಳನ್ನು ಕಾಯ್ದಿರಿಸಿ. ಅದು ಪ್ರತಿ ತಿಂಗಳೂ ನೀವಿದ್ದಲ್ಲಿ ಕೈಸೇರುವದು.
* ನೀವು ಪ್ರತ್ಯೇಕ ಚಂದಾ ಹಣ ಕಳಿಸಬೇಕಾಗಿಲ್ಲ!
* ಕೇವಲ ರೂಪಾಯಿ ಒಂದುನೂರಾ ಇಪ್ಪತ್ತು (ರೂ. ೧೨೦) ಠೇವು ಇಟ್ಟರೆ ಸಾಕು.
* ಐದು ವರ್ಷಗಳಲ್ಲಿ ೬೦ ಸಂಚಿಕೆಗಳನ್ನೂ ಪಡೆದುದಲ್ಲದೆ ನಿಮ್ಮ ೧೨೦ ರೂ. ಗಳ ಠೇವನ್ನು ಮರಳಿ ಪಡೆಯುವಿರಿ.
* ಈ ಯೋಜನೆ ಜೂನ್ ೩೦, ೧೯೬೧ರ ವರೆಗೆ ಮಾತ್ರ ಊರ್ಜಿತದಲ್ಲಿರುವದು.
* ಕೂಡಲೇ "ಕಸ್ತೂರಿ ಬಳಗ" ಕ್ಕೆ ಸೇರಿರಿ.

ಕೆಳಗಿನ ಫಾರ್ಮನ್ನು ತುಂಬಿ ಹಣ ಸಹಿತ ಇಂದೇ ಕಳಿಸಿರಿ.

ವ್ಯವಸ್ಥಾಪಕರು "ಕಸ್ತೂರಿ ಬಳಗ," ಪೋ. ಬಾ. ನಂ. ೩೦, ಹುಬ್ಬಳ್ಳಿ.

ಮಿತ್ರರೆ, ನಿಮ್ಮ "ಕಸ್ತೂರಿ ಬಳಗ" ದ ಯೋಜನೆಯಲ್ಲಿ ಭಾಗ ವಹಿಸಲು ನಾನು ಅಪೇಕ್ಷಿಸುತ್ತೇನೆ. ಅದಕ್ಕಾಗಿ ರೂ. ೧೨೦ ನ್ನು ಇಂದು ಮ. ಆ./ಚೆಕ್ಕು/ಡ್ರಾಫ್ಟ್ ಮೂಲಕ ಕಳಿಸಿದ್ದೇನೆ. ಈ ಯೋಜನೆಯಂತೆ........೧೯೬೧ ರಿಂದ ೫ ವರ್ಷ ಕಾಲ ಕಸ್ತೂರಿ ಸಂಚಿಕೆಗಳನ್ನೂ ಆ ಅವಧಿಯ ಕೊನೆಗೆ ರೂ. ೧೨೦ ನ್ನೂ ಪಡೆಯಲು ಹಕ್ಕು ನನಗಿದೆ. ಕೂಡಲೆ "ಕಸ್ತೂರಿ ಬಳಗದ ಠೇವಿನ ರಶೀದಿ"ಯನ್ನು ಕಳಿಸಿರಿ.

ಹೆಸರು (ಪೂರ್ಣ) ____________________

ವಿಳಾಸ ____________________

ಪೋಸ್ಟ್ ____________ (ಜಿಲ್ಲಾ) ____________

ಕಸ್ತೂರಿ

ಬಾಯಿಯ ದುರ್ಗಂಧವನ್ನು ಕಾಲ್ಗೇಟಿನಿಂದ ತೊಲಗಿಸಿರಿ

ಅದರೊಂದಿಗೆ ದಿನವಿಡೀ

ದಂತಕ್ಷಯವನ್ನು ಇದಿರಿಸಿರಿ !



ಏಕೆಂದರೆ : ಕಾಲ್ಗೇಟ್ ಡೆಂಟಲ್ ಕ್ರೀಮ್‌ನೊಂದಿಗೆ ಒಮ್ಮೆ ಹಲ್ಲುಜ್ಜುವುದರಿಂದ ಬಾಯಿಯಲ್ಲಿ ದುರ್ಗಂಧವನ್ನುಂಟು ಮಾಡುವ ಹಾಗೂ ಹಲ್ಲುಗಳನ್ನು ಕ್ಷಯಿಸುವ ಶೇಕಡ 85ರಷ್ಟು ಕ್ರಿಮಿಗಳು ನಾಶವಾಗುತ್ತವೆ.

ಊಟವಾದೊಡನೆ ಕಾಲ್ಗೇಟನಿಂದ ಹಲ್ಲುಜ್ಜುವುದರಿಂದ ದಂತ-ಘಂಜನಗಳ ಇತಿಹಾಸದಲ್ಲೇ ಹಿಂದೆಂದೂ ಆಗದಷ್ಟು ಅಧಿಕ ಜನರ ದಂತಕ್ಷಯವನ್ನು ಅಧಿಕ ಪ್ರಮಾಣದಲ್ಲಿ ತಡೆಗಟ್ಟಲು ಸಾಧ್ಯವಾಗುತ್ತದೆ. ಇದಲ್ಲದೆ ಕಾಲ್ಗೇಟನಿಂದ 10ರಲ್ಲಿ 7 ಸಂದರ್ಭಗಳಲ್ಲಿ ಬಾಯಿಯ ದುರ್ಗಂಧವು ಕೂಡಲೇ ನಿವಾರಿಸಲ್ಪಡುತ್ತದೆ. ಈ ಎರಡು ಪ್ರಮಾಣಗಳನ್ನು ಕಾಲ್ಗೇಟ್ ವೈಜ್ಞಾನಿಕ ಪರೀಕ್ಷೆಗಳ ಮುಖೇನ ಸಿದ್ಧಗೊಳಿಸಿರುತ್ತದೆ. ಕಾಲ್ಗೇಟಿಗೆ ಮಾತ್ರ ಈ ಪ್ರಮಾಣವಿದೆ!


ಊಟವಾದ ಮೇಲೆ ಬರೀ ಬಾಯಿ ಮುಕ್ಕಳಿಸುವುದರಿಂದ ಪ್ರಯೋಜನವಾಗಲಾರದು–ಪ್ರತಿ ಊಟದ ಮೇಲೆ ತಪ್ಪದೆ ನಿಮ್ಮ ಹಲ್ಲುಗಳನ್ನು ಕಾಲ್ಗೇಟನಿಂದ ಉಜ್ಜಿರಿ. ಇದರ ಪ್ರಬಲವಾದ ಸಂದು ಸಂದುಗಳಿಗೆ ಒಳನುಗ್ಗುವ ನೊರೆಯು ಅಗೋಚರವಾದ ಹಲ್ಲುಗಳ ನಡುವಿನ ಸಂದುಗಳಿಗೆ ಹೊಕ್ಕು, ನಿಮ್ಮ ಬಾಯಿಯ ದುರ್ಗಂಧಕ್ಕೂ, ಹಲ್ಲುಗಳ ಕ್ಷಯಿಸುವಿಕೆಗೂ ಕಾರಣವಾದ ಆ ಕೊಳೆಯುತ್ತಿರುವ ಆಹಾರ ಕಣಗಳನ್ನು ನಿವಾರಿಸಿ ಸ್ವಚ್ಛಗೊಳಿಸುವುದು.

ಮಕ್ಕಳಿಗೆ ಕಾಲ್ಗೇಟನಿಂದ ಹಲ್ಲುಜ್ಜುವುದೆಂದರೆ ತುಂಬಾ ಪ್ರೀತಿ, ದೀರ್ಘಕಾಲ ಉಳಿಯುವ ಅದರ ನೆಚ್ಚಿನ ಪೆಪರ್‌ಮಿಂಟ್ ಸ್ವಾದವು ಇದರಲ್ಲಿ ಕೂಡಿರುತ್ತದೆ.

ಕಾಲ್ಗೇಟನಿಂದ ತಪ್ಪದೆ ಹಲ್ಲುಜ್ಜುವುದರಿಂದ

- ✔ ಬಾಯಿಯ ದುರ್ಗಂಧವು ನಿವಾರಿಸಲ್ಪಡುತ್ತದೆ
- ✔ ದಂತಕ್ಷಯವನ್ನು ವಿರೋಧಿಸಲಾಗುವುದು
- ✔ ಹಲ್ಲುಗಳು ಪರಿಶುಭ್ರವಾಗಿ ಉಳಿಯುವವು

ನಿಮಗೆ ಹಲ್ಲುಪುಡಿ ಹೆಚ್ಚು ಇಷ್ಟವಾಗಿದ್ದರೆ ಈ ಎಲ್ಲಾ ಪ್ರಯೋಜನಗಳನ್ನು ಕಾಲ್ಗೇಟ್ ಟೂತ್ ಪೌಡರ್‌ನಿಂದಲೂ ಪಡೆಯಿರಿ...ಒಂದು ಡಬ್ಬಿ ಹಲವು ತಿಂಗಳುಗಳವರೆಗೆ ಸಾಕಾಗುವುದು.



DCG.31 K

ಬಾಯಿಯ ದುರ್ಗಂಧವನ್ನು ನಿವಾರಿಸಲು ಮತ್ತು ಹಲ್ಲುಗಳು ಶುಭ್ರವಾಗಿರಲು... ಹೆಚ್ಚಿಗೆ ಜನರು ಪ್ರಪಂಚದ ಇನ್ನಿತರ ಡೆಂಟಲ್ ಕ್ರೀಮ್‌ಗಳಿಗಿಂತ ಅಧಿಕವಾಗಿ ಕಾಲ್ಗೇಟನ್ನೇ ಕೊಂಡುಕೊಳ್ಳುತ್ತಾರೆ

ಚಿಲ್ಲರೆ ನಯೆಪೈಸೆಗಳೆ ?

ಹತ್ತು, ನೂರರ ನೋಟುಗಳೆ ?

ಯಾವುದೇ ಇರಲಿ—

ವ್ಯವಸ್ಥಿತವಾಗಿ ಉಳಿಸಿ;

ಅಭಿವೃದ್ಧಿಯನು ಗಳಿಸಿ

ದಿನದ ಇಪ್ಪತ್ತೈದು ನಯೆಪೈಸೆಗಳು ಏಳುವರುಷಗಳಲ್ಲಿ ಏಳನೂರು ರೂಪಾಯಿಗಳ ನಿಧಿಯನ್ನು ನಿಮಗೆ ತಂದೊಪ್ಪಿಸುವ,

ಪಿಗ್ಮಿ

ಸಿಂಡಿಕೇಟ್ ಬೇಂಕ್ ಮೊದಲಾಗಿ ಪ್ರಾರಂಭಿಸಿದ ಮತ್ತೀಗ ಸರ್ವ ಜನಪ್ರಿಯವಾದ ಚಿಕ್ಕ ಉಳಿತಾಯ ಯೋಜನೆ

ವರುಷದ ಒಂದು ಸಾವಿರ ರೂಪಾಯಿಗಳು (ನೀವು ಇನ್ನೂರ ಐವತ್ತರಿಂದಲೂ ಪ್ರಾರಂಭಿಸಬಹುದು.) ಮೂವತ್ತೈದು ವರುಷಗಳಲ್ಲಿ ನೂರುಸಾವಿರ ರೂಪಾಯಿಗಳಿಗಿಂತಲೂ ಹೆಚ್ಚಿಗೆ ಸಂಪತ್ತನ್ನುಕೂಡಿಸಿ ಕೊಡುವ

ಇನ್ವೆಸ್ಟರ್ಸ್ ಏಜನ್ಸಿ

ಭಾರತೀಯ ಬೇಂಕಿಂಗ್ ಕ್ಷೇತ್ರದಲ್ಲೇ ನವೀನವಾಗಿ ಸಿಂಡಿಕೇಟ್ ಬೇಂಕ್ ಕೈಗೊಂಡಿರುವ ಮತ್ತೀಗ ಜನಾನುರಾಗಗಳಿಸುತ್ತಿರುವ ವಿನಿಯೋಗ ವಿಭಾಗ

ನಿಮಗೆ ಬೇಕಾದ ವಿವರಗಳನ್ನೀಯಲು ನಮ್ಮ
ನೂರನಲ್ವತ್ತೊಂದು ಶಾಖೆಗಳು ಸಿದ್ಧವಾಗಿವೆ.

ಅಥವಾ ನೀವು ನೇರವಾಗಿ ನಮ್ಮ ಪ್ರಧಾನ ಕಾರ್ಯಾಲಯಕ್ಕೆ ಬರೆಯುಬಹುದು.

ಸಿಂಡಿಕೇಟ್ ಬೇಂಕ್

ದಿ ಕೆನರಾ ಇಂಡಸ್ಟ್ರಿಯಲ್ & ಬೇಕಿಂಗ್ ಸಿಂಡಿಕೇಟ್ ಲಿಮಿಟೆಡ್

ರಿಜಿಸ್ಟರ್ಡ್ ಕಾರಾಲಯ: ಮುಕುಂದ ನಿವಾಸ, ಉಡುಪಿ

ಸ್ಥಾಪನೆ: ೧೯೨೫

ಕಸ್ತೂರಿ

ಕನ್ನಡ ಡೈಜೆಸ್ಟ್

ಪ್ರತಿತಿಂಗಳ ೧ ನೆ ದಿನಾಂಕ
ಪ್ರಕಟವಾಗುವುದು.

ಮುಖ್ಯ ಸಂಪಾದಕರು :
ರಂಗನಾಥ ದಿವಾಕರ

ಸಹಾಯಕ ಸಂಪಾದಕರು :
ಪಿ. ವಿ. ಆಚಾರ್ಯ

ಪ್ರಕಾಶಕರು :
ಲೋಕ ಶಿಕ್ಷಣ ಟ್ರಸ್ಟ್-ಹುಬ್ಬಳ್ಳಿ

ಕಚೇರಿ :
ಸಂಯುಕ್ತ ಕರ್ನಾಟಕ ಕಾರ್ಯಾಲಯ
ಹುಬ್ಬಳ್ಳಿ

ಮುದ್ರಕರು :
ಸಂಯುಕ್ತಕರ್ನಾಟಕಮುದ್ರಣಾಲಯ
ಹುಬ್ಬಳ್ಳಿ

ಮುಖಚಿತ್ರ :
ತಾಯಿ-ಮಗು
ಡಾ. ಡಿ. ವಿ. ರಾವ್

ಚಂದಾ ದರ :

ವಾರ್ಷಿಕ (ಅಂಚೆಸೇರಿ).	ರೂ.೮.೦೦
ಅರ್ಧ ವರ್ಷ —	ರೂ.೪.೫೦
ಬಿಡಿಸಂಚಿಕೆ —	ರೂ.೦.೭೫

Kasturi, June 1961

ಲೇಖಕರಿಗೆ ಸೂಚನೆ

ಕಸ್ತೂರಿಯಲ್ಲಿ ಪ್ರಕಟನೆಗಾಗಿ ಲೇಖ, ಪ್ರಬಂಧ, ಕಥೆ ಮೊದಲಾದವನ್ನು ಸ್ವೀಕರಿಸಲಾಗುವುದು. ಕಾಗದದ ಒಂದೇ ಮಗ್ಗಲಿಗೆ ವಿರಳವಾಗಿ ಬರೆದು ಕಳಿಸಬೇಕು. ಲೇಖಕರು ತಮ್ಮ ಹೆಸರು ವಿಳಾಸಗಳನ್ನು ಸ್ಪಷ್ಟವಾಗಿ ತಿಳಿಸಬೇಕಲ್ಲದೆ, ಅನುವಾದ, ರೂಪಾಂತರ ಇಲ್ಲವೆ ಸಾಧಾರ ಲೇಖಗಳಾದರೆ ಅವುಗಳ ಮೂಲ ಲೇಖಕ ಹಾಗು ಪ್ರಕಾಶಕರ ಹೆಸರು ವಿಳಾಸಗಳನ್ನೂ ಒದಗಿಸಬೇಕು. ಮೂಲ ಲೇಖಕರ ಅನುಮತಿ ಪಡೆದೇ ಲೇಖಗಳನ್ನು ಕಳಿಸಿದರೆ ಅವುಗಳ ಮೇಲೆ ಬೇಗನೆ ನಿರ್ಣಯಕ್ಕೆ ಬರಲು ಸುಲಭವಾಗುವುದು. ಅಸ್ವೀಕೃತ ಲೇಖಗಳು ತಿರುಗಿ ಬೇಕಾಗಿದ್ದರೆ **ಲೇಖಗಳ ಸಂಗಡವೇ** ತಿರುಗಿ ಕಳಿಸಲು ಅವಶ್ಯಬೀಳುವಷ್ಟು ಅಂಚೆ ತಿಕೀಟುಗಳನ್ನೂ ಕಳಿಸಿರಬೇಕು. ಲೇಖ ಸ್ವೀಕೃತವಾದರೆ ಯಥಾವಕಾಶ ಪ್ರಕಟಿಸಲಾಗುವದು. ಲೇಖಕರು ತಮ್ಮ ಲೇಖಗಳ ಸ್ಥಳಪ್ರತಿಗಳನ್ನು ಕಾಯ್ದಿಟ್ಟುಕೊಳ್ಳುವದೊಳಿತು. ಲೇಖಗಳು ಅಕಸ್ಮಾತ್ತಾಗಿ ಕಳೆದು ಹೋದರೆ ಸಂಪಾದಕರು ಹೊಣೆಗಾರರಲ್ಲ.

ಲೇಖ ಪ್ರಕಟವಾದರೆ "ಕಸ್ತೂರಿ"ಯು ಆಗಿಂದಾಗ್ಗೆ ಗೊತ್ತುಪಡಿಸಿಕೊಂಡ ಕ್ರಮದಲ್ಲಿ ಪ್ರತಿಫಲವನ್ನು ಆದಷ್ಟು ಬೇಗ ಕೊಡಲಾಗುವದು. ಲೇಖಗಳಲ್ಲಿ ಸೂಕ್ತ ಬದಲಾವಣೆ ಮಾಡಿಕೊಳ್ಳುವ ಅಧಿಕಾರ ಸಂಪಾದಕರಿಗಿದೆ.

ಚಂದಾದಾರರಿಗೆ ಸೂಚನೆ

ಪ್ರತಿತಿಂಗಳ "ಕಸ್ತೂರಿ" ಆಯಾ ತಿಂಗಳ ೧ನೇ ದಿನಾಂಕದೊಳಗೇ ಪ್ರಕಟವಾಗುವದು. ಅದು ಚಂದಾದಾರರಿಗೆ ಆಯಾ ತಿಂಗಳ ೫ನೇ ದಿನಾಂಕದೊಳಗೆ ತಲಪುವದು. ಹಾಗೆ ಬಾರದಿದ್ದರೆ ಚಂದಾದಾರರು ತಮ್ಮ ಟಪಾಲು ಕಟ್ಟೆಯಲ್ಲಿ ಮೊದಲು ವಿಚಾರಿಸಿ ನಮಗೆ ತಿಳಿಸಬೇಕು. ಚಂದಾದಾರರು ಕಾರ್ಯಾಲಯದೊಡನೆ ಪತ್ರವ್ಯವಹಾರ ಮಾಡುವಾಗ್ಗೆ ತಮ್ಮ ಚಂದಾ ನಂಬರು ಕಾಣಿಸಲು ಮರೆಯಬಾರದು.

ಈ ಸಂಚಿಕೆಯಲ್ಲಿ

ಪುಸ್ತಕವಿಭಾಗ

ಕಸ್ತೂರಿ

ಸಂಚಿಕೆ ೧೦ ಜೂನ್, ೧೯೬೧ ವರ್ಷ ೫

ಗಾಂಧೀಜಿ ಮತ್ತು ಪ್ರಾರ್ಥನೆ

ಆಚಾರ್ಯ ಕಾಕಾ ಕಾಲೇಲಕರ

ನನಗೆ ಮೊಟ್ಟಮೊದಲು ಗಾಂಧೀಜಿಯ ದರ್ಶನವಾದದ್ದು ಶಾಂತಿನಿಕೇತನದಲ್ಲಿ. ಕವಿವರ ರವೀಂದ್ರನಾಥ ಠಾಕೂರರು ಏಕನಿಷ್ಠ ದೇಶಭಕ್ತರು, ಭಾರತೀಯ ಸಂಸ್ಕೃತಿಯ ಉತ್ತಮ ಪ್ರತಿನಿಧಿ ಎಂದು ನಾನು ತಿಳಿಯುತ್ತಿದ್ದೆನಾದ್ದರಿಂದ ಅವರ ಸಾನ್ನಿಧ್ಯದಲ್ಲಿದ್ದರೆ ಏನಾದರೂ ಪ್ರಯೋಜನವಾಗಬಹುದು ಎಂದು ಶಾಂತಿನಿಕೇತನಕ್ಕೆ ಹೋಗಿದ್ದೆ.

ನಾನು ಸ್ವರಾಜ್ಯದ ದೃಢಸಂಕಲ್ಪ ಮಾಡಿದ್ದೆ; ಅದಕ್ಕಾಗಿ ಆವಶ್ಯಕವಾದ ರಾಜಕೀಯವನ್ನು ಅರಿತುಕೊಳ್ಳಲು ಪ್ರಯತ್ನಿಸುತ್ತಿದ್ದೆ. ಅದರ ಜೊತೆಯಲ್ಲಿ ನನಗೆ ಆಧ್ಯಾತ್ಮಿಕದ ಹಸಿವೂ ಇತ್ತು; ಭಕ್ತಿಮಾರ್ಗದಲ್ಲಿ ಆಕರ್ಷಣೆಯೂ ಇತ್ತು; ರಾಜನೀತಿ ಮತ್ತು ಅಧ್ಯಾತ್ಮ ಇವೆರಡರ ಸಮನ್ವಯವಾಗಲಾರದು ಎಂದು ನಾನು ತಿಳಿದಿದ್ದೆ. ಈ ಉಭಯ ಸಂಕಟದಲ್ಲಿ ಹಾದಿ ತೋರಿಸುವರಾರೂ ಇರಲಿಲ್ಲ. ಆದ್ದರಿಂದ ನಾನು ಹತಾಶನಾಗಿದ್ದೆ, ಅಸ್ವಸ್ಥಚಿತ್ತನಾಗಿದ್ದೆ.

ಮಹಾತ್ಮಾಜಿಯವರ ಆಶ್ರಮದ ಎಷ್ಟೋ ಜನ ನನಗಿಂತ ಮೊದಲೇ ಬಂದು ಶಾಂತಿನಿಕೇತನದಲ್ಲಿದ್ದರು. ಅವರೊಡನೆ ನನ್ನ ನಿಕಟ ಪರಿಚಯವಾಯಿತು. ಆ ಮೇಲೆ ಮಹಾತ್ಮಾಜಿ ಅಲ್ಲಿಗೆ ಬಂದರು. ಆ ಕಾಲದಲ್ಲಿ ಜನರು ಅವರನ್ನು 'ಮಹಾತ್ಮಾ' ಎಂದು ಕರೆಯದೆ 'ಕರ್ಮವೀರ' ಎಂದು ಕರೆಯುತ್ತಿದ್ದರು. ನಾನು ಈ ಸುಸಂಧಿಯ ಲಾಭವನ್ನು ಹೊಂದಿದೆ. ಎಂಟು ದಿನಗಳ ವರೆಗೆ ಅವರ ಜೊತೆ ಕುಳಿತು ಆಧ್ಯಾತ್ಮಿಕ, ರಾಜಕೀಯ, ಆರೋಗ್ಯ ವಿಚಾರಗಳ

"ಮಂಗಲ ಪ್ರಭಾತ" ದಿಂದ

ಬಗ್ಗೆ ನಾನಾ ಪ್ರಶ್ನೆಗಳನ್ನು ಕೇಳಿದೆ, ಚರ್ಚಿಸಿದೆ. ಕೊನೆಯಲ್ಲಿ ಯಾವನು ತನ್ನ ಜೀವನದ ಸಂಪೂರ್ಣ ವಿಕಾಸವನ್ನು ಮಾಡಿಕೊಂಡು ಅದನ್ನು ಭಗವದ್ಭಕ್ತಿಯಲ್ಲಿ ತೊಡಗಿಸಿರುವನೊ ಅಂಥ ವ್ಯಕ್ತಿ ಈತನೊಬ್ಬನೇ ಎಂದು ನನಗೆ ನಂಬಿಕೆಯಾಯಿತು. ಅವರು ನನ್ನ ವ್ಯಗ್ರತೆಯನ್ನು ದೂರ ಮಾಡಿದರು. ರಾಜಕಾರಣದಲ್ಲಿ ಆಧ್ಯಾತ್ಮಿಕತೆ ಪ್ರಕಟವಾಗಬಹುದು ಮಾತ್ರವಲ್ಲ, ಅದನ್ನು ಅಲ್ಲಿ ಪ್ರಕಟಿಸುವುದು ಅಗತ್ಯವಾಗಿದೆ ಎಂದು ಅವರು ಹೇಳಿದರು.

ಎಲ್ಲ ಕಾರ್ಯಗಳನ್ನು ದೇವರ ಕಾರ್ಯವೆಂದೇ ತಿಳಿದು ಗಾಂಧೀಜಿಯವರು ಮಾಡುತ್ತಿದ್ದರು. ಅವರ ಸಂಪೂರ್ಣ ಶ್ರದ್ಧೆ ಪರಮಾತ್ಮನಲ್ಲಿತ್ತು. ಅವರ ತೀವ್ರ ಈಶ್ವರನಿಷ್ಠೆಯ ಒಂದು ಪ್ರಸಂಗ ನೆನಪಿಗೆ ಬರುತ್ತಿದೆ. ಖಾದಿಯಾತ್ರೆಗಾಗಿ ನಾವು ದಕ್ಷಿಣ ಭಾರತದಲ್ಲಿ ಸಂಚರಿಸುತ್ತಿದ್ದೆವು. ಆಂಧ್ರದ ಚಿಕಾಕೋಲ್ ಒಳ್ಳೆಯ ಖಾದೀ ಕೇಂದ್ರವಾಗಿದೆ. ನಾವು ಅಲ್ಲಿಗೆ ಸಂಜೆ ಏಳು ಗಂಟೆಗೆ ಮುಟ್ಟಬೇಕಾದವರು ರಾತ್ರಿ ೧೦ ಗಂಟೆಗೆ ಮುಟ್ಟಿದೆವು. ಗಾಂಧೀಜಿಯೆದುರು ನೂಲುವ ಪ್ರದರ್ಶನ ಮಾಡಿ ತೋರಿಸಲೆಂದು ಅನೇಕ ಮಹಿಳೆಯರು ಮೂರು ಗಂಟೆಯ ಕಾಲ ಕಾದು ಕುಳಿತಿದ್ದರು. ಚಿಕಾಕೋಲನ್ನು ತಲುಪಿದೊಡನೆ ಗಾಂಧೀಜಿ ನೂಲುವ ಪ್ರದರ್ಶನ ಜರುಗಲಿದ್ದ ಸ್ಥಳಕ್ಕೆ ನಡೆದರು. ಮಹಾದೇವ ಭಾಯಿ ಮತ್ತು ನಾನು ನಮ್ಮ ವಾಸಸ್ಥಾನಕ್ಕೆ ಹೋದೆವು. ನಾವು ತುಂಬಾ ಬಳಲಿಹೋಗಿದ್ದೆವು. ಮನೆ ಮುಟ್ಟುವ ಪುರಸತ್ತಿಲ್ಲದೆ ಮಲಗಿ ನಿದ್ದೆ ಹೋದೆವು.

ಬೆಳಗಿನ ಜಾವ ನಾಲ್ಕು ಗಂಟೆಗೆ ನಾವೆಲ್ಲ ಪ್ರಾರ್ಥನೆಗಾಗಿ ಒತ್ತಟ್ಟಿಗೆ ಸೇರಿದೆವು. ಆಗ ಬಾಪೂಜಿ "ಮಹಾದೇವ, ನಿನ್ನೆ ಪ್ರಾರ್ಥನೆಯ ಗತಿಯೇನಾಯಿತು?" ಎಂದು ಕೇಳಿದರು. ನನ್ನ ಎದೆ ಕಂಪಿಸಿತು. ಮಹಾದೇವ ಭಾಯಿ ಮೌನದಿಂದಿರುವುದನ್ನು ಕಂಡು ನಾನೆಂದೆ: "ನಾನು ಬಂದವನೇ ಮಲಗಿ ಬಿಟ್ಟೆ. ಪ್ರಾರ್ಥನೆ ಮಾಡುವುದನ್ನು ನಾನು ಮರೆತುಬಿಟ್ಟೆ." "ನಾನೂ ಮರೆತಿದ್ದೆ. ಆದರೆ ಒಂದು ನಿದ್ದೆಯಾಗಿ ಎಚ್ಚರಾದ ಬಳಿಕ ಹಾಸಿಗೆಯ ಮೇಲೆ ಕುಳಿತು ಮನಸ್ಸಿನಲ್ಲಿಯೆ ಪ್ರಾರ್ಥನೆ ಹೇಳಿ ಮಲಗಿದೆ. ಕಾಕಾರನ್ನು ಎಬ್ಬಿಸಲಿಲ್ಲ" ಎಂದು ಮಹಾದೇವ ಭಾಯಿ ಹೇಳಿದರು.

ಬಾಪೂ ಹೇಳಿದರು: "ನಿನ್ನೆ ರಾತ್ರಿ ಪ್ರಾರ್ಥನೆ ಮಾಡುವುದು ನನಗೂ ಮರೆತೇ ಹೋಯಿತು. ತುಂಬ ದಣಿದದ್ದರಿಂದ ಮಲಗಿ ನಿದ್ದೆಹೋಗಿಬಿಟ್ಟೆ. ಮೂರು ಗಂಟೆಗೆ ಎಚ್ಚರಾದ ಮೇಲೆ ನೆನಪಾಯಿತು. ಆಗಿನಿಂದಲೂ ನನ್ನ ದೇಹ ಕಂಪಿಸುತ್ತಿದೆ. ನಾನು ತುಂಬ ಅಸ್ವಸ್ಥನಾಗಿದ್ದೇನೆ. ಹೀಗೆ ಹೇಗಾಯಿತು ಎಂದು ಯೋಚಿಸುತ್ತಿದ್ದೇನೆ. ಪರಮಾತ್ಮನನ್ನು ನಾನು ಮರೆತದ್ದಾದರೂ ಎಂತು? ಯಾವನು ನನ್ನ ಪ್ರತಿಯೊಂದು ಉಸಿರಿನ ಒಡೆಯನಾಗಿರುವನೋ, ಯಾವನ ಆಧಾರದಿಂದ ನನ್ನದೆಲ್ಲವೂ ನಡೆಯುತ್ತಿದೆಯೊ ಅಂಥವನನ್ನು ನಿದ್ದೆಗಾಗಿ ನಾನು ಮರೆಯುವುದಾದರೆ ನನ್ನಿಂದ ಯಾವ ಕಾರ್ಯವಾದೀತು? ನಾನು ಅವನ ಪ್ರಾರ್ಥನೆ ಮಾಡುವುದನ್ನು ಹೇಗೆ ಮರೆತೆ?"

ನಾವು ಪ್ರಾರ್ಥನೆ ಮಾಡಿ ನಮ್ಮ ನಮ್ಮ ಕಾರ್ಯಗಳಲ್ಲಿ ತೊಡಗಿದೆವು. ಅವರು ಊಟಕ್ಕೆ ಕುಳಿತಾಗ ಹೇಳಿದೆ: "ಬಾಪೂಜಿ, ಒಂದು ಮಾತು ಹೇಳಲೆ?"

ಅವರು ನಕ್ಕು "ಹೇಳಿ" ಎಂದರು.

"ಒಬ್ಬ ಮುಸ್ಲಿಂ ಸಂತರಿದ್ದರು. ಬಲು ದೊಡ್ಡ ಈಶ್ವರ ಭಕ್ತ. ದಿನದಲ್ಲಿ ಐದು ಸಾರಿ ಪ್ರಾರ್ಥನೆ ಮಾಡುತ್ತಿದ್ದರು. ಒಂದು ದಿನ ತುಂಬ ಬಳಲಿದ್ದಾಗ ಮಲಗಿಬಿಟ್ಟರು. ಪ್ರಾರ್ಥನೆಯ ಸಮಯವಾದಾಗ ಯಾರೋ ಬಂದು, "ಏಳಿ, ಪ್ರಾರ್ಥನೆಯ ಸಮಯವಾಗಿದೆ" ಎಂದು ಅವರನ್ನೆಬ್ಬಿಸಿದರು.

ಅವರು ಎದ್ದು ಎಬ್ಬಿಸಿದವನ ಉಪಕಾರವನ್ನು ಸ್ಮರಿಸುತ್ತ "ಬಂಧು, ನೀನು ನನಗೆ ಬಹುದೊಡ್ಡ ಉಪಕಾರ ಮಾಡಿರುವೆ. ನನ್ನ ಪ್ರಾರ್ಥನೆ ನಿಂತು ಹೋಗಿದ್ದರೆ ಏನಾಗುತ್ತಿತ್ತು! ನಿನ್ನ ಹೆಸರು?" ಎಂದು ಕೇಳಿದರು.

"ನನ್ನ ಹೆಸರು ಸೈತಾನ."

ಸಂತರಿಗೆ ಆಶ್ಚರ್ಯವಾಯಿತು. ಅವರೆಂದರು "ಸೈತಾನ! ಅರೆ! ಜನರು ಪ್ರಾರ್ಥನೆ ಮಾಡುವುದನ್ನು ತಪ್ಪಿಸುವುದೇ ನಿನ್ನ ಕಾರ್ಯ, ಧರ್ಮ ಕಾರ್ಯಕ್ಕೆ ಆತಂಕವುಂಟುಮಾಡುವುದೇ ನಿನ್ನ ಉದ್ಯೋಗ. ಹೀಗಿರುವಾಗ ಪ್ರಾರ್ಥನೆ ಮಾಡಲು ನನ್ನನ್ನು ಎಬ್ಬಿಸಿದ್ದು ಆಶ್ಚರ್ಯ!"

ಸೈತಾನ ಉತ್ತರವಿತ್ತ: "ಇದರಲ್ಲಿ ನನ್ನ ಸ್ವಾರ್ಥವೂ ಇದೆ. ಈ ಹಿಂದೆಯೂ ನೀವು ಒಮ್ಮೆ ಇದೇ ರೀತಿ ಮಲಗಿದ್ದಿರಿ. ಪ್ರಾರ್ಥನೆಯ ಸಮಯ ತಪ್ಪಿತು. ನಾನು ಪ್ರಸನ್ನನಾದೆ. ಆದರೆ ಎಚ್ಚತ್ತ ಮೇಲೆ ನೀವು ಪಶ್ಚಾತ್ತಾಪಪಟ್ಟುಕೊಂಡಿರಿ. ಅತ್ತಿರಿ. ನೀವು ಎಷ್ಟೊಂದು ದುಃಖಿಗಳಾದಿರೆಂದರೆ ಪರಮಾತ್ಮನಿಗೆ ನೀವು ಇನ್ನಿಷ್ಟು ಪ್ರಿಯರಾದಿರಿ. ಆದ್ದರಿಂದ ಮತ್ತೊಮ್ಮೆ ಹಾಗಾಗದಿರಲಿ, ಪರಮಾತ್ಮನಿಗೆ ನೀವು ಇನ್ನಿಷ್ಟು ಪ್ರಿಯರಾಗುವುದು ತಪ್ಪಲಿ ಎಂದು ಯೋಚಿಸಿದೆ. ಹಾಗಾಗುವುದಕ್ಕಿಂತಲೂ ನಿಮ್ಮನ್ನು ಪ್ರಾರ್ಥನೆಗಾಗಿ ಎಬ್ಬಿಸುವುದೇ ಒಳ್ಳೆಯದೆಂದು ತಿಳಿದೆ."

ಬಾಪೂ ಕಥೆಯನ್ನು ಕೇಳಿದರು. ಆಮೇಲೆ "ಘಟಿಸಿದ ತಪ್ಪಿಗಾಗಿ ಅಂತಃಕರಣ ಪೂರ್ವಕವಾಗಿ ಪಡುವ ಪಶ್ಚಾತ್ತಾಪ ಪರಮಾತ್ಮನ ಪ್ರೇಮಕ್ಕೆ ಕಾರಣವಾಗುವುದು" ಎಂದರು.

೧೯೧೫ ರಿಂದ ಕೊನೆಯವರೆಗೂ ನಾನು ಮಹಾತ್ಮಾಜಿಯವರ ಜೀವನವನ್ನು ನೋಡಿದ್ದೇನೆ. ಅವರ ದೇವಧ್ಯಾನ ಮತ್ತು ಚಿಂತನವನ್ನು ಕಂಡಿದ್ದೇನೆ. ಎಂದೂ, ಒಂದು ನಿಮಿಷವಾದರೂ ಅವುಗಳಿಗೆ ಬಾಧೆ ಬಂದಿಲ್ಲ. ಅವರ ಪಾದಗಳಿಂದ ಹಿಡಿದು ತಲೆಯವರೆಗೆ ಭಗವದ್ಭಕ್ತಿ ವ್ಯಾಪಿಸಿತ್ತು. ಪ್ರಾರ್ಥನೆಗಾಗಿ ಅವರು ಎಂದೂ ಹೆಚ್ಚು ಸಮಯವನ್ನು ಕೊಡಲಿಲ್ಲ. ಅದರಲ್ಲಿ ಕಡಿಮೆಯನ್ನೂ ಮಾಡಲಿಲ್ಲ. ನಿಶ್ಚಿತ ವೇಳೆಗೆ ಎಲ್ಲರೊಡನೆಪ್ರಾರ್ಥನೆಗಾಗಿ ಕುಳಿತು ಅದರಲ್ಲಿ ತಲ್ಲೀನರಾಗಿಹೋಗುತ್ತಿದ್ದರು. ಪ್ರಾರ್ಥನೆ ಮುಗಿಯಿತೊ ಇನ್ನೊಂದು ಕಾರ್ಯದಲ್ಲಿ ಮಗ್ನರಾಗಿಬಿಡುತ್ತಿದ್ದರು.

"ಈ ಕಾರ್ಯವೂ ಪರಮಾತ್ಮನ ಕಾರ್ಯ, 'ಕೆಲಸ'ದ ಸಮಯವನ್ನು ಕದ್ದು 'ಜಪ'ದಲ್ಲಿ ತೊಡಗಿದರೆ ಪರಮಾತ್ಮ ಬೇಸರಿಸುವನು"— ಎಂದು ತಿಳಿದುಕೊಂಡೇ ಅವರು ಎಲ್ಲ ಕೆಲಸಗಳನ್ನೂ ಮಾಡುತ್ತಿದ್ದರು. *

ಪ್ರಸಿದ್ಧ ನಟನೊಬ್ಬ ಇನ್ನೊಬ್ಬ ನಟನ ಹೆಸರು ಕೇಳಿದರೇ ಉರಿದುಬೀಳುತ್ತಿದ್ದ. ಒಂದು ದಿನ ಅವನ ಬಾಯಿಂದ ನಿಂದೆಯ ಮಾತು ಕೇಳಿ ಸಾಕಾಗಿ ಅವನ ಮಿತ್ರ ಛೀ ಹಾಕುತ್ತ "ಎಲ್ಲರನ್ನೂ ಪ್ರೀತಿಸಬೇಕೆಂದು ಬೈಬಲ್‌ನಲ್ಲಿ ಹೇಳಿದೆ, ಓದಿಲ್ಲವೆ ನೀನು?" ಎಂದ.

"ಓದಿದ್ದೇನಯ್ಯಾ" ಎಂದನಾತ. "ಆದರೆ ಅದನ್ನು ಬರೆದಾಗ ಈ ಮನುಷ್ಯ ಇನ್ನೂ ಹುಟ್ಟಿರಲಿಲ್ಲ!"

* *

ನೆಗಡಿಗೆ ಖಾತ್ರಿ ಔಷಧ ಗೊತ್ತಿಲ್ಲದವರೆಂದರೆ ಡಾಕ್ಟರರು ಮಾತ್ರ.

ಬಿಂದುವಿನಲ್ಲಿ ಸಿಂಧು

ಖಲೀಲ್ ಗಿಬ್ರಾನ್

ನನಗೆ ಮೌನವನ್ನು ದಯಪಾಲಿಸು. ನಾನಾಗ ಇರುಳಿಗೂ ಹೆದರದೆ ಧೈರ್ಯದಿಂದಿರಬಲ್ಲೆ.

ಮಾನವನ ಕಲ್ಪನೆಗೂ ಸಿದ್ಧಿಗೂ ಮಧ್ಯ ಅಂತರವಿದೆ. ಈ ಅಂತರವನ್ನು ಅವನ ಆತುರ ಮಾತ್ರ ಅಲ್ಲಗಳೆಯಬಲ್ಲದು.

ಇಬ್ಬರು ವನಿತೆಯರು ಹರಟುತ್ತಿದ್ದಾಗ ಅದರಲ್ಲಿ ಏನೂ ಅರ್ಥವಿರುವುದಿಲ್ಲ. ಆದರೆ ಒಬ್ಬಳೇ ವನಿತೆ ನುಡಿಯುತ್ತಿದ್ದಾಗ ಬದುಕನ್ನೇ ಬಿಚ್ಚಿ ಎದುರಿಗಿಟ್ಟಂತೆ.

ಅನೇಕ ಬೋಧಗಳು ಕಿಡಿಕಿಗಳಿದ್ದಂತೆ ಇವೆ; ಅವುಗಳ ಮುಖಾಂತರ ನಾವು ಸತ್ಯವನ್ನು ಕಂಡರೂ ಅವು ನಮ್ಮನ್ನು ಸತ್ಯದಿಂದ ಬೇರ್ಪಡಿಸಿಯೇ ಇವೆ.

ಜೀವನದ ಹೃದಯದಾಳವನ್ನೇ ನೀನು ತಲುಪಿದಾಗ ನಿನಗೆ ಎಲ್ಲೆಲ್ಲೂ ಚೆಲುವೇ ಗೋಚರಿಸುವುದು.

ಹೆಂಗಳೆಯರ ಸಣ್ಣ ತಪ್ಪುಗಳನ್ನು ಕ್ಷಮಿಸಲಾರದ ಗಂಡಸು ಎಂದೆಂದಿಗೂ ಅವರ ಸದ್ಗುಣಗಳ ಸವಿಯನ್ನು ಸವಿಯಲಾರ.

ನಿನಗಿಂತಲೂ ನನಗೆ ಹೆಚ್ಚು ಅವಶ್ಯವಿದ್ದುದನ್ನು ನೀನು ನನಗೆ ಕೊಟ್ಟರೆ ಅದು ಉದಾರತೆಯಲ್ಲ; ಆದರೆ ನನಗಿಂತಲೂ ನಿನಗೆ ಹೆಚ್ಚು ಅವಶ್ಯವಿದ್ದುದನ್ನು ನೀನು ನನಗೆ ಕೊಟ್ಟರೆ ಮಾತ್ರ ಅದು ಉದಾರತೆ.

ಒಮ್ಮೆ ನಾನು ಹಳ್ಳದ ಮುಂದೆ ಸಾಗರವನ್ನು ಬಣ್ಣಿಸಿದೆ. ಅದು ನನ್ನನ್ನು ಅತಿರಂಜಕ ಕಲ್ಪಕನೆಂದು ಬಗೆಯಿತು. ಮತ್ತೊಮ್ಮೆ ನಾನು ಸಾಗರದೆದುರು ಹಳ್ಳದ ಬಗ್ಗೆ ಹೇಳಿದೆ. ಅದು ನನ್ನನ್ನು ಸಂಕುಚಿತ ಅಜ್ಞನೆಂದು ಬಗೆಯಿತು.

ಯಾರಿಗೂ ತಾನು ಒಡೆಯನಾಗದ ಹಾಗೂ ಯಾರನ್ನೂ ತನ್ನ ಒಡೆಯರೆನ್ನದವನೇ ನಿಜವಾಗಿಯೂ ದೊಡ್ಡ ಮನುಷ್ಯ.

ದ್ವೇಷಿಯ ಮೌನ ಮಹಾ ಅಪಾಯದ್ದು.

ನಿಜವನ್ನು ಆಡುವವನಿಗಿಂತ ನಿಜವನ್ನು ಆಲಿಸುವವನೇನೂ ಕಡಿಮೆಯವನಲ್ಲ.

ಸುಖ-ದುಃಖಗಳನ್ನು ನಾವು ಅನುಭವಿಸುವ ಮೊದಲೇ ನಾವವುಗಳನ್ನು ಆರಿಸಿಕೊಂಡಿರುತ್ತೇವೆ.

ಬಯಕೆ ಬದುಕಿನ ಅರ್ಧಾಂಗ; ಅನಾಸ್ಥೆ ಮರಣದ ಅರ್ಧಾಂಗ.

ನಿಸರ್ಗದಿಂದ ಆನಂದದತ್ತ ನಡೆದಿರುವ ಹೆಜ್ಜೆಯೇ ಕಲೆ.

ಸಂಗ್ರಹ : ಟಿ. ಎಸ್. ಸಾವನಗೌಡರು

ರಾಷ್ಟ್ರೀಯ ಶೀಲ ಮತ್ತು ಪ್ರಜ್ಞೆ

ಇ. ಟಿ. ಫರ್ನಾಂಡೀಸ್

ಒಂದು ಕುಟುಂಬದಲ್ಲಿ ತಂದೆಯು ತನ್ನ ಮಕ್ಕಳಿಗಾಗಿ ನಿಯಮಗಳನ್ನು ಮಾಡುತ್ತಾನೆ, ಮತ್ತು ತಾನು ದೇಶದ ಕಾಯದೆಗಳಿಗೆ ತಲೆಬಾಗುತ್ತಾನೆ. ಕುಟುಂಬದ ಯಜಮಾನನು ಮಾಡುವ ಕಾಯದೆ ಅಥವಾ ನಿಯಮಗಳು ಅನಿರ್ಬಂಧಪಾದವು. ಅವುಗಳ ಬಗ್ಗೆ ಚರ್ಚೆ ಅಥವಾ ವಾದಕ್ಕೆ ಅವಕಾಶವಿಲ್ಲ. ಆದರೆ ಕುಟುಂಬದ ಸಕಲರ ಕಲ್ಯಾಣಕ್ಕಾಗಿ ನಿಜ ಪ್ರೇಮ ಮತ್ತು ಸದುದ್ದೇಶದಿಂದ ಮಾಡಿರುವ ಈ ಕಾಯದೆ ನಿಯಮಗಳು ವ್ಯಾವಹಾರಿಕವಾಗಿ ಯೋಗ್ಯವೇ ಆಗಿರುತ್ತವೆ.

ವಯಸ್ಸಿಗೆ ಬಂದೊಡನೆ ತರುಣನು ಸಮಾಜದ ಹೊಣೆಗಾರ ನಾಗರಿಕನಾಗುತ್ತಾನೆ. ಆಗ ಅವನ ಕೃತಿಗಳು ದೇಶದ ಕಾಯದೆಗೆ ವಿಸಂಗತವಾದರೆ ಅದಕ್ಕೆ ಅವನೇ ಹೊಣೆ. ಈ ಸಮಯದಲ್ಲಿ ಸಾರ್ವಜನಿಕ ಶೀಲ ಮತ್ತು ವರ್ತನೆಗಳ ಘಾತ ಪ್ರತಿಘಾತಗಳ ಸೆಳವಿಗೆ ಸಿಕ್ಕು ಆತ ತೊಳಲುತ್ತಾನೆ. ದೇಶದ ಕಾಯದೆ ಇಲ್ಲಿ ಪ್ರವೇಶಿಸಿ ಸಮತೋಲವನ್ನು ಕಾಯ್ದುಕೊಳ್ಳುವುದು, ಅಂದರೆ ಎಷ್ಟೇ ಅಲ್ಪ ಪ್ರಮಾಣದಲ್ಲಿಯೆ ಇರಲೊಲ್ಲದೇಕೆ, ಕಾಯದೆಯು ರಾಷ್ಟ್ರೀಯ ಶೀಲವನ್ನು ರೂಪಿಸುವಲ್ಲಿ ಕಾರಣವಾಗುವುದು.

ತನ್ನ ಅಣ್ಣ-ತಮ್ಮ, ಅಕ್ಕ ತಂಗಿಯರು ಮಾಡಿದ ತಪ್ಪುಗಳನ್ನು ತನ್ನಿಂದ ಮುಚ್ಚಿಡುವ ಮಕ್ಕಳನ್ನು ತಂದೆ ತನ್ನ ಸರ್ವಾಧಿಕಾರದ ಬಲದಿಂದ ಶಿಕ್ಷಿಸುತ್ತಾನೆ. ಸಕಲರ ಹಿತಕ್ಕಾಗಿ ತಾನು ಮಾಡಿರುವ ಕಾಯದೆಗಳು ಸರಿಯಾಗಿ ಪಾಲಿಸಲ್ಪಡುತ್ತಿವೆಯೆ ಎಂದು ನೋಡಿಕೊಳ್ಳುವ ಹೊಣೆ ಪ್ರತಿಯೊಬ್ಬ ಮಗುವಿನದು ಎಂದು ತಂದೆ ತಿಳಿಯುತ್ತಾನೆ. ಆದರೆ ಯಾವ ಪ್ರಜಾಪ್ರಭುತ್ವ ಸರಕಾರವೂ ಹೀಗೆ ಮಾಡಲಾರದು. ಏಕೆಂದರೆ ಸರಕಾರವು ಕುಟುಂಬವಲ್ಲ. ಅದು ಜನತೆಯ ಸೇವಕನಾಗಿದೆಯೆ ಹೊರತು ಒಡೆಯನಲ್ಲ.

ಆದರೆ ಸ್ವತಂತ್ರ ಸಮಾಜದಲ್ಲಿ ಶಿಸ್ತು-ಸುವ್ಯವಸ್ಥೆಗಳನ್ನು ಕಾಪಾಡಿಕೊಳ್ಳುವ ಕಾರ್ಯದಲ್ಲಿ ನಾಗರಿಕರು ಸರಕಾರದೊಂದಿಗೆ ಸ್ವೇಚ್ಛೆಯಿಂದ ಸಹಕರಿಸಿದರೆ ಮಾತ್ರ ಕಾಯದೆ ಅಜಿಂಕ್ಯ ಶಕ್ತಿಯಾಗುವುದು. ಹೀಗಾದರೆ ರಾಷ್ಟ್ರೀಯ ಶೀಲವನ್ನು ರೂಪಿಸುವ ಮತ್ತು ಕಾಯ್ದುಕೊಳ್ಳುವ ಕಾರ್ಯ ಸುಲಭವಾಗುವುದು. ಜನರು ಸ್ವತಃ ಕಾಯದೆಗೆ ತಲೆಬಾಗುವುದಲ್ಲದೆ ಅದರ ರಕ್ಷಣೆ ಕಾರ್ಯಾಚರಣೆಗಳ ವಿಷಯದಲ್ಲಿ ಕಾವಲುಗಾರರಂತಿದ್ದರೆ ರಾಷ್ಟ್ರೀಯ ಶೀಲವನ್ನು ಸುಲಭದಲ್ಲಿ ತ್ವರಿತವಾಗಿ ಮತ್ತು ಹೆಚ್ಚು ಪರಿಣಾಮಕಾರಿಯಾಗುವಂತೆ ರೂಪಿಸಿಕೊಳ್ಳಬಹುದು. ಒಂದು ರಾಷ್ಟ್ರದ ನಾಗರಿಕನ ಶೀಲದ ಬಲಾಬಲಗಳನ್ನೇ ಆ ದೇಶದ ಪ್ರಜಾಪ್ರಭುತ್ವದ ಬಲಾಬಲಗಳೂ ಅವಲಂಬಿಸಿರುತ್ತವೆ.

ನಮ್ಮ ರಾಷ್ಟ್ರೀಯ ಶೀಲ ಎಷ್ಟು ಪ್ರಬುದ್ಧವಾ-

'ಕಾರವಾನ್' ನಿಂದ

ಗಿದೆ? ನಮ್ಮ ಸಂಸತ್ತು ಗೋವಧೆಯನ್ನು ಪ್ರತಿಬಂಧಿಸಿದೆಯೆಂದುಕೊಳ್ಳೋಣ; ಆಗ ರಸ್ತೆಯಲ್ಲಿ ಮರಣೋನ್ಮುಖವಾಗಿ ಬಿದ್ದಿರುವ ಆಕಳಿಗೆ ಒಂದಿಷ್ಟು ನೆಮ್ಮದಿ ಒದಗಿಸಲು ನಾನು ಏನನ್ನೂ ಮಾಡದೆ ಇದ್ದರೆ ನನ್ನ ರಾಷ್ಟ್ರೀಯ ಶೀಲ ಸರಿಯಾಗಿದೆಯೆನ್ನಬಹುದೆ? ಕಾಯದೆ ನಾನು ನನ್ನ ನೆರೆಯವನ ಆಸ್ತಿಯನ್ನು ಕದಿಯಬಾರದೆನ್ನುತ್ತದೆ; ಆದರೆ ಆತನ ಆಸ್ತಿ (ನನ್ನದು ಕೂಡ) ಯನ್ನು ಕಳ್ಳರು ಎತ್ತಿಕೊಂಡು ಹೋಗುವ ಪ್ರಸಂಗದಲ್ಲಿ ನಾನು ರಾತ್ರಿ ಕಾವಲಿಗಾಗಿ ಯಾವ ಪ್ರಯತ್ನವನ್ನೂ ಮಾಡದಿದ್ದರೆ ಅಥವಾ ಇತರರು ಏರ್ಪಡಿಸಿದ ಅಂಥ ಕಾವಲಿನಲ್ಲಿ ಭಾಗ ವಹಿಸದಿದ್ದರೆ ನಾನು ರಾಷ್ಟ್ರೀಯ ಶೀಲವುಳ್ಳವನೆನಿಸುವೆನೆ?

ಕಳ್ಳನನ್ನು, ಕೊಲೆಗಡುಕನನ್ನು ಅಥವಾ ಹಿಂಸಕನನ್ನು ಶೋಧಿಸಿ ಹಿಡಿಯುವ ಕಾರ್ಯ ಪ್ರಜಾಪ್ರಭುತ್ವದಲ್ಲಿ ಪೋಲೀಸನೊಬ್ಬನದೇ ಅಲ್ಲ. ಇತರರಂತೆ ಪೋಲೀಸನೂ ಒಬ್ಬ ನಾಗರಿಕನೇ. ಆತ ಪೋಲೀಸನಾಗಿ ಕೆಲಸ ಮಾಡುವಾಗ, ಇತರ ಜೀವನವೃತ್ತಿಗಳಲ್ಲಿ ತೊಡಗಿರುವಮೂಲಕ ಕಾಯದೆಯ ರಕ್ಷಕರಾಗಿ ಕೆಲಸ ಮಾಡಲಾರದ ಇತರ ನಾಗರಿಕರ ಪ್ರತಿನಿಧಿಯಾಗಿ ಕೆಲಸಮಾಡುತ್ತಾನೆ, ಅಷ್ಟೇ. ಸಾರ್ವಜನಿಕರ ಸಹಕಾರ—ಸಹಾಯಗಳಿಲ್ಲದೆ ಹೋದರೆ ಪೋಲೀಸನ ಕಾರ್ಯ ತುಂಬ ಕುಂಠಿತವಾಗುವುದು. ಮತ್ತೆ ಜನತೆಯ ರಾಷ್ಟ್ರೀಯ ಶೀಲ ಕೆಳಮಟ್ಟದಲ್ಲಿರುವಾಗ ಪೋಲೀಸನು ಮಾತ್ರ ನ್ಯಾಯ-ನಿಷ್ಠುರನೂ ಪ್ರಾಮಾಣಿಕನೂ ಆಗಿರಬೇಕೆಂದು ಅಪೇಕ್ಷಿಸಲು ಬಾರದು.

ಕಾಯಿಪಲ್ಲೆ ಹೆಚ್ಚಲು ಉಪಯೋಗಿಸುವ ಚಾಕುವಿನಿಂದ ಜನರ ಕುತ್ತಿಗೆಗಳನ್ನು ಕೊಯ್ಯಬಹುದಾದ್ದರಿಂದ ಇಂಥ ಚಾಕುಗಳ ಉಪಯೋಗವನ್ನು ಪ್ರತಿಬಂಧಿಸಬೇಕೆಂಬ ವಾದ ಎಂದೂ ಬಂದಿಲ್ಲ. ಅದರಂತೆ ಖಾನಾವಳಿಗಳು, ಕೆಲ ಸಲ ವ್ಯಭಿಚಾರಕೇಂದ್ರಗಳಾಗಿರುವವು ಎಂಬ ಕಾರಣಕ್ಕಾಗಿ ಖಾನಾವಳಿಗಳನ್ನೇ ಮುಚ್ಚಿಬಿಡಬೇಕೆಂದು ಯಾರೂ ವಾದಿಸಿಲ್ಲ. ಪ್ರಾತಿನಿಧಿಕ ಸರಕಾರವು ಈ ಸಂದರ್ಭದಲ್ಲಿ ಕುತ್ತಿಗೆ ಕೊಯ್ಯುವುದು, ಮತ್ತು ಹೋಟೆಲ್ಲುಗಳನ್ನು ವ್ಯಭಿಚಾರಕ್ಕಾಗಿ ಉಪಯೋಗಿಸಿಕೊಳ್ಳುವುದು ಶಿಕ್ಷಾರ್ಹವಾದ ಅಪರಾಧ ಎಂಬ ಕಾಯದೆಯನ್ನಷ್ಟೇ ಮಾಡಬಲ್ಲುದು.

ಕಾಯದೆ ಇರಲಿ, ಇಲ್ಲದಿರಲಿ ರಾಷ್ಟ್ರೀಯ ಶೀಲ ಶ್ರೇಷ್ಠ ಮಟ್ಟದಲ್ಲಿರುವಾಗ ಇಂಥ ಕೊಲೆ-ವ್ಯಭಿಚಾರ ಕೃತಿಗಳ ಸಂಭವ ಸಹಜವಾಗಿ ತೀರ ಕಡಿಮೆಯಾಗುವುದು. ಮೂಲತಃ ಸುಸಂಸ್ಕೃತವಾದ ಭಾರತೀಯ ಮನಸ್ಸು ಅನೀತಿ ಎಂಬ ಶಬ್ದವನ್ನೇ ತಿರಸ್ಕರಿಸುವುದಾಗಿದೆ. ಆದರೆ ರಾಜಕಾರಣಿಗಳ ಯುಗ ಬಂದಂದಿನಿಂದ ಸಾಮಾನ್ಯ ನಾಗರಿಕನು ತನ್ನ ವೈಯಕ್ತಿಕ ಹೊಣೆಯನ್ನು ಹಾರಿಸಿಕೊಳ್ಳುವ ಒಲವನ್ನು ಹೊಂದಿದ್ದಾನೆ. ಇದಕ್ಕೆ ಪರಕೀಯ ಆಡಳಿತ ಅಥವಾ ಸ್ವಭಾವ-ಜನ್ಯ ಆಲಸ್ಯ ಕಾರಣವಾಯಿತು ಎಂದು ನೀವು ಹೇಳಬಹುದು. ಆದರೆ ಆಗಾಗ ನಡೆಯುವ ಚುನಾವಣೆಗಳಲ್ಲಿ ಮತದಾನ ಮಾಡಿಬಿಟ್ಟರೆ ಒಳ್ಳೆಯ ಸರಕಾರ ಮತ್ತು ಆಡಳಿತಗಳನ್ನು ಸ್ಥಾಪಿಸುವುದರಲ್ಲಿ ತನಗಿರುವ ಹೊಣೆಯನ್ನು ಪೂರೈಸಿದಂತಾಯಿತು ಎಂದು ಸಮಾಜವು ತಿಳಿಯತೊಡಗಿದರೆ ಅದಕ್ಕಿಂತ ಹೆಚ್ಚಿನ ಅಪಾಯಕಾರಿಯಾದ, ಅತೃಪ್ತಿಕರವಾದ ಸಂಗತಿ ಇನ್ನೊಂದಿಲ್ಲ. ನಮ್ಮಲ್ಲಿ ಈ ದರಿದ್ರ ಮನೋವೃತ್ತಿ ಸ್ಪಷ್ಟವಾಗಿ ಕಾಣಿಸುತ್ತಿದೆ. ಜಗತ್ತಿನಲ್ಲಿಯ ಯಾವುದೇ ಕೆಲಸಗಾರನಿಗೂ ಕೌಶಲದಲ್ಲಿ ಕಡಿಮೆಯಲ್ಲದ ಭಾರತೀಯ ಕೆಲಸಗಾರನು ಅವನ ಮೇಲೆ ಕಣ್ಣಿಡದಿದ್ದರೆ ಸಮರ್ಥ ರೀತಿಯಲ್ಲಿ ಕೆಲಸ ಮಾಡುತ್ತಾನೆಂದು ನಂಬಲಾರದ ಪರಿಸ್ಥಿತಿ ಇಂದು ಇದೆ.

ತಮ್ಮ ಬಾಗಿಲಿಗೆ ಭಿಕ್ಷೆಗಾಗಿ ಬರುವವರಲ್ಲಿ ೧೦೦ ಕ್ಕೆ ೭೫ ರಷ್ಟು ಜನ ದುಡಿಯಬಲ್ಲ ಧಾಂಡಿಗರು ಎಂದು ಪ್ರತಿಯೊಬ್ಬ ವಿಚಾರವಂತ ಭಾರತೀಯನಿಗೂ ಗೊತ್ತು. ಆದರೆ "ಇಲ್ಲ" ಎನ್ನುವ

ಮನೋಬಲವಿರದ್ದರಿಂದಲೊ ಅಥವಾ ಸಾರ್ವಜನಿಕ ರೂಢಿಗೆ ದಾಸನಾಗಿರುವುದರಿಂದಲೊ ಆತ ಮನಸ್ಸಿಲ್ಲದಿದ್ದರೂ ಭಿಕ್ಷೆ ನೀಡುತ್ತಾನೆ. ಇದರಿಂದ ಭಿಕ್ಷೆ ಪಡೆದವನಿಗೆ ಸನ್ಮಾನ್ಯ ನಾಗರಿಕನಾಗಲು ಸಹಾಯವೂ ಆಗುವುದಿಲ್ಲ, ದಾನವಿತ್ತವನ ದಾನ ಸಾರ್ಥಕವೂ ಆಗುವುದಿಲ್ಲ.

ನಮ್ಮ ರಾಷ್ಟ್ರೀಯ ಶೀಲ ಇರಬೇಕಾದಷ್ಟು ಉನ್ನತಮಟ್ಟದಲ್ಲಿದ್ದರೆ ಪ್ರಾಣಿದಯಾ ಸಂಘಗಳಲ್ಲಿ ಅರ್ಧದಷ್ಟಕ್ಕಾದರೂ ಏನೂ ಕೆಲಸವಿಲ್ಲದೆ (ಅವು ಈಗಾದರೂ ಏನಾದರೂ ಕೆಲಸ ಮಾಡುತ್ತಿದ್ದರೆ) ಹೋದೀತು. ಲಂಚಗುಳಿತನ ಮಾಯವಾಗಿ ನಮ್ಮ ಪೋಲೀಸರು ದಕ್ಷರೂ ಸಂಭಾವಿತರೂ ಆದಾರು. ಒಂದು ಪಂಗಡವನ್ನು ಸಾಂಘಿಕ ಜೀವನದಿಂದ ಬಹಿಷ್ಕರಿಸಲ್ಪಟ್ಟಿದ್ದೆಂದೆಣಿಸಿ ಆಮೇಲೆ ಅದು ಸಂಘದ ಕಲ್ಯಾಣಮಾಡಬೇಕೆಂದು ಅಪೇಕ್ಷಿಸುವುದೆಂದರೆ ಅಶಕ್ಯವನ್ನು ಬಯಸಿದಂತೆಯೆ.

ಅಂತೆಯೆ ಭಾರತದಲ್ಲಿ ನಿಯಂತ್ರಣಗಳು ಯಶಸ್ವಿಯಾಗುವುದಿಲ್ಲ. ಅದು ಅವುಗಳ ದೋಷವಲ್ಲ; ಅವು ಪರಿಣಾಮಕಾರಿಯಾಗಲು ಅವಕಾಶವಿಲ್ಲದಂಥ ಪರಿಸ್ಥಿತಿಯಲ್ಲಿ ಅವುಗಳನ್ನು ಜಾರಿಗೆ ತಂದುದರ ದೋಷ. ಜನ ಕಾಯದೆಯನ್ನು ಗೌರವಿಸುವವರಾದರೆ ಮಾತ್ರ ನಿಯಂತ್ರಣಗಳು ಯಶಸ್ವಿಯಾಗಬಹುದು. ಸಕಲರಿಗೂ ಅಗತ್ಯವಾದ ಒಂದು ವಸ್ತುವಿನ ಕೊರತೆಯಿದೆಯೆನ್ನೋಣ. ತುಸು ಕಡಿಮೆಯೆ ಆಗಲಿ, ಎಲ್ಲರಿಗೂ ಸಿಗಲಿ ಎಂದು ಸರಕಾರ ಆ ವಸ್ತುವಿನ ಮೇಲೆ ನಿಯಂತ್ರಣ ಹಾಕುತ್ತದೆ. ರಾಷ್ಟ್ರೀಯ ಶೀಲವಿರುವಲ್ಲಿ ಜನ ಕಾಯದೆಯಂತೆ ನಡೆದುಕೊಂಡು ತಮ್ಮ ಪಾಲಿಗೆ ಬಂದದ್ದರಿಂದ ತೃಪ್ತರಾಗುತ್ತಾರೆ. ರಾಷ್ಟ್ರೀಯ ಶೀಲವಿಲ್ಲದಲ್ಲಿ ಹಣವುಳ್ಳವರು ಕಳ್ಳಪೇಟೆಯಲ್ಲಿ ಬೇಕಷ್ಟನ್ನು ಕೊಂಡು ಉಳಿದವರನ್ನು ಗೋಳು ಹೊಯ್ದುಕೊಳ್ಳುತ್ತಾರೆ. ಚಿಕ್ಕ ಪುಟ್ಟ ಅಧಿಕಾರಿಗಳು ಅಂಥವರಿಗೆ ಸಹಾಯ ಮಾಡುತ್ತಾರೆ.

ಅಂದರೆ ನಿಯಂತ್ರಣ ಪದ್ಧತಿ ಕೆಟ್ಟದು ಎಂದು ಹೇಳಿದಂತಾಗಲಿಲ್ಲ. ಕಳವು ದರೋಡೆಗಳು ಹೆಚ್ಚುತ್ತಲೇ ಇವೆಯೆಂದು ಪೋಲೀಸರೇ ಬೇಡವೆಂದು ಯಾರೂ ಹೇಳುವುದಿಲ್ಲ. ಆದ್ದರಿಂದ ನಿಯಂತ್ರಣಗಳು ಹೋಗಲಿ ಎಂದು ಬೊಬ್ಬೆಯಿಡುವ ಬದಲು ರಾಷ್ಟ್ರೀಯ ಶೀಲವನ್ನು ಬೆಳೆಸಲು ಪ್ರಯತ್ನಿಸಿದ್ದಾದರೆ, ನೀವು ಹೊಣೆಗಾರ ನಾಗರಿಕನಂತೆ ಪ್ರಾಮಾಣಿಕವಾಗಿ ನಡೆದುಕೊಂಡಿದ್ದಾದರೆ ದೇಶಕ್ಕೆ ನೀವು ಹೆಚ್ಚಿನ ಸೇವೆ ಸಲ್ಲಿಸಿದಂತಾಗುವುದು. ಲಂಚಗುಳಿತನವನ್ನು ಕಟು ಶಬ್ದಗಳಲ್ಲಿ ಖಂಡಿಸುವ ನಾವೇ ನಮ್ಮ ಕೆಲಸ ಒಂದಿಷ್ಟು ಬೇಗ ಆಗಲಿ ಎಂದು ಕಾರಕೂನನ ಕೈಗೆ ರೂಪಾಯಿಯ ನೋಟನ್ನು ಚಾಚುವೆವು.

ನಿಮ್ಮ ಮಕ್ಕಳು ಹೊಣೆಗಾರ ನಾಗರಿಕನಾಗಬೇಕೆಂದು ಬಯಸುವುದಾದರೆ ಎಲ್ಲ ಮಕ್ಕಳನ್ನೂ ನಿಮ್ಮ ಮಕ್ಕಳಂತೆಯೆ ಕಾಣಿರಿ. ಆಗ ನೀವು ಅವರಲ್ಲಿ ಕಾಯದೆ ಮತು ಹಿರಿಯರ ಬಗ್ಗೆ ಗೌರವ ಭಾವನೆಯನ್ನು ಹುಟ್ಟಿಸಲು ಸಮರ್ಥರಾಗುವಿರಿ. ಹಾಗೆ ಮಾಡುವಾಗ ಇತರರು ನಿಮ್ಮ ಮಕ್ಕಳ ತಪ್ಪಿಗಾಗಿ [ಶಾಲೆಯಲ್ಲಿ ಕೂಡ] ಅವರನ್ನು ಗದರಿಸಿದಾಗ ಸಿಟ್ಟನ್ನು ನಿಯಂತ್ರಿಸಿಕೊಳ್ಳಲು ಅಭ್ಯಸಿಸಿರಿ. ಲಂಚಗುಳಿತನ ಹೋಗಬೇಕೆನ್ನುವಿರಾ? ಹಾಗಾದರೆ ಲಂಚ ಕೊಡುವುದು ಲಂಚ ತೆಗೆದುಕೊಳ್ಳುವಷ್ಟೆ ದೊಡ್ಡ ಅಪರಾಧವೆಂದು ತಿಳಿಯಿರಿ. ಒಳ್ಳೆಯ ಪ್ರಾಮಾಣಿಕ ಧುರೀಣರು ಬೇಕೇ? ರಾಷ್ಟ್ರವು ಶೀಲ ಸಂಪನ್ನವಾಗಿದ್ದರೆ ಮಾತ್ರ ಅಂಥವರು ಸಿಗಬಲ್ಲರು ಎಂದು ನೆನಪಿಡಿರಿ, ಒಳ್ಳೆಯ ನಾಗರಿಕತ್ವವೇ ರಾಷ್ಟ್ರದ ಶ್ರೇಷ್ಠ ಸಂಪತ್ತು.

ಜಗತ್ತಿನ ಯಾವುದೇ ದೇಶದ ರಾಜಕೀಯ ಪರಿಸ್ಥಿತಿಯನ್ನು ಅಭ್ಯಸಿಸಿದರೆ ನಿಮಗೆ ಈ ಎರಡರಲ್ಲಿ ಯಾವುದಾದರೂ ಒಂದು ಬಗೆಯ ಧುರೀಣರೇ ಕಂಡುಬಂದಾರು:

೧. ತಮ್ಮ ಹಕ್ಕುಗಳಂತೆಯೆ ತಮ್ಮ ಕರ್ತವ್ಯದ ಅರಿವು ಜನರಿಗಿದ್ದರೆ; ಒಳ್ಳೆಯ ಸರಕಾರ ವಾವುದು ಯಾವುದಲ್ಲ ಎಂಬ ಸಹಜ ಜ್ಞಾನ ಅವರಿಗಿದ್ದರೆ; ಕ್ರಮಬದ್ಧ ರೀತಿಯಲ್ಲಿ ತಮ್ಮ ಅಗತ್ಯಗಳನ್ನು ಪೂರೈಸಿಕೊಳ್ಳುವ ಬುದ್ಧಿ ಅವರಲ್ಲಿದ್ದರೆ—ಆಗ ಅವರ ಧುರೀಣರು ತ್ಯಾಗ ಬುದ್ಧಿಯಿಂದ ಮತ್ತು ಪ್ರಾಮಾಣಿಕ ಪರಿಶ್ರಮದಿಂದ ಅವರ ಹಿತಕ್ಕಾಗಿ ದುಡಿಯುವಂಥವರೇ ಆಗಿರುವರು.

೨. ಮಾನಸಿಕವಾಗಿ ಮತ್ತು ದೈಹಿಕವಾಗಿ ಆಲಸಿಗಳಾದ ಜನರಿದ್ದರೆ; ತಮಗಿತ್ತ ವಚನಗಳನ್ನೆಲ್ಲ ಸುಲಭವಾಗಿ ನಂಬುವವರಾಗಿದ್ದರೆ; ರಾಜಕೀಯ ದೂರದೃಷ್ಟಿಯಿಲ್ಲದವರಾಗಿದ್ದರೆ; ಅವರ ಬಯಕೆಗಳು ಅಸಾಧ್ಯವಾಗಿದ್ದರೆ—ಆಗ ಅವರಿಗೆ ಅವರ ಅಜ್ಞಾನದ ಲಾಭವನ್ನು ಸ್ವಾರ್ಥಕ್ಕಾಗಿ ಪಡೆಯುವ ಧುರೀಣರೇ ಸಿಗುವರು.

ಮೊದಲನೆಯ ಸಂದರ್ಭದಲ್ಲಿ ಧುರೀಣರು ಒಂದು ಅಗತ್ಯವನ್ನು ಕಂಡುಕೊಂಡು ಅದನ್ನು ಪೂರೈಸುವರು. ಎರಡನೆಯದರಲ್ಲಿ ಧುರೀಣರು ಒಂದು ಅಗತ್ಯವನ್ನು ಸೃಷ್ಟಿಸಿ ಅದರ ಲಾಭ ಪಡೆದುಕೊಳ್ಳುವರು. ಮೊದಲನೆಯದರಲ್ಲಿ ಜನ ಧುರೀಣರಿಗೆ ಮಾರ್ಗದರ್ಶನ ಮಾಡಿದರೆ ಎರಡನೆಯದರಲ್ಲಿ ಧುರೀಣರು ಜನರನ್ನು ಮುಗುದಾಣ ಹಾಕಿದ ಎತ್ತಿನಂತೆ ನಡೆಯಿಸುವರು.

ಇತ್ತೀಚಿನ ಇತಿಹಾಸವು ಜಗತ್ತಿನ ಅನೇಕ ದೇಶಗಳಲ್ಲಿ [ವಿಶೇಷತಃ ಮಧ್ಯಪೂರ್ವ ಮತ್ತು ಅತಿ ಪ್ರಾಚ್ಯ ದೇಶಗಳಲ್ಲಿ] ಈ ಎರಡೂ ಬಗೆಯ ಧುರೀಣರಿದ್ದಾರೆಂಬುದನ್ನು ತೋರಿಸುತ್ತಿದೆ.

ಕಾಯದೆಯನ್ನು ಧಿಕ್ಕರಿಸುವ ಅತಿ ಹೀನ ಮನುಷ್ಯನಂತೆ ನಡೆದುಕೊಳ್ಳುವ ಧುರೀಣರ ಪರಿಚಯ ಪ್ರತಿಯೊಬ್ಬ ಸುಜ್ಞ ಭಾರತೀಯನಿಗೂ ಇದೆ. ಮಗ್ಗಲಲ್ಲಿಯೇ ಹಾಲಿನಲ್ಲಿಯೊ ಎಣ್ಣೆಯಲ್ಲಿಯೊ ಅನಿಷ್ಟ ವಸ್ತುಗಳನ್ನು ಮಿಶ್ರಣ ಮಾಡುವವನಿರುತ್ತಾನೆ; ಕಳ್ಳಪೇಟೆ ವ್ಯಾಪಾರಿಯಿರುತ್ತಾನೆ; ಅಕ್ರಮವಾಗಿ ಹಣ ಗಳಿಸುವವನಿರುತ್ತಾನೆ; ಕರ ತಪ್ಪಿಸುವವನಿರುತ್ತಾನೆ. ಆದರೆ ಈ ಧುರೀಣ ಕಣ್ಮುಚ್ಚಿಕೊಂಡಿರುತ್ತಾನೆ. ವಿಶೇಷವೆಂದರೆ ಇಂಥವನೊಡನೆ ಅವನ ಸ್ನೇಹ ನಿಕಟವಾಗಿಯೂ ಇರುತ್ತದೆ.

ಕ್ಯೂನಲ್ಲಿ ನಿಂತು ಟಿಕೀಟು ಪಡೆದುಕೊಳ್ಳಲು ಈ ಧುರೀಣನಿಗೆ ಸಮಯವಿರುವುದಿಲ್ಲ. ತನಗೆ ಮಾತ್ರವಲ್ಲ, ತನ್ನ ನೌಕರರಿಗೂ ವಿಶೇಷ ಸವಲತ್ತನ್ನು ಈತ ಅಪೇಕ್ಷಿಸುತ್ತಾನೆ. ತನಗಾಗಿ ಬೇರೊಬ್ಬ ಪ್ರಯಾಣಿಕನನ್ನು ಕುಳಿತಲ್ಲಿಂದ ಕಂಡಕ್ಟರ್ ಎಬ್ಬಿಸಿದಾಗ ಈತನಿಗೆ ಏನೂ ಖೇದವಾಗುವುದಿಲ್ಲ. ಜನರು ತನ್ನನ್ನು ಧುರೀಣನೆಂದು ಕರೆಯುತ್ತಿರುವುದರಿಂದ ತಾನು ಗೌರವಾರ್ಹನೆಂದೂ ಉಳಿದವರಿಗಿಲ್ಲದ ಸೌಕರ್ಯ ಸೌಲಭ್ಯಗಳು ತನಗೆ ಸಿಗಬೇಕೆಂದೂ ಈತ ತಿಳಿಯುತ್ತಾನೆ.

ಧುರೀಣರು ಈ ಬಗೆಯವರಾದರೆ ಸಾರ್ವಜನಿಕ ಪ್ರಜ್ಞೆಯ ಅವಸ್ಥೆಯೇನು?

ಜನ ಸ್ವತಂತ್ರರಾಗಿರುವಾಗ ಆಶೆ ಅನಂತವಾಗಿರುತ್ತದೆ. ಸ್ವಾತಂತ್ರ್ಯವೆಂದರೆ ಮಾನಸಿಕ ಬೆಳವಣಿಗೆಗೆ ಅವಕಾಶವೆಂದಾಗುವುದರಿಂದ ಆಶೆಗೆ ಸ್ಥಳವಿರುತ್ತದೆ. ಪ್ರತಿಯೊಬ್ಬ ಸುಜ್ಞನೂ ಈ ಎರಡು ಬಗೆಯ ಧುರೀಣರಲ್ಲಿ ಆಯ್ಕೆ ಮಾಡಿಕೊಳ್ಳಬಲ್ಲನಾದ್ದರಿಂದ ಆಶೆಗೆ ಅವಕಾಶವಿರುತ್ತದೆ. ನಮ್ಮೀ ಸ್ವಾತಂತ್ರ್ಯಯುಗದಲ್ಲಿ ನಾವು ಕೂಡ ರಾಷ್ಟ್ರೀಯ ಶೀಲದ ಮಟ್ಟವನ್ನೆತ್ತರಿಸಲು ನಮ್ಮ ಅಳಿಲು ಸೇವೆಯನ್ನು ಸಲ್ಲಿಸಬಹುದಾಗಿದೆ; ಸಾರ್ವಜನಿಕ ಪ್ರಜ್ಞೆಯನ್ನು ಜಾಗ್ರತಗೊಳಿಸಬಹುದಾಗಿದೆ. ನಮ್ಮ ಸ್ವಾತಂತ್ರ್ಯ ಚಿರಾಯುವಾಗುವುದಕ್ಕಾಗಿ ನಮ್ಮ ದೇಶವನ್ನು ಸತ್ಯ ಪ್ರಾಮಾಣಿಕತೆಗಳ ಅಡಿಗಲ್ಲಮೇಲೆ ನಿಲ್ಲಿಸಬಹುದಾಗಿದೆ. *



ಹೈದರಾಬಾದಿನ ರಜಾಕಾರ ವೀರರು !

ಸೇತುಮಾಧವ ಪಗಡಿ

೧೯೪೮, ಎಪ್ರಿಲ್ ೧೧ ರಂದು ನನ್ನನ್ನು ಹೈದರಾಬಾದ್ ನಗರದಲ್ಲಿ ಸರ್ವೆ ಮತ್ತು ಸೆಟಲ್‌ಮೆಂಟ್ ಶಾಖೆಯ ಅಸಿಸ್ಟಂಟ್ ಕಮೀಶನರ್ ಎಂದು ನೇಮಿಸಿದರು. ಈ ಮೊದಲು ಹದಿನೈದು ವರ್ಷಗಳಲ್ಲಿ ನಾನು ಮಾಮಲೇದಾರ, ಪ್ರಾಂತ ಆಫೀಸರ್ ಮತ್ತು ಆದಿವಾಸಿಗಳ ವಿಶೇಷಾಧಿಕಾರಿ ಎಂದು ಹೈದರಾಬಾದ್ ಸಂಸ್ಥಾನದ ಬೇರೆ ಬೇರೆ ಜಿಲ್ಲೆಗಳಲ್ಲಿ ಕೆಲಸ ಮಾಡಿದ್ದೆ.

ಹೈದರಾಬಾದಿನ ಮುಖ್ಯ ಸ್ಟೇಶನ್ನಿನಲ್ಲಿ ಗಾಡಿಯಿಂದಿಳಿದೊಡನೆ ಸ್ಟೇಶನ್ನಿನ ಸುತ್ತಮುತ್ತಲಿನ ಪ್ರದೇಶವೆಲ್ಲ ನಿರಾಶ್ರಿತರೆಂದು ಹೇಳಿಕೊಳ್ಳುತ್ತಿದ್ದವರಿಂದ ತುಂಬಿಹೋಗಿರುವುದನ್ನು ಕಂಡೆ. ಇವರೆಲ್ಲ ಭಾರತದ ಅನೇಕ ಭಾಗಗಳಿಂದ ಬಂದವರಾಗಿದ್ದರು. ಫುಟ್‌ಪಾತ್‌ಗಳ ಮೇಲೆ ತಿಂಡಿ ತಿನಿಸುಗಳ ಅಂಗಡಿಗಳು ಕಾಣಿಸುತ್ತಿದ್ದವು. ಎಲ್ಲಿ ನೋಡಿದಲ್ಲಿ ಹೊಸ ಮುಖಗಳೇ ಕಾಣಿಸುತ್ತಿದ್ದವು. ಆಗಾಗ ಹೊಡೆದಾಟಗಳೂ ನಡೆಯುತ್ತಿದ್ದವು. ಸ್ಟೇಶನ್ನಿನ ಬಳಿಯಲ್ಲಿದ್ದ ಪರಿಸ್ಥಿತಿಯೆ ನಗರದ ಬೇರೆ ಬೇರೆ ಭಾಗಗಳಲ್ಲಿಯೂ ಇತ್ತು. ನಗರದಲ್ಲಿ ನದಿಯ ದಂಡೆಯ ಮೇಲೆ ಸರಕಾರಿ ಗ್ರಂಥಾಲಯದ ಕಟ್ಟಡವಿದೆ. ಅದರ ಸುತ್ತಲೂ ನೂರಾರು ನಿರಾಶ್ರಿತರು ಠಾಣ್ಯ ಹೂಡಿದ್ದರು. ನಗರದ ಉತ್ತರದಲ್ಲಿ ಎಂಟು ಮೈಲಿನ ಮೇಲಿರುವ ಯರಗುಡ್ಡದಲ್ಲಿ ಎಪ್ರಿಲ್ ತಿಂಗಳಲ್ಲಿ ೫೦,೦೦೦ ನಿರಾಶ್ರಿತರಿದ್ದರು. ಅವರ ಊಟ ಉಪಚಾರದ ವ್ಯವಸ್ಥೆಯನ್ನು ಸರಕಾರ ನೋಡಿ

"ಅಮೃತ"ದಿಂದ

ಕೊಳ್ಳುತ್ತಿತ್ತು.

ಹೈದರಾಬಾದ್ ನಗರದ ಆಗಿನ ವಾತಾವರಣ ಎಂಥವನನ್ನೂ ಅಸ್ವಸ್ಥನನ್ನಾಗಿ ಮಾಡುವಂತಿತ್ತು. ರಸ್ತೆಗಳಲ್ಲಿ ಎಲ್ಲೆಲ್ಲಿಯೂ ಸೈನಿಕ ಸಮವಸ್ತ್ರದ ರಜಾಕಾರರು ಕಾಣಿಸುತ್ತಿದ್ದರು. ಟೊಂಕಕ್ಕೆ ಖಡ್ಗ ತೂಗಾಡಿಸಿಕೊಂಡು ಅಡ್ಡಾಡುವ ಅರಬರು ಮೊದಲಿನಿಂದಲೂ ಹೈದರಾಬಾದಿನಲ್ಲಿದ್ದರು. ಈಗ ಅವರ ಅನುಕರಣವನ್ನು ಇತರರು ಮಾಡತೊಡಗಿದ್ದರು.

ನಮ್ಮ ಸರ್ವೆ ಸೆಟಲ್‌ಮೆಂಟ್ ಕಚೇರಿ ನಗರದ ಮುಖ್ಯ ರಸ್ತೆಯಲ್ಲಿ ಶ್ರೀಮತಿ ಸರೋಜನಿ ನಾಯಡುರವರ "ಗೋಲ್ಡನ್ ಥ್ರೆಶೋಲ್ಡ್" ಎಂಬ ಮನೆಯ ಎದುರಿನಲ್ಲಿ ಇತ್ತು. ಎಪ್ರಿಲ್ ೧೧ ರಂದು ಕೆಲಸಕ್ಕೆ ನಾನು ಹಾಜರಾದೆ. ಕಚಿಗುಡಾ ಸ್ಟೇಶನ್ನಿನ ಬಳಿ ಮನೆಯನ್ನು ಹಿಡಿದಿದ್ದೆ. ಮನೆಯಿಂದ ಕಚೇರಿ ಸುಮಾರು ಎರಡೂವರೆ-ಮೂರು ಮೈಲು ದೂರವಾಗುತ್ತಿತ್ತು.

ಉರ್ದು ವೃತ್ತಪತ್ರಿಕೆಗಳು, ರೇಡಿಯೊ ಮುಂತಾದವುಗಳ ಮೂಲಕ ನಮಗೆ ಹೈದರಾಬಾದಿನ ಪ್ರಕ್ಷುಬ್ಧ ಪರಿಸ್ಥಿತಿಯ ಅರಿವು ಆಗತೊಡಗಿತು. ನಗರದಲ್ಲಿ ಸೈನಿಕ ಸಮವಸ್ತ್ರದ ತರುಣರು ಗಸ್ತಿ ತಿರುಗಹತ್ತಿದ್ದರು. ಪ್ರತಿವಾರವೂ ಯಾವುದೊಂದು ನೆಪದಲ್ಲಿ ಪ್ರಚಂಡ ಸಭೆಗಳು ಸೇರಿ ರಜಾಕಾರ ಧುರೀಣರ ಆವೇಶಪೂರ್ಣ ಭಾಷಣಗಳು ನಡೆಯಹತ್ತಿದವು. ಎಂದು ಏನಾಗುವುದೊ ಎಂಬ ಚಿಂತೆ ಎಲ್ಲರನ್ನೂ ಪೀಡಿಸತೊಡಗಿತು. ನಗರದಲ್ಲಿ ಅಡ್ಡಾಡುತ್ತಿದ್ದ ಶಸ್ತ್ರಧಾರಿಗಳಿಂದ ಅಪಾಯವಾದೀತೆಂಬ ಅಂಜಿಕೆಯಿಂದ ಜನ ಮೂರುಸಂಜೆಯಾಗುವುದರೊಳಗೆ ಮನೆ ಸೇರುತ್ತಿದ್ದರು.

ನಾನೊಂದು ದಿನ ಕಚೇರಿಯಿಂದ ಮನೆಗೆ ಮರಳುತ್ತಿದ್ದಾಗ ಆಬಿದ ರೋಡಿನಲ್ಲಿಯ "ಜನರಲ್ ಪೋಸ್ಟ್ ಆಫೀಸಿ"ನೆದುರು ಒಂದು ದೊಡ್ಡ ಭಿತ್ತಿ ಪತ್ರಿಕೆಯನ್ನು ಕಂಡೆ. ಅದರಲ್ಲಿ ಹೈದರಾಬಾದ್ ರಾಜ್ಯದ ನಕಾಶೆ ಬಿಡಿಸಿದ್ದರು. ಗಾಂಧಿ ಟೊಪ್ಪಿಗೆ ಧರಿಸಿದವನೊಬ್ಬ ಆಕ್ರಮಣ ಮಾಡುತ್ತಿದ್ದಂತೆಯೂ ಹೈದರಾಬಾದಿನ ಸೈನಿಕನೊಬ್ಬ ಆತನನ್ನು ಗುದ್ದುತ್ತಿದ್ದಂತೆಯೂ ಒಂದು ಚಿತ್ರ ಬರೆದಿದ್ದರು. ಗಾಂಧಿ ಟೊಪ್ಪಿಗೆಯವನ ಬಾಯಿಂದ ರಕ್ತ ಹರಿಯುತ್ತಿತ್ತು. ಚಿತ್ರದ ಕೆಳಗಡೆ "ದುಷ್ಮನ್ ಕಾ ಅಂಜಾಮ್"— ಶತ್ರುವಿನ ಕೊನೆ ಎಂಬ ವಾಕ್ಯ ಬರೆದಿತ್ತು.

ಆ ಸಮಯದಲ್ಲಿ ನಾವು ಬಹು ಎಚ್ಚರಿಕೆಯಿಂದ ಮಾತಾಡಬೇಕಾಗುತ್ತಿತ್ತು. ಭಾರತ ಅಥವಾ ಸಂಸ್ಥಾನದ ಹೊರಗಿನ ಘಟನೆಗಳ ಬಗ್ಗೆ ಮಾತಾಡುವಾಗ ತುಂಬ ಜಾಗರೂಕರಾಗಿರಬೇಕಾಗುತ್ತಿತ್ತು. ಒಂದು ದಿನ ನಮ್ಮ ಕಮೀಶನರರು ಒಂದು ಫಾರ್ಮನ್ನು ನಮ್ಮ ಸಹಿಗಾಗಿ ಕಳಿಸಿದರು. ಅದರಲ್ಲಿ "ನಾನು ನನ್ನ ದೇಶ ಮತ್ತು ರಾಜನಿಗಾಗಿ ನನ್ನ ರಕ್ತದ ಕೊನೆಯ ಹನಿಯನ್ನು ಅರ್ಪಿಸಲು ಸಿದ್ಧನಿದ್ದೇನೆ" ಎಂದು ಬರೆದಿತ್ತು.

ನಾವು ಈ ಪ್ರತಿಜ್ಞಾಪತ್ರಕ್ಕೆ ಸಹಿ ಹಾಕಲೇಬೇಕಾಯಿತು. ಕಚೇರಿಯಲ್ಲಿಯ ನನ್ನೊಬ್ಬ ಮಿತ್ರ ಈ ವಿಷಯದಲ್ಲಿ ಪ್ರಶ್ನಿಸಿದಾಗ ನಾನೆಂದೆ: ನಾವು ಅರ್ಪಿಸಬೇಕಾದದ್ದು ನಮ್ಮ ರಕ್ತದ ಕೊನೆಯ ಹನಿಯನ್ನು ಎಂದು ಕರಾರಿನಲ್ಲಿದೆ. ಅಷ್ಟನ್ನೆ ದೇಶ ಮತ್ತು ರಾಜನಿಗಾಗಿ ಕಾಯ್ದಿಡಬೇಕು ಆದರೆ ಯಾವಾಗ? ಶರೀರದಲ್ಲಿರುವ ಲಕ್ಷಗಟ್ಟಲೆ ರಕ್ತದ ಹನಿಗಳು ಖರ್ಚಾದ ನಂತರ ತಾನೆ? ಹಾಗಾಗುವ ಸಂಭವವೇನೂ ಕಾಣುವುದಿಲ್ಲ.

ನಮ್ಮ ಕಚೇರಿಯಲ್ಲಿಯ ಎಷ್ಟೋ ಶಿಪಾಯಿಗಳು ಮತ್ತು ಕಾರಕೂನರು ಸಶಸ್ತ್ರರಾಗಿ ಅಡ್ಡಾಡುತ್ತಿದ್ದರು. ಅದಕ್ಕಾಗಿ ಯಾರೂ ಅವರಿಗೆ ಏನೂ ಅನ್ನುತ್ತಿದ್ದಿಲ್ಲ. ನನ್ನ ಕೈಕೆಳಗಿನ ಸುಪರಿಂಟೆಂಡೆಂಟ್ ಕಾಸೀಮ ರಜವಿಯ ಸಲಹಾ ಮಂಡಳದ ಸದಸ್ಯನಾಗಿದ್ದ. ರಜಾಕಾರ ಸಂಸ್ಥೆಯ

ಪತ್ರಿಕೆಯೊಂದರ ಸಂಪಾದಕ ಮಂಡಲಿಯಲ್ಲಿಯೂ ಇದ್ದ. ಆತ ಬೇಕಾದಾಗ ಕಚೇರಿಗೆ ಬರುತ್ತಿದ್ದ, ಬೇಕಾದಾಗ ಹೋಗುತ್ತಿದ್ದ. ಒಮ್ಮೊಮ್ಮೆ ಆತ ತಾತ್ಪೂರ್ತಿಕ ರಜೆಯ ಅರ್ಜಿಯನ್ನು ನನ್ನ ಮುಂದಿಟ್ಟು ರಜವಿಯ ಸಲಹಾ ಮಂಡಳದ ಸಭೆಗೆ ತಾನು ಹೋಗಬೇಕಾಗಿದೆ, ಅಪ್ಪಣೆ ಕೊಡಬೇಕು ಎಂದು ಸೂಚ್ಯ ಶಬ್ದಗಳಲ್ಲಿ ತಿಳಿಸುತ್ತಿದ್ದ. ಆತನ ಅರ್ಜಿಯ ಮೇಲೆ 'ಮಂಜೂರ್' ಎಂದು ಬರೆಯದೆ ಬೇರೆ ಉಪಾಯವೇ ಇರಲಿಲ್ಲ. ನನ್ನ ಪಟ್ಟೇವಾಲನಂತೂ ಟೊಂಕಪಟ್ಟಿಗೆ ಖಡ್ಗ ಮತ್ತು ತಿವಿ-ಚಾಕುವನ್ನು ಸಿಕ್ಕಿಸಿಕೊಂಡೇ ತಿರುಗುತ್ತಿದ್ದ. ಒಮ್ಮೊಮ್ಮೆ ಅವನ ಹೆಗಲಿಗೆ ಬಂದೂಕೂ ಇರುತ್ತಿತ್ತು. ಆತ ಸಾದಾ ಕೆಲಸಕ್ಕಾಗಿ ಒಳಗೆ ಬಂದರೂ ನಮ್ಮ ಎದೆ ಹಾರುತ್ತಿತ್ತು. ಒಂದು ದಿನ ನಮ್ಮ ಸುಪರಿಂಟೆಂಡೆಂಟ್ 'ಜೆಹಾದ್' ನ ಮೇಲೆ ಒಂದು ಅತ್ಯಂತ ಪ್ರಕ್ಷೋಭಕಾರಿ ಲೇಖನವನ್ನು ಬರೆದು ನನಗೆ ತೋರಿಸಿದ. ಅಂದಿನಿಂದ ಪ್ರತಿ ನಿತ್ಯವೂ ಕಚೇರಿಯಿಂದ ಸುರಕ್ಷಿತ ತಿರುಗಿ ಹೋಗುವೆವೊ ಇಲ್ಲವೊ ಎಂಬ ಅಂಜಿಕೆ ನಮ್ಮನ್ನು ಬಾಧಿಸತೊಡಗಿತು.

ನಮ್ಮ ಕಚೇರಿಯ ಕಾರಕೂನ ಖಾನಸಾಹೇಬ ಮಾತುಗಾಳಿ. ಆತ ನನ್ನ ಬಳಿಗೆ ಬಂದಾಗಲೆಲ್ಲ ಬಹಳ ಹೊತ್ತಿನ ವರೆಗೆ ಕುಳಿತುಕೊಂಡು ನಗರದ, ಸಂಸ್ಥಾನದ ಮತ್ತು ಸಂಸ್ಥಾನದ ಹೊರಗಿನ ವಿಷಯಗಳನ್ನು ಕುರಿತು ಹರಟುತ್ತಿದ್ದ. ಕಚೇರಿಯ ಕೆಲಸ ಇದ್ದರೆ ಇದೆ; ಇಲ್ಲವಾದರೆ ಇಲ್ಲ ಎನ್ನುವಂತಾಗಿಹೋಗಿತ್ತು.

ನಾನು ಬೇಕೆಂದೇ ಮುಗ್ಧನ ಸೋಗು ಹಾಕಿಕೊಂಡು ಖಾನ್‌ಸಾಹೇಬನನ್ನು ಹುರಿದುಂಬಿಸಿ ಪ್ರಶ್ನೆ ಕೇಳುತ್ತಿದ್ದೆ. ಒಮ್ಮೆ ಆತನನ್ನು ಕೇಳಿದೆ: "ದೇಶದ ವಿಪತ್ತಿನ ಸಮಯದಲ್ಲಿ ನಮ್ಮಂಥವರು ಏನು ಮಾಡಬೇಕು? ನಾನೆಂದೂ ಶಸ್ತ್ರಗಳನ್ನು ಹಿಡಿದವನಲ್ಲ. ಆ ಸ್ಟೆನ್ ಗನ್ ಎಂಬ ಬಂದೂಕನ್ನು ಕಣ್ಣಿನಿಂದ ನೋಡಿಲ್ಲ ಕೂಡ. ಯುದ್ಧ ಎಂದ ಮೇಲೆ ಭಯಂಕರವೇ ಇದ್ದೀತು."

"ಮತ್ತೆ! ನೀವು ಬ್ರಾಹ್ಮಣರು ಸರಕಾರಕ್ಕೆ ಜಯವಾಗಲಿ ಎಂದು ಆಶೀರ್ವಾದ ಕೊಡುತ್ತ ಕುಳಿತರಾಯಿತು. ಯುದ್ಧ ಮಾಡಲು ನಾವಿದ್ದೇವೆ." ಈ ಖಾನ್‌ಸಾಹೇಬ ಐದು ಫೂಟು ಎರಡು ಇಂಚು ಎತ್ತರದ, ಐವತ್ತು ವರ್ಷದ, ಬಹುಶಃ ೨೧ ಇಂಚು ಎದೆಯ ಸುತ್ತಳತೆ ಇದ್ದ ಆಳು. "ನಿಮಗೆ ರಾಜ್ಯವಾಳುವುದೇನು ಗೊತ್ತು? ಈಗ ನೋಡಿ, ನಾವು ಎಲ್ಲ ಸಿದ್ಧತೆಗಳನ್ನು ಮಾಡಿಕೊಂಡಿದ್ದೇವೆ. ಮನಮಾಡದ ಮೇಲೆ ದಾಳಿ ಮಾಡುವುದೇ ತಡ, ಮರುಕ್ಷಣದಲ್ಲಿ ದಿಲ್ಲಿಯನ್ನು ತಲುಪುತ್ತೇವೆ. ಆಮೇಲೆ ನಾಗಪುರ ಮಾರ್ಗವಾಗಿ ಹೋಗಿ ಮದ್ರಾಸನ್ನು ಗೆದ್ದುಕೊಂಡು ನಂತರ ಸೊಲ್ಲಾಪುರ ಮಾರ್ಗವಾಗಿ ಹೋಗಿ ಕಲಕತ್ತೆಯನ್ನು ವಶಪಡಿಸಿಕೊಳ್ಳುವೆವು," ಖಾನ್‌ಸಾಹೇಬ ಎದೆಯುಬ್ಬಿಸಿ ಹೇಳಿದ.

ಆತನ ಅಗಾಧ ಜ್ಞಾನ ಕಂಡು ದಂಗಾದೆ. ನಾನು ಮೆಲ್ಲಗೆ "ಖಾನ್‌ಸಾಹೇಬ, ಸೊಲ್ಲಾಪುರ ಎಲ್ಲಿ, ಕಲಕತ್ತೆ ಎಲ್ಲಿ?" ಎಂದೆ.

"ಎಲ್ಲೇ ಇರಲಿ, ನಮಗೇನು? ನಮ್ಮ ಸಾಮರ್ಥ್ಯ- ಬಲದಿಂದ ಸೊಲ್ಲಾಪುರದಿಂದ ಕಲಕತ್ತೆಗೆ, ಮನಮಾಡದಿಂದ ದಿಲ್ಲಿಗೆ, ನಾಗಪುರದಿಂದ ಮದ್ರಾಸಿಗೆ ನಾವು ಹೋಗುತ್ತೇವೆ. ನಮಗೆ ಅಶಕ್ಯವಾದದ್ದೇನಿದೆ?" ಎಂದ ಖಾನ್ ಸಾಹೇಬ.

ಹೀಗೆ ನಮ್ಮ ಹರಟೆ ನಿತ್ಯವೂ ಸಾಗುತ್ತಿತ್ತು. ನನ್ನ ಮನೆಯಲ್ಲಿ ಯಾವಾಗಲೂ ಚಿಂತೆಯ ವಾತಾವರಣವಿರುತ್ತಿತ್ತು. ನಗರದಲ್ಲಿ ದಿನ ನಿತ್ಯ ಕಿರಕುಳ ಹಲ್ಲೆಗಳು ನಡೆಯುತ್ತಿದ್ದವು. ಇಂಥ ಒಂದು ಘಟನೆಯ ಬಿಸಿ ನಮಗೂ ಹತ್ತಿತ್ತು. ನಮ್ಮ ಮನೆಯ ಶೀಖ ಕಾವಲುಗಾರ ತನ್ನ ಮಗಳಿಗಾಗಿ ಔಷಧ ತರಲೆಂದು ಮೋಜಮುಜಹಿ ಮಾರ್ಕೆಟಿಗೆ ಹೋಗಿದ್ದ. ಸಂಜೆಯಾದರೂ ಆತ

ತಿರುಗಿ ಬರಲಿಲ್ಲ. ರೇಡಿಯೋದಲ್ಲಿ ಅವನ ಕೊಲೆಯಾದ ಸಮಾಚಾರ ಕೇಳಿದೆ. ಮಾರ್ಕೆಟಿನ ಬಳಿ ಜನರ ಗುಂಪೊಂದು ಅವನ ಮೇಲೆ ದಾಳಿಮಾಡಿ ಕೊಡಲಿಯಿಂದ ಹೊಡೆದು ಕೊಂದುಹಾಕಿತೆಂದು ಕೇಳಿದೆ. ಅಂದು ರಾತ್ರಿ ಮನೆಯಲ್ಲಿ ಒಬ್ಬರಿಗೂ ನಿದ್ದೆ ಬರಲಿಲ್ಲ.

ರಜಾಕಾರರಿಗೂ ಜನರಿಗೂ ಘರ್ಷಣೆಗಳಾದ ಸುದ್ದಿ ನಿತ್ಯವೂ ಬರುತ್ತಲಿತ್ತು. ಜೂನ್ ತಿಂಗಳ ಕೊನೆಯಲ್ಲಿ ನನ್ನ ತಂಗಿಯ ನಾದಿನಿಯ ಮಗ ಹೈದರಾಬಾದಿನ ಪೂರ್ವಕ್ಕೆ ೬೮ ಮೈಲು ದೂರವಿರುವ ನಲಗೊಂಡಕ್ಕೆ ನೌಕರಿಗಾಗಿ ಹೋದ. ಹದಿನೈದು ದಿನಗಳಲ್ಲಿಯೆ ಆತ ತಿರುಗಿ ಬಂದಾಗ ಬೇನೆ ಬಿದ್ದವನಂತೆ ಆಗಿಹೋಗಿದ್ದ. ಆತ ಹೇಳಿದ ಸಮಾಚಾರ ಇದು :

"ನಾನು ಕುಳಿತಿದ್ದ ಬಸ್ ಗುಂಡಪಲ್ಲಿಯ ಸಮೀಪ ಬಂದಾಗ ಬಸ್ಸಿನಲ್ಲಿದ್ದವರೆಲ್ಲ ಒಬ್ಬೊಬ್ಬರಾಗಿ ಇಳಿದು ಹೋಗಿಬಿಟ್ಟರು. ಗುಂಡಪಲ್ಲಿ ತಲುಪಿದಾಗ ಬಸ್ಸಿನಲ್ಲಿ ನಾನೊಬ್ಬನೇ ಇದ್ದೆ. ಒಂದು ಮರದ ಬುಡದಲ್ಲಿ ನಮ್ಮ ಬಸ್ ಬಹಳ ಹೊತ್ತು ನಿಂತಿತು. ನಾನು ಕೇಳಿದಾಗ 'ನಿನ್ನೆ ಊರಿನಲ್ಲಿ ಏನೊ ಗದ್ದಲವಾಗಿ ಒಬ್ಬಿಬ್ಬರಿಗೆ ಗಾಯಗಳಾದವು. ಇಂದು ಅದರ ಸೇಡು ತೀರಿಸಿಕೊಳ್ಳಲೆಂದು ಊರಲ್ಲಿ ದಂಗೆ ನಡೆದಿದೆ' ಎಂದು ಡ್ರೈವರ್ ಹೇಳಿದ. ನಾನು ಬೆಪ್ಪಾಗಿ ಕುಳಿತೆ. ಅಷ್ಟರಲ್ಲಿ ಒಬ್ಬಾತ ಓಡುತ್ತ ಬಂದು ಜನರನ್ನು ಒಂದು ಇಕ್ಕಟ್ಟಿನ ಜಾಗದಲ್ಲಿ ತರುಬಿ ಅವರ ಮೇಲೆ ಗೋಳಿಬಾರು ಮಾಡುತ್ತಿದ್ದಾರೆ ಎಂದ. ಜನರ ಆರ್ತನಾದಗಳೂ ಕೇಳಿಬರತೊಡಗಿದವು. ಆ ಮೇಲೆ ಭೀಕರ ಸ್ತಬ್ಧತೆಯುಂಟಾಯಿತು. ತುಸು ಸಮಯದ ನಂತರ ನಾಲ್ವರು ಒಬ್ಬ ಗಾಯಾಳುವನ್ನು ಹೊತ್ತುಕೊಂಡು ಬಂದರು. ಆತನನ್ನು ಬಸ್ಸಿನಲ್ಲಿ ಮಲಗಿಸಿದರು. ಆತನ ಗಾಯದಿಂದ ರಕ್ತ ಹರಿಯುತ್ತಿತ್ತು. ಬಂದವರು ನನ್ನನ್ನು ಕುರಿತು 'ಮೌಲವಿಸಾಹೇಬ, (ನಾನು ಕಪ್ಪು ಶೇರವಾನಿ ಮತ್ತು ಅಗಲವಾದ ಪೈಜಾಮ ಧರಿಸಿದ್ದರಿಂದ ನಾನಾವ ಜಾತಿಯವ ಎಂದು ಅವರಿಗೆ ತಿಳಿಯಲಿಲ್ಲ.) ನಿನ್ನೆ ಇಲ್ಲಿಯ ಜನ ದಾಳಿ ಮಾಡಿದರು. ಆಗ ನಮ್ಮ ಈ ಭಾಯಿ ಗಾಯಗೊಂಡ. ಅವನನ್ನು ನಲಗೊಂಡದ ದವಾಖಾನೆಗೆ ಸೇರಿಸಿ. ಇಂದು ನಮ್ಮ ಜನ ಸೇಡು ತೀರಿಸಿಕೊಳ್ಳುತ್ತಿದ್ದಾರೆ' ಎಂದರು.

"ನಾನು ಕಂಪಿಸಿದೆ. ನನ್ನ ನಿಜ ಪರಿಚಯ ತಿಳಿದರೆ ನನ್ನ ಎಲುವು ಕೂಡ ಪತ್ತೆ ಹತ್ತದಂತಾಗುತ್ತಿತ್ತು. ನಾನು 'ಒಳ್ಳೇದು, ಏನೂ ಕಾಳಜಿ ಮಾಡಬೇಡಿರಿ' ಎಂದು ಆ ಗಾಯಾಳುವಿಗೆ ನನ್ನ ರೇನ್‌ಕೋಟ್ ಹೊದಿಸಿದೆ. ನಮ್ಮ ಬಸ್ ನಲಗೊಂಡ ತಲುಪಿದ ಮೇಲೆ ಅವನನ್ನು ದವಾಖಾನೆಗೆ ಸೇರಿಸಿದೆ ಮನೆಗೆ ಹೋದಬಳಿಕ ನನಗೆ ವಿಪರೀತ ಜಡ್ಡಾಯಿತು. ನಾನಿನ್ನೂ ಪೂರ್ಣ ಚೇತರಿಸಿಕೊಂಡಿಲ್ಲ."

ಆತನಿಗೆ ರಜೆ ತೆಗೆದುಕೊಂಡು ಇಲ್ಲೇ ಇರಲು ಹೇಳಿದೆ. ನಮ್ಮ ಶೀಖ ಕಾವಲುಗಾರನ ಕೊಲೆಯಾದ ಬಳಿಕ ನಾವು ಇನ್ನೊಂದು ಮನೆಗೆ ಹೋದೆವು. ಅಗಸ್ಟ್ ತಿಂಗಳಲ್ಲಿ ರಾಷ್ಟ್ರೀಯ ಉರ್ದು ದಿನಪತ್ರಿಕೆಯೊಂದರ ಸಂಪಾದಕ ಶೋಬುಲ್ಲಾಖಾನರ ಕೊಲೆಯಾಯಿತು. ಅವರ ಮನೆ ನಮ್ಮ ಮನೆಯ ಸಮೀಪದಲ್ಲೆ ಇತ್ತು. ಶೋಬುಲ್ಲಾಖಾನರು ರಾತ್ರಿ ಸಿನೆಮಾ ನೋಡಿ ಮನೆಗೆ ಬರತೊಡಗಿದ್ದರು. ಅವರ ಮನೆಯ ಎದುರೇ ಅಮಾನುಷ ರೀತಿಯಲ್ಲಿ ಅವರ ಕೊಲೆ ಮಾಡಲ್ಪಟ್ಟಿತು. ಅವರ ಕೈಗಳನ್ನು ಮೊದಲು ಕಡಿದು ಆ ಮೇಲೆ ಅವರನ್ನು ಕೊಂದರು. ಕೆಲ ದಿನಗಳ ಹಿಂದೆಯೆ ರಜಾಕಾರರು "ಇಸ್ಲಾಮದ ವಿರುದ್ಧ ಕೈಯೆತ್ತಿದವರ ಕೈಗಳನ್ನು ಕಡಿದು ಹಾಕುವೆವು" ಎಂದು ಘೋಷಿಸಿದ್ದರು.

ಮಾರನೆಯ ದಿನ ಶೋಬುಲ್ಲಾಖಾನರ ಶವ ನೋಡಲು ಜನರ ಗದ್ದಲ ಕೂಡಿತ್ತು. ಆದರೆ ಅಲ್ಲಿ ಯಾರು ಬರುತಾಳೆ ಯಾರು

ಹೋಗುತ್ತಾರೆ ಎಂದು ನೂರಾರು ಕಣ್ಣುಗಳು ಕಾಯುತ್ತಿದ್ದುದರಿಂದ ನಾನು ಹೋಗುವ ಧೈರ್ಯ ಮಾಡಲಿಲ್ಲ

ಮುಂದೊಂದು ದಿನ ನಮ್ಮ ಕಮೀಶನರರು ಕಚೇರಿಯಲ್ಲಿ ಒಂದು ಸಭೆ ಕೂಡಿಸಿದರು. ಶಿಪಾಯಿಗಳನ್ನುಹಿಡಿದು ಎಲ್ಲರೂ ಕೂಡಿದ್ದರು. ಕಮೀಶನರರು ಆವೇಶಪೂರ್ಣ ಭಾಷಣ ಮಾಡಿದರು:

"ನಮ್ಮ ರಾಜ್ಯವ್ಯವಸ್ಥೆ, ನ್ಯಾಯ ಬುದ್ಧಿ, ನಿಷ್ಪಕ್ಷಪಾತ ಬುದ್ಧಿ ಇಡೀ ಜಗತ್ತಿನಲ್ಲಿ ಪ್ರಸಿದ್ಧ ಇದೆ. ನಮ್ಮ ಮೇಲೆ ಈಗ ಆಕ್ರಮಣವಾಗುತ್ತಿದೆ. ಆದರೆ ನಮ್ಮ ಬೇರು ಆಳವಾಗಿ ಊರಿದ್ದು ಅದನ್ನು ಇಷ್ಟೊಂದು ಸುಲಭದಲ್ಲಿ ಕಿತ್ತು ಹಾಕುವುದು ಸಾಧ್ಯವಿಲ್ಲವೆಂಬುದನ್ನು ಇಡೀ ಜಗತ್ತೇ ಕಂಡೀತು. ಇನ್ನು ನಾವು ದೃಢ ನಿರ್ಧಾರದಿಂದ ಕೆಲಸ ಮಾಡಬೇಕು. ನಿಮ್ಮ ನಡೆ, ನಿಮ್ಮ ನುಡಿಗಳಲ್ಲಿ ಸೈನಿಕನ ಲಕ್ಷಣ ಕಾಣಿಸಬೇಕು. ನೀವಿನ್ನು ಮುಂದೆ ಖಾಕಿ ಸಮವಸ್ತ್ರ ತೊಟ್ಟು ಕಚೇರಿಗೆ ಬರತಕ್ಕದ್ದು."

ಫತ್ತೆ ಮೈದಾನಿನಲ್ಲಿ ಕವಾಯತಿನ ಶಿಕ್ಷಣ ಪಡೆಯಲು ನಿತ್ಯವೂ ಮುಂಜಾನೆ ಎಲ್ಲರೂ ಅಲ್ಲಿಗೆ ಬರಬೇಕು ಎಂದು ನಮಗೆ ಅಂದು ತಿಳಿಸಿದರು.

ಮಾರನೆಯ ದಿನ ಮುಂಜಾನೆ ಫತ್ತೆ ಮೈದಾನಿನಲ್ಲಿ ಬೇರೆ ಬೇರೆ ಶಾಖೆಯ ಅಧಿಕಾರಿಗಳು, ಕಾರಕೂನರು, ಶಿಪಾಯಿಗಳು ನೆರೆದಿದ್ದರು. "ಅಟೆನ್ಶನ್," "ಅಬೌಟ್‌ಟರ್ನ್," "ಕ್ವಿಕ್ ಮಾರ್ಚ್," "ಲೆಫ್ಟ್, ಲೆಫ್ಟ್, ರೈಟ್" ಇತ್ಯಾದಿ ಶಬ್ದಗಳು ದುಮುದುಮಿಸುತ್ತಿದ್ದವು. ಮಂತ್ರಿಗಳು, ಉಪಮಂತ್ರಿಗಳು, ಕಾರ್ಯದರ್ಶಿಗಳು ಕವಾಯತು ನಡೆಸಿದ್ದರು. ಸ್ಥೂಲಕಾಯದವರು ಹಣ್ಣಾಗಿ ಹೋಗಿದ್ದರು. ಆದರೆ ಸ್ವದೇಶ, ಸ್ವಧರ್ಮ, ಸ್ವಸಂಸ್ಕೃತಿಗಳ ರಕ್ಷಣೆ ತಮ್ಮ ಕರ್ತವ್ಯ ಎಂಬ ಭಾವ ಅವರ ಮುಖದ ಮೇಲೆ ಮೂಡಿದಂತಿತ್ತು.

ಈ ಕವಾಯತು ನನ್ನಿಂದ ನೀಗೀತೆ ಎಂದು ಚಿಂತೆಗೊಳಗಾದೆ. ಡಾಕ್ಟರರು ನಮ್ಮ ಕಡೆ ದೃಷ್ಟಿ ಬೀರಿ "ಪಾಸ್" ಎಂದು ಬಿಟ್ಟರು. ಕವಾಯತಿಗೆಂದು ಹೋಗಿ ನಿಂತೆವು. ನಮ್ಮ ಅಧಿಕಾರಿ ಸಾಲಾಗಿ ನಿಂತುಕೊಳ್ಳಲು ಹೇಳಿದ. ಅಷ್ಟರಲ್ಲಿ ನನಗೊಂದು ಯುಕ್ತಿ ಹೊಳೆಯಿತು. ನಾನು ಡಾಕ್ಟರರ ಹತ್ತಿರ ಹೋದೆ. "ಡಾಕ್ಟರ್ ಸಾಹೇಬ್, ಸ್ವತಂತ್ರ ಹೈದರಾಬಾದಿಗಾಗಿ ನನ್ನ ರಕ್ತದ ಕೊನೆಯ ಬಿಂದು (ಮಾತ್ರ) ಕೊಡುತ್ತೇನೆಂದು ಪ್ರತಿಜ್ಞೆ ಮಾಡಿದ್ದೇನೆ. ನಮ್ಮ ದೇಶ ಮತ್ತು ರಾಜನ ಮೇಲಿನ ನನ್ನ ನಿಷ್ಠೆ ಅಚಲವಾದದ್ದು. ನಮ್ಮ ದೇಶದ ಉನ್ನತಿಯಾಗಲಿ ಎಂದು ಯಾವಾಗಲೂ ದೇವರಲ್ಲಿ ಪ್ರಾರ್ಥನೆ ಮಾಡುತ್ತಿದೇನೆ. ನಮ್ಮ ಒಡೆಯ ದೀರ್ಘಾಯುವಾಗಲಿ. ಹೇ ರಾಜಾ, ನೀನು ಸಹಸ್ರ ವರ್ಷ ಬಾಳು. ನಿನ್ನ ಪ್ರತಿ ವರ್ಷದ ದಿನಗಳು ಮೂರುನೂರು ಅರವತ್ತನಾಲ್ಕರ ಬದಲು ಐವತ್ತು ಸಾವಿರವಾಗಲಿ ಎಂದು ಹಾರ್ದಿಕವಾಗಿ ಬಯಸುತ್ತಿದ್ದೇನೆ.

"ಆದರೆ ಯುದ್ಧದಲ್ಲಿ ನಾನೇನು ಮಾಡಬಲ್ಲೆ? ನನಗೀಗ ಳಂ ವರ್ಷ. ಆದಿವಾಸಿಗಳ ಶಾಖೆಯಲ್ಲಿ ಮೂರು ವರ್ಷ ಕೆಲಸ ಮಾಡಿದೆ. ಆ ಅವಧಿಯಲ್ಲಿ ಏಳೆಂಟು ಸಾರಿ ಮಲೇರಿಯಕ್ಕೆ ತುತ್ತಾದೆ. ಮೈಯಲ್ಲಿ ರಕ್ತ ಕಡಿಮೆಯಾಗಿದೆ. ನಡೆಯುವಾಗ ಕಾಲು ಸೋಲುತ್ತದೆ. ಮೈ ದಪ್ಪವಾಗಿದೆ. ಇಂಥ ನಾನು ಕವಾಯತು ಕಲಿತು ಯುದ್ಧ ಮಾಡುವುದು ಯಾವಾಗ? ಯುದ್ಧ ಸಮೀಪಿಸಿದೆ ಎಂದು ಜನ ಅನ್ನುತ್ತಾರೆ. ದಯವಿಟ್ಟು ನನ್ನನ್ನು ಈ ಕವಾಯತಿನಿಂದ ಬಿಡುಗಡೆ ಮಾಡಿ."

ಆ ಧೂರ್ತ ಡಾಕ್ಟರ ನಕ್ಕು, "ಸರಿ. ಸರಿ. ಆದರೆ ಪ್ರಸಂಗ ಬಂದದ್ದೇ ಆದರೆ. . ."

ನಡುವೆಯೆ ಹೇಳಿದೆ: "ನನ್ನ ರಕ್ತದ ಕೊನೆಯ ಹನಿಯನ್ನು ರಾಜನಿಗಾಗಿ ಅರ್ಪಿಸುವೆ. ನಿಮಗೆ ಸಂದೇಹ ಬೇಡ."

ಫತ್ತೆ ಮೈದಾನಿನಿಂದ ಹೊರಟೆ.

ಮುಂದೆ ಕೆಲ ದಿನಗಳ ನಂತರ ಸೊಲ್ಲಾಪುರದ ಬಳಿ ನಾನಜ ಎಂಬಲ್ಲಿ ಹೈದರಾಬಾದಿನ ಸೈನಿಕರು ಮತ್ತು ಹೊರಗಿನವರಲ್ಲಿ ಘರ್ಷಣೆಯಾಗಿ ಹೈದರಾಬಾದಿನ ಕೆಲ ಸೈನಿಕರು ಸತ್ತರು, ನಾನಜ ನಮ್ಮ ಕೈಬಿಟ್ಟಿತು ಎಂಬ ಸುದ್ದಿ ಕೇಳಿದೆವು. ಅಂದು ಜಮರುದ್ ಮಹಾಲ್ ಸಿನೇಮಾ ಗೃಹದಲ್ಲಿ ಪ್ರಚಂಡ ಸಭೆ ಜರುಗಿತು. ಅಂದು ಕಾಸಿಮ ರಜವಿಯ ಭಾಷಣ ಕೇಳಿದೆ. ಹಿಂದೆ ಶೇಕ್ಸ್‌ಪಿಯರನ ನಾಟಕದಲ್ಲಿ ಓದಿದ್ದ ಬ್ರೂಟಸ್ ಮತ್ತು ಮಾರ್ಕ್ ಅಂತೋನಿಯ ಭಾಷಣ ನೆನಪಾಯಿತು. ಜನರೆಲ್ಲ ಮಂತ್ರಮುಗ್ಧರಾಗಿದ್ದರು. "ನಾನಜದಲ್ಲಿ ನಮ್ಮ ಜನರು ತೀವ್ರ ಪ್ರತೀಕಾರ ಮಾಡಿದರು. ಶತ್ರುಗಳು ಹೌಹಾರಿ ಟ್ಯಾಂಕ್‌ಗಳನ್ನು ತಂದರು. ನಾನಜ ಅವರ ಕೈಸೇರಿತು. ನಮ್ಮ ಶೌರ್ಯದ ಡಂಗುರ ಇಡೀ ಜಗತ್ತಿಗೇ ಕೇಳಿಸುತ್ತಿದೆ. ನಾವು ರಣಾಂಗಣಕ್ಕಿಳಿದಾಗ ತಲೆಗೆ ಕಫನ (ಹೆಣದ ಮೇಲಿನ ಅರಿವೆ) ಕಟ್ಟಿಕೊಂಡೇ ಇಳಿಯೋಣ," ಎಂದನಾತ. ಭಾಷಣ ಮುಗಿಯುವುದರೊಳಗೆ ತುಂಬ ಅಸ್ವಸ್ಥಚಿತ್ತನಾಗಿ ನಾನಲ್ಲಿಂದ ಎದ್ದು ಹೋದೆ.

ಮತ್ತೆ ಕೆಲ ದಿನಗಳ ನಂತರ ಇಂಥದೇ ಇನ್ನೊಂದು ಘಟನೆ ನಡೆಯಿತು. ಕೋಂದಾಡದಲ್ಲಿ ಹೈದರಾಬಾದಿನ ಸೈನಿಕರು ತಳವೂರಿದ್ದರು. ವಿಜಯವಾಡಾದಿಂದ ಬಂದ ಭಾರತೀಯ ಸೈನಿಕರು ಅವರ ಮೇಲೆರಗಿ ಅವರನ್ನು ಹಿಡಿದುಕೊಂಡು ಹೋದರು.

ಹೈದರಾಬಾದ್ ನಗರದಲ್ಲಿ ಇದರಿಂದ ಗಡಬಿಡಿಯೆದ್ದಿತು. ನಮ್ಮ ಖಾನ್‌ಸಾಹೇಬ ಕಚೇರಿಯಲ್ಲಿ ನನ್ನ ಬಳಿಗೆ ಬಂದು, "ಸಾಹೇಬ, ಶತ್ರುಗಳ ಕ್ಷುಲ್ಲಕತನ ಮಿತಿಮೀರಿ ಹೋಯಿತು," ಎಂದು ಆವೇಶದಿಂದ ಹೇಳಿದ.

"ಅಂ! ಏನಾಯಿತು! ನಮ್ಮ ಶತ್ರು ಯುದ್ಧ ಮಾಡದೆಯೆ ಓಡಿದನೆ ?"

"ಛೆ! ಕೋಂದಾಡದ ಸುದ್ದಿ ಕೇಳಿದ್ದೀರಾ?"

"ಹೌದು, ನಮ್ಮ ಸೈನಿಕರನ್ನು ಹಿಡಿದುಕೊಂಡು ಹೋದರಂತೆ."

"ಹುಂ. ನಮ್ಮ ಅಧಿಕಾರಿ ಶತ್ರುಗಳನ್ನು ಕೂಡಿಕೊಂಡ. ಆತ ನಿತ್ಯ ರಾತ್ರಿ ಗಡಿ ದಾಟಿ ಶತ್ರು ಅಧಿಕಾರಿಗಳೊಡನೆ ಇಸ್ಪೀಟಾಡುತ್ತಿದ್ದ. ಅಲ್ಲಾ, ನಮ್ಮ ಸೈನಿಕರು ಸಾದಾ ಹಾಫ್‌ಪ್ಯಾಂಟ ಮತ್ತು ಬನಿಯನ್‌ಗಳ ಮೇಲೆ ಲೆಫ್ಟ್ ರೈಟ್ ಮಾಡುತ್ತಿದ್ದಾಗ ಶತ್ರುಗಳು ಅವರ ಮೇಲೆರಗಿ ಹಿಡಿದುಕೊಂಡು ಹೋದರು. ನಮ್ಮ ಸೈನಿಕರು ಸಿದ್ಧರಿದ್ದರೆ ಶತ್ರುಗಳಿಗೆ ಎದೆಯಾಗುತ್ತಿತ್ತೇ ? ಆಫ್ರಿಕದಲ್ಲಿ ಜರ್ಮನರ ಕೈಯಿಂದ ಪಾರಾಗಿ ಬಂದ ನಮ್ಮ ಸೈನಿಕರು ಇವರಿಗೆ ಸೊಪ್ಪು ಹಾಕುತ್ತಾರೇನು? ಬರೇ ಹಾಫ್ ಪ್ಯಾಂಟ್ ಮತ್ತು ಬನಿಯನ್ ಹಾಕಿಕೊಂಡಾಗ ಹಿಡಿಯುವುದೆಂದರೇನು? ಜಗತ್ತಿನಲ್ಲಿ ನ್ಯಾಯ ನೀತಿ ಉಳಿಯಲೇ ಇಲ್ಲ."

ಖಾನಸಾಹೇಬರಿಗಾದ ಸಂತಾಪದಲ್ಲಿ ಸಹ-ಭಾಗಿಯಾದಂತೆ ನಟಿಸಿದೆ.

ಸೆಪ್ಟೆಂಬರ್ ೧೩ ರಂದು ನನ್ನ ಅಳಿಯ ನನ್ನ ಕೋಣೆಗೆ ಬಂದು "ಕೇಳಿದಿರಾ? ಜಿನ್ನಾ ಸಾಹೇಬರು ಸತ್ತರಂತೆ. ಭಾರತ ಸರಕಾರದ ಸೈನ್ಯ ಹೈದ್ರಾಬಾದ ಗಡಿಯಲ್ಲಿ ನುಗ್ಗಿದೆಯಂತೆ," ಎಂದ.

ಆಗ ನನ್ನ ಮನಃಸ್ಥಿತಿ ಹೇಗಿದ್ದೀತು, ಊಹಿಸಿಕೊಳ್ಳುವುದೇ ಯೋಗ್ಯ. ನಗರದಲ್ಲೆಲ್ಲ ಬಸ್‌ಗಳಲ್ಲಿ ಸೈನಿಕ ಸಮವಸ್ತ್ರ ಧರಿಸಿದ ರಜಾಕಾರರು ರಣರಂಗಕ್ಕೆ ಹೊರಟಿದ್ದುದು ಕಾಣಿಸುತ್ತಿತ್ತು. ನಾನು ಕಚೇರಿಗೆ ಹೋದಾಗ ಖಾನ್‌ಸಾಹೇಬ ಒಬ್ಬ ಶಿಪಾಯಿಯನ್ನು ಕರೆದುಕೊಂಡು ಬಂದ. ಖಾನ್‌ಸಾಹೇಬ ಒಂದು ಕೆಂಪು ನೀಲಿ ಕಾಗದ ತಂದಿದ್ದ. ಶಿಪಾಯಿ ಕಾಗದವನ್ನು ಕಿಡಿಕಿಗೆ ಹಚ್ಚತೊಡಗಲು "ಖಾನ್‌ಸಾಹೇಬ್, ಏನಿದು?" ಎಂದು ಕೇಳಿದೆ.

"ವಿಮಾನ ದಾಳಿಯಾಗಲಿದೆ, ಅದಕ್ಕಾಗಿ ಹಚ್ಚುತ್ತಿದ್ದೇನೆ."

"ಹಗಲೇ ಹಚ್ಚಿದರೆ ಕಾಗದ ಪತ್ರಗಳನ್ನು ಓದುವುದು ಹೇಗೆ? ಕಾಗದ ಅಂಟಿಸಿದರೆ ವಿಮಾನ ದಾಳಿಗೆ ಆಗುವ ಆತಂಕವಾದರೂ ಏನು?"

"ನಿಮಗೆ ತಿಳಿಯದು. ನಿಮಗೆ ಯುದ್ಧ ಕಲೆಯೆ ಗೊತ್ತಿಲ್ಲ. ಇನ್ನು ಕಾಗದ ಪತ್ರಗಳ ಕಡೆ ಲಕ್ಷ್ಯ ಕೊಡುವವರಾದರೂ ಯಾರು? ಸ್ವತಂತ್ರ ಹೈದರಾಬಾದ್ ತನ್ನ ರಕ್ಷಣೆಗಾಗಿ ಜೀವನವನ್ನೆ ಪಣವಾಗಿಡುತ್ತದೆ" ಇಷ್ಟಂದು ಇನ್ನೊಂದು ಕೋಣೆಯ ಕಿಡಿಕಿಗೆ ಕಾಗದ ಹಚ್ಚಿಸಲು ಖಾನ್‌ಸಾಹೇಬ ಹೊರಟು ಹೋದ.

ನಮ್ಮ ಕಚೇರಿಯ ಪಕ್ಕದ ಕಟ್ಟಡದಲ್ಲಿ ರೆಡ್ ಕ್ರಿಸೆಂಟ್ (ರೆಡ್ ಕ್ರಾಸಿನ ಮಾದರಿಯದು) ಕಚೇರಿ ತೆರೆದಿದ್ದರು. ಅಲ್ಲಿಂದ ದಿನವಿಡೀ ರೇಡಿಯೋದ ಧ್ವನಿ ಬರುತ್ತಿತ್ತು, ಆಗ ಕೇಳಿದ ಕೆಲವು ಮಾತುಗಳು ಈಗ ಹನ್ನೆರಡು ವರ್ಷಗಳ ನಂತರವೂ ಕಿವಿಗೆ ನುಗ್ಗುತ್ತಿರುವಂತೆ ಭಾಸವಾಗುತ್ತದೆ, "ದಕ್ಷಿಣದ ತರುಣರೇ, ದೇಶಕ್ಕೆ ನಿಮ್ಮ ಬಿಸಿ ನೆತ್ತರದ ಅಗತ್ಯವಿದೆ. ನಮ್ಮ ಕಾಯದೆ ಅಜಮರ ಇಂತಿ ಕಾಲೇಪುರ ಮಲಾಲ (ದುಃಖದಾಯಕ ಮೃತ್ಯು) ಆಗಿ ಕೆಲ ತಾಸುಗಳು ಕೂಡ ಕಳೆದಿಲ್ಲ; ಅಷ್ಟರಲ್ಲಿ ನೀಚ ಶತ್ರುವು ಉತ್ತರ, ಪೂರ್ವ, ಪಶ್ಚಿಮ ಮತ್ತು ದಕ್ಷಿಣ ದಿಕ್ಕುಗಳಿಂದ ನಮ್ಮ ಮೇಲೆ ದಾಳಿ ಮಾಡಿದ್ದಾನೆ. ಏಳಿರಿ. ದಕ್ಷಿಣದ ತರುಣರೇ, ಸಿದ್ಧರಾಗಿರಿ. ಪ್ರಸಂಗ ಕಠಿಣವಿದೆ."

ನಾನು ತಲೆ ತಗ್ಗಿಸಿ ಕುಳಿತು ಕೆಲಸ ಮಾಡುತ್ತಿದ್ದೆ. ಮಧ್ಯಾಹ್ನ ನಮ್ಮ ಪಟ್ಟೇವಾಲಾ ಒಳಗೆ ಬಂದ. ಆತ ಧರಿಸಿದ್ದ ಶಸ್ತ್ರಾಸ್ತ್ರಗಳನ್ನು ಕಂಡು ಚಿಕ್ಕಂದಿನಲ್ಲಿ ನಾನೋದಿದ್ದ ಅಮೀರಅಲಿ ಠಕ್ಕನ ಕಥೆ ನೆನಪಾಯಿತು. ಪಟ್ಟೇವಾಲ ಹೆಗಲಿಗೆ ಬಂದೂಕು ಏರಿಸಿದ್ದ. ಕಾಡತೂಸಗಳಿಂದ ತುಂಬಿದ ಪಟ್ಟಿಯನ್ನು ಟೊಂಕಕ್ಕೆ ಬಿಗಿದಿದ್ದ. ಎರಡು ಖಡ್ಗಗಳು ಒಂದು ತಿವಿಗತ್ತಿ ಸಿಕ್ಕಿಸಿಕೊಂಡಿದ್ದ.

ಅವನನ್ನು ಕಂಡು ತಣ್ಣಗಾದೆ. ಅವನಿಗೆ ನನ್ನ ಹೆದರಿಕೆಯ ಅರಿವಾಗಿರಬೇಕು. ಆತ "ಸಾಹೇಬ, ನಿಮ್ಮ ನಿರೋಪ ತೆಗೆದುಕೊಳ್ಳಲು ಬಂದಿದ್ದೇನೆ ನಾನು ರಣರಂಗಕ್ಕೆ ಹೊರಟಿದ್ದೇನೆ. ನನಗಾಗಿ ಅಲ್ಲಾನಲ್ಲಿ ಬೇಡಿಕೊಳ್ಳಿ. ಆಜಾದ್ ಹೈದ್ರಾ-ಬಾದ್ ಜಿಂದಾಬಾದ್" ಎಂದು ಆತ ತನ್ನೆರಡೂ ಕೈಗಳನ್ನು ಮುಂದೆ ಮಾಡಿದ. ನಾನು ಅವುಗಳನ್ನು ಹಿಡಿದು "ಆಜಾದ್ ಹೈದ್ರಾಬಾದ್ ಜಿಂದಾಬಾದ್" ಎಂದು ಕ್ಷೀಣ ಸ್ವರದಲ್ಲಿ ನುಡಿದೆ. ಅವನು ಹೋದ ಮೇಲೆ ನನ್ನ ಪ್ರಾಣ ತಿರುಗಿ ಬಂದಂತಾಯಿತು.

ಮಾರನೆಯ ದಿನ ಕಮೀಶನರ್ ಸಾಹೇಬರು ನಮ್ಮನ್ನು ಕರೆಸಿದರು. ಇಬ್ಬರು ಸಮವಸ್ತ್ರದ ಅಧಿಕಾರಿಗಳು ಅವರೊಡನಿದ್ದರು. ಕಮೀಶನರರು "ನಮ್ಮ ಸೈನಿಕರು ರಣರಂಗಕ್ಕಿಳಿದಿದ್ದಾರೆ. ಅವರಿಗೆ ಅನ್ನವಸ್ತ್ರ ಇತ್ಯಾದಿ ಬೇಕು. ನೀವೆಷ್ಟು ವರ್ಗಣಿ ಕೊಡುತ್ತೀರಿ, ಹೇಳಿರಿ?" ಎಂದರು.

"ನೂರು ರೂಪಾಯಿ ಕೊಡುತ್ತೇನೆ. ಈಗ ಸದ್ಯ ನನ್ನಲ್ಲಿ ಏನೂ ಇಲ್ಲ. ಸಂಬಳದಲ್ಲಿ ಮುರಿದುಕೊಳ್ಳಿರಿ," ಎಂದೆ.

ಮುಂದೆರಡು ಮೂರು ದಿನ ನಾವು ತುಂಬ ಕಳವಳಕ್ಕೀಡಾದೆವು. ನಮ್ಮ ಮನೆಯ ಮುಂದೆ ಕವಾಯತು ಮಾಡುತ್ತ ಹೋಗುತ್ತಿದ್ದ ರಜಾ-ಕಾರರು "ಹಮ್ ಧಾಕೆ ಮುಸಲಮಾನಿ ದುನಿಯಾ ಮೇಂ ಬಿಠಾದೇಂಗೆ, ಕಾಫರಕೀ ಹುಕುಮತಕೊ ಠೋಕರಸೇ ಮಿಟಾ ದೇಂಗೆ" ಎಂದು ಘೋಷಿಸುತ್ತಿದ್ದರು. "ಶತ್ರು ಓಡುತ್ತಿದ್ದಾನೆ. ನಮ್ಮವರು ಮನ್ನುಗ್ಗುತ್ತಿದ್ದಾರೆ. ಶತ್ರುಗಳಿಗೆ ಟ್ಯಾಂಕುಗಳನ್ನು ತರುವ ಪ್ರಸಂಗ ಬಂದಿದೆ" ಎಂದಿತ್ಯಾದಿ ರೇಡಿಯೊದಲ್ಲಿ ಬರುವ ಸುದ್ದಿಗಳನ್ನು ಕೇಳಿ ನಮ್ಮ ಎದೆಗುಂಡಿಗೆ ಹಾರುತ್ತಿತ್ತು.

ಹದಿನೈದು ಮತ್ತು ಹದಿನಾರನೇ ತಾರೀಖಿನಿಂದ ನಮ್ಮ ಮನೆಯ ಮುಂದೆ ಗಾಯಾಳು ರಜಾಕಾರರನ್ನು ತುಂಬಿಕೊಂಡು ಬಸ್ಸುಗಳು ಹೋಗತೊಡಗಿದವು. ಹದಿನಾರರಂದು ಮಾಜಿ ಮಂತ್ರಿ ರಾಮಾಚಾರ್ಯರ ಮನೆಯಲ್ಲಿ ಯಜ್ಞ-ಪೂರ್ತಿ ಸಮಾರಂಭವಿತ್ತು. ತಮ್ಮ ಮತ್ತು ನಿಜಾಮರ ಗ್ರಹಗತಿ ನೆಟ್ಟಗಿಲ್ಲವೆಂದು ಶಾಂತಿ ಮಾಡುತ್ತಿದ್ದೇವೆಂದು ಅವರು ಹೇಳಿದರು. ಅಂದೇ ನಾನು ಕೃಷಿ ಮಂತ್ರಿಯ ಪರ್ಸನಲ್ ಅಸಿಸ್ಟೆಂಟ್ ಎಂದು ನೇಮಕಗೊಂಡೆ.

ಸಂಜೆ ಮನೆಗೆ ಬಂದೆ. ಭಾರತ ಒಕ್ಕೂಟದ ಸೈನ್ಯಗಳು ನಗರದ ಸಮೀಪ ಬರತೊಡಗಿವೆಯೆಂದು ಕೇಳಿ ನಮಗೆ ಆನಂದವಾಗಿತ್ತು. ಆದರೆ ಬಂದು ತಲುಪುವ ಮೊದಲೇ ಏನೇನು ಅನಾಹುತಗಳಾಗುವವೊ ಎಂದು ಗಾಬರಿಯಾಗಿದ್ದೆವು. ರಾತ್ರಿ ಒಬ್ಬರೂ ನಿದ್ದೆ ಮಾಡಲಿಲ್ಲ.

ಸೆಪ್ಟೆಂಬರ್ ೧೭, ಅಂದರೆ ಅನಂತ ಚತುರ್ದಶಿಯ ದಿನ ಭಾರತದ ಸೈನಿಕರುಹೈದರಾಬಾದಿನಿಂದ ಮೂವತ್ತು ಮೈಲು ದೂರದಲ್ಲಿ ಬಂದಿಳಿದರು. ಮುಂಜಾನೆ ತೆರೆದ ಅಂಗಡಿಗಳು ಒಂದು ತಾಸಿನಲ್ಲಿಯೆ ಮುಚ್ಚಲ್ಪಟ್ಟವು. ನಗರದಲ್ಲಿಏನಾದರೂ ಭಯಂಕರ ಘಟನೆ ಜರುಗುವದೆಂಬ ಸುದ್ದಿ ಹಬ್ಬಿತ್ತು. ಏನಾದರೂ ಆದರೆ ಪ್ರತೀಕಾರಮಾಡಲು ನಮ್ಮಲ್ಲಿ ಶಸ್ತ್ರಗಳೂ ಇರಲಿಲ್ಲ. ದಸರೆ ಹಬ್ಬದ ದಿನ ಪೂಜೆ ಮಾಡಲೆಂದು ಅನೇಕ ವರ್ಷಗಳ ಹಿಂದೆ ಕೊಂಡಿದ್ದ ಚಿಕ್ಕ ತಿವಿಗತ್ತಿಯೊಂದನ್ನು ಬಿಟ್ಟರೆ ಬೇರೆ ಶಸ್ತ್ರ ನಮ್ಮ-ಲ್ಲಿರಲಿಲ್ಲ. ನಾವು ಕಲ್ಲು ಮುಂತಾದವನ್ನು ಗಚ್ಚಿನ ಮೇಲೆ ಕೂಡಿಸಿಟ್ಟೆವು. ಯಾರಾದರೂ ದಾಳಿ ಮಾಡಿದರೆ ಹಾಗೆ ಮಾಡೋಣ, ಹೀಗೆ ಮಾಡೋಣ ಎನ್ನುತ್ತ ಸಮಾಧಾನಪಟ್ಟುಕೊಳ್ಳುತ್ತಿದ್ದೆವು.

ಅನಂತಚತುರ್ದಶಿಯ ಹಬ್ಬದ ಊಟವಿತ್ತು. ಆದರೂ ತುತ್ತು ಗಂಟಲದಲ್ಲಿಳಿಯಲಿಲ್ಲ. ಏನಾದರೂ ಆದರೆ ನಮ್ಮಲ್ಲಿ ಎಷ್ಟು ಜನ ಬದುಕುಳಿಯುತ್ತೇವೆಯೊ, ಯಾರ ಹಣೆಯಲ್ಲಿ ಏನೇನು ಬರೆದಿದೆಯೊ ಎಂಬ ಯೋಚನೆಯಿಂದ ಹಣ್ಣಾಗಿ ಹೋಗಿದ್ದೆವು.

ಆದರೆ ಎಲ್ಲವೂ ಮಾಟಮಾಡಿದಂತೆ ಬದಲಾಗಿ ಬಿಟ್ಟಿತು. ಹೈದರಾಬಾದ ಶರಣು ಬರಲಿ ಎಂದು ಜನರಲ್ ರಾಜೇಂದ್ರ ಸಿಂಹರು ಇತ್ತ ಸಂದೇಶವನ್ನು ರೇಡಿಯೊದಲ್ಲಿ ಕೇಳಿದೆವು. ಮಂತ್ರಿ-ಮಂಡಲ ರಾಜೀನಾಮೆಯಿತ್ತ ಸುದ್ದಿ ಮಧ್ಯಾಹ್ನ ಬಂತು. ಕಾಸೀಮ ರಜವಿಯನ್ನು ಹಿಡಿದು ತಂದು ಅವನಿಂದ ರೇಡಿಯೊ ಮೂಲಕ ಎಲ್ಲರೂ ಶಾಂತವಿರಬೇಕೆಂಬ ವಿನಂತಿಯನ್ನು ಮಾಡಿಸಿದರು. ಸಂಜೆ ನಿಜಾಮರು ಒಕ್ಕೂಟದ ಸೈನ್ಯ ಮತ್ತೆ ಸಿಕಂದರಾಬಾದಿನಲ್ಲಿ ಇರುವುದು ಎಂದು ರೇಡಿಯೊದಲ್ಲಿ ಹೇಳಿದರು.

ರಸ್ತೆಗಳಲ್ಲಿ ಎರಡು ಮೂರು ಮೈಲುಗಳವರೆಗೆ ಲಕ್ಷಗಟ್ಟಲೆ ಜನ ಸೇರಿದ್ದರು. ಗುಲಾಲನ್ನು ತೂರುತ್ತಿದ್ದರು. ಜನ ಪರಸ್ಪರ ಅಪ್ಪಿಕೊಂಡು ನಗುತ್ತಿದ್ದರು. ಹಾಡುತ್ತಿದ್ದರು. ಕುಣಿಯುತ್ತಿದ್ದರು. ಗದ್ದಲವೊ ಗದ್ದಲ. ನಾವೂ ಅದರಲ್ಲಿ ಸೇರಿಕೊಂಡೆವು.

೧೯೪೮ರ ಸೆಪ್ಟೆಂಬರ್ ೧೮ ರಂದು ನಾವು ಸ್ವತಂತ್ರ ಭಾರತದ ನಾಗರಿಕರೆಂದು ಮೆರೆಯತೊಡಗಿದೆವು. ೧೭ ರಂದು ಮೃತ್ಯು ಬಾಗಿಲಿಗೆ ಬಂದಿತ್ತು. ಆದರೆ ನಮ್ಮ ಭಾಗ್ಯದಲ್ಲಿ ಸ್ವತಂತ್ರ ಭಾರತದ ನಾಗರಿಕರಾಗುವ ಯೋಗವಿತ್ತು. ನಾವು ಉಳಿದುಕೊಂಡೆವು. ಆದರೆ ಈಗ ಹನ್ನೆರಡು ವರ್ಷಗಳ ನಂತರವೂ ಅಂದಿನ ದಿನಗಳ ನೆನಪು ಬಂದರೆ ಮೈ ಮುಳ್ಳೇಳುವುದು. *

ಮಂಜೇಶ್ವರದ ಕನ್ನಡ ಸಂಶೋಧಕ ಮುನಿ ತಮ್ಮೂರು
ಕೇರಳಕ್ಕೆ ಸೇರಿದ್ದಕ್ಕೆ ಪರಿತಪಿಸುತ್ತಿದ್ದಾರೆ

ಗೋವಿಂದ ಪೈಗಳೊಡನೆ ನೂರು ತಾಸು

ದ. ಬಾ. ಕುಲಕರ್ಣಿ

ಈ ವರ್ಷಾರಂಭದ ದಿನ ಕನ್ನಡದ ಜ್ಞಾಪಕ ದೀಪ ಶ್ರೀ ಗೋವಿಂದ ಪೈ ಅವರನ್ನು ಕಂಡು ಬಂದೆ. ಹಾಗೆ ಅವರನ್ನು ಕಂಡದ್ದು ಇದು ನಾಲ್ಕನೆಯ ಸಲವೋ ಅಯ್ದನೆಯ ಸಲವೋ. ಕಳೆದ ವರುಷ ಕವಿ ಶ್ರೀ ಬೇಂದ್ರೆಯವರೊಡನೆ ಕನ್ನಡ ಜಿಲ್ಲೆಗೆ ಹೋದಾಗ ನಮ್ಮ ಒಂದು ಸಭೆಗೆ ಬಂದ ಶ್ರೀ ಗೋವಿಂದ ಪೈಗಳ ಸಂದೇಶ ದೊಡನೆಯೇ ಅವರ ಆದರದ ಕರೆ ಬಂದಿತ್ತು. ನಾನು ಕನ್ನಡ ಜಿಲ್ಲೆಗೆ ಹೋದಾಗಲೆಲ್ಲ ಈ ಕರೆಯ ಕರಕರೆಯನ್ನು ಗಣಿಸದೆ ಮಂಜೇಶ್ವರ ಯಾತ್ರೆ ಮಾಡಿ ಬರುವುದು ಪದ್ಧತಿ. ಸಾಮಾನ್ಯವಾಗಿ ಪೈಗಳು ಮನೆಯಲ್ಲಿ ಇದ್ದೇ ಇರುತ್ತಾರೆ. ನಾನು ತೀರ ಹುಡುಗನಾಗಿದ್ದಾಗಲೂ ಪ್ರೀತಿಯಿಂದ ಸ್ವಾಗತಿಸಿ ಯಾವೊಂದು ಕೃತ್ರಿಮತೆಯೂ ಇಲ್ಲದ ತಮ್ಮ ತೆರೆದೆದೆಯ ಜ್ಞಾನಭಾಂಡಾರವನ್ನು ತೋರಿದ ಆ ಶ್ರೀಮಂತಿಕೆಯನ್ನು ನಾನು ಮರೆಯುವುದು ಸಾಧ್ಯವೇ ಇಲ್ಲ.

ಕಳೆದ ವರುಷ ಕಾರಣಾಂತರದಿಂದ ಮಂಜೇಶ್ವರದ ಯಾತ್ರೆ ಘಟಿಸಲಿಲ್ಲ. ಈ ಸಲ ಉಡುಪಿಯ ಸಾಹಿತ್ಯಸಮ್ಮೇಳನ ಮುಗಿಸಿ ಮಂಗಳೂರಿಗೆಂದು ಹೊರಟೆ. ಹೊರಟದ್ದು ಮಂಜೇಶ್ವರದ ನಿಟ್ಟಿಗೆ ಎಂಬ ಸಮಾಧಾನ. ಮಂಜೇಶ್ವರಕ್ಕೆ ಹೊರಟ ನನ್ನನ್ನು ಒಬ್ಬ ಮಿತ್ರ ತಾನು ಹೊರಟ ಕಾಂಞಂಗಾಡಿಗೆ ಕರೆದೊಯ್ದ. ಏನೆಲ್ಲ ವಿಘ್ನಗಳೋ ಎಂದು ಒಳಮನಸ್ಸು ಪ್ರಶ್ನಿಸುತ್ತಲೇ ಇತ್ತು. ಕಾಂಞಂಗಾಡಿನಿಂದ ಮರಳುವಾಗ ನಾನು ಮಂಜೇಶ್ವರದಲ್ಲಿಳಿದೆ. ಇಳಿಹೊತ್ತು ಪೈಗಳ ಮನೆಯ ಮುಂದೆ ಬಂದಾಗ ಐದು ಗಂಟೆ. ಪಶ್ಚಿಮಕ್ಕೆ ಸಮುದ್ರವೇ ಇರುವಾಗ ತಡೆ ಇಲ್ಲದೆ ಬೆಂಗದಿರುಗಳು ಚುಚ್ಚುತ್ತಿದ್ದವು. ಅದೇ ಆ ಚಾವಡಿಗೆ ಬಂದು ಕರೆದೆ, ಕೂಗಿದೆ. ಯಾರದೂ ಸದ್ದಿಲ್ಲ. "ಸ್ವಾಮೀ — ಪೈಗಳೇ" ಎಂದು ಜೋರಾಗಿ ಕೂಗಿದಾಗ ಒಬ್ಬರು ಬಂದರು. ವಿಚಾರಿಸುವಾಗ ಪೈಗಳು ಶಾನುಭೋಗರ ಮನೆಗೆ ಹೋಗಿದ್ದಾರೆಂದೂ ಆರು ಗಂಟೆಗೆ ಬಂದಾರೆಂದೂ ಹೇಳಿಕೆಯಾಯಿತು. 'ಬಂದಾರು' ಎಂದರೇನು ? ಗೋವಿಂದ ಪೈಗಳು ಆಗ ಬರುವುದೇ ನಿಶ್ಚಯವೆಂಬುದು ನನಗೆ ಖಾತ್ರಿ. ಆ ವರೆಗೆ ಕಡಲಿಗಾದರೂ ಹೋಗಿ ಬರೋಣವೆಂದು ಹೊರಟೆ.

ಬೀದಿಗಿಳಿದಾಗ ಮಂಜೇಶ್ವರ ಕೇರಳವೆಂಬ ವಿಪತ್ಸೂಚಿ ಬೋರ್ಡುಗಳು ಕೆಲವು ಸಾರಿದವು. ಅದನ್ನೇ ಮೆಲುಕಾಡಿಸುತ್ತ ಕಳೆದ ಬಾರಿ ಅಂದರೂ ಆರೇಳು ವರ್ಷಕ್ಕೆ ಮುಂಚೆ ಪೈಗಳೇ ತೋರಿದ ದಾರಿಯಿಂದ ಸಮುದ್ರಕ್ಕೆ ಎಂದರೆ ಪಶ್ಚಿಮಕ್ಕೆ— ಹಾಗೆಂದರೆ ಸುಡುವ ಸೂರ್ಯನ ಕಡೆಗೆ ನಡೆದೆ. ಕಡಲಂಚಿಗೆ ಬಂದೆ. ಹೊಯ್ಗೆ (ಮಳಲು) ಸುಡುತ್ತಿತ್ತು. ನೀರಿನಂಚಿಗೆ ಬಂದ

ನಿಂತುಕೊಂಡೆ. ಒಂದು ಹವಳದ ಬಂಡೆಯೊಡನೆ ಆಟವಾಡುವ ತೆರೆಗಳನ್ನು ಕಂಡು ವಿಸ್ಮಿತನಾಗಿ ನಿಂತೆ. ಒಂದು ತೆರೆ ಬಂದಾಗ ಆ ಬಂಡೆ ದ್ವೀಪವಾಗುವುದು. ಮತ್ತೊಂದು ಬಂದು ಅದನ್ನು ಮುಳುಗಿಸಿ ಬಿಡುವುದು. ಮತ್ತೆ ನೀರು ಜರಿಯುವಾಗ ಶಿಖರವಾಗಿ ಕಂಡ ಬಂಡೆ ಮೆಲ್ಲಗೆ ಮೈತೆರೆದು ತೋರುವುದು. ಮತ್ತೆ ನೀರ ಮಾಲೆ ಅದರ ಉಡಿದಾರವಾಗುವುದು. ಮತ್ತೊಂದು ತೆರೆ ಬಂದು ಅಪ್ಪಳಿಸುವುದು. ಅದೇ ಆಟ. ಗಂಟೆಗಟ್ಟಲೆ ಅದನ್ನೆ ನೋಡುತ್ತ ನಿಂತೆ. ಬಿಳಿ ಸೂರ್ಯ ಕಂತುತ್ತ ಸಹ್ಯವಾಗಿ ಕಂಡ. ಮತ್ತೆ ಕೆಂಪಾಗಿ ಕೆಂಡವಾಗಿ ನೀರಲ್ಲಿ ಮುಳುಗಿಕೊಂಡ. ಬಂಗಾರಿ ನೋಕುಳಿಯಿಂದ ನೀರು ಹೊಳೆಯಿತು. ತೆರೆಗಳು ಹನಿ ಹನಿ ತೂರಿ ಮುತ್ತನ್ನು ಚಿಮ್ಮಿಸಿದವು. ಅದೇ ವಿಸ್ಮಯದಲ್ಲಿ ಆ ರಸವನ್ನು ಕೈಯಿಂದೆತ್ತಿ ಬಾಯಿಗಿಟ್ಟೆ. ವಾಸ್ತವ ಜಗತ್ತಿಗೆ ಬಂದೆ. ಆ ಉಪ್ಪು ನನಗೆ ಗೋವಿಂದ ಪೈಗಳ ನೆನಪು ತಂದಿತು. ಮರಳಿದೆ.



ಗೇಟಿನ ಹೊರಗಿನಿಂದಲೇ ಪೈಗಳನ್ನು ಕಂಡೆ. ಅದೇ ಚಾವಡಿ, ಅದೇ ಮಂಚದಲ್ಲಿ ಕುಳಿತವರು ಸ್ವಾಗತದ ಕೂಗನ್ನು ಕೊಟ್ಟರು. ಕೈಮುಗಿದುಕೊಂಡೇ ಒಳಹೊಕ್ಕು ನನ್ನ ಪರಿಚಯ ಹೇಳಿಕೊಂಡೆ. ಅವರಿಗೆಲ್ಲಿಯ ಮರೆವು? ಗೊತ್ತು ಸ್ವಾಮೀ ಗೊತ್ತು. ಬನ್ನಿ-ಕುಳ್ಳಿರಿ ಎಂದು ಕರೆದು ಬದಿಗೇ ಕೂಡಿಸಿಕೊಂಡರು.

"ಬೇಂದ್ರೆಯವರು, ನೀವು ಕಳೆದ ವರುಷ ಬರುತ್ತೀರೆಂದು ಕಾಯಿಸಿ ಬರಲಿಲ್ಲ. ನೀವು ಬರುವುದು ಗಾದೆ ಮಾತು ಎಂದುಕೊಂಡಿದ್ದೆ. ಈಗ ಬೇಂದ್ರೆ ಒಬ್ಬರೇ ಗಾದೆ—" ಎಂದರು.

ಕಾಫಿ ಬಂತು. ಇಪ್ಪತ್ತೈದು ವರ್ಷಕ್ಕೆ ಮೊದಲು ಅವರನ್ನು ಪ್ರಥಮತಃ ಕಂಡಾಗ ಬೀಡಿ ಎಳೆಯುತ್ತೀರಾ ಎಂದು ಕೇಳಿದ್ದರು. ನಾನಾಗ ಧೂಮಪಾನ ತೊಡಗಿರಲಿಲ್ಲ. ಮುಂದೆ ತೊಡಗಿದಾಗ ಅವರು ನಿಸ್ಸಂಕೋಚವಾಗಿ ಎಳೆಯಿರಿ ಎಂದು ಸಿಗರೇಟು ಕೊಟ್ಟಿದ್ದರು. "ಈಗ ಬಿಟ್ಟು ಬಿಟ್ಟಿದ್ದೇನೆ" ಎಂದು ಅದರ ಕಥೆಗೆ ತೊಡಗಿದರು:

"ನಾನು ಹದಿನೆಂಟು ವರುಷ ಬೀಡಿ, ಹದಿನೆಂಟು ವರುಷ ಸಿಗಾರೆಟ್, ಮತ್ತೆ ಸುಮಾರಾಗಿ ಹದಿನೆಂಟು ವರುಷ ಬೀಡಿ ಹೀಗೆ ೫೪ ವರುಷ ಹೊಗೆ ಕುಡಿದಿದ್ದೇನೆ. ನನ್ನ ತಂದೆ ಒಳ್ಳೆಯವರು. ಆದರೆ ತಾಯಿ ಕ್ಷಮಿಸುವವರಲ್ಲವೆಂದು ಮಂಗಳೂರಿಗೆ ಕಲಿಯಹೋಗುವ ವರೆಗೆ ಇದು ತಾಗಿರಲಿಲ್ಲ. ಮಂಗಳೂರಲ್ಲಿ ಸ್ವಲ್ಪ ಸ್ವಾತಂತ್ರ್ಯವೆನಿಸಿದಾಗ ಇದು ಹಿಡಿಯಿತು. ಮನೆಯವರೊಡನೆ ಕಾಶೀಯಾತ್ರೆ ಹೋದಾಗಲೂ ಹಲವು ಸಾವಿರ ಬೀಡಿ ಒಯ್ದಿದ್ದೆ. ದಾರಿಯಲ್ಲಿ ತೀರುವುದೆಂದೆನಿಸಿದಾಗ ಟಪಾಲಿನಲ್ಲಿ ತರಿಸಿದ್ದೆ. ನನಗೆ ಮಂಗ-

ಳೂರಿನ ಬೀಡಿಯೇ ಆಗಬೇಕಿತ್ತು" —ಎಂದು ಹೇಳುವಾಗ ನಾನು ಸಿಗರೇಟು ಪೆಟ್ಟಿಗೆ ಹಿಡಿದು ಕುಳಿತದ್ದು ನೋಡಿ, "ನೀವು ಎಳೆಯಿರಿ. ಈಗ ನನಗೆ ಏನೂ ತೊಂದರೆಯಾಗುವುದಿಲ್ಲ, ಹೂಂ, ನೀವು ಹತ್ತಿಸಿರಿ"– ಎಂದು ತಾವು ಬಿಟ್ಟದ್ದು ತಿರುಪತಿ ಬೆಟ್ಟದಲ್ಲಿ— ಎಂದರು. "ತಮ್ಮನ ಮಗಳು, ಅಳಿಯ ಕಾರು ತಂದು ನಿಲ್ಲಿಸಿ 'ಹೊರಡಿ' ಎಂದರು. ಮುಪ್ಪಿನ ಕಾಲಕ್ಕೆ ಒಂದು ಯಾತ್ರೆ ಎಂದು ಹೊರಟೆ. ತಿರುಪತಿ ತಲುಪಿ ತಿರುಮಲೆ ಏರುವಾಗ ಸಂಕಟವಾಯಿತು. ತಿಮ್ಮಪ್ಪನಿಗೆ ಸವಾಲು ಹಾಕಿ 'ಅಯ್ಯಾ ಈ ಸೆರೆಯಿಂದ ಬಿಡಿಸು; ಸಾಕು'— ಎಂದೆ! ದಾಸರು ದೇವರೊಡನೆ ಹಟದಿಂದ ಹಾಡಿಲ್ಲವೇ— ಹಾಗೆ ದೇವರಲ್ಲಿ ಹಟಮಾಡಿ ಹಚ್ಚಿದ ಬೀಡಿ ಎಸೆದೆ. ಪುಷ್ಕರಣಿ ಸ್ನಾನ ಮಾಡಿ ಪೂಜೆ ಒಪ್ಪಿಸಿ ಬಿಡಾರಕ್ಕೆ ಬಂದು ಊಟಮಾಡಿದಾಗ— ಹೂಂ. ಸಂಜೆಗೆ ನಿಮ್ಮದು ಊಟವೊ—ಫಲಹಾರವೋ" ಎಂದು ಕೇಳಿದರು. 'ಫಲಹಾರ' ವೆಂದೆ. "ಆಗ ಕಾಫಿ ಬೇಕೋ ಹಾಲು ಆದೀತೊ?"—ಎಂದರು. "ಯಾವುದೂ ಆದೀತು" ಎಂದೆ. "ಸಂಕೋಚವೇಕೆ ? ಯಾವುದು ಹೇಳಿ"— ಎಂದರು. "ಹಾಲು ಆದೀತು" ಎಂದೆ. ಅವರಲ್ಲಿ ಕೃತ್ರಿಮತೆಯಿಲ್ಲ. ನಮ್ಮ ಕೃತ್ರಿಮತೆ ನಡೆಯುವುದಿಲ್ಲ.

ಮತ್ತೆ ಬೀಡಿಗೆ ಬಂದರು: "೫೪ ವರುಷದ ಅಭ್ಯಾಸ ನೋಡಿ, ಬಹು ಸಂಕಟವಾಯಿತು. ನನ್ನ ಅಳಿಯ ಧೂಮಪಾನಿ. ಹೊರಗೆ ಹೋಗಿ ಎಳೆದರು. ಮಗಳು,'ದೊಡ್ಡಪ್ಪ, ಯಾಕೆ ಸಂಕಟ ಪಡುತ್ತೀರಿ?' ಎಂದಳು. 'ಇಲ್ಲ; ಇದು ದೇವರಿಗೆ ನನ್ನ ಸವಾಲು'— ಎಂದೆ. ಅಂದು ಬಿಟ್ಟವನು ಬಿಟ್ಟೇ ಬಿಟ್ಟೆ ಸ್ವಾಮೀ—"ಎಂದು ಮುಗಿಸಿದರು.

ಮುಂದೆ ಸಾಹಿತಿಗಳ ಪ್ರಾಯದ ಮಾತು ಬಂತು. "ಈಗ ನಾನೇ ಹಿರಿಯ ನೋಡಿ ಸಾಹಿತಿಗಳ ಬಳಗಕ್ಕೆ" ಎಂದರು. ಮುಂದುವರಿದು, "ಶ್ರೀಯವರು ಬಂದಾಗ ನಾನು ಹಿರಿಯ ನಿಮಗೆ, ನಾನು ಹೇಳುತ್ತೇನೆ. ನೀವು ಬೆಂಗಳೂರಿಗೇಕೆ ಬರಬಾರದು?— ಎಂದರು. ಆಗ ನಾನು ನಿಮಗಿಂತ ಹತ್ತು ತಿಂಗಳಿಗೆ ಹಿರಿಯ ಎಂದು ಹೇಳಿ ಕೈ ಮುಗಿಸಿಕೊಂಡೆ ಸ್ವಾಮೀ"— ಎಂದರು. ನನಗೆ ಆಲೂರ ವೆಂಕಟ ರಾಯರ ನೆನಪಾಗಿ ಕೇಳಿದೆ. ಆಗ, "ಹೌದು ಸ್ವಾಮೀ. ಅವರು ನನಗೆ ಹಿರಿಯರು. ಮುಂಬಯಿ ಸಮ್ಮೇಳನಕ್ಕೆ ನಾನು ಅಧ್ಯಕ್ಷನಾದಾಗ ವೇದಿಕೆಯನ್ನೇರುವ ಮೊದಲು ಆಲೂರರವರಿಗೆ ಬಾಗಿ ನಮಸ್ಕರಿಸಿದ್ದೆ. ಅವರು ಹಿರಿಯರು"- ಎಂದು ಗಲ್ಲ ಮುಟ್ಟಿಕೊಂಡು ಆಲೂರರವರ ಕ್ಷೇಮ ವಿಚಾರಿಸಿದರು.

ನಾನು ಅವರ ಆರೋಗ್ಯ ವಿಚಾರಿಸಿದೆ. "ನೋಡುತ್ತಿರುವಿರಲ್ಲ. ಶಾನುಭೋಗರ ಮನೆ ನನ್ನ ತಾಯಮನೆ. ಅಲ್ಲಿಯ ವರೆಗೆ ಹೋಗಿ ಬರುತ್ತೇನೆ. ಅಲ್ಲಿರುವ ಬಳಗದವರು 'ಯಾಕೆ ಬರುತ್ತೀರಿ? ನಾವೇ ಬಂದುಕಾಣುತ್ತೇವೆ' ಎನ್ನುತ್ತಾರೆ. 'ನಾನು ನಿಮ್ಮ ಮನೆಯ ವರೆಗೆ ನಡೆದು ಬರಬಲ್ಲೆ— ಎಂಬುದನ್ನು ತೋರಿಸುವುದಕ್ಕೆ ಬರುತ್ತೇನೆ' ಎಂದವರಿಗೆ ಹೇಳುತ್ತೇನೆ" ಎಂದರು. ಆ ಮೇಲೆ ತಮ್ಮ ದೈನಿಕ ಎರಡು ಸ್ನಾನದ, ಒಂದು ಊಟದ ಕಥೆ ಹೇಳಿದರು.

ದೀಪ ಹಚ್ಚಿಯಾಗಿತ್ತು. ಮಂಜೇಶ್ವರಕ್ಕೆ ಮಿಂಚಿನ ದೀಪ ಬಂದಿಲ್ಲ. "ನಾನು ಇದೇ ದೀಪದಲ್ಲಿ ಓದುತ್ತೇನೆ. ಆದರೆ ರಾತ್ರಿ ಓದುವುದು ಕಡಿಮೆ. ಬೇಗ ನಿದ್ರೆ ಬೀಳುವುದಿಲ್ಲ. ಭಗವಚ್ಚಿಂತನೆಗೆ ಬೆಳಕೇಕೆ? ಆದರೂ ಹಾಸಿಗೆಯ ಸುತ್ತ ನಾಲ್ಕು ಪುಸ್ತಕ ಇರುತ್ತವೆ. ನನಗೆ ಪ್ರಾಯವಾಯಿತು ಎಂಬುದು ನನ್ನ ಮರೆವಿನ ಕಾರಣದಿಂದ ನನಗೆ ಕ್ಷಣಕ್ಷಣಕ್ಕೆ ನೆನಪಾಗುತ್ತದೆ. ಒಂದು ಟಿಪ್ಪಣಿ ಪುಸ್ತಕ ಬದಿಗೆ ಇದ್ದೇ ಇರಬೇಕು. ಒಮ್ಮೆ ಬಂದ ಭಾವನೆ ಮತ್ತೆ ಕಳೆದೇ ಹೋದರೆ?" ಎಂದರು. ತಮ್ಮ ತಲೆಯನ್ನು ಮುಟ್ಟಿ ಹೇಳಿದರು: "ನಾನೀಗ ಇದನ್ನು ನಂಬುವುದಿಲ್ಲ. ಆಧಾರಕ್ಕೆ ಪುಸ್ತಕವೇ ಬೇಕು"

ಎಂದು.

ತಾರೀಖು ಹೇಳದೆ, ಆಧಾರ ಗ್ರಂಥದ ಪುಟ ತಿಳಿಸದೆ ಮಾತೇ ಆಡದ ಅಗಾಧ ಜ್ಞಾಪಕ ಶಕ್ತಿ ಅವರದು. ಅದು ಕುಂದಿತೆ ಎಂದುಕೊಂಡೆ. ತಡೆಯಿಲ್ಲದ ಮಾತುಗಳು! ತುಟಿಗೆ ಚಪ್ಪರವಾಗಿರುವ ಬಿಳಿ ಮೀಸೆ-ಹೊಳೆಯುವ ಚಿಲುಮೆಯಂಥ ಕಣ್ಣುಗಳು. ನಾನು ಸರಿದಾಡುವುದನ್ನು ಕಂಡು ದಿಂಬನ್ನು ನನಗೇ ಕೊಟ್ಟು ಸೆಟೆದು ಕುಳಿತುಕೊಂಡರು. ನಿಮಗಿರಲಿ ಎಂದರೆ "ನನಗೆ ಅಂಥದೇನೂ ಬೇಕಾಗುವುದಿಲ್ಲ"ವೆಂದರು. ಬಳಗದ ಮಾತು ಮಧ್ಯೆ ಮಧ್ಯೆ ಬರುವುದೇ. "ಮಂಗಳೂರಿನಲ್ಲಿ ನನಗೆ ಹತ್ತೆಂಟು ಮನೆಗಳು. ನಾನು ಇಷ್ಟು ಹತ್ತಿರದ ಆ ನಗರಕ್ಕೆ ಹೋಗುವುದು ವರುಷಕ್ಕೆ ಒಂದೆರಡೇ ಬಾರಿ. ಆಗ ಎಲ್ಲಾ ಮನೆಗಳನ್ನು ನಡೆದು ಸುತ್ತುತ್ತಿದ್ದೆ. ಇಂದಾದರೆ ವಾಹನ ಬೇಕು" ಎನ್ನುತ್ತ ಕಳೆದ ಬಾರಿ ಮಂಗಳೂರಿಗೆ ಹೋದ ತಾರೀಖು ಹೇಳಿದರು!

ಮನದಲ್ಲಿ ಕೊರೆಯುತ್ತಿದ್ದ ಭಾಷಾ ಪ್ರಾಂತಗಳ ವಿಂಗಡಣೆಯು ಮಾತನ್ನೆತ್ತಿದೆ. ಮುದುಕನ ಸಂಕಟ ಉಮ್ಮಳಿಸಿತು. "ಪಣಿಕ್ಕರ ರಾಕ್ಷಸನ ಕೈ ಚಳಕ ಸ್ವಾಮೀ. ನನ್ನನ್ನು ಕೇರಳಕ್ಕೆ ನೂಕಿದ. ನೆಹ್ರೂ ದೊಡ್ಡ ಮನುಷ್ಯನಾದರೂ ಕುರುಡನಂತೆ ಒಪ್ಪಿಗೆಯಿತ್ತರಲ್ಲವೋ! ಚಂದ್ರಗಿರಿ ಹೊಳೆಯೀಚೆಯ ನಾಡು ಅದೆಂತು ಕೇರಳವಾದೀತು? ನನ್ನ ಮಟ್ಟಿಗೆ ನನ್ನ ವಿಳಾಸ: 'ಎಂ ಗೋವಿಂದ ಪೈ, ಮಂಜೇಶ್ವರ, ಸೌಥ್ ಕೆನರಾ' ಎಂದೇ ಇದೆ. ಹೊರದೇಶಗಳಿಗಾದರೆ ಮಾತ್ರ 'ಸೌಥ್ ಇಂಡಿಯಾ' ಎಂದು ಬರೆಯುತ್ತೇನೆ. ನನ್ನ ಕಾಗದಗಳು ತಿರುಗಿ ಬರಲಿ-ನನಗೆ ಚಿಂತೆಯಿಲ್ಲ. ಮಂಜೇಶ್ವರ ಎಂದೆಂದಿಗೂ ದಕ್ಷಿಣ ಕನ್ನಡ ಜಿಲ್ಲೆ. ನಾನಿರುವಷ್ಟು ಕಾಲ ಹೀಗೇ ಬರೆಯುವುದು" ಎಂದು ಕೂಗಿಕೊಂಡರು. ನಾನಾಗ ಮೂಕನಾಗಿದ್ದೆ. ಪೈಗಳ ಭಾವಾವೇಶದ ಮುಂದೆ ಯಾವ ಮಾತು ಆಡುವುದು? ಆ ಮಹಾ ಜೀವದ ಶಾಂತಿ ಇಡೀ ನಾಡಿನ ಶಾಂತಿ. ಆ ಜೀವಕ್ಕಾದ ಸಂಕಟ ನಾಡಿನ ಸಂಕಟವಾಗಬೇಕು. ಆದರೆ ನಮ್ಮ ದೇಶದ ರಾಜಕೀಯಕ್ಕೆ ಯಾವುದು ಗಣನೆಗೆ ಬಂದೀತು?

ನಾನು ಪೈಗಳನ್ನು ಆ ಸಂಕಟದ ಮಾತಿನಿಂದ ಬೇರೆ ಮಾತಿಗೆ ತರಬೇಕೆಂದುಕೊಂಡು ಅವರ ಲೇಖನಗಳ ಸಮಗ್ರ ಸಂಪುಟವೊಂದರ ಮಾತು ತೆಗೆದೆ. ಕಳೆದ ಬಾರಿ ಬದಿಯಡ್ಕದಲ್ಲಿ ಕಿಞ್ಞಣ್ಣ ರೈಗಳ ಮುಂದೆ ಈ ಪ್ರಸ್ತಾಪ ಮಾಡಿದ್ದೆ. ಕಿಞ್ಞಣ್ಣ ಎಂದು ನಾನು ಹೇಳುವ ಸ್ವರೋಚ್ಚಾರ ಪೈಗಳಿಗೆ ಸಮ್ಮತವಾಗಲಿಲ್ಲ. ಅದನ್ನು ಹಟದಿಂದ ತಿದ್ದಿದರು. ಕಿಞ್ಞಣ್ಣ ಎಂದರೆ ಚಿಕ್ಕಣ್ಣ ಎಂದು ಅರ್ಥ ಹೇಳಿದರು. ಆ ತುಳು ಪದವನ್ನು ನಾವು ತಿಳಿಯದೆ ಅವರೆದುರು ತಪ್ಪಾಗಿ ಉಚ್ಚರಿಸುವುದನ್ನು ಅವರು ಸಹಿಸರು.

"ಸಮಗ್ರ ಸಂಪುಟದ ಗೊಡವೆ ನನಗಿಲ್ಲ. ಆದರೆ ನನ್ನ ಪದ್ಯಗಳನ್ನು ರಾಜರತ್ನಂ ಪ್ರಕಟಿಸುವವರಿದ್ದಾರೆ. ಬಾಳಿಗರು ಗೊಲ್ಗಥಾ, ವೈಶಾಖಿ ಪುನಃ ಮುದ್ರಿಸಿದ್ದಾರೆ. ಧಾರವಾಡದ ಕನ್ನಡ ರಿಸರ್ಚಿನವರು ಮೂರು ಉಪನ್ಯಾಸಗಳನ್ನು ಪುನರಪಿ ಮುದ್ರಿಸಲು ಕೇಳಿದ್ದಾರೆ. ಹಿಂದೆ ನನ್ನ ಲೇಖನಗಳ ಸ್ಥಳಪ್ರತಿ ಇಟ್ಟುಕೊಳ್ಳದೆ ಒದ್ದಾಡಿದೆ. ಆಗಲಾದರೆ ನೆನಪು ಸಹಜವಾಗಿತ್ತು. ಇಂದು ನನ್ನ ನೆನಪಿನ ಬಗ್ಗೆ ನನಗೇ ನಚ್ಚಿಕೆ ಉಳಿದಿಲ್ಲ. ಅದರಿಂದ ಒಂದು ಕಾರ್ಬನ್ ಪ್ರತಿ ನನ್ನಲ್ಲಿ ಇಟ್ಟುಕೊಳ್ಳುತ್ತಿದ್ದೇನೆ. ನನ್ನ ಬರಹಗಳೆಲ್ಲ ನನ್ನಲ್ಲಿ ಸುರಕ್ಷಿತವಾಗಿವೆ. ಮತ್ತಾವ ಚಿಂತೆ?" ಎಂದರು. ಮುಂದುವರಿದು "ಕರ್ನಾಟಕ ಯುನಿವರ್ಸಿಟಿಯವರು ಸಾಹಿತ್ಯಚರಿತ್ರೆ ಪ್ರಕಟಿಸುತ್ತಾರಂತೆ. ನನ್ನ ಪಾಲಿನದನ್ನು ನಾನು ಅಂದೇ ಬರೆದು ಕಳಿಸಿದ್ದೇನೆ. ಆದರೆ ಅವರು ಪಾರ್ತಿಸುಬ್ಬನ ಕಾಲ-ದೇಶಗಳನ್ನು ಯಾರಿಗೆ ಕೇಳಿದ್ದಾರೋ—ತಿಳಿಯದು. ಅವನ ಊರು ಕುಂಬಳೆ— ಇಲ್ಲಿಂದ ಹನ್ನೊಂದು ಮೈಲು.

ಕಾರಂತರು ಇತ್ತೀಚೆ ಅವನನ್ನು ತುಳುನಾಡಿನಿಂದ ಕಲ್ಯಾಣಪುರದ ಹೊಳೆಯಾಚೆ ಬ್ರಹ್ಮಾವರಕ್ಕೆ ಒಯ್ದಿದ್ದಾರೆ. ನನಗೂ ಅವರಿಗೂ ಈ ಬಗೆಗೆ ಸಾಕಷ್ಟು ವಾದ-ಪ್ರತಿವಾದವಾಗಿದೆ. ಈಗ ಅವರು ಇಲ್ಲಿ ಬರುವುದು ಕಡಿಮೆ" ಎಂದರು.

"ಕಾಂಚನ ಮೃಗ ಬೆನ್ನಟ್ಟಿ ರಾಮ ಹೋದ. ಮಾರೀಚ ಸಾಯುವಾಗ ಹಾ ಲಕ್ಷ್ಮಣಾ! ಹಾ ಸೀತಾ! ಎಂದು ಕೂಗಿದ. ಸೀತೆ ಒತ್ತಾಯಪಡಿಸಿ ರಾಮನ ನೆರವಿಗೆ ಲಕ್ಷ್ಮಣನನ್ನು ಕಳಿಸಿದಳು. ಆಗ ಲಕ್ಷ್ಮಣ ತಮ್ಮ ಪರ್ಣಶಾಲೆಯ ಮುಂದೆ ಕೆಲವು ಗೆರೆಗಳನ್ನೆಳೆದು ಸೀತಾಮಾತೆಗೆ ಈ ಗೆರೆ ದಾಟಬೇಡವೆಂದು ಹೇಳಿ ಹೋದ. ರಾವಣಸಂನ್ಯಾಸಿ ಗೆರೆ ದಾಟಿ ಒಳಗೆ ಬರಲಾರ. ಸೀತೆ ಗೆರೆ ದಾಟಿ ಹೋಗಿ ಭಿಕ್ಷೆ ನೀಡಿ ಸಿಕ್ಕಿಬಿದ್ದಳು. ಅಲ್ಲವೇ ಸ್ವಾಮಿ?"- ಎಂದವರನ್ನು ಕೇಳಿದೆ. ಹೌದು—ಎಂದರು. "ನೀವೇ ಒಂದು ಕಥಾ ಪುಸ್ತಕಕ್ಕೆ ಮುನ್ನುಡಿ ಬರೆಯುತ್ತ 'ಭೂಜಾತೆ ಲಕ್ಷ್ಮಣನ ಗೆರೆ ದಾಟಿದ್ದಿಲ್ಲವಾದರೆ ರಾಮಾಯಣವೆಲ್ಲಿಂದ?'-ಎಂದು ಬರೆದಿದ್ದೀರಿ" ಎಂದೆ. ಹೌದು, ಎಂದರು. "ವಾಲ್ಮೀಕಿ ರಾಮಾಯಣದಲ್ಲಿ ಸೀತೆ ರಾವಣನನ್ನು ಒಳಗೆ ಕರೆದು ಆಸನವಿತ್ತು ಕೂಡಿಸಿ, ಅರ್ಘ್ಯಪಾದ್ಯವಿತ್ತು ಸತ್ಕರಿಸುತ್ತಾಳೆ. ಗಡ್ಡೆಗೆಣಸನ್ನು ಕೊಡುತ್ತಾಳೆ. ಪತಿ, ಮೈದುನ ಬೇಟೆಗೆ ಹೋಗಿದ್ದಾರೆ. ಅವರು ಬರುವವರೆಗೆ ನಿಂತರೆ ಅಡಿಗೆ ಮಾಡಿಹಾಕುತ್ತೇನೆ ಎನ್ನುತ್ತಾಳೆ. ಲಕ್ಷ್ಮಣನ ಗೆರೆಗಳ ಸುದ್ದಿಯೇ ವಾಲ್ಮೀಕಿ ಕೃತಿಯಲ್ಲಿಲ್ಲವಲ್ಲ! ಈ ಗೆರೆಗಳಿಗೆ ಯಾವುದು ಆಧಾರ?" ಎಂದೆ. ನೀವು ವಾಲ್ಮೀಕಿಯ ಕೃತಿಯನ್ನು ನೋಡಿದ್ದೀರಾ— ಎಂದರು. ಹೌದು; ಅದರ ಅನುವಾದಗಳನ್ನು ಮಾತ್ರ ನೋಡಿದ್ದೇನೆ ಎಂದೆ. ರಾಜಗೋಪಾಲಾಚಾರ್ಯರ ರಾಮಾಯಣದಲ್ಲಿಲ್ಲ ಎಂದೆ. ಅದು ಬಿಡಿ— ಅದು ಯಥಾವತ್ತಾದ ಅನುವಾದವಾಗಿರಲಾರದು ಎಂದರು. ಅಳಸಿಂಗಾಚಾರ್ಯರ ಪ್ರತಿ ನೋಡಿದೆ ಎಂದೆ. ಅದು ಸರಿ ಎಂದರು. "ಅದರಲ್ಲಿಲ್ಲ. ನೀವು ಬರೆದಿದ್ದೀರಿ- ಆಧಾರವೆಲ್ಲಿಂದ?" ಎಂದೆ. "ತುಳಸೀ ರಾಮಾಯಣ ನೋಡಬೇಕು. ಇಲ್ಲೇ ಇದೆ. ಸಂಸ್ಕೃತ ರಾಮಾಯಣದ ಪ್ರತಿಯೂ ಇದೆ. ನನಗೆ ಚಿಕ್ಕಂದಿನಿಂದ ನೋಡಿದ ಯಕ್ಷಗಾನವೇ ಆಧಾರ. ಲಕ್ಷ್ಮಣನಾದವ ಬಿಲ್ಲಿನ ತುದಿಯಿಂದ ಗೆರೆ ಎಳೆದದ್ದು ಇನ್ನೂ ನನ್ನ ಕಣ್ಣಿಗೆ ಕಟ್ಟಿದೆ. ಅದು ಬಹುಶಃ ಪಾರ್ತಿಸುಬ್ಬನ ಪಂಚವಟಿ ಪ್ರಸಂಗ" ಎಂದರು. "ನಮ್ಮತ್ತ ಕಡೆಗೆ ಪಾರ್ತಿಸುಬ್ಬನಿಲ್ಲವಾದರೂ ರಾಮಾಯಣದ ಜನಜನಿತವಾದ ಕಥೆಯಲ್ಲಿ ಲಕ್ಷ್ಮಣನ ಗೆರೆಗಳಿವೆ. ಆದರೆ ಇದು ಎಲ್ಲಿಂದ— ಎಂದು ನನಗೀಗ ಯೋಚನೆ ತೊಡಗಿದೆ. ಪಾರ್ತಿ ಸುಬ್ಬನಿಗಾದರೂ ಒಂದು ಅಧಾರವೆಂಬುದು ಬೇಕಲ್ಲ," ಎಂದೆ. "ಇದು ಹೇಗೆ? ಒಳ್ಳೇ ಕಷ್ಟಕ್ಕೆ ಬಂತಲ್ಲ"—ಎಂದು ತಲೆ ತುರಿಸಿಕೊಂಡರು. "ತೊರವೆ ಪ್ರತಿ ನೋಡಿದ್ದೀರಾ"—ಎಂದರು. ಇಲ್ಲವೆಂದೆ. "ದಯವಿಟ್ಟು ನೋಡಿ. ನನ್ನಲ್ಲಿದ್ದ ತೊರವೆ ಯಾರೋ ಎತ್ತಿಕೊಂಡು ಹೋದವರು ಮರಳಿ ಕೊಡಲಿಲ್ಲ" ಎಂದರು. ಒಂದು ಹಾಳೆ ತೆಗೆದುಕೊಂಡು ನನ್ನೊಡನಾದ ಸಂಭಾಷಣೆಯನ್ನು ಬರೆದುಕೊಂಡರು.

ಫಲಾಹಾರ ಬಂದಿತ್ತು. ಕುಳಿತಲ್ಲೇ ಮುಗಿಸಿದೆವು.

ನನ್ನ ಸಮಯವಾಗುತ್ತ ಬಂತು. ಮೂರು ಗಂಟೆಗಳಿಂದ ಅವರೊಡನಿದ್ದವನು ಹೊರಡಬೇಕಲ್ಲಾ- ಎಂದು ಏನೋ ಮಬ್ಬು ಬಂದಂತಾಯಿತು.

ನಾನು ಹೊರಡಲನುವಾದೆ. ಅವರ ಆಳು ಹೋಗಿಬಿಟ್ಟಿದ್ದ. ನೀವಿಂದೇ ಹೋಗುವವರೆಂದು ನಾನವನಿಗೆ ತಿಳಿಸಲಿಲ್ಲವಲ್ಲ! ಎಂದರು. ಮಾತಿನೆಡೆಯಲ್ಲಿ ಅದೆಲ್ಲಿಯ ಲಕ್ಷ್ಯ? "ಯಾಕೆ? ನಾನು ಸ್ಟೇಶನ್ನಿಗೆ ಹೋಗಲಾರೆನೆ? ತಿಂಗಳ ಬೆಳಕು ಇದೆ" ಎಂದೆ.

ಮತ್ತೇನು ಬರೆಯುತ್ತೀರಿ ಎಂದೆ. ಕೃಷ್ಣನ

ಕಡೆಯ ದಿನಗಳ ಕಾವ್ಯ ಅವರು ಬರೆಯುವುದಾಗಿ ಹಿಂದೆ ಹೇಳಿದ್ದರು. ಕ್ರಿಸ್ತ ಬುದ್ಧರದನ್ನು ಬರೆದಾಗಿದೆ ಎನ್ನಬೇಕೆಂದೆ. ಆದರೆ ಮತ್ತವರ ಮಾತಿನ ಹೊನಲಲ್ಲಿ ಅದನ್ನು ಸೂಚಿಸುವುದಾಗಲೇ ಇಲ್ಲ. "ಉಡುಪಿಯ ಐತಿಹ್ಯದ ಬಗ್ಗೆ ನಾನೇ ಬರೆಯಬೇಕೆಂದು ಹರಿದಾಸ ಭಟ್ಟರು ಅವಸರ ಮಾಡುತ್ತಿದ್ದಾರೆ. ನನಗೆ ನನ್ನ ನಿತ್ಯ ಕ್ರಮಗಳಿವೆ. ಬರುವವರ ಸಂಗಡ ಮಾತಾಡಬೇಕು. ಬಂದ ಕಾಗದಕ್ಕೆ ಉತ್ತರಿಸಬೇಕು. ಮತ್ತೆ ನನ್ನ ಓದು ಇರುತ್ತದೆ. ಮಾಳಿಗೆ ಏರಲಾಗದೆಂದು ನನ್ನ ತಮ್ಮನ ಮಗ ಪರದೇಶಕ್ಕೆ ಹೊರಟು ನಿಂತಾಗ ಬಿನ್ನಹಮಾಡಿ ಆಣೆ ಇಟ್ಟುಕೊಂಡ. ನನ್ನ ಜೀವ— ಪುಸ್ತಕಗಳಿರುವುದೇ ಅಲ್ಲಿ. ಏನಾದರೂ ಅಲ್ಲೇ ಆಗಲಿ ಎಂದು ನನ್ನ ಮಾಳಿಗೆಗೆ ಹೋಗುತ್ತಲೇ ಇದ್ದೇನೆ. ಹೇಳಿ ಬರೆಸುವುದು ನನ್ನ ಕ್ರಮವಲ್ಲ. ಹಾಗೆ ನನಗಾರೂ ಇಲ್ಲ. ಆದಾಗ ಬರೆಯುತ್ತೇನೆ. 'ನಡೆದು ಬಂದ ದಾರಿ'ಗೆ ಒತ್ತಾಯಗಳು ಬರುತ್ತಿದ್ದಾಗ ನನಗೆ ಸೌಖ್ಯವಿದ್ದಿಲ್ಲ. ಏನೋ ಒಂದು ಪದ್ಯ ಬರೆದದ್ದು ಹುಡುಕಿ ಕಳಿಸಿದೆ. ಕವನಿಸುವುದು ನನ್ನ ಜೀವದ ಕ್ರಮವಾಗಿದೆ. ಏನೇನೋ ಟಿಪ್ಪಣಿಗಳನ್ನು ಮಾಡಿಕೊಂಡಿರುತ್ತೇನೆ. ಬೇಕೆಂದಾಗ ಬರೆದುಬಿಡುತ್ತೇನೆ" ಎಂದರು.

ಕಳೆದ ಬಾರಿ ನನ್ನೊಡನೆ ಏ. ಜಿ. ತಿರುಮಲೇಶ್ವರ ಭಟ್ಟ ಬಂದಿದ್ದರು. ಈಗವರು ಇಲ್ಲವಾದರೆಂದು ನೆನಪಿಸಿದೆ. ಹೌದು; ಆ ಹೆಸರಿನವರು ಮೂವರು ಇದ್ದಾರೆ. ಒಬ್ಬರು ಇಲ್ಲವಾದರು— ಒಳ್ಳೆಯ ಮನುಷ್ಯ! ಎಂದರು. ನಾನು ಹೊರಟು ಬಾಗಿ ನಮಸ್ಕರಿಸಹೋದಾಗ ಅಷ್ಟೆಲ್ಲ ಬೇಡವೆಂದರು. ದೇವರು ಒಳ್ಳೆಯದು ಮಾಡಲಿ ಎಂದು ಹರಸಿದರು. ಮನೆಯ ಮುಂದಣ ಬೀದಿಯ ವರೆಗೆ ಬಂದು ಒಬ್ಬರೇ ಹೋಗಬೇಕಾಯಿತೆಂದು ಮರುಗಿದರು. "ಎಷ್ಟು ದೂರ? ನಿಮಗೆ ರಾತ್ರಿಯಾಯಿತು. ವಿಶ್ರಮಿಸಿ"–ಎಂದು ಹೇಳಿ ಹೊರಟೆ. ಇಷ್ಟು ಬೇಗ ನಿದ್ರೆ ಬೀಳುವುದಿಲ್ಲವೆನ್ನುತ್ತ ಮರಳಿದರು.

ನಾನು ಹೊರಟವನು ಪೈಗಳ ಮಾತಿನದೇ ತಂದ್ರಿಯಲ್ಲಿ ಸಾಗಿದ್ದೆ. ಈ ಸಲವೂ ಬಂದು ಕಾಣದಿದ್ದರೆ ಎಷ್ಟು ನಷ್ಟವಾಗುತ್ತಿತ್ತು- ಎಂದು ಪಡೆದ ಶ್ರೀಮಂತಿಕೆ ಕೇಳುತ್ತಿತ್ತು.

ಗೋವಿಂದ ಪೈ! ಕನ್ನಡದ ಆಸ್ತಿ. ಜ್ಞಾನದೀಪ! ಜ್ಞಾಪಕ ದೀಪ! ಅದೆಲ್ಲಕ್ಕಿಂತ ಅವರಲ್ಲಿಯ ಮಾನವೀಯತೆ ನಿತ್ಯನೂತನವಾದದ್ದು. ಒಂದಿಷ್ಟೂ ಆಡಂಬರವಿಲ್ಲ; ಕೃತ್ರಿಮತೆಯಿಲ್ಲ. ಅದೊಂದು ಪೂರ್ಣಕುಂಭ.

*

ಧಾರವಾಡಕ್ಕೆ ತಲುಪಿದೆನೋ ಇಲ್ಲವೋ ಪೈಗಳ ಕಾಗದ! ವಾಲ್ಮೀಕಿ ರಾಮಾಯಣದ ಕುಂಭಕೋಣದ ಪ್ರತಿ (೧೯೦೫) ಓದಿ ಅರಣ್ಯ ಕಾಂಡದ ಎರಡು ಶ್ಲೋಕ, ಅರ್ಥ, ವಿವರಿಸಿದ್ದರು. ತುಲಸೀರಾಮಾಯಣದ (ಶ್ರೀ ರಾಮ ಚರಿತ ಮಾನಸ) ಎರಡು ಶ್ಲೋಕಗಳು; ಅರ್ಥ. ಆದರೆ ಅವೆರಡರಲ್ಲೂ ಲಕ್ಷ್ಮಣನ ಗೆರೆಗಳಿಲ್ಲ. "ನನ್ನ ಮಟ್ಟಿಗೆ ನಾನು ಹಿಂದೆ ನೋಡಿದ ಯಕ್ಷಗಾನವೇ ಆಧಾರ. ಬಹುಶಃ ಪಾರ್ತಿ ಸುಬ್ಬನ ಪಂಚವಟಿ ಪ್ರಸಂಗದಲ್ಲಿ ಕಂಡಂತೆ ಮಸುಕು ನೆನಪು. ಆದರೆ ಖಂಡಿತ ಹೇಳಲಾರೆ!"

ತೊರವೆ ರಾಮಾಯಣದಲ್ಲೂ ಗೆರೆ ಕಾಣದ ಒಂದು ನುಡಿ ಎತ್ತಿಕೊಂಡು ಅವರಿಗೆ ತಿಳಿಸಿದ್ದೇನೆ.

ಅವರಿಗೆ ಇದೊಂದು ಚಿಂತೆಯಾಗಬಾರದಲ್ಲ- ಎನಿಸುತ್ತಿದೆ. ಆದರೆ ಚಿಂತೆ-ಚಿಂತನಗಳಲ್ಲಿ ಆ ಮಹಾಜೀವ ವ್ಯತ್ಯಾಸವನ್ನೇ ಕಾಣಲಾರರು. *

ನಿಮ್ಮ ಶಬ್ದ ಭಾಂಡಾರ ಬೆಳೆಯಲಿ

ಶಬ್ದಭಾಂಡಾರವು ಹಣದ ಭಾಂಡಾರಕ್ಕಿಂತಲೂ ಅಮೂಲ್ಯವಾಗಿದೆ

ಇಲ್ಲಿ ಪ್ರತಿ ತಿಂಗಳು ಕೆಲವು ಶಬ್ದಗಳನ್ನು ಪರಿಚಯ ಮಾಡಿ ಕೊಡಲಾಗುವುದು. ಆಯಾ ಶಬ್ದದ ಮುಂದೆ ನಾಲ್ಕು ಅರ್ಥಗಳನ್ನು ಕೊಟ್ಟದ್ದು, ಅವುಗಳಲ್ಲಿ ಒಂದು ಮಾತ್ರ ಸರಿಯಾಗಿರುತ್ತದೆ. ನಿಮಗೆ ಸರಿಯೆನಿಸಿದ ಅರ್ಥವನ್ನು ಮೊದಲು ಅರಿಸಿಕೊಳ್ಳಿರಿ. ಆ ಮೇಲೆ ಇದರ ಬೆನ್ನಿನ ಪುಟ ನೋಡಿರಿ. ಅಲ್ಲಿ ಸರಿಯಾದ ಅರ್ಥಗಳನ್ನೇ ವಿವರಿಸಿದೆ.

೧. ಪ್ರವಣ

(ಅ) ನಮಸ್ಕಾರ (ಆ) ಒಲವುಳ್ಳ (ಇ) ಓಂಕಾರ (ಈ) ದಟ್ಟಡವಿ

೨. ದಿದೃಕ್ಷೆ

(ಅ) ದ್ರಾಕ್ಷೆಯ ರಸ (ಆ) ಪ್ರತಿಜ್ಞೆ (ಇ) ನೋಡುವ ಆಸೆ (ಈ) ತಿಳಿವಳಿಕೆ

೩. ಬುಭುಕ್ಷಿತ

(ಅ) ಹಸಿದ (ಆ) ಹೊಟ್ಟೆತುಂಬ ಉಂಡವ (ಇ) ನೀರಡಿಸಿದ (ಈ) ದುಃಖಿತ

೪. ಅಪತ್ಯ

(ಅ) ಅವಸರ (ಆ) ಸಂಕೋಚ (ಇ) ತಿನ್ನಬಾರದ್ದು (ಈ) ಮಗು

೫. ಸೂನೃತ

(ಅ) ಹಿತವಾದ ಸುಳ್ಳು (ಆ) ಕುಣಿಯುವ (ಇ) ಸೊಗಸಾದ ಸತ್ಯ (ಈ) ಮಗು

೬. ವಿಕಲ್ಪ

(ಅ) ಬೇರೊಂದು ರೀತಿ (ಆ) ಅರಳುವಿಕೆ (ಇ) ಕಾಂತಿಹೀನ (ಈ) ಚದರಿದ್ದು

೭. ಪ್ರತ್ಯಾಹಾರ

(ಅ) ದಿನದ ಊಟ (ಆ) ಬಾಗಿಲು ಕಾಯುವವ (ಇ) ಹಿಂದೆಗೆದುಕೊಳ್ಳುವಿಕೆ (ಈ) ಎದುರುತ್ತರ

೮. ನಿಭಾಯಿಸು

(ಅ) ಹೊಳೆ (ಆ) ವಿಚಾರ ಮಾಡು (ಇ) ಹೆದರಿಸು (ಈ) ನಿರ್ವಹಿಸು

೯. ಸಂತರ್ಪಣೆ

(ಅ) ತೃಪ್ತಿಪಡಿಸುವಿಕೆ (ಆ) ದುಃಖ ಸಮಾಧಾನ (ಇ) ನೀರು ಹೊಯ್ಯುವಿಕೆ (ಈ) ಜರೆಯುವುದು

೧೦. ಹೊಲ್ಲ

(ಅ) ದುಪ್ಪಟಿ (ಆ) ಅಯೋಗ್ಯ (ಇ) ಹೋಲಿಕೆ (ಈ) ಕೆಳಗಿನ

೧೧. ಪಾಟವ

(ಅ) ಒಂದು ಸಂಗೀತ ಪದ್ಧತಿ (ಆ) ಬಟ್ಟೆ (ಇ) ಉಪಾಯ (ಈ) ಚಟುವಟಿಕೆ

೧೨. ಕ್ರೋಡೀಕರಿಸು

(ಅ) ಬೆಟ್ಟವೇರು (ಆ) ಸಂಗ್ರಹಿಸು (ಇ) ನುಂಗು (ಈ) ಹೊತ್ತುಕೊಳ್ಳು

'ಶಬ್ದಭಾಂಡಾರ'ದ ಸರಿಯಾದ ಅರ್ಥಗಳು

೧. **ಪ್ರವಣ** (ಅ) ಒಲವುಳ್ಳ, ಪ್ರವೃತ್ತಿಯುಳ್ಳ; ಬಾಗಿದ; ಇಳಿಜಾರಾದ; ಚತುರ; ನಮ್ರ. ಉದಾ— ಕವಿಗಳು ಕಲ್ಪನಾಪ್ರವಣರು ಎಂದರೆ ಕಲ್ಪನೆಗಳನ್ನು ಕಟ್ಟಿಕೊಳ್ಳುವ ಪ್ರವೃತ್ತಿಯುಳ್ಳವರು. [ಸಂ.]

೨. **ದಿದೃಕ್ಷೆ** (ಇ) ನೋಡುವ ಬಯಕೆ, ಕಣ್ಣಾಸೆ. ಉದಾ— ಕೃಷ್ಣದಿದೃಕ್ಷೆಯಿಂದ ಗೋಪಿಯರು ವ್ಯಾಕುಲರಾದರು. [ಸಂ. ದಿದೃಶ್ = ನೋಡಬಯಸು]

೩. **ಬುಭುಕ್ಷಿತ** (ಅ) ಹಸಿದ, ತಿನ್ನಬಯಸುವ. ಉದಾ— ಕೇವಲ ಲಾಭಬುಭುಕ್ಷಿತ ವ್ಯಾಪಾರಿಗಳಿಂದ ಸಂಪತ್ತು ಬೆಳೆಯದು. [ಸಂ.]

೪. **ಅಪತ್ಯ** (ಈ) ಮಗು, ಸಂತಾನ, ಸಂತತಿ, (ಗಂಡು ಹೆಣ್ಣು ಸಹಿತ) ಉದಾ— ಅಪತ್ಯಪ್ರೇಮವು ಮೃಗಪಕ್ಷಿಗಳಲ್ಲಿಯೂ ಇದೆ. [ಸಂ.]

೫. **ಸೂನೃತ** (ಇ) ಸೊಗಸೂ ಸತ್ಯವೂ ಆದ; ಮೃದು ಮತ್ತು ಹಿತವಾದ. [ಸಂ.]

೬. **ವಿಕಲ್ಪ** (ಅ) ಬೇರೊಂದು ರೀತಿ, ಪ್ರಕಾರಾಂತರ; ಐಚ್ಛಿಕ; ಅನಿಶ್ಚಿತ; ಸಂದೇಹ; ಅನುಮಾನ; ಊಹೆ; ಅಜ್ಞಾನ. ಉದಾ— ಈ ಉಪಾಯ ನಡೆಯದಿದ್ದರೆ ವಿಕಲ್ಪಗಳೂ ಸಿದ್ಧವಾಗಿವೆ. [ಸಂ.]

೭. **ಪ್ರತ್ಯಾಹಾರ** (ಇ) ಹಿಂದೆಗೆದುಕೊಳ್ಳುವಿಕೆ, ಹಿಂದೆ ಸರಿಯುವುದು; ತಡೆ ಹಿಡಿಯುವುದು; ಇಂದ್ರಿಯ ನಿಗ್ರಹ [ಸಂ. ಪ್ರತಿ = ಹಿಂದೆ ಆ+ಹರ್ = ತೆಗೆದುಕೊ ಎಂಬುದರಿಂದ.]

೮. **ನಿಭಾಯಿಸು** (ಈ) ನಿರ್ವಹಿಸು, ಸಾಗಿಸಿಕೊಂಡು ಹೋಗು; ತೇರ್ಗಡೆಯಾಗು; ಸಹಿಸು; ಕಷ್ಟಪಡು. ಉದಾ— ತೊಂದರೆಗಳನ್ನೆಲ್ಲ ಎದುರಿಸಿ ಹೇಗೋ ಕೆಲಸ ನಿಭಾಯಿಸಿದ. [ಸಂ. ನಿರ್ವಹ್‌ದ ಅಪಭ್ರಂಶ]

೯. **ಸಂತರ್ಪಣೆ** (ಅ) ತೃಪ್ತಿಪಡಿಸುವಿಕೆ, ಆರಾಧನೆ; (ಆದ್ದರಿಂದ) ಬ್ರಾಹ್ಮಣರಿಗೆ ಭೋಜನ ಹಾಕುವಿಕೆ. [ಸಂ. ಸಂ — ವಿಶೇಷವಾಗಿ, ತರ್ಪಣ = ತೃಪ್ತಿಪಡಿಸುವಿಕೆ]

೧೦. **ಹೊಲ್ಲ** (ಅ) ಅಯೋಗ್ಯ, ಅನುಚಿತ, ಕೆಟ್ಟ; ಕೀಳು; ಜೋಡಣೆ. ಉದಾ— ಎಂತಹನಾದರೂ ಮಂತ್ರಿಯ ಹಗೆ ಹೊಲ್ಲ. [ಕನ್ನಡ, ಪೊಲ್ = ಕೆಟ್ಟ ಎಂಬುದರಿಂದ]

೧೧. **ಪಾಟವ** (ಈ) ಚಟುವಟಿಕೆ, ಕೆಲಸದಲ್ಲಿ ಚುರುಕುತನ, ಕೌಶಲ. [ಸಂ. ಪಟು = ಚುರುಕುಳ್ಳವ ಎಂಬುದರಿಂದ]

೧೨. **ಕ್ರೋಡೀಕರಿಸು** (ಅ) ಸಂಗ್ರಹಿಸು, ಬೇರೆ ಬೇರೆ ಕಡೆ ಇದ್ದುದನ್ನು ಒಂದೆಡೆ ಸೇರಿಸಿ ಸಂಕ್ಷೇಪಗೊಳಿಸು; ಬಿಗಿದಪ್ಪು.

ನಿಮ್ಮ ಶಬ್ದಶಕ್ತಿಯ ತರಗತಿ

ನೀವು ಎಷ್ಟು ಶಬ್ದಗಳಿಗೆ ಅರ್ಥ ಅರಿಸಿದ್ದು ಸರಿಯಾಗಿದೆಯೆಂದು ಎಣಿಸಿ ಕೆಳಗಿನಂತೆ ನಿಮ್ಮ ಶಬ್ದಶಕ್ತಿಯ ತರಗತಿಗಳನ್ನು ತಿಳಿಯಿರಿ.

೬—೮ ಸರಿಯಿದ್ದರೆ .. ಸಾಧಾರಣ
೯—೧೦ " ... ಉತ್ತಮ
೧೧—೧೨ " .... ಅತ್ಯುತ್ತಮ

ದರೋಡೆಖೋರರಿಂದ ತುಂಬಿದ ನಾಡಿನಲ್ಲಿ
ನೈತಿಕ ಚಳವಳಿ ಹೂಡಿದ್ದಾರೆ ಅವರು

ಇಟಲಿಯ ಗಾಂಧಿ ದಾನಿಲೋ ದೋಲ್‌ಚಿ

ಮುರಲೀಧರ

"ಇಟಲಿಯ ಗಾಂಧಿ" ಎನಿಸಿದ ವ್ಯಕ್ತಿ ನೋಡಲು ತೆಳ್ಳಗೆ ದುರ್ಬಲನಾಗಿಲ್ಲ; ವೈರಾಗ್ಯದ ಉಡುಪನ್ನು ಧರಿಸಿಲ್ಲ; ತಲೆ ಬೋಳಿಸಿಲ್ಲ. ಧಷ್ಟಪುಷ್ಟ ಶರೀರ; ಎಲ್ಲರಂತೆ ಪ್ಯಾಂಟು ಶರ್ಟಿನ ವೇಷ; ನೆತ್ತಿಯಲ್ಲಿ ಖಲ್ವಾಟತನದ ಪೂರ್ವಾಂಗವಾಗಿ ಕೂದಲು ವಿರಳವಾಗುತ್ತಿದ್ದರೂ ಮೇಲಕ್ಕೆ ಬಾಚಿದ ಕ್ರಾಪು. ಹೀಗಿದ್ದರೂ ಮೊನ್ನೆ ಡಿಸೆಂಬರ್ ತಿಂಗಳಲ್ಲಿ ಸೇವಾಗ್ರಾಮದಲ್ಲಿ ಸೇರಿದ ಯುದ್ಧವಿರೋಧಿಗಳ ಅಂತಾರಾಷ್ಟ್ರೀಯ ಸಮ್ಮೇಳನದಲ್ಲಿ ಆತ ಅತಿರಥ ಮಹಾರಥ ಗಾಂಧೀವಾದಿಗಳ ಮೇಲೆ ಕೂಡ ಬಲವಾದ ಪ್ರಭಾವ ಬೀರಿದ.

ಸಮ್ಮೇಳನದ ಮೂರನೇ ದಿನ ಆತ ಮಾಡಿದ ಭಾಷಣ ಬಹುಜನ ಪ್ರತಿನಿಧಿಗಳಿಗೆ ಅರಿಯದ ಇಟಾಲಿಯನ್ ಭಾಷೆಯಲ್ಲಿತ್ತು. ಸ್ವೀಡಿಶ್ ಪ್ರೊಫೆಸರರೊಬ್ಬರು ಅದನ್ನು ಇಂಗ್ಲೀಷಿಗೆ ಅನುವಾದಿಸುತ್ತಿದ್ದರು. ಆದರೂ ವ್ಯಾಸಪೀಠದಲ್ಲಿ ತೂಗಹಾಕಿದ ಸಿಸಿಲಿ ದ್ವೀಪದ ದೊಡ್ಡ ದೊಡ ನಕಾಶೆಗಳ ಸಹಾಯದಿಂದ ಆತ "ಸಮಾಜೋದ್ಧಾರ"ವನ್ನು ಕುರಿತು ಆಡುತ್ತಿದ್ದ ಮಾತುಗಳಲ್ಲಿ ತುಂಬಿದ್ದ ಕಳಕಳಿ, ವ್ಯಕ್ತವಾಗುತ್ತಿದ್ದ ಸ್ವಾನುಭವ, ಎಲ್ಲಕ್ಕೂ ಹೆಚ್ಚಾಗಿ ಅವುಗಳಲ್ಲಿದ್ದ ನಿರಾಡಂಬರ ಸರಳತನದಲ್ಲಿ ಪ್ರತಿನಿಧಿಗಳು "ಮಹಾತ್ಮತನ"ವನ್ನು ನಿಚ್ಚಳವಾಗಿ ಗುರುತಿಸಿದರು. ಭಾಷಣ ಮುಗಿದ ಮೇಲೆ ಅವನೊಡನೆ ಪ್ರತ್ಯಕ್ಷವಾಗಿ ಸಂಭಾಷಿಸಲು ತಾಮುಂದೆ ನಾಮುಂದೆಂದು ಎಲ್ಲರೂ ಮುತ್ತಿಗೆಯನ್ನೇ ಹಾಕಿದರು.

ಈ ಇಟಲಿಯ—ಅಥವಾ ಸಿಸಿಲಿಯ ಎನ್ನಿರಿ-ಗಾಂಧಿಯ ನಿಜವಾದ ಹೆಸರು ದಾನಿಲೋ ದೋಲ್‌ಸಿ ಎಂದು. ಇಟಲಿಯ ಸಮಸ್ಯಾದ್ವೀಪವೆನಿಸಿದ ಸಿಸಿಲಿಯ ರೈತರ ಬಡತನ, ಅಜ್ಞಾನ ಮತ್ತು ಅದರಿಂದ ಪ್ರಚೋದಿತವಾದ ಪಾತಕ ಪ್ರವೃತ್ತಿಯ ನಿವಾರಣೆಗಾಗಿ ಅವರು ಮತ್ತಾವ ವ್ಯಕ್ತಿಗಿಂತಲೂ ಹೆಚ್ಚಾಗಿ ದುಡಿಯುತ್ತಿದ್ದಾರೆ. ಈ ಬಡ ಜನರಿಗಾಗಿ ಅವರು ಸರ್ವಸ್ವವನ್ನು ತ್ಯಜಿಸಿದ್ದಾರೆ, ಪ್ರಬಲ ಪಟ್ಟಭದ್ರರನ್ನು ಎದುರು ಹಾಕಿಕೊಂಡಿದ್ದಾರೆ, ಸೆರೆಮನೆಗೆ ಹೋಗಿದ್ದಾರೆ. ಅವರ ಉದ್ಧಾರಕ್ಕಾಗಿ ಆರ್ಥಿಕ ಯೋಜನೆಗಳನ್ನು ಮಾಡಿದ್ದಾರೆ, ಅವರ ಪರವಾಗಿ ಅಧಿಕಾರಿಗಳಲ್ಲಿ ಕರ್ತವ್ಯ ಜಾಗೃತಿಯುಂಟುಮಾಡಲು ಸಾಮೂಹಿಕ ಉಪವಾಸದಂಥ "ಶಾಕ್" ತಂತ್ರಗಳನ್ನುಪಯೋಗಿಸಿದ್ದಾರೆ.

ದಾನಿಲೋ ದೋಲ್‌ಸಿಗೆ ಇನ್ನೂ "ಗಾಂಧಿ"ಯಾಗುವ ವಯಸ್ಸಿಲ್ಲ. ಅವರಿಗೆ ಈಗ ೩೬ ವರ್ಷ. ಟ್ರೀಸ್ಟ್ ಸಮೀಪದಲ್ಲಿ ಅವರು ೧೯೨೪ರಲ್ಲಿ ಹುಟ್ಟಿದರು ಅವರ ತಂದೆ ಒಬ್ಬ ರೇಲ್ವೆ ಅಧಿಕಾರಿ. ಶಿಲ್ಪಕಲೆಯ ತವರೂರುಗಳಾದ

ರೋಮ್ ಮತ್ತು ಮಿಲಾನ್ ನಗರಗಳಲ್ಲಿ ಅವರು ಮೂರ್ತಿಶಿಲ್ಪವನ್ನು ಅಭ್ಯಸಿಸಿದರು. ಕೆಲಕಾಲ ಮೂರ್ತಿಶಿಲ್ಪಿಯಾಗಿ ವ್ಯವಸಾಯವನ್ನೂ ನಡೆಸಿದರು.

ಹತ್ತು ವರ್ಷಗಳ ಕೆಳಗೆ ಸಹಸಾ ಅವರ ಮನಸಿನಲ್ಲೊಂದು ಪರಿವರ್ತನೆಯುಂಟಾಯಿತು. "ಶಿಲೆಗಳನ್ನು ಕಡಿದು ಮೂರ್ತಿಗಳನ್ನು ರೂಪಿಸುವ ಈ ಶಿಲ್ಪಕಲೆಯಿಂದೇನು ಫಲ?" ಎಂದವರು ಸವಾಲು ಹಾಕಿಕೊಂಡರು. ಇಲ್ಲ, ತಾನು ಜೀವಂತ ಮನುಷ್ಯರನ್ನು ನಿರ್ಮಿಸುವ ಶಿಲ್ಪಿಯಾಗಬೇಕು. ಅದು ಹೊರತು ತನ್ನ ಮನಸ್ಸಿಗೆ ಶಾಂತಿಯಿಲ್ಲ ಎಂದವರು ನಿರ್ಧರಿಸಿದರು. ಉಳಿಗಳನ್ನೂ ಅಮೃತ ಶಿಲೆಯನ್ನೂ ಬದಿಗೆ ಸರಿಸಿ ದೀನ-ರನ್ನು ಮಾನವರಾಗಿ ಮಾಡುವ ಶಿಲ್ಪಕ್ಕೆ ಯೋಗ್ಯ ಸನ್ನಿವೇಶವನ್ನು ಅರಸತೊಡಗಿ-ದರು.



ತೀರ್ಥಂಕರರಾಗುವ ಜೈನ ರಾಜರ ವೈರಾಗ್ಯಸ್ವೀಕಾರವನ್ನು ನೆನಪಿಗೆ ತರುವ ಈ ಹೃದಯ ಪರಿವರ್ತನೆಯ ನಂತರ ಅವರು ಸಿಸಿಲಿ ದ್ವೀಪಕ್ಕೆ ತೆರಳಿದರು. ಅವರ ತಂದೆ ಅಲ್ಲಿನ ಟ್ರಾಪೆಟೋ ಎಂಬ ಬೆಸ್ತರ ಹಳ್ಳಿಯಲ್ಲಿ ಕೆಲ ಕಾಲ ಕೆಲಸ ಮಾಡಿದ್ದರು. ಬಾಲಕನಾಗಿದ್ದಾಗ ದಾನಿಲೋ ಕೂಡ ಅಲ್ಲಿ ಸ್ವಲ್ಪ ಸಮಯ ಇದ್ದರು. ಅಲ್ಲಿಯ ಜನರ ಬಡತನದ ದುರಂತ ಕಥೆಯನ್ನು ಕೇಳಿದ್ದರು.

ಟ್ರಾಪೆಟೋವನ್ನು ತಲುಪಿದಾಗ ದಾನಿಲೋ ದೋಲ್‌ಸಿಯ ಜೇಬಿನಲ್ಲಿ ೩೦ ಲಾಯರ್ ಹಣ (೪ ಆಣೆ) ಇತ್ತು. ಈ ಬಂಡವಳದೊಡನೆ ಅವರು ಪಶ್ಚಿಮ ಸಿಸಿಲಿಯ ಇತಿಹಾಸಪ್ರಸಿದ್ಧ "ಹಸಿವಿನ ತ್ರಿಕೋಣ" ವನ್ನು ಪ್ರತಿಭಟಿಸಲು ಅನುವಾಗಿದ್ದರು. ರೇಲ್ವೆ ಸ್ಟೇಶನ್ನಿನಿಂದ ಹೊರಬಂದಾಗ ಒಬ್ಬಿಬ್ಬ ತರುಣ ಬೆಸ್ತರು ತಮ್ಮ ಹಳೇ ಸ್ಟೇಶನ್ ಮಾಸ್ತರರ ಮಗನೆಂದು ಅವರನ್ನು ಗುರುತಿಸಿದರು. ಅವರ ನೆರವಿನಿಂದ ಬೆಸ್ತರನ್ನೆಲ್ಲ ಕಲೆಹಾಕಿ "ನಿಮ್ಮ ಬಂಧುಪ್ರೇಮ ಮತ್ತು ದಾರಿದ್ರ್ಯದ-ಲ್ಲಿ ಪಾಲುಗೊಳ್ಳು"ವ ತಮ್ಮ ಪ್ರತಿಜ್ಞೆಯನ್ನು ದೋಲ್‌ಸಿ ವಿದಿತಪಡಿಸಿದರು.

ಅವರು ಹಳ್ಳಿಗಳ-ನ್ನು ಸುತ್ತಿ ಜನರ ಸಮಸ್ಯೆಗಳನ್ನು ಅಭ್ಯಸಿಸಿದರು. ಮೊಟ್ಟಮೊದಲು ಮಾಡಬೇ-ಕಾದುದೆಂದರೆ ಅತಿ ಅಗತ್ಯದಲ್ಲಿರುವವರಿಗಾಗಿ, ನಿರ್ಗತಿಕ ಮಕ್ಕಳಿಗಾಗಿ ಒಂದೆರಡು ಮನೆಗಳನ್ನು ಕಟ್ಟಿಸಬೇಕಾದುದು ಎಂದವರಿಗೆ ಮನವರಿಕೆಯಾಯಿತು. ಅವುಗಳನ್ನು ದರೋಡೆಗಾರರು ಇರುವ ಟೆರೋದಂಥ ಸ್ಥಳಗಳಲ್ಲೇ ಕಟ್ಟಬೇಕು ಎಂದೂ ಅವರು ಹಳ್ಳಿಗರಿಗೆ ಹೇಳಿದರು. ಸಿಸಿಲಿಯಲ್ಲಿ ಬಡತನದೊಡನೆ ದರೋಡೆಗಾರಿಕೆ ಅವಳಿ ಜವಳಿಯಾಗಿ ವಾಸಿಸುತ್ತದೆಂದು ಅವರಿಗೆ ಗೊತ್ತಿತ್ತು. ಒಂದರ ನಿವೃತ್ತಿಯೇ ಇನ್ನೊಂದಕ್ಕೂ ನಿವೃತ್ತಿ ತರಬಹುದಾಗಿತ್ತು.

ದಾನಿಲೋಗೆ ಅಂಥ ಒಂದು ಸ್ಥಳ ಸಿಕ್ಕಿತು. ಅದರ ಬೆಲೆ ೩.೨೦,೦೦೦ (ರೂ. ೨,೮೫೦)

ಲಾಯರ್ ಎಂದ ಅದರೊಡೆಯ. ದಾನಿಲೋ ಉತ್ತರ ಇಟಲಿಗೆ ಧಾವಿಸಿ ಹೇಗೋ ಹೇಗೋ ೧,೦೦,೦೦೦ ಲಾಯರ್ ಕೂಡಿಸಿ ತಂದು ಮಾಲಿಕನಿಗೆ ಒಪ್ಪಿಸಿದರು. ಉಳಿದದ್ದಕ್ಕೆ ಪ್ರಾಮಿಸರಿ ನೋಟು ಬರೆದುಕೊಟ್ಟು, "ದೇವರು ನೆರವು ಕಳಿಸಿದಾಗ" ತೀರಿಸುವೆ ಎಂದರು. ವಿಚಿತ್ರ, ಆದರೆ ನಿಜ, ಮಾಲಿಕ ಒಪ್ಪಿದ. ಆ ಸ್ಥಳದಲ್ಲೇ ಒಂದು ಡೇರೆ ಹೊಡೆದು ದಾನಿಲೋ ಹಗಲಿರುಳು ಇರಹತ್ತಿದರು. ಜನರು ಈ ನಿರ್ಧಾರದ ಕ್ರಮದಿಂದ ಪ್ರಭಾವಿತರಾದರು. ಒಬ್ಬ ಉಪ್ಪಾರ "ದೇವರು ದಯ ಮಾಡಿದ ಮೇಲೆ ಹಣಕೊಟ್ಟರೆ ಸಾಕು" ಎಂದು ಕಟ್ಟಡ ಕಟ್ಟಲು ಮುಂದೆ ಬಂದ. ಕಲ್ಲು, ಇಟ್ಟಿಗೆ, ಗಾರೆಗಳೂ ಹೀಗೆಯೆ "ದೇವರ ದಯೆ" ಯ ನಿರೀಕ್ಷೆಯಿಂದ ದೊರೆತವು. ಮನೆ ಸಿದ್ಧವಾಯಿತು. ಪಾಲೆರ್ಮೊದಲ್ಲೊಬ್ಬರು "ದೇವರು ಕೊಟ್ಟ ಮೇಲೆ" ಹಣ ಪಡೆಯುವ ಕರಾರಿನಿಂದ ಫರ್ನಿಚರುಗಳನ್ನು ಒದಗಿಸಿದರು. ಈ ಎಲ್ಲ ಸೊತ್ತನ್ನು ಸೇರಿಸಿ ಒಂದು ಟ್ರಸ್ಟ್ ನಿರ್ಮಿಸಿ ದಾನಿಲೋ ಅದಕ್ಕೆ, ಅನ್ವರ್ಥಕವಾಗಿಯೆ, "ಬಾರ್ಗೋ ಡಿ ದಿವೋ"— ದೇವರ ಗುಡಿಸಲು ಎಂದು ಹೆಸರಿಟ್ಟರು.

ಬಡವರೊಡನೆ ತಮ್ಮ ತಾದಾತ್ಮ್ಯವನ್ನು ಪ್ರತ್ಯಕ್ಷೀಕರಿಸಲು ದಾನಿಲೋ ಐವರು ಮಕ್ಕಳಿರುವ ಒಬ್ಬ ಬಡ ನಿರ್ಗತಿಕ ವಿಧವೆಯನ್ನು ಮದುವೆಯಾದರು. ಈ ದಂಪತಿಗಳು ಮತ್ತೆ ಐವರು ಅನಾಥ ಮಕ್ಕಳನ್ನು ದತ್ತಕ ಹಿಡಿದರು. ಪಶ್ಚಿಮ ಸಿಸಿಲಿ ಪ್ರದೇಶದಲ್ಲಿನ ಬಡತನ ಮತ್ತು ಕೊಲೆಸುಲಿಗೆಗಳ ಮೂಲಕಾರಣ ಶೋಧಿಸುವುದಕ್ಕಾಗಿ ಅವರು "ಜನತಾ ವಿಶ್ವವಿದ್ಯಾಲಯ"ವೊಂದನ್ನು ಸ್ಥಾಪಿಸಿದರು. ಅವರ ಪರೋಪಕಾರ ಬುದ್ಧಿಯನ್ನು ಸರಕಾರವೂ ಮಠಗಳೂ ತುಂಬ ಪ್ರಶಂಸಿಸಿದವು. ಆದರೆ ಬೇಗನೆ ಅವರು ಅಧಿಕಾರಿಗಳೊಡನೆ ತಿಕ್ಕಾಟಕ್ಕಿಳಿಯುವ ಪ್ರಸಂಗ ಬಂತು.

ತಮ್ಮ ಹಳ್ಳಿಗರಿಗಾಗಿ ಅವರು ಕೆಲ ಮುನಸಿಪಲ್ ಸೌಕರ್ಯಗಳನ್ನು ಬೇಡಿದಾಗ ಅಧಿಕಾರಿಗಳು ಅಲಕ್ಷ್ಯ ಮಾಡಿದರೆಂದು ದಾನಿಲೋ ಮತ್ತು ಅವರ ಸಂಗಡಿಗರು ಕೈಕೊಂಡ ಸಾಮೂಹಿಕ ಉಪವಾಸವು ಪ್ರಥಮತಃ ಅಖಿಲ ಇಟಲಿಯ ಲಕ್ಷ್ಯವನ್ನು ಅವರತ್ತ ಸೆಳೆಯಿತು. ಬರಿ ಬಾಯುಪಚಾರದಿಂದೇನು ಪ್ರಯೋಜನ? ಜನರಿಗೇನಾದರೂ ನಿಜವಾದ ಸೌಕರ್ಯ ಕೊಡಿರಿ ಎಂದರು ದಾನಿಲೋ. ಪಾಲೆರ್ಮೊದ ಅಧಿಕಾರಿಗಳು ವಿಧಿಯಿಲ್ಲದೆ ತಲೆಬಾಗಿಸಲೇ ಬೇಕಾಯಿತು. ಆಗಲೇ ಜನ ಅವರನ್ನು "ಸಿಸಿಲಿಯ ಗಾಂಧಿ" ಎಂದು ಕರೆದದ್ದು.

ನಿಜ ಹೇಳಬೇಕಾದರೆ ಆಗ ದಾನಿಲೋಗೆ ಗಾಂಧೀಜಿಯ ಹೆಸರು ಹೊರತು ಮಹಾತ್ಮರ ಬಗ್ಗೆ ಏನೂ ಗೊತ್ತಿರಲಿಲ್ಲ. ಗಾಂಧೀ ಬಿರುದು ಸಿಕ್ಕಿದ ಮೇಲೆ ಅವರು ಇಟಾಲಿಯನ್ ಭಾಷೆಯಲ್ಲಿ ಲಭ್ಯವಾಗಿದ್ದ ಏಕಮಾತ್ರ ಗಾಂಧೀ ಕೃತಿಯಾದ "ಸತ್ಯಶೋಧನೆ" (ಗಾಂಧೀಜಿಯ ಆತ್ಮಚರಿತ್ರೆ) ಯನ್ನೋದಿದರು. ಓದಿ ಮುಗ್ಧರಾದರು. ಅಂದಿನಿಂದ ಗಾಂಧಿ ಅವರಿಗೆ ದಾರಿದೀಪವಾಗಿದ್ದಾರೆ.

ಸಿಸಿಲಿ ದ್ವೀಪ ಇತಿಹಾಸಪ್ರಸಿದ್ಧವಾದದ್ದು, ರೋಮನ್ ಕಾಲದಿಂದಲೂ ಮಹತ್ವಹೊಂದಿದ್ದು. ಅದು ಅತಿ ದರಿದ್ರ ಪ್ರದೇಶವೂ ಹೌದು. ಇಟಲಿಯ ಆಳಿಕೆ ಶತಮಾನಗಳಿಂದ ಇದ್ದರೂ ಈ ಜನ ಪೂರ್ತಿ ಇಟಲೀಕೃತರಾಗಿಲ್ಲ. ಅಲ್ಲಿ ಉದ್ಯಮ ಕೈಗಾರಿಕೆಗಳಿಲ್ಲದ್ದರಿಂದ ಸಹಸ್ರಾರು ವರ್ಷಗಳ ಕೃಷಿಯಿಂದ ನಿಸ್ಸಾರವಾದ ಭೂಮಿಯಲ್ಲಿ ಲಾಭರಹಿತ ಒಕ್ಕಲುತನದ ಮೇಲೆಯೆ ಜೀವಿಸಬೇಕಾಗಿದೆ.

ನಿರುದ್ಯೋಗ ಅಲ್ಲಿನ ನಿತ್ಯ ದುಃಖ. ಪಶ್ಚಿಮದ ಕೆಲ ಪ್ರದೇಶಗಳಲ್ಲಿ ಪ್ರತಿ ಐವರಲ್ಲಿ ನಾಲ್ವರು ನಿರುದ್ಯೋಗಿಗಳು. ನೂರರಲ್ಲಿ ೪೭ ಜನ ತೀರ ಬಡವರೆಂದು ಅಕೃತ ಅಂಕೆ-ಸಂಖ್ಯೆಗಳೇ

ಹೇಳುತ್ತವೆ. ಹುಟ್ಟಿದ ಮಕ್ಕಳಲ್ಲಿ ಸಾವಿರಕ್ಕೆ ೮೯ ಸಾಯುತ್ತವೆ. ಕಾಲಂಶ ಜನರಿಗೆ ಅರೆಹೊಟ್ಟೆ. ಸೇಕಡಾ ೪೬ ಜನ ನಿರಕ್ಷರಿಗಳು.

ಈ ಸ್ಥಿತಿಯಲ್ಲಿ ಪಶ್ಚಿಮ ಸಿಸಿಲಿ ನಮ್ಮ ಚಂಬಲ ಕಣಿವೆಯಂತೆ ಕೊಲೆ ಸುಲಿಗೆಗಳ ನೆಲೆವೀಡಾಗಿದೆ. ಕೊಲೆ ಸುಲಿಗೆಗಳ ಒಂದು ಸುಸಂಘಟಿತ ಸಂಸ್ಥೆಯೇ ಇಲ್ಲಿದೆ. ಅದರ ಹೆಸರು "ಮಾಫಿಯಾ". ಅಮೇರಿಕದ ಪ್ರಮುಖ ನಗರಗಳಲ್ಲಿ ಕೂಡ ಜನರ ಎದೆಯನ್ನು ತತ್ತರಗೊಳಿಸುವಂತೆ ಕೈಕಾಲು ನೀಡಿರುವ ಈ ಗುಪ್ತ ಸಂಸ್ಥೆಗೆ ಸಿಸಿಲಿಯ ಜಮೀನ್ದಾರರು ಆಧಾರ ಸ್ತಂಭರು. ಅದರ ಗುಟ್ಟುಗಳನ್ನು ಹೊರಬಿಟ್ಟವರಿಗೆ ಪಾತಾಳದಲ್ಲಿ ಅಡಗಿದರೂ ಮೃತ್ಯು ನಿಶ್ಚಿತ. ಇಟಲಿಯ ಯಾವ ಸರಕಾರವೂ ಅದರ ವಿರುದ್ಧ ದೃಢವಾದ ಕ್ರಮ ಕೈಕೊಳ್ಳಲು ಸಿದ್ಧವಿಲ್ಲ. ಚಂಬಲದಲ್ಲಿ ಹೇಗೋ ಹಾಗೆ ಅದು ರಾಜಕಾರಣದ ಚದುರಂಗದಲ್ಲೊಂದು ಪ್ಯಾದೆ—ಏಕೆ ರಾಜ—ಆಗಿದೆ. ಅಧಿಕಾರದಲ್ಲಿದ್ದವರೂ ಮಠಾಧಿಕಾರಿಗಳೂ ಅದನ್ನು ಕಾಪಾಡುತ್ತಾರೆ. ಅದು ಅವರಿಗೆ ಬೆಂಬಲವೀಯುತ್ತದೆ. ಜಮೀನುದಾರರ ಹಿತ ಸಾಧಿಸುವ ಈ ಕೂಟದಲ್ಲಿ ಬಡವರು ಕೊಲೆ ಸುಲಿಗೆಯ ದುಷ್ಕೃತ್ಯಮಾಡಲು—ಸಂಬಳಕ್ಕೆಂಬಂತೆ—ಸೇರುತ್ತಾರೆ.

ಈ ಹಿಂಸಾಚಾರಕ್ಕೆ ಮೂಲ ಕಾರಣ ನಿರುದ್ಯೋಗವೆಂದು ದಾನಿಲೋಗೆ ಮನವರಿಕೆಯಾಯಿತು. ಅವರ ಕರುಣಾಪೂರ್ಣ ವ್ಯವಹಾರದಿಂದ ಧೈರ್ಯಗೊಂಡವರಾಗಿ ಅನೇಕ ದರೋಡೆಖೋರರು ಅವರ ಮುಂದೆ ತಪ್ಪೊಪ್ಪಿಕೊಂಡರು. ಅವರ ದುಃಖದ ಕತೆ ದಾನಿಲೋವನ್ನು ಕಾರ್ಯತತ್ಪರರಾಗಿ ಮಾಡಿತು.

ನಿರುದ್ಯೋಗಿಗಳಿಗಾಗಿ ಏನನ್ನಾದರೂ ಮಾಡಲೇಬೇಕೆಂದು ಅವರು ಸರಕಾರದ ವಿರುದ್ಧ ಉಪವಾಸ ಹೂಡಿದರು. ಉಪಾಯವಿಲ್ಲದೆ ಪಾಲೆರ್ಮೋ ಪ್ರಾಂತಿಕ ಸರಕಾರ ನಿರುದ್ಯೋಗ ನಿವಾರಣೆಗೆಂದು ಒಂದು ಹಳ್ಳಕ್ಕೆ ಅಣೆಕಟ್ಟು ಕಟ್ಟಲು ೫೦,೦೦೦ ಲಾಯರ್ ಮಂಜೂರು ಮಾಡಿತು. ಅಣೆಕಟ್ಟು ಕಟ್ಟಲು ನಿರುದ್ಯೋಗಿಗಳನ್ನು ಹಾರೆಗುದ್ದಲಿಗಳೊಡನೆ ಕರಕೊಂಡು ದಾನಿಲೋ ಹಳ್ಳದತ್ತ ಸಾಗಿದಾಗ ಸ್ಥಾನಿಕ ಜಮೀನ್ದಾರರು ಈ ಅಣೆಕಟ್ಟಿನಿಂದ ತಮ್ಮ ಜಮೀನಿಗೆ ಇದ್ದ ನೀರಿನ ಆಶ್ರಯ ತಪ್ಪುವುದೆಂದು ಕೂಗೆಬ್ಬಿಸಿದರು. ಸರಕಾರ ಅಣೆಕಟ್ಟನ್ನು ಪ್ರತಿಬಂಧಿಸಿತು.

೧೯೫೫ರಲ್ಲಿ ದಾನಿಲೋ ಪಾರ್ಟಿನಿಕೋ ಎಂಬ ೨೫,೦೦೦ ಜನಸಂಖ್ಯೆಯ ಪಟ್ಟಣವನ್ನು ತಮ್ಮ ಕೇಂದ್ರವಾಗಿ ಮಾಡಿಕೊಂಡರು. ಇಲ್ಲಿ ವರ್ಷಕ್ಕೆ ೨೦ಕ್ಕೂ ಹೆಚ್ಚು ಕೊಲೆಗಳಾಗುತ್ತವೆ. ತೀರ ದರಿದ್ರವೆನಿಸಿದ ೪೦೦ ಕುಟುಂಬಗಳ ಪೈಕಿ ೧೬೦ರ ಯಜಮಾನರು ಸೆರೆಮನೆಯಲ್ಲಿ ಅಥವಾ ಮಾಫಿಯಾ ತಂಡದಲ್ಲಿದ್ದರು; ಇಲ್ಲವೆ ಕೊಲೆಯಾಗಿದ್ದರು. ಹಿಂಸೆಯ ಹಾಗೆ ದುಃಖವೂ ರೋಗಗಳೂ ಇಲ್ಲಿ ಹೆಚ್ಚಾಗಿದ್ದವು.

ಇಲ್ಲಿ ದಾನಿಲೋ ಅಧಿಕಾರಿಗಳನ್ನು ಕೇಳದೆನೆ ಒಂದು ದವಾಖಾನೆ ತೆರೆದರು. ಅಧಿಕಾರಿಗಳ ಮನಸ್ಸಾಕ್ಷಿಗೆ ಅಂಕುಶ ಹಾಕಲು ಸಾತ್ವಿಕ ರೋಷದ ಪುಸ್ತಿಕೆಗಳನ್ನು ಪ್ರಕಟಿಸಿದರು. "ಪಾರ್ಟಿನಿಕೋದಲ್ಲಿ ಈ ವರ್ಷ ಎಷ್ಟು ಜನ ನೇಣು ಹಾಕಿಕೊಳ್ಳಲಿದ್ದಾರೆ? ಎಷ್ಟು ಜನರಿಗೆ ಹುಚ್ಚು ಹಿಡಿಯಲಿದೆ?" ಎಂಬಂಥ ಪ್ರಶ್ನೆಗಳನ್ನವರು ಕೇಳಿದರು. ಕುಂದುಕೊರತೆಗಳ ನಿವಾರಣೆಗಾಗಿ ನಗರಾಧಿಕಾರಿಗಳ ಮನೆಯಲ್ಲಿ ಧರಣಿ ಕುಳಿತರು.

೧೯೫೫ರಲ್ಲಿ ಒಂದು ಮಗು ಆ ಊರಲ್ಲಿ ಅನ್ನವಿಲ್ಲದೆ ಸತ್ತಿತು. ದಾನಿಲೋ ಈ ಘಟನೆಯಿಂದ ಮನ ಮರುಗಿದರು. ಅವರು ೨೪ ತಾಸುಗಳ ಒಂದು "ಪ್ರತಿಭಟನಾ" ಉಪವಾಸ ಕೈಕೊಂಡರು. ಒಂದು ಸಾವಿರ ಜನ ಇದರಲ್ಲಿ ಸೇರಿದರು. ಪಾರ್ಟಿನಿಕೋ ನಗರಾಧಿಕಾರಿಗಳು ಹೆದರಿ ಇನ್ನೊಮ್ಮೆ ಇಂಥ ಘಟನೆ ನಡೆಯದಂತೆ ನೋಡಿಕೊಳ್ಳುವೆವು; ನಿರುದ್ಯೋಗ ನಿವಾರಣೆಗೆ ಸಾಧ್ಯ

ವಿದ್ಧದ್ದನ್ನೆಲ್ಲ ಮಾಡುವೆವು ಎಂದರು.

ಆದರೆ ಏನೂ ಆಗಲಿಲ್ಲ. ಮೂವರಲ್ಲಿಬ್ಬರು ಇನ್ನೂ ನಿರುದ್ಯೋಗಿಗಳಾಗಿಯೆ ಇದ್ದರು. ೧೯೫೬ ಜನವರಿಯಲ್ಲಿ ದಾನಿಲೋ ದೋಲ್‌ಸಿ ಜಗತ್ತಿನ ಇತಿಹಾಸದಲ್ಲೆ ವಿಚಿತ್ರವಾದ "ವಿಪರೀತ ಮುಷ್ಕರ"ವೊಂದನ್ನು ಹೂಡಿದರು. ಅವರು ಊರ ನಿರುದ್ಯೋಗಿಗಳನ್ನು ಸೇರಿಸಿ ಕೆಟ್ಟು ಹೋಗಿದ್ದ ಒಂದು ರಸ್ತೆಯ ದುರಸ್ತಿಯನ್ನು ಪ್ರಾರಂಭಿಸಿದರು. "ಇಟಲಿಯ ರಾಜ್ಯ ಸಂವಿಧಾನ ಪ್ರಕಾರ ನಮಗೆ ಉದ್ಯೋಗ ಮಾಡುವ ಹಕ್ಕು ಇದೆ. ಸರಕಾರ ನಮಗೆ ಸಂಬಳ ಕೊಡಬೇಕೆಂದು ನಮ್ಮ ಹಟವಿಲ್ಲ. ದುರಸ್ತಿ ಮಾಡಿ ಮುಗಿಸಿದ ಮೇಲೆ ಸರಕಾರ ನಮಗೇನಾದರೂ ಕೊಡದಿರದೆಂದು ನಂಬಿದ್ದೇವೆ" ಎಂದವರು ಸಾರಿದರು.

ಸಂಬಳ ಕೊಡುವ ಬದಲು ಸರಕಾರದ ಪೋಲೀಸರು ಬಂದು ಸತ್ಯಾಗ್ರಹಿಗಳನ್ನು ಚದುರಿಸಿದರು. "ಶಾಂತಿಭಂಗ ಮಾಡುವ ಚಳವಳಿ" ಹೂಡಿದ್ದಕ್ಕೆ ದಾನಿಲೋ ಮತ್ತು ಮತ್ತೆ ೨೨ ಜನರನ್ನು ಸೆರೆಹಿಡಿದು ಅನೇಕ ತಿಂಗಳ ಸಜೆ ವಿಧಿಸಲಾಯಿತು. ಆದರೆ ಇದರಿಂದ ಇಡೀ ದೇಶದಲ್ಲಿ ಕೋಲಾಹಲ ವೆದ್ದಿತು. ಪಾರ್ಲಿಮೆಂಟಿನಲ್ಲಿಯೂ ಪತ್ರಿಕೆಗಳಲ್ಲಿಯೂ ಸರಕಾರವು ನಿರುದ್ಯೋಗ ನಿವಾರಣೆಗೆ ಏನೂ ಮಾಡುತ್ತಿಲ್ಲವೆಂದು ಟೀಕೆಗಳು ಬಂದವು. ದಾನಿಲೋರ ಈ ಕೃತಿ ಕ್ರೈಸ್ತಧರ್ಮದ ಕಾರುಣ್ಯ ತತ್ವಕ್ಕನುಸಾರವಾಗಿದೆಯೆಂದು ಪ್ರಬಲ ಪತ್ರಿಕೆಯೊಂದು ಬರೆಯಿತು.

ಈ ಘಟನೆ ದಾನಿಲೋ ದೋಲ್ಸಿಯನ್ನು ಜಗತ್ಪ್ರಸಿದ್ಧವಾಗಿ ಮಾಡಿತು. ಜಗತ್ತಿನ ಪತ್ರಿಕೆಗಳಲ್ಲಿ ಅವರ ಬಗ್ಗೆ ಲೇಖಗಳು ಬಂದವು. ಅವರ ಕಾರ್ಯಕ್ಕೆ ನಾನಾ ದೇಶಗಳಿಂದ ಧನ ಸಹಾಯ ಬರತೊಡಗಿತು. ಅನೇಕ ಕಡೆ ಸಹಾಯ ಸಮಿತಿಗಳು ಪ್ರಾರಂಭವಾದವು. ೧೯೫೭ ರಲ್ಲಿ ಅವರ Inchiesta a Palermo ಎಂಬ ಪುಸ್ತಕಕ್ಕೆ ವಿಯರೆಗಿಯೋ ಬಹುಮಾನ ಬಂತು. ೧೯೫೮ ರಲ್ಲಿ ತಾವೂ ಹಿಂದುಳಿಯಬಾರದೆಂದು ರಶಿಯನ್ನರು ಅವರಿಗೆ ಲೆನಿನ್ ಶಾಂತಿ ಬಹುಮಾನವನ್ನಿತ್ತರು. (ದೋಲ್‌ಸಿ ಮೊದಲಿಂದಲೂ ಯುದ್ಧ ವಿರೋಧಿಗಳು.)

ನಿರುದ್ಯೋಗ ಸಮಸ್ಯೆಯತ್ತ ಜಗತ್ತಿನ ಮನಸಾಕ್ಷಿ ಜಾಗೃತವಾಗುವಂತೆ ಮಾಡಿದ ಶ್ರೇಯಸ್ಸು ದಾನಿಲೋ ದೋಲ್ಸಿಯದು. ೧೯೫೭ ರಲ್ಲಿ ಅವರು ಸಂಘಟಿಸಿದ ಪೂರ್ಣೋದ್ಯೋಗ ಸಮ್ಮೇಳನಕ್ಕೆ ಜಗತ್ತಿನ ಅನೇಕ ಪ್ರಮುಖ ಅರ್ಥಶಾಸ್ತ್ರಜ್ಞರು ಬಂದಿದ್ದರು. ಪಶ್ಚಿಮ ಸಿಸಿಲಿಯಲ್ಲಿ ಪೂರ್ಣೋದ್ಯೋಗ ಸಾಧಿಸುವ ವಿಚಾರ ಅಭ್ಯಸಿಸಲು ಬೇರೆ ಬೇರೆ ಕಡೆ ಐದು ಕೇಂದ್ರಗಳು ಸ್ಥಾಪಿತವಾಗಿವೆ. ಅವುಗಳಲ್ಲಿ ದಕ್ಷರಾದ ದೇಶವಿದೇಶಗಳ ಕೃಷಿ ತಂತ್ರಜ್ಞರು ಸ್ವಯಂಸೇವಕರಾಗಿ ದುಡಿಯುತ್ತಿದ್ದಾರೆ. ಇವುಗಳ ವೆಚ್ಚ ಇಟಲಿ, ಸ್ವೀಡನ್, ಬ್ರಿಟನ್, ಫ್ರಾನ್ಸ್, ನಾರ್ವೆಗಳಲ್ಲಿರುವ ಸಮಿತಿಗಳು ವಹಿಸುತ್ತಲಿವೆ. ಧನ ಸಂಗ್ರಹಕ್ಕಾಗಿ ಬೆಲ್ಜಿಯಂ, ಅಮೇರಿಕಗಳಲ್ಲಿಯೂ ಸಮಿತಿಗಳಾಗಿವೆ.

ಇನ್ನೂ ೩೬ ರಲ್ಲಿರುವಾಗಲೇ ಒಂದು ಕಾದಂಬರಿಯ ಕಥಾನಾಯಕರಾಗುವ ಅಪರೂಪ ಭಾಗ್ಯ ದಾನಿಲೋ ದೋಲ್‌ಸಿಗೆ ಬಂದಿದೆ. ಪ್ರಸಿದ್ಧ ಬ್ರಿಟಿಶ್ ಲೇಖಕ ಆಲ್ಡಸ್ ಹಕ್ಸ್ಲಿ ಅವರ ಬಗ್ಗೆ ಕಾದಂಬರಿ ಬರೆದು ಈತ "ಇಪ್ಪತ್ತನೇ ಶತಮಾನದ ಆದರ್ಶ ಸಂತ" ಎಂದು ಹೇಳಿದ್ದಾರೆ. *



ಆಯಿತೇ ಎಲ್ಲಮ್ಮನ
ಭಯನಿವಾರಣೆ?

ಭಯ ನಿವಾರಣೆ

'ಹೊಯಿಸಳ'

ಭಯ, ದಿಗಿಲು, ಅಂಜಿಕೆ, ಹೆದರಿಕೆ—ಇವು ಎಲ್ಲವೂ ಒಂದೇ ಭಾವದ ಶಾಖೋಪಶಾಖೆಗಳು. ಯಾವಾಗ್ಗೆ ಮನುಷ್ಯನಲ್ಲಿ ಭಯವು ಹುಟ್ಟಿತೋ ಆಗ್ಗೆ ಮನುಷ್ಯನು ಮೃತನಂತೆ.

"ಭಯೇ ವ್ಯಾಪಿಲೇ ಸರ್ವ ಬ್ರಹ್ಮಾಂಡ
ಆಹೇ ।
ಭಯಾತೀತ ತೇ ಸಂತ ಅನಂದ
ಪಾಹೇ ॥"

ಹೀಗೆಂದು ರಾಮ ಸಮರ್ಥರು ಶ್ರೀ ಶಿವಾಜಿಗೆ ಹೇಳಿದ್ದಾರೆ. ಭಯಾತೀತನಾಗಬೇಕು ಆನಂದ ಬರಲು ಬಯಸಿದರೆ!" ಹೀಗೆಲ್ಲಾ ಹೇಳಿದ ರಾಣೋಜೀ ರಾಯ. ಸುಂದರ ತರುಣಿ ಆತನ ಸತಿ ಎಲ್ಲಮ್ಮ ಕೇಳಿದಳು. ನೀಳವಾಗಿ ನಿಂತಿದ್ದವಳು ಸರ್ರನೆ ಆತನ ಕಡೆಗೆ ಸರಿದು ಬಂದು ಅವನ ಕೈಲಿದ್ದ ಪುಸ್ತಕವನ್ನು ಕಿತ್ತು ಬಿಸಾಟು ಮಲ್ಲಿಗೆಯ ಅಂಟಾಗಿ ಒಲಿದೊಲಿದು ಆತನ ಮೈಗೆಲ್ಲ ಹಬ್ಬಿಕೊಂಡಳು.

"ನೋಡಿ! ನಿಮ್ಮಂಥ ಕೊಲೆಘಾತುಕರನ್ನೇ ತಬ್ಬಿಕೊಂಡು ಹಣ್ಣು ಮಾಡಿಬಿಟ್ಟೆ—ಕ್ರೂರ ಯುದ್ಧದಲ್ಲಿ! ನನಗೆಲ್ಲಿಯ ಭಯ? ಎಂಥೆಂಥವರ ಎದೆಯಲ್ಲೂ ಭಯ ಹುಟ್ಟಿಸುವ ಮೃಗರಾಜ ಸಿಂಹನನ್ನು ಬೆನ್ನು ತಟ್ಟಿ ಎಬ್ಬಿಸಿ—ಅದು 'ಆಂ' ಎಂದು ಆರ್ಭಟಿಸಿದಾಗ ಅದರ ಬಾಯೊಳಗೆ ಕೈ ಹೊಗಿಸಿ ಅದರ ಹೃದಯನ್ನು ಕಿತ್ತು ತೆಗೆಯುವ ನಿಮ್ಮಂಥವರನ್ನು ಮಿದುವು ಮಾಡುವ ಶಕ್ತಿ ನನಗೆ ಇದೆ. ಭಯವೆಲ್ಲಿಯದು ನನಗೆ? ನಿಮ್ಮನ್ನು ಅಂಜಿಸುವ ಬೆಂಕಿಯನ್ನು ನಾನು ಹೇಗೆ ಇಟ್ಟಾಡಿಸುವೆನು ನೋಡಿರಿ. ಯಾವಾಗ ಏನು, ಹುರಿ—ಕರಿ—ಬೇಯಿಸೆಂದರೆ—ಅವೆಲ್ಲ ತತ್‌ಕ್ಷಣವೇ ಮಾಡುವುದಿಲ್ಲವೇ?—ಆ ಬೆಂಕಿ ನನ್ನ ಅಡಿಯಾಳಾಗಿ!"

ಈ ಮಾತಿಗೆ ರಾಣೋಜಿ "ಜಾಣೆಯೆ ಸರಿ ನನ್ನಾಕೆ! ತಬ್ಬಿಕೊಂಡು ತಬ್ಬಿಬ್ಬು ಮಾಡಿದೆ. ಫಣಿವೇಣಿಯಿಂದ ಕೈಗಳನ್ನು ಬಿಗಿದುಬಿಟ್ಟೆ. ಈಗ ನೆಟ್ಟ ದಿಟ್ಟಿಯಿಂದ ನನ್ನ ಎದೆಯನ್ನು ಚುಚ್ಚುತಲಿರುವೆ—ಸರಿ, ಎನ್ನು—ಆದರೆ ಹೀಗೇ, ಇಂಥಾದ್ದೇ, ಒಂದು ಸರ್ಪ ಬಂದಿತು ಎನ್ನೋಣ—ನಿನ್ನ ಮೈಗೆ ಹೀಗೆ ಸುತ್ತಿತು ಎನ್ನೋಣ—ಆಗ?"

ಎಲ್ಲಮ್ಮ: "ಮಾಡುವುದೇನು? ನೀವು ಇರುತ್ತೀರಲ್ಲ ಹತ್ತಿರ. ಚಾಕು ಬಿಚ್ಚಿ ಪಡುವಲಕಾಯಿ ಹೆಚ್ಚಿದಂತೆ ಹೆಚ್ಚಿಬಿಡಿ ಎನ್ನುವೆನು. ನೀವು...."

ರಾಣೋಜಿ: "ಆಹಾ, ನಾನಿರಲಿಲ್ಲ ಎಂದುಕೋ."

ಎಲ್ಲಮ್ಮ: "ನಿಮ್ಮನ್ನು ಬಿಟ್ಟು ಎಲ್ಲಿಗೂ ಹೋಗುವುದಿಲ್ಲ ಕಂಡಿರ!"

'ಮಧುವನ' ದಿಂದ

ರಾಣೋಜಿ: "ಮಸಲ, ದೊಡ್ಡ ಆನೆ ಬಂತು! ಸೊಂಡಿಲು ಅಲ್ಲಾಡಿಸುತ್ತಾ — ಹೆಜ್ಜೆ ಹೆಜ್ಜೆಗೂ ಭೂಮಿಯನ್ನು ನಡುಗಿಸುತ್ತಾ— ಬಂದಿತು ಎಂದುಕೋ. ಆಗ್ಗ!"

ಎಲ್ಲಮ್ಮ: "ಸೊಂಡಿಲು ಒಳಗೆ ಕಟ್ಟಿರುವೆಯಾಗಿ ಹೋಗಿ ಕಚ್ಚುವೆನು. ಆಗ ಎಂತಿದ್ದರೂ ಸತ್ತೇ ಸಾಯುವುದು."

ರಾಣೋಜಿ: "ಹೀಗೆಲ್ಲಾ ಅಡ್ಡಾದಿಡ್ಡಿಯಾಗಿ ಮಾತಾಡಲಿಕ್ಕೇ ಸರಿ. ಎಲ್ಲಿ ಹೇಳು ಉತ್ತರಕ್ಕುತ್ತರ ಸರಿಯಾಗಿ ಹೇಳಬೇಕು. ಹೂ!"

"ಹೂಂ ಕೇಳುವಂಥವರಾಗಿ, ಹೆದರುವರಾರು!" ಎಂದು ಉತ್ತರ ಕೊಡಲು ಸಿದ್ಧಳಾದ ಕಾಂತೆಯು, ತನ್ನ ಅರಳೇಪೇಟೆ ಸೀರೆ ನೆರಿಗೆಯನ್ನು ನವಿಲು ಬಾಲದಂತೆ ಕೆದರಿಕೊಂಡು ಕುಳಿತಳು. ಹೇಳಿ ನೇಯಿಸಿಕೊಂಡದ್ದು ಆ ಸೀರೆ. ಬೆಂಗಳೂರಿನದು. ಸೆರಗಿನಲ್ಲಿ ಮೋಡ ಮುಸುಕಿದ ಆಕಾಶ. ಒಡಲೆಲ್ಲಾ ಜರತಾರಿ ನವಿಲುಕಣ್ಣು. ಯಾವ ಹೆಂಗಸೂ ಎಂದೂ ಉಡದಂಥ ಸೀರೆ.



ರಾಣೋಜಿ ಚಪ್ಪಾಳೆ ತಟ್ಟಿಕೊಂಡು ಕುಣಿದುಬಿಟ್ಟ. "ಯಾಕೇಂದ್ರೆ, ಇದೇನು ಕುಣಿತ!"

"ಸಿಂಹದ ಮೇಲೆ ನವಿಲು ಕುಳಿತುಬಿಟ್ಟಿದೆ. ಹಾ. ಹಾಹಾ!" ಎಂದು ಮತ್ತೆ ಕುಣಿದ. ಚಪ್ಪಾಳೆ ತಟ್ಟಿದ. ಎಲ್ಲಮ್ಮ ತಿರುಗಿ ನೋಡಿದಳು. ಹೌಹಾರಿ ಬೆದರಿ ಎದ್ದೋಡಿದಳು. ಸಿಂಹದ ತಲೆಯ ಮೇಲೆ ಕುಳಿತುಬಿಟ್ಟಿದ್ದಳು ಆಕೆ. ರಾಣೋಜಿ ತತ್‌ಕ್ಷಣವೇ ಮೇಜಿನ ಮೇಲಿದ್ದ ಬಂದೂಕನ್ನು ತೆಗೆದು ಕೈಲಿ ಕೊಡಹೋದನು. "ಹಿಡಿ! ಶೂರಾಗ್ರಣೀ, ಇದು ಬಾರುಮಾಡಿದ ಬಂದೂಕು. ಹೊಡೆದು ಕೊಂದುಬಿಡು ಆ ಸಿಂಹವನ್ನು! ಹೀಗೆ ಹಿಡಿ, ಗುರಿ ಇಡು, ಕುದುರೆ ಎಳಿ, ಸುಟ್ಟುಬಿಡು—ಆ ಸಿಂಹವನ್ನು. ಅಬ್ಬಬ್ಬ ಎಷ್ಟೊಂದು ಧೈರ್ಯ ಆ ಕರುಳಿಲ್ಲದ ಸಿಂಹಕ್ಕೆ?"

ಎಲ್ಲಮ್ಮ ಸಿಟ್ಟಾದಳು. ಆ ಸಿಟ್ಟು ಅವಳ ಸೌಂದರ್ಯವನ್ನು ಇನ್ನೂ ಹೆಚ್ಚಿಸಿತು. ಝರಿಯು ಜಲಪಾತವಾದ ಹಾಗೆ! "ಕರುಳೂ ಇಲ್ಲ;

'ಹೊಯಿಸಳ' ಎಂಬ ಗುಪ್ತ ನಾಮದಿಂದ ಬರೆಯುತ್ತಿದ್ದ ಅರ್ಗನ್ ಲಕ್ಷ್ಮಣರಾಯರು ಕನ್ನಡದ ಅತಿ ಶ್ರೇಷ್ಠ ಮಕ್ಕಳ ಸಾಹಿತ್ಯ ನಿರ್ಮಾಪಕರಲ್ಲೊಬ್ಬರಾಗಿದ್ದರು. ಶಾಂತಿನಿಕೇತನದ ವಿದ್ಯಾರ್ಥಿಗಳಾಗಿದ್ದ ಅವರ ಈ ಕಥೆ ಕನ್ನಡದ ಸುಂದರ ಕಥೆಗಳಲ್ಲೊಂದಾಗಿದೆ.

ಎದೆಯೂ ಇಲ್ಲ. ನೀವು ಇಂಥ ಸತ್ತ ಸಿಂಹಗಳನ್ನೆಲ್ಲ ತಂದಿಟ್ಟು—ನಿಮ್ಮ ಕೋಣೆಯ ಸೌಂದರ್ಯವನ್ನೆಲ್ಲ ಕೊಂದೇಬಿಟ್ಟಿದ್ದೀರಿ. ಇಷ್ಟಕ್ಕೆಲ್ಲ ಹೆದರಲೇಕೆ?" ರಾಣೋಜಿ: "ಹೌದೌದು! ನೀನೀಗ ನೋಡು, ಅಂಜಿಲ್ಲ. ನಿನ್ನ ಮೈ ನಡುಗಲಿಲ್ಲ. ಕಣ್ಣುಗಳಲ್ಲಿ ನೀರೂ ಸಹ ತುಂಬಿಲ್ಲ. ಪಾಪ! ಆ ಸಿಂಹವೇ ತಾನೆ, ನಿನ್ನ ಸೋಂಕಿಗೆ ಸತ್ತು ಒಣಗಿ ಚರ್ಮವಾಗಿ ಹೋಗಿಬಿಟ್ಟಿದೆ" ಎಲ್ಲಮ್ಮನೇನೂ ಹೇಳಲಿಲ್ಲ. ಗೇರುಸೊಪ್ಪೆ ಜಲಪಾತದ ಚಿತ್ರವೊಂದನ್ನು ನೋಡುತ ನಿಂತಳು.

ಮತ್ತೆ ರಾಣೋಜಿಯೇ ಆಕೆಯ ಹತ್ತಿರಕ್ಕೆ ನಡೆದನು. "ಬಾ ಹೆಣ್ಣೆ! ನನ್ನ ಪ್ರಯತ್ನವೆಲ್ಲ ವ್ಯರ್ಥವಾಯಿತು. ಹೆಂಗುಸಲ್ಲವೆ ನೀನು? ವೀಣೆ ಹಿಡಿಯುವುದೇ ಹೆಚ್ಚಿನ ಕೆಲಸ ನಿನ್ನದು. ಬಾರಿಸು ನಿನ್ನ ವೀಣೆ. ಭಯ, ಭ್ರಾಂತಿ ಹೋಗಲಿ. ಸೆರಗು ಹೊದ್ದಿಸಲಾದರೂ ಹತ್ತಿರ ಬರಬಹುದೇ ರಾಣೀ ಸಾಹೇಬರೇ! ಚಂಚು! ಇವರಿಗೆ ಸಂಗೀತ ಮಂದಿರದ ದಾರಿ ತೋರಿಸು."

ಎಲ್ಲಮ್ಮ ಕಸರಿಕೊಂಡು ಹಿಂತಿರುಗಿದಳು. "ಸಂಗೀತಮಂದಿರವಂತೆ, ನಾಟ್ಯಶಾಲೆ ಯಾಕಾಗಬಾರದು! ಮೃತ್ಯುವಿಗೆ! ನೆಟ್ಟಗೊಂದು ಅಡುಗೆ ಮನೆಯಿಲ್ಲ ನನ್ನ ಭಾಗ್ಯಕ್ಕೆ ಈ ಕಾಡಲ್ಲಿ! ನಮ್ಮ ದೇಶದ ಗೊಂಡಾರಣ್ಯವೇ ವಾಸಿ. ದೇಶವಲ್ಲದ ದೇಶ! ಕಾಡಲ್ಲದ ಕಾಡು. ಇಂಥಾ ಬಳಿಗೆ ಹೊತ್ತು ತಂದಿದ್ದೀರಿ ನನ್ನ. ಸೀತಮ್ಮನವರಿಗಾದರೂ ಇಷ್ಟು ಕಷ್ಟವಿತ್ತೋ ಇಲ್ಲವೋ ಆ ಕಾಡಲ್ಲಿ! ಆ ಲಂಕೆಯಲ್ಲಿ! ಊಳಿಗಕ್ಕೆ ಈ ನಿಗ್ರೊ ರಾಕ್ಷಸರು. ನರಭಕ್ಷಕರು! ಈ ನನ್ನ ಬಾಳಿನ ಬಳಗಕ್ಕೆ ಪೀತಾಂಬರದ ಸಿಂಗವ್ವ, ಬೇಂಗಟೇ ಬೇತಾಳ ಜಿರಾಫೆ, ಕೋಡುಮುಸುಡಿ ಎಮ್ಮೆ. ಓಹೋಹೋ ಏನೊಂತ ಕೊಚ್ಚಿಕೊಳ್ಳುವಿರೀಂದ್ರೇ! ನಿಮ್ಮ ಹೆಮ್ಮೆ ಹಲಸಿನ ಕಾಯ!"

ಇಷ್ಟೆಂದ ಮೇಲೆ ಸಹ ಕೋಪ ಮಾಡದಿದ್ದರೆ ಅವನೆಂಥಾ ಗಂಡಸು! ರಾಣೋಜಿಗೆ ತನ್ನ ದೇಶದ ನೆನಪು ಬಂತು. ಕಿಟಕಿಯಿಂದಾಚೆ ನೋಡುತ್ತ ನಿಂತ. ಹೇಳಿದ. "ನಿನ್ನ ಉಡಿಗೆ ತೊಡಿಗೆಯ ಅತ್ಯಾಶೆಗಾಗಿಯೇ ಇಲ್ಲಿಗೆ ಬಂದದ್ದು, ಈ ಆಫ್ರಿಕಕ್ಕೆ. ನಿನ್ನ ರತ್ನದ ಕಂಠಿ, ನಿನ್ನ ಬೆಡಗಿನ ಸೀರೆ—ಆ ನಿನ್ನ ಬೆಳ್ಳಿ ಬಂಗಾರವೆಲ್ಲ ಬರುತ್ತಿತ್ತೆ ನಿನ್ನ ದೇಶದಲ್ಲಿದ್ದಿದ್ದರೆ? ಇಂಡಿಯದಲ್ಲಿ? ಕನ್ನಡ ನಾಡಿನಲ್ಲಿ! ಅದೂ ಮೈಸೂರಲ್ಲಿ! ಆ ನೂಕು ನುಗ್ಗಲಲ್ಲಿ! ಆ ಬಡತನದಲ್ಲಿ! ನಡಿ, ವೀಣೆ ಬಾರಿಸುತ್ತಾ ಕುಳಿತಿರು—ಊಟದ ಹೊತ್ತಿಗೆ ನಾನೊಂದಿಷ್ಟು ಅಡ್ಡಾಡಿ ಬರುವೆನೆ"ಂದು ಕೈಲಿ ಬಂದೂಕು ಹಿಡಿದು ಹೊರಗೆ ಹೊರಟೇಬಿಟ್ಟನು.

ಮಧ್ಯ ಆಫ್ರಿಕದ ಕಾಡು! ಕಾಡಿನ ನಡುವೆ ರಾಣೋಜಿಯ ಮರಮಟ್ಟುಗಳ ಬಂಗಲೆ. ಸುತ್ತಣ ಕಾಡು ಕತ್ತರಿಸಿ ಆರು ತಿಂಗಳಾಗಿಲ್ಲ. ಈಗಾಗಲೇ ಬಂಗಲೆಯನ್ನು ಬಳಸಿ ಬಂದಿದೆ ಕಾಡುಪೊದೆ. ಸ್ವಲ್ಪ ದೂರ ಹೋದ ರಾಣೋಜಿಯು ಒಂದು ಮರವನ್ನು ಹತ್ತಿ ಕುಳಿತುಕೊಂಡನು. ಇತ್ತ ಜೇಡನೊಂದು ಪುಟ್ಟ ಹಕ್ಕಿಯನ್ನೇ ಹಿಡಿದು ಹೀರುತಲಿದೆ ರಕ್ತ. ಅತ್ತ ಕೋತಿಯೊಂದು ಬಾಲವನ್ನು ದೊಡ್ಡ ಬಳ್ಳಿಯೊಂದಕ್ಕೆ ಸುತ್ತಿ ಜೋಕಾಲೆಯಾಡುತಲಿದೆ. ಅದೋ ಅಲ್ಲಿ ನೀರಿನ ಬಳಿ ಪಟ್ಟೇಕತ್ತೆಗಳು ಹಿಂಡುಹಿಂಡಾಗಿ ಮೇಯುತಲಿವೆ. ಕಣ್ಣಿಗೆ ದುರ್ಬೀನು ಹಿಡಿದು ನೋಡಿದನು—ದೂರದ ಬೆಟ್ಟ—ಅದರ ಇಳಿಜಾರಲ್ಲಿ ನಾಲ್ಕೈದು ಖಡ್ಗಮೃಗಗಳು ಮೇಯುತಲಿವೆ. ಅದರಾಚೆ—ಕೆಸರು—ಅಲ್ಲಿ ನೀರ್ಗುದುರೆಗಳು ಹಾಯಾಗಿ ಮಲಗಿವೆ. ಇತ್ತ ದಕ್ಷಿಣ ದಿಕ್ಕಿನಲ್ಲಿದೆ ಆ ನಗರ. ಅದಕ್ಕೆ ನೀರಿನ ವ್ಯವಸ್ಥೆ ಮಾಡಲಿಕ್ಕಾಗಿಯೇ ರಾಣೋಜಿಯು ಬಂದುದು. ಇಂಜನಿಯರಾಗಿ ಇಂಡಿಯದಲ್ಲಿ ಇರಲೊಲ್ಲದೆ ಆಫ್ರಿಕಕ್ಕೆ ಬಂದಿದ್ದನು. ಕೆನಿಯಕ್ಕೆ ಬಂದು, ಅಲ್ಲಿಂದ ಲಕ್ಷ್ಮಿಯ ಹೆಜ್ಜೆಯ ಜಾಡನ್ನು ಹಿಡಿದು ಇಲ್ಲಿಗೆ

ಬಂದಿದ್ದನು. ಈಗಾಗಲೇ ಒಂದೆರಡು ಭಾರಿಯ ಕೆಲಸಗಳನ್ನು ಮಾಡಿ ಹಣವಂತನಾಗಿರುವನು. ಬೇಟೆಯಲ್ಲಿ ಸಿಕ್ಕಿದ ಮೃಗಗಳ ಚರ್ಮಗಳಿಂದಲೇ ಬಹಳ ಬಂಗಾರ ಬಂದಿದೆ. ಇಲ್ಲಿಯ ಜೀವನವಾಗಲೀ, ಕೆಲಸವಾಗಲೀ ಕಷ್ಟತರವಾಗಿರಲಿಲ್ಲ ರಾಣೋಜಿಗೆ. ಕಷ್ಟವಾಗಿ ತೋರಿದ್ದು ಹೆಂಡತಿಯ ಭಯನಿವಾರಣೆ. ಅವಳು ಧೈರ್ಯ ಕಲಿತು ಕಾಡಿನಲ್ಲಿ ಓರ್ವಳೇ ಇರುವಳಾದರೆ, ಅನುಕೂಲ ಹೆಚ್ಚು. ಇನ್ನು ಮುಂದಿನ ಠಾವಾದರೋ ಸಿಂಹ ಹೆಬ್ಬಾವುಗಳ ಬೀಡು. ಎಲ್ಲಮ್ಮ ಧೈರ್ಯ ಕಲಿಯದೆಲೆ ಏನೇನೂ ಆಗುವಂತಿಲ್ಲ. ಅದಕ್ಕಾಗಿ ಎಲ್ಲಾ ಜಾತಿಯ ಮೃಗಗಳ ಚರ್ಮಗಳನ್ನೂ ತಂದು ತನ್ನ ಕೋಣೆಯಲ್ಲಿ ಅಲಂಕಾರವಾಗಿ ಹರಡಿರುವನು. ಇಷ್ಟು ದಿನಗಳಾದರೂ ಕೂಡ ಸತ್ತ ಮೃಗಗಳನ್ನು ಕಣ್ಣೆತ್ತಿ ನೋಡುವ ಧೈರ್ಯ ಸಹಾ ಎಲ್ಲಮ್ಮನಿಗೆ ಬರಲಿಲ್ಲ. ಮುಂದಿನ್ನೇನು ಉಪಾಯ ಹೂಡಲೆಂದು ಯೋಚಿಸುತ್ತಿರುವಲ್ಲಿ- ಊಟದ ತುತ್ತೂರಿ ಕೇಳಿಬಂತು.

೨

ಉರಿ ಬಿಸಿಲಿನ ಹಗಲೊಂದು, ಉದ್ವೇಗದ ರಾತ್ರಿಯೊಂದು ಕಳೆದವು. ಭಾಮಿನಿಗೆ ಭಯ ನಿವಾರಣೆಯಾಗಲಿಲ್ಲವೆಂದು ಯೋಚನೆಯು ಅತ್ಯುತ್ಕಟವಾಯಿತು ರಾಣೋಜಿಗೆ. ಇನ್ನೂ ಮುಂದೆ ಭಯಂಕರವಾದ ಕಾನನಗಳಿಗೆ ಹೋಗಬೇಕು.

"ಎಲ್ಲಮ್ಮ ನೋಡಲಿಕ್ಕೆ ಬಲು ಸೌಮ್ಯ— ಸುಂದರ, ಮಂದರ— ಮಧುರ, ಕೋಮಲ— ಯಾರ ಬಾಯಿಗಾದರೂ ತುತ್ತಾದಾಳು. ಇಲ್ಲಿ ಯಾಕಾದರೂ ಈಕೆಯನ್ನು ಕರತಂದೆನೊ, ಬಂದೂಕು ಹಿಡಿಯಲಿಕ್ಕೆ ಕೂಡ ಇವಳಿಗೆ ಬರಲಿಲ್ಲವಲ್ಲ. ಮುಂದೇನು ಮಾಡಲಿ? ಕೆನಿಯ ದೇಶದಲ್ಲಿರುವ ನೆಂಟರಲ್ಲಿಗಾದರೂ ಹೋಗೆಂದರೆ ಹೋಗಳಲ್ಲ. ಆಗಲಿ, ಇನ್ನೂ ಮುನ್ನೂ ಪ್ರಯತ್ನಮಾಡಿ ಸತ್ತ ಪ್ರಾಣಿಗಳನ್ನು ತಂದು ಮುಂದಿಟ್ಟು ಆಕೆಗೆ ಭಯ ಹೋಗುವುದೇನೋ ನೋಡುವೆನು. ಮನುಷ್ಯನು ತನ್ನ ಎಚ್ಚರದಲ್ಲಿದ್ದರೆ ದುಷ್ಟ ಜಂತುಗಳೇನು ಮಾಡಿಯಾವು? ಅವುಗಳಿಗೆ ಯಥಾಪ್ರಕೃತಿ ವಿಧಿಯಾದ ಒಂದೊಂದೇ ಮಾರ್ಗಗಳು. ನಮಗಾದರೋ ಬುದ್ಧಿವಿಕಾಸದ ಹಲವು ಮಾರ್ಗಗಳು. ಜೀವಿಗಳು ಆತ್ಮರಕ್ಷಣೆಗೆ ದುಷ್ಟತನ ತೋರಿಸುವವು- ಮನುಷ್ಯ ಜೀವಿಯು ತನ್ನ ಹಿರೇತನವನ್ನು ತೋರಿಸಿಕೊಳ್ಳಬೇಕು. ಈ ಯುದ್ಧದಲ್ಲಿ ಆದಿಯಿಂದಲೂ ಮನುಷ್ಯನೇ ಜಯಿಸಿ ನಿಂತು ಬದುಕಿ ಬಂದವನು. ಎಲ್ಲಮ್ಮನ ಭಯನಿವಾರಣೆಗೆ ಉಪಾಯವಿದ್ದೇ ಇದೆ. ಸತ್ತ ಸಿಂಹಗಳನ್ನೂ ಹೆಬ್ಬಾವುಗಳನ್ನೂ ತಂದು ಕೋಣೆಯಲ್ಲಿ ಜೋಡಿಸಿ ಇಡಬೇಕು. ಸತ್ತವನ್ನು ಮುಟ್ಟಿ ಅಭ್ಯಾಸವಾದರೆ ಸಾಕು. ಆಕೆಗೆ ಆ ಕೋಣೆಯಲ್ಲಿರುವಷ್ಟು ಧೈರ್ಯ ಬಂದರೆ ಸಾಕು. ಎಲ್ಲಿಯಾದರೂ ಹೋಗಿ ಬರುವವರೆಗೆ ಹೆಂಡತಿ ಬದುಕಿರುವಳೆಂದು ಧೈರ್ಯದಿಂದಿರಬಹುದು. ಆಳುಗಳು ಯಾರೂ ಆ ಕೋಣೆಗೆ ಬರುವುದಿಲ್ಲ. ಬಲು ಹೆದರುವರು. ಕಾಡಿನಲ್ಲಿ ಆರ್ಭಟಿಸುವ ಮೃಗಗಳಿಗೆ ಅವರು ಹೆದರುವುದಿಲ್ಲ. ಆದರೆ ಈ ನನ್ನ ಸತ್ತ ಪ್ರಾಣಿಗಳನ್ನು ಕಂಡರೆ ಬಲು ಭಯಪಡುವರು. ನನಗೆ ಅದ್ಭುತವಾದ ಮಂತ್ರ ಶಕ್ತಿಯಿದೆಯೆಂದು ಅವರು ಭಾವಿಸಿರುವರು. ಏನು ಮಾಡಿದರೂ ಒಬ್ಬೊಬ್ಬರೇ ನನ್ನ ಕೋಣೆಗೆ ಇಲ್ಲಿಯವರಾರೂ ಬರುವುದಿಲ್ಲ. ಈ ಭಾಗದಲ್ಲಿ ಎಲ್ಲಮ್ಮನಿಗೆ ಕ್ಷೇಮ. ನಾನಿಲ್ಲದಾಗ ಆಕೆ ಅಲ್ಲಿರುವುದಾದರೆ- ಯಾವುದೊಂದು ಭಯವೂ ಇರದು. ಸತ್ತ ಮೃಗಗಳ ಸಂಗಡವಾದರೂ ಆ ಪುಣ್ಯಾದಿಗಿತ್ತಿ ಇರುವುದಾದರೆ ಧೈರ್ಯದಿಂದ ಸುತ್ತುತ್ತ ಹೋಗಬಹುದು" ಎಂದು ಮುಂತಾಗಿ ಅಲೆಅಲೆಯಾಗಿ ಆಲೋಚನೆಗಳು ಬಂದವು.

ರಾತ್ರಿ ಕಳೆಯಿತು; ರಾಣೋಜಿಯ ಮುಖ ಕಳೆಗೂಡಿತು. ನಗುನಗುತ ಎಲ್ಲಮ್ಮನನ್ನು

ಎಬ್ಬಿಸಿ 'ಕೋಕೋ' ಮಾಡಹೇಳಿದನು. ಹೊರಗೆ ಹೋಗಿ ನೀಗ್ರೋ ಆಳುಗಳನ್ನೆಲ್ಲ ಸಿದ್ಧವಾಗಿರಹೇಳಿದನು. ಗಿಣಿಯ ಬಳಿ ನಿಂತು ಮಾತಾಡಿಸಿದನು. ಉಷ್ಟ್ರಪಕ್ಷಿಯನ್ನು ಎತ್ತಿ ನಿಲ್ಲಿಸಿದನು— ಅದು ಕೊಕ್ಕು ಬಿಚ್ಚಲು ಅದರ ಬಾಯಿಗೆ ಒಂದು ಪೇಪರ್‌ಮಿಂಟು ಹಾಕಿದನು. ಈ ವೇಳೆಗೆ ನಾಯಿಗಳು ಮೋರೆ ನೋಡಿ ನೆಗೆಯಲಾರಂಭಿಸಿದವು. ಅವುಗಳನ್ನು ಬಿಚ್ಚಿ ಬಿಟ್ಟು ಬೆನ್ನು ತಟ್ಟಿ ಕಳಿಸುವ ಹೊತ್ತಿಗೆ ಚಿಂಪಾಂಸೀ ಹ್ಯಾಟುಗಾಲು ಹಾಕುತ್ತ ಅವನ ಬಳಿಗೆ ಬಂದು ಕೈಕೊಟ್ಟು ನಡುವೇರಿತು. ಕಡೆಗೆ ಬೇರೆ ಮೃಗ ಶಾಬಕಗಳನ್ನು ಮಾತನಾಡಿಸಲು ಕೈಸಾಲೆಗೆ ಹೋದನು. ಅಂತು ಆ ದಿನ ಒಂದು ಬಗೆಯ ಆನಂದದಿಂದ ಕಾಡು ತಿರುಗಿ ಬರಲು ಹೊರಟನು ರಾಣೋಜಿ ರಾಯ.

ಬಹಳ ಬಿಸಿಲಾಗುತ್ತ ಬಂದಿತು. ಕಾಡಿನಿಂದ ಹವೆಯೇರಲು ಆರಂಭವಾಯಿತು. ಕೊಳೆತ ಸೊಪ್ಪುಸದೆಯ ವಾಸನೆ ಅಲ್ಲಲ್ಲಿ ಎದ್ದಿತು. ಎಷ್ಟೋ ಕಡೆ ಆಕಾಶವೂ ಕಾಣದು, ನೆಲವೂ ಕಾಣದು. ಮೇಲೆ ಸೊಪ್ಪು ಹೂ ಹಣ್ಣುಗಳ ಹಂದರ; ಕೆಳಗೆ ಎಳೆ ಬಳ್ಳಿಗಳ ಪಂಜರ. ಹೂವಿಗೊಂದು ಚಿಟ್ಟೆ, ಎಲೆಗೊಂದು ಇರುವೆ, ಕೊಂಬೆಗೊಂದು ಕೋತಿ, ರೆಂಬೆಗೊಂದು ಪಕ್ಷಿ- ಝೇಂ ಎಂದು ಶಬ್ದ. ಕಾಲಿಟ್ಟು ತೆಗೆದರೆ ಸೊಳ್ಳೆಗಳು, ನೊಣಗಳು ಎದ್ದು ಹಾರುವವು. ಮರಗಳ ಮೇಲೆ ಅಲ್ಲೊಂದಿಲ್ಲೊಂದು ಕೊಡಲಿಯ ಗುರು- ತು ಮಾಡಿಕೊಂಡು ಹೊರಟನು. ಬರಬರುತ ಕಾಡು ದಟ್ಟವಾಯಿತು. ಯಾವುದು ಬಳ್ಳಿಯೋ ಮತ್ತಾವುದು ಹೆಬ್ಬಾವೋ ತಿಳಿಯಲು ಕಷ್ಟ. ಹಸುರು ಮುಸುಕಿದ ಪಂಕಗಳು ಗಟ್ಟಿ ನೆಲದ ಭ್ರಾಂತಿ ಹುಟ್ಟಿಸುವವು. ಸೂರ್ಯನು ನೆತ್ತಿಯ ಮೇಲೆ ಬಂದರೂ ಕೂಡ ಈ ಆಫ್ರಿಕದ ಕಾಡಿನಲ್ಲಿ ಗಾಢಾಂಧಕಾರದ ಭಯಂಕರ ಕನಸು.

ರಾಣೋಜಿಯು ಹಿಂತಿರುಗಿ ಕಣ್ಣಮೇಲೆ ಕಣ್ಣು ಪಹರೆ ಇಟ್ಟು ನಡೆದು ಬಂದನು. ಮನೆಯು ಹತ್ತಿರ ಬಂದಿತು. ದೂರದಲ್ಲಿ ಅತ್ತ ಕಡೆ ಏನೋ ಕಂಡನು. ನಿಂತು ನೋಡಿದನು. ಏನೋ ಯೋಚನೆ ಹೊಳೆಯಿತು. ಮೊಗದಲ್ಲಿ ನಗೆ ಕಂಡಿತು. ಅರ್ಧ ಘಂಟೆಯ ಕಾಲ ನಡೆದಿರಬಹುದು. ಅವನ ಗಮನಕ್ಕೆ ನಡಿಗೆಯೆಂದು ಹೇಳುವುದು ತಾನೇ ಹೇಗೆ? ಯಾಕೆಂದರೆ?— ಹತ್ತಿ, ಇಳಿದು, ಹಾರಿ, ಜಾರಿ ದೂರ ಸಾಗಬೇಕಾಗಿತ್ತು. ಅಲ್ಲೊಂದು ಮಾರು ದೂರದಲ್ಲಿ ಎರಡೂವರೆ ಮಾರು ಉದ್ದದ ಹೆಬ್ಬಾವಿತ್ತು. ಮರದ ಕೊಂಬೆಗೆ ಬಾಲ ಸುತ್ತಿಕೊಂಡು ನೇತಾಡುತ್ತಲಿತ್ತು. ಒಂದೊಂದು ಬಾರಿ ವಲಿದಾಡಿ ಬಾಯಿ ಕಳೆಯುವುದು. ನಾಲಿಗೆ ಸುಗಿಯುವುದು. ರಾಣೋಜಿಯು ನಿಂತನು, ನೋಡಿದನು. ಹೊಂಚು ಹಾಕಿದನು. ತೊಡೆಯ ಗಾತ್ರಕ್ಕಿತ್ತು. ಮೈಮೇಲೆ ಹಳದಿ ಬಣ್ಣ. ಬೆನ್ನ ಮೇಲೆ ನೀಲಿಯ ಪದ್ಮಗಳು. ಆ ಪದ್ಮದಳಗಳನ್ನು ಕೂಡಿಕೊಂಡು ಹಬ್ಬಿರುವ ಬಂಗಾರದ ಸರಿಗೆಯ ಬಳ್ಳಿ. ನೋಡಿ ಹಲವು ಬಗೆಯ ಆನಂದದ ಯೋಚನೆಗಳು ಅಂಕುರಿಸಿದವು. ಹತ್ತಿರದ ಮರಕ್ಕೆ ಒರಗಿದನು. ಕೋವಿಯನ್ನು ಹಿಡಿದೆತ್ತಿ ಗುರಿಯಿಟ್ಟನು. ತಲೆಯ ಹಿಂಭಾಗಕ್ಕೆ ಗಂಟಲಬಳಿಗೆ ಹೊಡೆದುಬಿಟ್ಟನು. ಆ ಶಬ್ದವು ನೂರು ಬಾರಿ ಪ್ರತಿಧ್ವನಿತವಾಗಿ ಕಾಡೆಲ್ಲ ನಡುಗಿತು. ಇತ್ತ ಸರ್ಪವು ಸುರುಳಿ ಸುರುಳಿಯಾಗಿ, ಮುರಳಿ ಮುರಳೆಯಾಗಿ, ತಿರುವಿ ತಿರುವಿ, ಏರಿ ಇಳಿದು ಕೆಳಗೆ ಬಿದ್ದಿತು. "ಹೆಂಡತಿಯ ಭಯ ಬಿಡಿಸಲು ಇದು ಸಹಕಾರಿಯಾಗಬಹುದು ಆಳುಗಳಿಗೆ ಭಯ ಹೆಚ್ಚಿಸಲು ಮನೆಯಲ್ಲಿ ಇಡಬಹುದು. ಕಡೆಗೆ ಬೇಕಾದರೆ ಚರ್ಮವನ್ನು ಮಾರಬಹುದು. ಅಥವಾ ಇಂಡಿಯದ- ಲ್ಲಿರುವ ಸ್ನೇಹಿತರಿಗೆ ಕಾಣಿಕೆಯಾಗಿ ಕಳುಹಬಹುದು." ಹೀಗೆಂದು ಭಾವಿಸುವಷ್ಟರಲ್ಲಿ ಒರಗಿದ್ದ ಮರವು ಪಕ್ಕಕ್ಕೆ ಸರಿದಹಾಗಾಯಿತು. ತಿರುಗಿ ನೋಡಿ ಗಾಬರಿಯಾದನು. ಆ ಮರಕ್ಕೆ

+

ಸುತ್ತಿಕೊಂಡಿದ್ದ ಇನ್ನೊಂದು ಹೆಬ್ಬಾವಿನ ಮೇಲೆ ಭಾರ ಬಿಟ್ಟು ಒರಗಿ ನಿಂತಿದ್ದನು. ಹಿಂದೆ ಮುಂದೆ ತಿರುಗಿ ನೋಡಿದನು. ಸರ್ಪವು ಯಾವುದೋ ಪ್ರಾಣಿಯನ್ನು ನುಂಗಿ ಮರಕ್ಕೆ ಸುತ್ತಿಕೊಂಡಿದ್ದಿತು. ನಿದ್ದೆಯೋ ಏನೋ ಪಾಪ ! ಭೋಜನಾನಂತರ !

ಸೂರ್ಯನೇನೋ ನಡು ನೆತ್ತಿಯಲ್ಲಿ ನಿಂತಿದ್ದನು. ರಾಣೋಜಿಗೆ ಮನೆಯ ನೆನಪಾಯಿತು. ಸತ್ತ ಹಾವಿನ ಬಾಲವನ್ನು ಕೈಗೆ ಸುತ್ತಿಕೊಂಡು ಹೊರಟನು. ಮತ್ತೆ ನಿಂತನು. ನೆಲದ ಮೇಲೆ ಎಳೆದು ತಲೆಯು ಕೆಟ್ಟು ಹೋಗುವುದೆಂದು ಅದರ ಸುತ್ತ ಸೊಪ್ಪು ಸುತ್ತಿದನು—ಮತ್ತೆ ಹೊರಟನು. ಮನೆ ಸೇರುವ ಹೊತ್ತಿಗೆ ಹೊರಗೆ ಯಾರೂ ಇರಲಿಲ್ಲ. ಕಿಟಕಿಯ ಬಳಿಗೆ ಹೋದನು. ಹಾವಿನ ತಲೆಯನ್ನೆತ್ತಿ ಒಳಗೆಸೆದನು. ಕೋಣೆಯೊಳಕ್ಕೆ ಹೋಗಿ ಹಾವನ್ನು ಎಳೆದುಕೊಂಡನು. ಆ ಚಿಕ್ಕ ಕೋಣೆಯಲ್ಲಿ ಆ ಭಾರಿಯ ಘಟ ಸರ್ಪವು ಇಲ್ಲಿ ಹತ್ತಿ, ಅಲ್ಲಿ ಇಳಿದು ಕೆಳಗೆ ಸುರುಳಿಯಾಗಿ ಮೇಲೆ ಬಿಲ್ಲಾಗಿ, ಸೋಫದ ಮೇಲೆ ಹೊಟ್ಟೆ ಇಟ್ಟು, ಪುಟ್ಟ ಮೇಜಿನ ಮೇಲೆ ವಿವೇಕಾನಂದರ ಚಿತ್ರದ ಮುಂದೆ ಹಾಸಿ, ಗಾಂಧಿಯವರ ಪ್ರತಿಮೆಯ ಹಿಂದಾಗಿ, ಪುಸ್ತಕ ಬೀರೂ ಬಳಿ ಬಂದು, ಮೇಲೇರಿ, ಕನ್ನಡ ಪುಸ್ತಕಗಳು ಇರುವ ಬಳಿ ಬಂದು **"ಯಮುನ ಸೋಲಿ"** ನ ಬಳಿ ಬಾಯಿ ತೆರೆದುಕೊಂಡಿತ್ತು. ಹೀಗೆಲ್ಲ ಅಲಂಕಾರ ಮಾಡಿ ಅಲ್ಲಿ ನಿಂತು ಇಲ್ಲಿ ನಿಂತು, ಕಿಟಕಿಯ ಪರದೆ ತುಸವಾಗಿ ಎಳೆದು--ಆನಂದದ ಚಿತ್ರವನ್ನು ನೋಡಿ ಹಿಗ್ಗಿ ಬಾಗಿಲೆಳೆದುಕೊಂಡು ಹೊರಟನು. ಇಂಥಾ ಸುಂದರವಾದ ಹಾವು ಎಲ್ಲಿಯೂ ಇದ್ದಿಲ್ಲ—ಮತ್ತ್ಯಾರೋ ಇದ್ದರೂ ಹೊಡೆದು ತರುವಂಥವರು ಯಾರಿದ್ದಾರೆ! ತಂದರೂ ಹೀಗೆಲ್ಲ ಅಲಂಕಾರವಾಗಿಟ್ಟು ತನ್ನ ಅರ್ಧಾಂಗಿಗೆ ತೋರಿಸಿ ನಲಿಯುವ ಭಾಗ್ಯ ಎಷ್ಟು ಮಂದಿಗೆ ಒದಗೀತು!

ಊಟವಾಯಿತು. ಮಾತು ಕಥೆಯಲ್ಲಿ ಇಂಡಿಯ ಆಫ್ರಿಕಗಳು ಒಂದಕ್ಕೊಂದು ಹೆಣೆದುಕೊಂಡುಬಿಟ್ಟವು.

ಪಂಜರದ ಮೃಗ ಪಕ್ಷಿಗಳ ಸಂಗಡ ಮಾತನಾಡಿದರು. ಉಷ್ಟ್ರಪಕ್ಷಿಯು ಬಂದು ಎಲ್ಲಮ್ಮನ ತುರುಬಿನ ಹೂವನ್ನು ಕಿತ್ತುಕಿತ್ತು ನುಂಗಿತು. ಕಾಡು ಮನುಷ್ಯ ಚಿಂಪಾಂಜೀ ಬಂದು ಹಕ್ಕಿಯನ್ನು ಓಡಿಸಿ ತಾನು ನಿಂತಿತು ಅವರಿಬ್ಬರ ನಡುವೆ. ಅವರಿಬ್ಬರ ಕೈಗಳನ್ನೂ ತೆಗೆದು ತನ್ನ ಒರಟು ಮುಖಕ್ಕೆ ಒತ್ತಿಕೊಂಡಿತು. ಅವರಿಬ್ಬರೂ ಕುರ್ಚಿಗಳ ಮೇಲೆ ಕುಳಿತುಕೊಂಡರು. ಕಾಡುಮನುಷ್ಯ ಸಡಗರದಿಂದ ಅತ್ತಿತ್ತ ಓಡಾಡಹತ್ತಿತು. ರಾಣೋಜಿಗೆ ಕೋಣೆಯ ನೆನಪು ಬಂತು. ಕಳಿಸಿ ನೋಡೋಣ ಹೆಂಡತಿಯನ್ನು ಆ ಬಳಿಗೆ ಎಂದುಕೊಂಡನು. "ಅದೇನು ಹೊಸ ಯೋಚನೆ" ಎಂದು ಇಂಗಿತವರಿತು ಆಕೆ ಕೇಳಿದಳು. "ಏನೂ ಇಲ್ಲ! ನಿನ್ನ ದನಿಯಲ್ಲಿ ಕನ್ನಡದ ಮೇಲಿನ ಆ ಹೊಸ ಹಾಡನ್ನು ಕೇಳಬೇಕೆನಿಸಹತ್ತಿದೆ— 'ಮನವ ತಣಿಸುವ ಮೋಹನ'—ಹೇಳು, ಹೂ!" ಈ ಮಾತಿಗೆ ಎಲ್ಲಮ್ಮ "ನನಗೇನು ಅನ್ನಿಸಿದೆ ಬಲ್ಲಿರಾ? ನಿಮ್ಮ ನಾಲಿಗೆಯಲ್ಲಿ ಒಂದಿಷ್ಟು ಕನ್ನಡ ಓದಿಸಿ ಕೇಳಬೇಕೆಂದು." ರಾಣೋಜಿಗೆ ಅನುಕೂಲವಾಯಿತು— "ಆ ಮೇಲೆ ಹಾಡು ಹೇಳುವಿಯಂತೆ! ನಾನೇ ಮೊದಲು ಓದಿಬಿಡುತ್ತೇನೆ. ತೆಗೆದುಕೊಂಡು ಬಾ. ಹಾಗಾದರೆ ನಮ್ಮ ನಲವಿನ ಮಲೆನಾಡಿನಾತ ಬರೆದ ಪುಸ್ತಕ. ನಿನ್ನಂಥವಳು ಓದಬೇಕಾದ್ದು. ಹೊಸದಾಗಿ ಬಂದಿದೆ— **'ಯಮುನ ಸೋಲು'**— ನಾನೇ ಓದಿಹೇಳುವೆ."

"ತಪಸ್ವಿನಿ!— ಬೇಡವೊ !" ಎಂದುಕೊಂಡು ಎಲ್ಲಮ್ಮ ಕೋಣೆಯ ಕಡೆ ನಡೆದಳು. ಜಡೆ ತೂಗಾಡಿತು. ಸೆರಗು ಹಾರಿಹಾರಿತು. ಕೈಬಳೆಗಳು ಥಳಥಳಿಸಿದವು. ಕಾಲುಂಗುರಗಳು ಮಾತಾಡಿದವು. ರಾಣೋಜಿಯು ಆತುರದಿಂದ

ಆ ಕಡೆಯೇ ನೋಡುತ್ತ ಕುಳಿತನು. ಮರಿಯಾದಳು ಎಲ್ಲಮ್ಮ. ರಾಣೋಜಿಯು ಆಲೈಸುತ್ತ ಕುಳಿತ. ಬಾಗಿಲು ತೆರೆದ ಶಬ್ದ. ಇಷ್ಟ ಹೊತ್ತಿಗೆ ಒಳಕ್ಕೆ ಹೋಗಿರಬಹುದು. ಆಲೈಸಿದ ರಾಣೋಜಿ. ಇನ್ನೇನು ಕಿರುಚಿಕೊಳ್ಳುವಳು. ಆಗ ಕೂಗಿ ಹೇಳಬೇಕು-" ಸತ್ತ ಹಾವೆಂದು"- ಆ ಮೇಲೆ ಅವಳ ಪುಕ್ಕಲತನಕ್ಕೆ ಚಪ್ಪಾಳೆ ತಟ್ಟಿ ನಗಬೇಕು!

ಇಷ್ಟು ಹೊತ್ತಿಗೆ ಎಲ್ಲಮ್ಮ ಕಿರುಚಿಕೊಂಡಳು. ಕುಳಿತಲ್ಲಿಂದಲೇ ರಾಣೋಜಿ ಕೂಗಿದನು "ಸತ್ತ ಹಾವು ಕಣೇ ಅದು, ಹೆದರಬೇಡ. ಪುಸ್ತಕವನ್ನು ಬೇಗನೇ ತೆಗೆದುಕೊಂಡು ಬಂದುಬಿಡು" ಇನ್ನೊಮ್ಮೆ ಕೂಗು! ದನಿಯು ಕಠೋರವಾಗಿತ್ತು. ನೆಲದ ಒಡಲಿನಿಂದ ಬಂದಹಾಗಿತ್ತು. "ಸತ್ತ ಹಾವಿಗೆ ಹೆದರುವಿಯಾ! ಅಂಜುಬುರುಕಿ, ನಾನೇ ಬಂದೆ ಬಿಡುವೆ" ಹೀಗೆನ್ನುತ್ತ ಹೊರಟನು. ಮತ್ತೆ ಕೂಗು! ಈ ಬಾರಿ ಕುಗ್ಗಿದ ಕಂಠ. ಬಾಗಿಲ ಬಳಿ ಸೇರುವ ಹೊತ್ತಿಗೆ, ಇನ್ನೆರಡು ಮೂರು ಬಾರಿ ದೊಡ್ಡದಾಗಿ ನಿಟ್ಟುಸುರು ಬಿಟ್ಟ ಶಬ್ದ! ಈ ದಿನ ಬಹಳ ಅಂಜಿಬಿಟ್ಟಳೆಂದು ಎರಡು ಬಾಗಿಲೂ ತೆಗೆದನು. ಕಿಟಕಿಗಳನ್ನೆಲ್ಲಾ ತೆರೆದನು. ಹೆಂಡತಿಯ ಸುಳಿವಿಲ್ಲ. ಚಿಂಪಾಂಸೀ ಒಳಗೆ ಬಂತು. ರಾಣೋಜಿಯು ಚಂಚೂ ಕರೆದನು. ಉಳಿದ ಆಳುಗಳೆಲ್ಲರೂ ಓಡಿ ಬಂದರು. ಮೇಜಿನ ವಸ್ತ್ರ, ಸಿಂಹದ ತೊಗಲು, ಕರಡಿ ಚರ್ಮಗಳೆಲ್ಲವೂ ಸುರುಳಿ ಸಪ್ಪಟ್ಟೆಯಾಗಿದ್ದವು. ಅಲ್ಲಲ್ಲಿ ರಕ್ತ ಚುಮುಕಿಸಿದ ಹಾಗಿತ್ತು. ಎಲ್ಲಮ್ಮ ಹೊರಗೆ ಹೋಗಿಲ್ಲ! ಒಳಗಂತೂ ಕಾಣಲಿಲ್ಲ! ಕೂಗಿದನು. ಗಾಬರಿಯಾದನು. ಪುಸ್ತಕಗಳನ್ನೆಲ್ಲಾ ಕಿತ್ತಾಡಿದನು. ಬೀರುವನ್ನು ಉರುಳಿಸಿದನು. ಬುಡದಲ್ಲೇನೋ ಇತ್ತು. ಒಮ್ಮೆಲೆ ಹಾರಿ ಎಳೆದು ತೆಗೆದನು.... ಎಲ್ಲಮ್ಮನ ದೇಹ! ರಕ್ತಸಿಕ್ತವಾಗಿದ್ದಿತು. ತಲೆ ಯಾವುದೋ ಮುಖವಾವುದೋ ಕಾಣುವಂತಿರಲಿಲ್ಲ. ಗುರುತು ಕೂಡ ಅಳಿಸಿತ್ತು. ಅಂಥಾ ಅಂದವಾದ ಮೋರೆ ಅವಳದು. ಏನಾಗಿದ್ದೀತು!

ಕಾಡುಮನುಷ್ಯ ಏನನ್ನೋ ಹಿಡಿದೆಳೆದುಕೊಂಡುಬಂದಿತು. ಎಳೆಯಲಾರದು ಪಾಪ! ಚಂಚೂ ಸಹಾಯಕ್ಕೆ ಹೋದನು. ಬೆಳಕಲ್ಲಿ ನೋಡಿದರೆ ಎರಡು ಹೆಬ್ಬಾವುಗಳು! ಒಂದಕ್ಕೊಂದು ಹೊಸೆದುಕೊಂಡಿವೆ! ಒಂದಕ್ಕೆ ಜೀವವಿದೆ, ಇನ್ನೊಂದಕ್ಕೆ ಜೀವವಿಲ್ಲ. ಜೀವದ ಹಾವು ಸತ್ತ ಹಾವಿನ ಬಾಯೊಳಗೆ ತನ್ನ ಬಾಯಿಟ್ಟುಕೊಂಡಿದೆ! ಕಿತ್ತೆಳೆದರೂ ತೆಗೆಯಲೊಲ್ಲದು. ಅದೇನು ಪ್ರಣಯ! ಹಾವುಗಳಲ್ಲಿ ಕೂಡ! ಕೊಂದ ಹಾವಿನ ಹೆಂಡತಿಯೇ ಅದು! ಪ್ರಕೃತಿವೈಚಿತ್ರ್ಯ ಹೇಗಿದೆಯೋ ಬಲ್ಲವರಾರು! ಬಣ್ಣಿಸುವರಾರು! ಮನುಜರ ಪ್ರಣಯ ಬರಿಮಾತು. ಪಕ್ಷಿ ಪ್ರಾಣಿಗಳ ಪ್ರಣಯವೇ ಶ್ರೇಷ್ಠವೆನಿಸದೆ ನಿಮಗೆ!

ಈ ಕಥೆಯನ್ನು ಹೇಳಿದವನು ರಾಣೋಜಿರಾಯ! ನುಡಿನುಡಿಗಳನ್ನು ಕಣ್ಣೀರಲ್ಲಿ ನೆನೆನೆನೆಸಿ ನನ್ನ ಹೃದಯದಲ್ಲಿಟ್ಟನು. ಈಗ ನಮ್ಮ ನಾಡಿನಲ್ಲೇ ನೆಲೆಸಿರುವನು. ವಿದೇಶ ಗಮನ ದ್ರವ್ಯದಾಶೆಗೆ! ಮೃಗಚರ್ಮ ಸಂಪಾದನೆ ಭಯ ನಿವಾರಣೆಗೆ! ಆಫ್ರಿಕದಲ್ಲಿ! ಆಯಿತೇ ಭಯ ನಿವಾರಣೆ? ★

ಮಧುವನ

ಪ್ರಾತಿನಿಧಿಕ ಕಥಾ ಸಂಕಲನ

ಭಾವಚಿತ್ರಗಳು, ಕೃತಿ ವಿಮರ್ಶೆಗಳಿಂದ ಕೂಡಿದ ಅಪೂರ್ವಕೃತಿ.

ಬೆಲೆ : ರೂಪಾಯಿ ಮೂರು

ಕಿರಿಯರ ಪ್ರಪಂಚ, ಉಡುಪಿ

ನವಭಾರತ ಪುಸ್ತಕ ಭಾಂಡಾರ,

ಉಡುಪಿ

ಅರ್ಧ ಕಾಸು ಬೆಲೆಯ
ಆಯೋಡಿನ್ ನಿಮ್ಮ ಶರೀರವನ್ನು
ಸುಸ್ಥಿತಿಯಲ್ಲಿಡುತ್ತದೆ

ಆರೋಗ್ಯಕ್ಕೆ ಆಯೋಡಿನ್ ಅಗತ್ಯ

ಜಯಪ್ರಕಾಶ ಪಂಡಿತ

ಗಾಯಗಳ ಉಲ್ಬಣಾವಸ್ಥೆಯನ್ನು ದೂರ ಮಾಡುವ ಟಿಂಕ್ಚರ್ ಆಯೋಡಿನ್ನನ್ನರಿಯದವರು ತೀರ ವಿರಳ. ಪೆನಿಸಿಲಿನ್ ಗಳಿಸಿರುವಷ್ಟೇ ಖ್ಯಾತಿಯನ್ನು ಅದು ಪಡೆದಿದೆಯೆಂದರೂ ಸಲ್ಲುತ್ತದೆ. ಟಿಂಕ್ಚರ್ ಆಯೋಡಿನ್ನನ್ನು ಬಳಸದೆ ಮಾಡುವ ಶಸ್ತ್ರಕ್ರಿಯೆ- ಆಪರೇಶನ್‌ಗಳು- ತೀರ ಕಡಿಮೆ. ಇದು ನಾವು ದಿನ ನಿತ್ಯವೂ ಸೇವಿಸುವ ಆಹಾರದಲ್ಲಿದ್ದು ನಮ್ಮ ದೇಹದ ನಿಯಮಿತವಾದ ಬೆಳವಣಿಗೆಗೆ ತುಂಬ ಸಹಾಯಕಾರಿಯಾಗಿದೆ. ನಮ್ಮ ದೇಹದಲ್ಲಿ ಆಯೋಡಿನ್ ದುರ್ಬೀನಿನಿಂದ ನೋಡಬಹುದಾದಷ್ಟು ಅತಿ ಅಲ್ಪ ಪ್ರಮಾಣದಲ್ಲಿದ್ದರೂ ನಮಗೆ ಅದರ ಉಪಯೋಗ ಮಾತ್ರ ಬಹುಮುಖವಾದುದು. ನಮ್ಮ ಶರೀರ ರಚನೆಗೆ ಅದು ಅವಶ್ಯಕ. ಅಲ್ಲದೆ ನಮಗೆ ಹುಚ್ಚು ಹಿಡಿಯದಂತೆ ನೋಡಿಕೊಳ್ಳುವುದು ಯಾವುದು ಗೊತ್ತೆ? ನಮ್ಮ ಗಂಟಲಿನಲ್ಲಿರುವ ಥೈರಾಯಿಡ್ ಗ್ರಂಥಿಗಳಲ್ಲಿ ಇರುವ ಅರ್ಧಕಾಸು ಬೆಲೆಬಾಳುವುದಕ್ಕಿಂತಲೂ ಕಡಿಮೆ ಪ್ರಮಾಣದ ಆಯೋಡಿನ್. ಥೈರಾಯಿಡ್‌ನಲ್ಲಿ ಅದು ಇಲ್ಲದ ದಿನವೇ ನಾವು ಹುಚ್ಚಾಸ್ಪತ್ರೆ ಸೇರಬೇಕಾದೀತು.

ಸಮುದ್ರದ ನೀರು, ಹಾವಸೆಗಳು, ಸ್ಪಂಜುಗಳು ಮೀನು ಇತ್ಯಾದಿ ಜಲಚರಗಳಲ್ಲಿ ಆಯೋಡಿನ್ನಿನ ಸಂಯುಕ್ತಗಳು ಕೆಲ ಪ್ರಮಾಣದಲ್ಲಿರುತ್ತವೆ. ನಿತ್ಯದ ಆಹಾರದಲ್ಲಿ ನಾವು ಉಪಯೋಗಿಸುವ ನೀರುಳ್ಳಿ, ತತ್ತಿಯ ಹಳದಿ ಭಾಗ, ಅನಾನಸು, ಶುಂಠಿ, ಕರಿಮೆಣಸು, ಲವಂಗ, ಹಣ್ಣುಗಳ ತೊಗಟೆಗಳು, ಟೊಮ್ಯಾಟೋ ಇತ್ಯಾದಿಗಳಲ್ಲಿ ಆಯೋಡಿನ್ ಇರುತ್ತದೆ. ಹಸಿರು ತೊಪ್ಪಲುಗಳಲ್ಲಿ, ಕುರಿಯ ಹಾಲು, ಕಾಡ್‌ಲಿವರ್ ಆಯಿಲ್‌ಗಳಲ್ಲಿ ಕೂಡ ಇದು ದೊರೆಯುತ್ತದೆ. ಚಿಲಿಯಲ್ಲಿಯ ಸೋರುಪ್ಪಿನ ಗಣಿಗಳಲ್ಲಿ, ಪೆಟ್ರೊಲಿಯಂ ಬಾವಿಗಳಲ್ಲಿ ಮತ್ತು ನೆಲದಿಂದ ಚಿಮ್ಮುವ ನೀರ ಬುಗ್ಗೆಗಳಲ್ಲಿ ಇದು ಅಧಿಕ ಪ್ರಮಾಣದಲ್ಲಿರುವುದು. ದೇಹದಲ್ಲಿ ಆಯೋಡಿನ್ನಿನ ಅಭಾವವಿರುವವರು ಮಾಡಬೇಕಾದ ಮುಖ್ಯ ಕೆಲಸವೆಂದರೆ ನಿತ್ಯವೂ ಆಹಾರದಲ್ಲಿ ಮೀನುಗಳನ್ನು ಬಳಸುವುದು.

೧೮೧೨ ರ ತನಕ ಆಯೋಡಿನ್ ಸಂಶೋಧಿಸಲ್ಪಟ್ಟಿರದಿದ್ದರೂ ಮಾನವನು ಕಲ್ಪನೆಯಿಲ್ಲದೆಯೆ ಅದರ ಉಪಯೋಗವನ್ನು ಪಡೆಯುತ್ತಿದ್ದನು. ಇದನ್ನು ಶೋಧಿಸಿದ ಗೌರವವೆಲ್ಲ ಫ್ರೆಂಚ್ ಉಪ್ಪಿನ ಗಣಿ ಉದ್ಯಮೆಗಾರನಾದ ಡಿ ಕೊರಟ್ಯೊಸ್‌ನಿಗೆ ಸಲ್ಲಬೇಕು. ಅವನು ಸುಟ್ಟ ಸಮುದ್ರಪಾಚಿಗಳಿಂದ ತಯಾರಿಸಿದ ಪ್ರವಾಹಿಯ ಮೇಲೆ ಅನ್ವೇಷಣೆ ನಡೆಸಿ ಆಯೋಡಿನ್ ಕಂಡುಹಿಡಿದನು. ಚಂಡಮಾರುತಗಳ ಅಬ್ಬರ

ದಿಂದ ತಲೆಕೆಳಗಾಗಿ ಸಂಪೂರ್ಣ ತೊಳೆದು ಹೋದ ಪಾಚಿಗಳನ್ನು ಕಲೆಹಾಕಿ ಅವುಗಳನ್ನು ಕೊಳೆಸಿ ಉರಿಸಿದನು. "ಕೆಲ್ಪ್" ಎನಿಸುವ ಈ ಬೂದಿಯನ್ನು ನೀರಲ್ಲಿ ಕದಡಿಸಿ ಅದರಲ್ಲಿ ಅಡಕವಾದ ಆಯೋಡಿನ್ನಿನ ಅಂಶವನ್ನು ಹರಳುಗಳಾಗಿಸಿ ಪಡೆಯಲಾಯಿತು. ಆದರೆ ಇಂದು ಈ ಹಳೆಯ ವಿಧಾನವನ್ನನುಸರಿಸದೆ ಚಿಲಿಯಲ್ಲಿ ಅಪಾರವಾಗಿ ದೊರಕುವ ನೈಟ್ರೇಟುಗಳಿಂದ ಆಯೋಡಿನ್ ತಯಾರಿಸುವರು.

ಆಯೋಡಿನ್ನನ್ನು ನಾವು ಶ್ವಾಸದ ಮೂಲಕವೂ ಪಡೆಯುತ್ತೇವೆ. ಸಮುದ್ರ ತೀರದಲ್ಲಿ ಅಲೆದಾಡುವಾಗ ಕೊಳೆತ ಸಾಗರದ ಪಾಚಿ-ಹಾವಸೆಗಳಿಂದ ಹೊರಸೂಸುವ ಆಯೋಡಿನ್ ನಮ್ಮ ಶ್ವಾಸವನ್ನು ಸೇರುತ್ತದೆ. ಇಷ್ಟೆಲ್ಲ ವಿಧದಿಂದ ನಾವು ಆಯೋಡಿನ್ ಸೇವಿಸುತ್ತಿದ್ದರೂ ಬಹು ಸ್ವಲ್ಪ ಪ್ರಮಾಣದಲ್ಲಿ ಮಾತ್ರ ಸೇವಿಸುತ್ತೇವೆ. ಒಬ್ಬ ವ್ಯಕ್ತಿಯ ದೇಹಕ್ಕೆ ಒಂದು ವರುಷಕ್ಕೆ ಒಂದು ಅಕ್ಕಿಯ ಕಾಳಿನ ಕಾಲು ಭಾಗದಷ್ಟು ಆಯೋಡಿನ್ ಮಾತ್ರ ಅಗತ್ಯವಾಗಿದೆ. ತುಂಬಾ ಚಿಕ್ಕ ಪ್ರಮಾಣದಲ್ಲಿರುವುದಾದರೂ ದೇಹದ ಕೊಬ್ಬು ಮತ್ತು ಕ್ಯಾಲ್ಸಿಯಂಗಳನ್ನು ಹೆಚ್ಚಿಸಲು ಇದು ಅವಶ್ಯಕ. ಥೈರಾಯಿಡ್ ಗ್ರಂಥಿಗಳಿಂದ ಹೊರಸೂಸುವ ಥೈರಾಕ್ಸಿನ್ ದ್ರವದಲ್ಲಿ ಇದು ಅವಶ್ಯ ಇರಲೇಬೇಕು.

ಆಯೋಡಿನ್ ಮನುಷ್ಯ ದೇಹದಲ್ಲಿ ಸೇರಿದರೆ ಅದು ನೇರಾಗಿ ಗಂಟಲಲ್ಲಿಯ ಥೈರಾಯಿಡ್ ಗ್ರಂಥಿಯನ್ನು ತಲುಪುತ್ತದೆ. ಥೈರಾಯಿಡ್ ಗ್ರಂಥಿಗೆ ವ್ಯಾಧಿಯಾದಾಗ, ಕೆಲವು ಜನರು ಥೈರಾಯಿಡಿನ ಅತಿಯಾದ ಚಟುವಟಿಕೆಯಿಂದ ಬಳಲಿದರೆ ಇನ್ನು ಕೆಲವರು ಥೈರಾಯಿಡಿನ ಕಡಿಮೆ ಚಟುವಟಿಕೆಯಿಂದ ಶರೀರದ ಬೆಳವಣಿಗೆಯಾಗದೆ ನರಳುತ್ತಾರೆ. ಆದರೆ ನಮ್ಮ ದೇಹವನ್ನು ಸೇರಿ ಥೈರಾಯಿಡ್‌ನ್ನು ತಲುಪಿದ ಸೌಮ್ಯ ರೇಡಿಯೋ ಕ್ರಿಯಾಶೀಲ ವಸ್ತುವಾದ ಆಯೋಡಿನ್ನಿನಿಂದ ಹೊರಟ ಕಿರಣಗಳು ಗ್ರಂಥಿಯ ಅಧಿಕ ಬೆಳವಣಿಗೆ ಹೊಂದಿದ ಕೆಲ ನರಗಳಿಗೆ ಬಡಿದು ಅವುಗಳನ್ನು ನಾಶಪಡಿಸಿ, ಬಲಹೀನವಾದ ನರಗಳಿಗೆ ಚೈತನ್ಯವಿತ್ತು ದೇಹದ ಬೆಳವಣಿಗೆಯನ್ನು ಪ್ರಮಾಣಬದ್ಧವಾಗಿಸಿ ಆರೋಗ್ಯವನ್ನು ಕಾಪಾಡುತ್ತವೆ. ಆಯೋಡಿನ್ನಿನ ಅಭಾವವಿದ್ದವರಲ್ಲಿ ಈ ರೀತಿ ಕಾರ್ಯ ಸಾಗದಿರುವುದರಿಂದ ಅವರ ಶರೀರದ ಕೆಲ ಭಾಗಗಳು ಅತಿಯಾಗಿ ಬೆಳೆಯುವವು. ಇನ್ನು ಕೆಲವರಿಗೆ ವಯಸ್ಸಿಗೆ ಮೀರಿದ ಬೆಳವಣಿಗೆ ಕಂಡುಬರುವುದು. ಥೈರಾಯಿಡಿನ ಅತಿಕ್ರಿಯೆ(Hyper-thyroid)ಯಿಂದ ಉಂಟಾದ ಗಳಗಂಡ (Goiter) ರೋಗದಿಂದ ನರಳುವವರಿಗೆ ಆಯೋಡಿನ್‌ಯುಕ್ತ ಔಷಧಿಗಳನ್ನು ನೀಡಿ ಅವರನ್ನು ಗುಣಪಡಿಸುವ ವಿಧಾನವು ೧೯೪೦ರಲ್ಲಿ ಮೇಯೋ ಕ್ಲಿನಿಕ್‌ನ ಚಿಕಿತ್ಸಕರು ಸಿದ್ಧಪಡಿಸುವವರೆಗೆ ಸಂಪೂರ್ಣ ಅಪರಿಚಿತವೇ ಆಗಿದ್ದಿತು.

ದೇಹದಲ್ಲಿ ಆಯೋಡಿನ್ನಿನ ಅಭಾವವು ರೋಗಾಣುಜನ್ಯ ವ್ಯಾಧಿಗಳಿಗೆ ಆಮಂತ್ರಣವಾಗುವುದು. ಇನ್‌ಫ್ಲುಯೆಂಜಾ ಮತ್ತು ನೆಗಡಿಗಳು ಇದರ ಅಭಾವದ ಪರಿಣಾಮಗಳೇ. ತೀರ ಉನ್ನತ ಸ್ಥಳದಲ್ಲಿ ಬೆಳೆದ ಕಾಯಿಪಲ್ಲೆಗಳಲ್ಲಿ ಆಯೋಡಿನ್ ಇರುವುದಿಲ್ಲವೆಂದರೂ ಸರಿ. ಏಕೆಂದರೆ ಎಡೆಬಿಡದೆ ಸುರಿದ ಮಳೆಯಿಂದ ನೆಲದಲ್ಲಿಯ ಆಯೋಡಿನ್ ಘಟಕಗಳು ಕೊಚ್ಚಿಕೊಂಡು ಹೋಗಿರುತ್ತವೆ. ಈ ಕಾರಣದಿಂದಲೇ ಗುಡ್ಡದ ಮೇಲಿನ ಹುಲ್ಲು ತಿನ್ನುವ ಪ್ರಾಣಿಗಳ ಹಾಲಿನಲ್ಲಿ ಆಯೋಡಿನ್ ಪ್ರಮಾಣ ಅಲ್ಪವಿರುವುದರಿಂದ ಆ ಹಾಲನ್ನು ಕುಡಿಯುವ ಬಹು ಬಾಲಕರು ಆಯೋಡಿನ್ ಕೊರತೆಯಿಂದಾಗಿ ಅನಾರೋಗ್ಯದಿಂದ ಬಳಲುವರು. ಆಯೋಡಿನ್ ಯುಕ್ತ ಹುಲ್ಲು ತಿನ್ನುವ ದನಗಳಾದರೋ ಪುಷ್ಟವಾಗಿ ಬೆಳೆಯುವವು. ಮತ್ತು ಅಧಿಕ ಹಾಲು ಕೊಡುವವೆಂದು ಪ್ರಯೋಗಗಳಿಂದ ಕಂಡು ಬಂದಿದೆ. ಕೋಳಿಗಳಿಗೆ ತುಸು ಆಯೋಡಿನ್

ಯುಕ್ತ ಆಹಾರ ನೀಡಿದಾಗ ಅವು ಮೊದಲಿಗಿಂತಲೂ ಹೆಚ್ಚು ತತ್ತಿಗಳನ್ನಿಟ್ಟವು; ಮತ್ತು ಅವುಗಳ ಗೂಡಿನಲ್ಲಿ ಆಯೋಡಿನ್ನಿನ ಚಿಕ್ಕ ತುಣುಕನ್ನು ಇಡಲಾಗಿ ಅವು ಆ ಹವೆಯನ್ನು ಪಡೆದು ಆರೋಗ್ಯವಂತವಾದುವೆಂದು ಅಮೇರಿಕೆಯ ಕೋಳಿ ಫಾರ್ಮಿನವರು ಸಿದ್ಧಪಡಿಸಿದ್ದಾರೆ. ಅಲ್ಲಿಯ ಹಂದಿಗಳಲ್ಲಿ ಕೊಬ್ಬನ್ನು ಅಧಿಕವಾಗಿಸಿದುದೂ ಇದೇ. ಹಣ್ಣು ಗಿಡಗಳು ಹಣ್ಣು ಬಿಡದಿರುವುದಕ್ಕೆ ಮತ್ತು ಮಹಿಳೆಯರು ಬಂಜೆಯಾಗಿರುವುದಕ್ಕೂ ಆಯೋಡಿನ್ನಿನ ಅಭಾವ ಕಾರಣವಾಗಬಲ್ಲುದು.

ದಕ್ಷಿಣ ವೇಲ್ಸ್‌ನ ಗಣಿ ಉದ್ದಿಮೆಗಾರರು ೧೯೩೦ ರ ಪೂರ್ವದಲ್ಲಿಯೇ ಆಯೋಡಿನ್ ಮಿಶ್ರಿತ ಹವೆಯಿಂದ ನೆಗಡಿ ದೂರ ಮಾಡುವುದನ್ನು ಕಂಡುಕೊಂಡಿದ್ದರು. ಬಹಳ ಆಳಕ್ಕೆ ಇಳಿದು ಕೆಲಸ ಮಾಡುವ ಕೂಲಿಗಳ ಎದೆಯ ಮೇಲ್ಭಾಗದಲ್ಲಿನ ಬಟ್ಟೆಯಲ್ಲಿ ಒಂದು ಹನಿ ಆಯೋಡಿನ್ ಹಚ್ಚಲ್ಪಡುತ್ತಿತ್ತು. ಇಂದು "ಆಯೋಡಿನ್ ಲೊಕೆಟ್" (ಪದಕ) ಎಂಬವು ಸಿದ್ಧವಾಗಿರುವುದರಿಂದ ಹಳೆಯ ವಿಧಾನವನ್ನು ಪಯೋಗಿಸಬೇಕಾಗಿಲ್ಲ ಆಗಾಗ ನೆಗಡಿಯಾಗುವವರು ಈ ಲೊಕೆಟ್ ಕುತ್ತಿಗೆಗೆ ಕಟ್ಟಿಕೊಂಡರೆ ಅವರ ಶ್ವಾಸದಲ್ಲಿ ಆಯೋಡಿನ್ ಸೇರುವುದರಿಂದ ನೆಗಡಿ ಬರುವುದಿಲ್ಲೆಂದು ವಿಜ್ಞಾನಿಗಳು ಸಿದ್ಧಪಡಿಸಿರುವರು. ದೇಹದ ಉಷ್ಣತೆಗೆ ಅನುಗುಣವಾಗಿ ತೀರ ಕಡಿಮೆ ಪ್ರಮಾಣದಲ್ಲಿ ಆಯೋಡಿನ್ ಈ ಲೊಕೆಟ್‌ನಿಂದ ಹೊರಬರುವಂತೆ ಏರ್ಪಾಡು ಮಾಡಿದ್ದಾರೆ.

ಪಾಶ್ಚಾತ್ಯರು ಶಾಲೆಯ ಕೊಠಡಿಗಳಲ್ಲಿ ಆಯೋಡಿನ್ ಮಿಶ್ರಿತ ಹವೆಯನ್ನು ಬಿಟ್ಟು ನೋಡಿದರು. ಇದೇ ರೀತಿ ಬಹಳ ದಿನ ಮಾಡಿ ನೋಡಿದಾಗ ಕೊಠಡಿಯೊಳಗಿನ ವಿದ್ಯಾರ್ಥಿಗಳು ಉತ್ಸಾಹಿಗಳಾಗಿಯೂ ಬುದ್ಧಿಶಾಲಿಗಳಾಗಿಯೂ ಮೊದಲಿಗಿಂತಲೂ ಆರೋಗ್ಯವಂತರಾಗಿಯೂ ಕಂಡುಬಂದರು. ಇಷ್ಟೇ ಅಲ್ಲದೆ ಆಯೋಡಿನ್ ಪ್ರಥಮ ದರ್ಜೆಯ ಕ್ರಿಮಿನಾಶಕವೂ ಆಗಿದೆ. ರೋಗನಿವಾರಕ ಶಕ್ತಿಯೂ ಇದರಲ್ಲಿ ಅಪಾರವಾಗಿದೆ. ಗತ ಮಹಾಯುದ್ಧದಲ್ಲಿ ಸೈನಿಕರ ಗಾಯಗಳು ಉಲ್ಬಣಾವಸ್ಥೆಗೆ ಹೋಗದಂತೆ ಮಾಡಲು ಆಯೋಡಿನ್ ಶಕ್ತವಾದುದರಿಂದ ಆಗ ಮಡಿದವರ ಸಂಖ್ಯೆ ಕಡಿಮೆಯಾಯಿತು. ಒಮ್ಮೆ ಗಾಯಕ್ಕೆ ಹಚ್ಚಿದರೆ ಸಾಕು. ಅದಕ್ಕೆ ನಂಜೇರದಂತೆ ಮಾಡುವ ಆಯೋಡಿನ್ ನಿಜಕ್ಕೂ ದಿವ್ಯೌಷಧಿ.

ಗಾಯಗಳಿಗೆ ಟಿಂಕ್ಚರ್ ಆಯೋಡಿನ್ನನ್ನು ಹಚ್ಚಿದಾಗ ಗಾಯಗಳು ಒಮ್ಮೆಲುರಿಯಲಾರಂಭಿಸಿದಂತೆ ಭಾಸವಾಗುವುದರಿಂದ ಬಹುಜನರು ಇದನ್ನು ಬಳಸುವುದಿಲ್ಲ. ಆದರೆ ನಿಜವಾಗಿಯೂ ಆಯೋಡಿನ್‌ನಲ್ಲಿ ನೋವು ನೀಡುವ ಗುಣವಿಲ್ಲ. ಟಿಂಕ್ಚರ್ ಮಾಡುವಾಗ ಆಯೋಡಿನ್ನನ್ನು ಮದ್ಯಾರ್ಕ (ಅಲ್ಕೊಹಾಲ್) ದಲ್ಲಿ ಬೆರೆಸುವರು. ಈ ಮದ್ಯಾರ್ಕ ಉರಿಗೆ ಕಾರಣವಾಗುವುದು. ಇತ್ತೀಚೆಗೆ ನೋವನ್ನು ಹೀರುವ ಟಿಂಕ್ಚರ್ ಆಯೋಡಿನ್‌ನನ್ನು ಕೂಡ ಪಾಶ್ಚಿಮಾತ್ಯರು ತಯಾರಿಸಿದ್ದಾರೆ. ಆಯೋಡೆಕ್ಸ್ ಎಂದು ಪ್ರಸಿದ್ಧಿ ಪಡೆದ ಆಯೋಡಿನ್ನಿನ ಮಲಾಮು ನೋವು ಕಳೆಯಲು ಬಹು ಉಪಯುಕ್ತ. ಇಷ್ಟಲ್ಲದೆ ಇತರ ಬಹು ಔಷಧಿಗಳಲ್ಲಿ ಆಯೋಡಿನ್ನಿನ ಭಸ್ಮ, ಸಂಯುಕ್ತಗಳನ್ನು ಉಪಯೋಗಿಸುವರು. ಇದ-ರಿಂದ ಆಯಡೊಫೋರ್ಮ್ ಎಂಬುದನ್ನು ಸಿದ್ಧಪಡಿಸಿದರು. ಇದರಲ್ಲಿಯ ನಂಜುನಾಶಕ ಗುಣವು ಬೇರಾವುದರಿಂದಲೂ ಗುಣಪಡಿಸಲಾರದಂತಹ ಗಾಯಗಳನ್ನೂ ಗುಣಪಡಿಸಬಲ್ಲದು.

ಹಾಲಿನ ವ್ಯಾಪಾರಿಗಳಲ್ಲಿ ಅನೇಕರು ಹಾಲಿನಲ್ಲಿ ಒಂದು ಬಗೆಯ ಹಿಟ್ಟನ್ನು ಬೆರೆಸುವರು. ಇಂತಹ ಹಾಲು ಯಾವುದೆಂಬುದು ಕಂಡು ಹಿಡಿಯುವುದು ಆಯೋಡಿನ್‌ಗೆ ಮಾತ್ರ ಸಾಧ್ಯ. ಟಿಂಕ್ಚರ್ ಆಯೋಡಿನ್ನಿನ ಒಂದು ಹನಿಯನ್ನು

ಅಂತಹ ಮಿಶ್ರಿತ ಹಾಲಿನಲ್ಲಿ ಬಿಟ್ಟಕೂಡಲೆ ಆ ಹಾಲು ನೀಲಿ ಬಣ್ಣಕ್ಕೆ ತಿರುಗುವುದು. ಆಯೋ-ಡಿನ್ ಆ ಹಿಟ್ಟಿನಲ್ಲಿರುವ ಪಿಷ್ಟದ ಮೇಲೆ ಮಾಡುವ ಪರಿಣಾಮವಿದು. ಇದು ರೇಡಿಯೋ ಕ್ರಿಯಾಶೀಲ ಸ್ವಯಂಪ್ರಭೆಯ ಧಾತುವಾಗಿರುವುದರಿಂದ ಗ್ರೇವ್‌ನಂತಹ ಮಹಾವ್ಯಾಧಿಗ-ಳನ್ನೂ ಗುಣಪಡಿಸಬಲ್ಲದು.

ಆಯೋಡಿನ್ ವಿಷವಾದರೂ ಯಾವಾಗಲೂ ಇದು ಮೃತ್ಯುವನ್ನು ತರಲಾರದು. ಶರೀರದ ಮೇಲೆ ತಿಕ್ಕಿದ ಆಯೋಡಿನ್ ತೀವ್ರವಾಗಿ ರಕ್ತವನ್ನು ಸೇರಿಹೋಗುತ್ತದೆ. ಕೆಲವೇ ನಿಮಿಷಗಳಲ್ಲಿ ಬಾಯಿಯಲ್ಲಿಯ ಥೈರಾಯಿಡ್ ಗ್ರಂಥಿಯಲ್ಲಿ ಅದನ್ನು ಕಾಣಬಹುದು. ಕೈ ಅಥವಾ ಕಾಲನ್ನು ಆಯೋಡಿನ್‌ಗೆ ತಗುಲಿಸಿದರೆ ರಕ್ತಪ್ರವಾಹವು ಕೂಡಲೆ ನಿಂತುಹೋಗಿಬಿಡುವುದು. ಬಹುಮುಖ ಉಪಯೋಗಿಯಾದ ಆಯೋಡಿನ್ನನ್ನು ಮಿತ-ವಾಗಿ ಪಡೆದರೆ ಅದರಿಂದ ಶರೀರಸ್ವಾಸ್ಥ್ಯ ಹೆಚ್ಚುವುದು. ಆದರೆ ಸ್ವಾಸ್ಥ್ಯವನ್ನು ಒಮ್ಮೆಲೇ ಹೆಚ್ಚಿಸ ಬಯಸಿ ಅಧಿಕ ಆಯೋಡಿನ್ ಬಳಸಿದರೆ ಮಾತ್ರ ಪರಿಣಾಮ ವಿಪರೀತಕ್ಕಿಟ್ಟುಕೊಂಡೀತು ! ★



ಔದಾರ್ಯ ಮತ್ತು ಸಂಯಮ

ಪಂಡಿತಮದನಮೋಹನ ಮಾಲವೀಯಜಿಯವರು ಬನಾರಸ ವಿಶ್ವವಿದ್ಯಾಲ-ಯಕ್ಕಾಗಿ ಚಂದಾ ಕೂಡಿಸಲಿಕ್ಕೆಂದು ಹೊರಟಾಗಿನ ಒಂದು ಪ್ರಸಂಗ. ಕಲಕತ್ತೆಯ ಒಬ್ಬ ಶ್ರೀಮಂತನ ಮನೆಗೆ ಅವರು ಹೋದರು. ಸಾಹುಕಾರರ ಚಿಕ್ಕ ಹುಡುಗ ದೀಪದ ಕಡ್ಡಿಯೊಂದಿಗೆ ಆಡುತ್ತಿದ್ದ. ಒಂದು ಕಡ್ಡಿ ಗೀರಿ ಹಾಳು ಮಾಡಿದ. ವ್ಯರ್ಥವಾಗಿ ಒಂದು ಕಡ್ಡಿ ಹಾಳು ಮಾಡಿದನಲ್ಲ ಎಂದು ಸಾಹುಕಾರರು ಸಿಟ್ಟುಗೊಂಡು ಹುಡುಗನನ್ನು ಹೊಡೆದರು. ಇದನ್ನು ನೋಡಿ ಈತ ಬಲು ಜಿಪುಣ ಆಸಾಮಿ ಎಂದುಕೊಂಡು ಏನೂ ಮಾತಾಡದೆ ಬಂದವರು ಹಾಗೇ ಹೊರಟರು ಮಾಲವೀ-ಯಜಿ. ಬಾಗಿಲವರೆಗೆ ಬಂದು ಸಾಹುಕಾರರು ಕೇಳಿದರು: "ಯಾಕೆ ಬಂದಿದ್ದಿ.? ಹೊರಟರೇಕೆ?" ಎಂದು. ಮಾಲವೀಯಜಿ ಬಂದ ಕಾರಣ ಹೇಳಿದರು. ಸಾಹುಕಾರರು ಕೂಡಲೆ ಅವರನ್ನು ಆದರದಿಂದ ಒಳಗಡೆ ಕರೆದುಕೊಂಡು ಹೋಗಿ ೫೦ ಸಾವಿರ ರೂಪಾಯಿಯ ಚೆಕ್ಕನ್ನು ಹರಿದು ಕೊಟ್ಟರು. ಮಾಲವೀಯಜಿಯವರಿಗೆ ಆಶ್ಚರ್ಯವೆನಿಸಿತು. ದೀಪದಕಡ್ಡಿಯ ಪ್ರಸಂಗವನ್ನು ನೆನೆದುಕೊಂಡರು. ಆಗ ಹಾಗೆ ನಡೆದುಕೊಂಡ ಸಾಹುಕಾರರು ಈಗ ಹೀಗೆ ನಡೆದುಕೊಳ್ಳುವುದು ಹೇಗೆ ಎಂದು ಕೇಳಿದರು. ಅದಕ್ಕೆ ಸಾಹುಕಾರರು "ಸ್ವಾಮಿ, ಪ್ರಸಂಗವಶಾತ್ ಔದಾರ್ಯವು ಉಚಿತವೆನಿಸುವುದು. ಆದರೆ ಸಂಯಮ ಹಾಗಲ್ಲ. ಇದರ ಮಹತ್ವ ಯಾವತ್ತೂ ಇದ್ದದ್ದೇ. ಈಗ ಹುಡುಗ ಈ ದೀಪದಕಡ್ಡಿಯ ಬೆಲೆ ಇಂದು ತಿಳಿದುಕೊಳ್ಳದಿದ್ದರೆ ನಾಳೆ ನನ್ನ ಈ ದೊಡ್ಡ ಸಂಪತ್ತಿನ ಬೆಲೆ ಏನು ತಿಳಿಯಬಲ್ಲ? ಹೇಳಿ" ಎಂದರು.






ದಿನೇ ದಿನೇ
ಅಧಿಕ ಸುಂದರ ಚರ್ಮ-
ಹೊಸ ರೆಕ್ಸೋನ
ಅದರ ಮರ್ಮ

ನೀವು ರೆಕ್ಸೋನವನ್ನು ಬಳಸುವಾಗ ಅದರ ಅದ್ಭುತ ಗುಣ ನಿಮಗೆ ಕಂಡುಬರುವುದು. ಅದರ ಮೃದುವಾದ ನೊರೆಯಲ್ಲಿ ಕ್ಯಾಡಿಲ್—ಚರ್ಮವನ್ನು ಸುಂದರಗೊಳಿಸುವ ಎಣ್ಣೆಗಳ ಒಂದು ವಿಶಿಷ್ಟ ಮಿಶ್ರಣ—ಇದೆ. ಅದರ ಪ್ರಭಾವ ಚರ್ಮದ ಅಂತರ್ಭಾಗಕ್ಕೂ ಬೀಳುತ್ತದೆ ಮತ್ತು ಅದರಿಂದ ಚರ್ಮವು ಹೆಚ್ಚು ನುಣುಪಾಗಿ, ಹೆಚ್ಚು ಕೋಮಲವಾಗಿ ಸುಂದರವಾಗುವುದು !

ಬಹಳ ಹೊತ್ತಿನವರೆಗೆ ನಿಮಗೆ ಉಲ್ಲಾಸ ದನ್ನೀಯುವ ವಿಶಿಷ್ಟ ಪರಿಮಳವಿರುವ ರೆಕ್ಸೋನ ನಿಮ್ಮ ಸ್ನಾನಕ್ಕೆ ಆದರ್ಶಪ್ರಾಯವಾದುದು.



ಹೊಸ ರ್‍ಯಾಪರ್ ಇರುವ, ಹೊಸ ಆಕಾರವಿರುವ, ಹೊಸ ಹಸುರು ಬಣ್ಣವಿರುವ ಹೊಸ ರೆಕ್ಸೋನ ನಿಮ್ಮ ಪ್ರೀತಿಗೆ ಪಾತ್ರವಾಗುವುದು.

ಹೊಸ ರೆಕ್ಸೋನ-ನಿಮ್ಮ ಚರ್ಮಕ್ಕೆ ಹಿತಕರ

RP. 169-50 KN

ಹಿಂದುಸ್ಥಾನ್ ಲೀವರ್ ಲಿಮಿಟೆಡ್ ಅವರಿಂದ ರೆಕ್ಸೋನ ಪ್ರೊಪ್ರೈಟರಿ ಲಿಮಿಟೆಡ್, ಆಸ್ಟ್ರೇಲಿಯಾ ಅವರಿಗಾಗಿ ಭಾರತದಲ್ಲಿ ತಯಾರಿಸಲ್ಪಟ್ಟಿದೆ

J 5– 6

ಯುದ್ಧಕಾಲದ ಒಂದು ವಿಚಿತ್ರ ಘಟನೆಯ ಕಥೆ

೨ ಕೋಟಿ ಬೆಲೆಯ ಬಂಗಾರ ಬೇಕೆ?

ಮುಕ್ತಾ ರಾಜೆ

ಕೇಳಿದರೆ ರೋಮಾಂಚನವಾಗುವಂಥ ಒಂದು ಸುದ್ದಿ ಇಲ್ಲಿ ಇದೆ. ಒಂದು ಸ್ಥಳದಲ್ಲಿ ಎರಡು-ಎರಡೂವರೆ ಕೋಟಿ ರೂಪಾಯಿಯ ರಕಮು ಯಾವ ಕಾವಲುಗಾರನೂ ಇಲ್ಲದೆ ಸಮುದ್ರದಲ್ಲಿ ಬಿದ್ದುಕೊಂಡಿದೆ. ಅಲ್ಲಿ ಹೋದರೆ ಸಾಕು; ನೀವು ಅದನ್ನು ಪಡೆಯಬಹುದು. ಇದರಲ್ಲಿ ಸುಳ್ಳೇನೂ ಇಲ್ಲ. ೧೯೪೨ನೇ ಇಸವಿಯ ಮೇ ೬ ನೇ ದಿನ ಜಪಾನೀಯರ ದಾಳಿಗೆ ಹೆದರಿ ಓಡಿ ಹೊರಬಿದ್ದ ಅಮೇರಿಕದವರು ಈ ಸಂಪತ್ತನ್ನು ಒಗೆದು ಹೋಗಿದ್ದಾರೆ. ಬಹಳ ಆಳವೂ ಇಲ್ಲ. ೨೦-೨೫ ಗಜ ಮಾತ್ರ. ಯಾರೂ ಹೋಗಲಾರದಂಥ ಸ್ಥಳವೂ ಅಲ್ಲ ಇದು. ಜಪಾನಿ ಸೈನಿಕರು ಯುದ್ಧಕಾಲದಲ್ಲಿ ಅಮೇರಿಕದ ಸಿಪಾಯಿಗಳನ್ನು ಹಿಡಿದಾಗ ಅವರು ಹಲವು ಪೆಟ್ಟಿಗೆಗಳನ್ನು ಹೊರತೆಗೆದೂ ಕೊಟ್ಟಿದ್ದರು. ಆದರೂ ಅಲ್ಲಿ ಧನರಾಶಿ ಇನ್ನೂ ಇದೆ.

ಡಿಸೆಂಬರ ೭, ೧೯೪೧ ರ ದಿನ ಜಪಾನೀಯರು ಪರ್ಲ್‌ಹಾರ್ಬರಿನ ಮೇಲೆ ದಾಳಿ ಮಾಡಿ ಅಮೇರಿಕೆಗೆ ಯುದ್ಧದ ಆಹ್ವಾನ ಕೊಟ್ಟರು. ಅವರು ಒಂದರ ಹಿಂದೊಂದು ದೇಶವನ್ನು ಸ್ವಾಧೀನಪಡಿಸಿಕೊಂಡರು. ಯುದ್ಧಾನಂತರ ಜಪಾನಿನ ಮೇಲೆ ಕಠೋರ ಶಾಸನ ನಡೆಸಿದ ಅಮೇರಿಕದ ವಿಖ್ಯಾತ ಜನರಲ್ ಮ್ಯಾಕ್ ಆರ್ಥರರೇ ೧೯೪೨ ರಲ್ಲಿ ಫಿಲಿಪಾಯಿನ್ ದ್ವೀಪದಿಂದ ಪಲಾಯನ ಮಾಡುವ ಸಿದ್ಧತೆಯಲ್ಲಿ ತೊಡಗಿದರು. ಶಾಂತ ಸಾಗರದ ಅಮೇರಿಕನ್ ದ್ವೀಪಗಳ ಭಂಡಾರವೆ ಫಿಲಿಪಾಯಿನ್‌ನಲ್ಲಿತ್ತು. ಸಂಪತ್ತನ್ನು ಜಪಾನೀಯರ ಕೈಗೆ ಬೀಳಗೊಡುವುದಂತೂ ಅಸಾಧ್ಯವಾದ ಮಾತು. ಆದರೆ ಅದನ್ನು ರಕ್ಷಿಸುವ ಬಗೆಯೂ ತಿಳಿಯಲಿಲ್ಲ.

ಒಂದು ಕೋಟಿ ರೂಪಾಯಿಯ ನೋಟುಗಳನ್ನು ಒಟ್ಟುಗೂಡಿಸಿ ಪೋಲೀಸ್ ಪಹರೆಯ ಮಧ್ಯೆ ಸುಟ್ಟರು. ಒಂದು ಜಲಾಂತರ್ಗಾಮಿ ನೌಕೆಯಲ್ಲಿ ಬೆಳ್ಳಿಬಂಗಾರವನ್ನೆಲ್ಲ ಹಾಕಿ ಆಗಲೆ ಅಮೇರಿಕೆಗೆ ರವಾನಿಸಿದ್ದರು. ಇಷ್ಟಾದರೂ ಖಜಾನೆಯಲ್ಲಿ ಇನ್ನೂ ತುಂಬ ಹಣ ಇತ್ತು. ಭಾರತದ ಮೂರು ರೂಪಾಯಿಗೆ ಒಂದು ಸರಿಯಾಗುವಂಥ ಫಿಲಿಪಾಯಿನ್ ಡಾಲರ್ ನಾಣ್ಯಗಳು ಒಂದು ಕೋಟಿ ಏಳು ಲಕ್ಷ. ಇದನ್ನು ಏನು ಮಾಡಬೇಕೆಂದು ವಿಚಾರಿಸಲು ಎಷ್ಟೋ ಬಾರಿ ಸಭೆ ಮಾಡಿ ಕೊನೆಗೆ ಇದನ್ನು ಸಮುದ್ರಾಸ್ತೃಪ್ಯಂತು ಮಾಡಿಬಿಡಬೇಕೆಂದು ಲೆಫ್ಟಿನಂಟ್ ಕಮಾಂಡರ್ ಹ್ಯಾರಿಸನ್ನರು ಸೂಚಿಸಿದರು: ಆದರೆ ಸಮುದ್ರದ ವರೆಗೆ ಅದನ್ನು ಒಯ್ಯುವುದೂ

"ಧರ್ಮಯುಗ" ದಿಂದ

ಒಂದು ಸಮಸ್ಯೆಯೇ ಆಯಿತು. ಅದನ್ನು ಕರಗಿಸಿ ಹೆಂಟೆಗಳನ್ನಾಗಿ ಮಾಡಿ ಎತ್ತಿ ಸಾಗರದಲ್ಲಿ ಹಾಕಬೇಕೆಂದು ಒಬ್ಬರು ಸೂಚಿಸಿದರು. ಆದರೆ ಅದಕ್ಕೆ ಸಮಯವಿರಲಿಲ್ಲ. ಇನ್ನೊಬ್ಬರು ಊರೂರಿಗೆ ಒಯ್ದು ಹಂಚಿಬಿಡಬೇಕೆಂದರು. ಆದರೆ ಊರವರನ್ನು ಸುಲಿದು ಜಪಾನೀಯರು ಒಯ್ದರೆ ಎನ್ನುವ ಪ್ರಶ್ನೆ ಇದ್ದೇ ಇತ್ತು. ಕೊನೆಗೆ ಹ್ಯಾರಿಸನ್ ಸೈನಿಕರನ್ನು ಕೂಡಿಸಿ ಇಪ್ಪತ್ತುನಾಲ್ಕು ಗಂಟೆ ಶ್ರಮಿಸಿ ದೊಡ್ಡ ದೊಡ್ಡ ಪೆಟ್ಟಿಗೆಗಳಲ್ಲಿ ದುಡ್ಡನ್ನೆಲ್ಲ ತುಂಬಿ ಆ ಪೆಟ್ಟಿಗೆಗಳನ್ನು ಕಬ್ಬಿಣದ ಪಟ್ಟಿಗಳಿಂದ ಬಿಗಿದು ಕಬ್ಯಾಲೋದ ಆಖಾತದ ಒಂದು ನಿಶ್ಚಿತ ಸ್ಥಳಕ್ಕೆ ಒಯ್ದು ಜಲದೇವತೆಗೆ ಅರ್ಪಿಸಿದರು.



ಜಪಾನೀಯರು ಫಿಲಿಪಾಯಿನ್ ದ್ವೀಪಕ್ಕೆ ಬರಲು ತಡವಾಗಲಿಲ್ಲ. ಕೂಡಲೆ ದ್ವೀಪ ಕೈವಶವಾಯಿತು. ಅಮೇರಿಕನ್ನರು ಕೋಟ್ಯಂತರ ರೂಪಾಯಿಯ ತಮ್ಮ ಖಜಾನೆಯನ್ನು ಸಮುದ್ರದಲ್ಲಿ ಚೆಲ್ಲಿ ಹೊರಟುಹೋಗಿದ್ದಾರೆಂಬ ಸುದ್ದಿ ಆಗಲೇ ಹಬ್ಬಿತ್ತು. ಗಹನತಮ ಸಾಹಸವನ್ನು ಕೈಕೊಳ್ಳುವ ಬುದ್ಧಿ ಜಪಾನೀಯರದು. 'ಲುಪ್ತಧನ ಕೈಗೆ ಹತ್ತಿದರೆ ಎಷ್ಟು ಒಳಿತಾದೀತು ! ಸಮ್ರಾಟನಿಗೊಪ್ಪಿಸಿ ಕೃತಕಾರ್ಯರಾಗಬಹುದು' ಎಂದು ಯೋಚಿಸಿದರು.

ಅಮೆರಿಕನ್ ಸೈನಿಕರ ಕೆಲ ತುಕಡಿಗಳನ್ನು ಜಪಾನೀಯರು ಕೈದು ಮಾಡಿದ್ದರು. ಅವರಲ್ಲಿ ಹಲವರು ಉತ್ತಮ ಮುಣುಗುಗಾರರಾಗಿದ್ದರು. ಈ ಮುಣುಗು ಬಂಟರ ಸಹಾಯವನ್ನೇ ಯಾಕೆ ಹೊಂದಬಾರದೆಂದು ಜಪಾನೀ ಗುಪ್ತಚಾರರು ಫಿಲಿಪಾಯಿನ್ ಮುಖ್ಯ ಕಚೇರಿಗೆ ತಿಳಿಸಿದರು. ಅವರೂ ವಿಚಾರಮಾಡಿ ಒಪ್ಪಿದರು. ಜಪಾನೀ ಮುಣುಗುಬಂಟರೆ ಜಗತ್ತಿನಲ್ಲಿ ಸರ್ವಶ್ರೇಷ್ಠರಾದರೂ ಅವರನ್ನು ಟೋಕಿಯೋದಿಂದ ತರಿಸಬೇಕಾಗಿತ್ತು. ಟೋಕಿಯೋದಿಂದ ತರಿಸಿ ನಿಧಿಯನ್ನು ತೆಗೆಸಿದರೆ ತಮಗೇನೂ ಅದರ ಶಹಬಾಸಗಿರಿ ಲಭಿಸದೆಂದು ಸ್ಥಳೀಯ ಅಧಿಕಾರಿಗಳ ಸ್ವಾರ್ಥ. ಕೊನೆಗೆ ಇಲ್ಲಿಯ ಕಾರ್ಯ ಇಲ್ಲೇ ಈಡೇರಿಸಬೇಕೆಂದು ನಿರ್ಧರಿಸಿ ಮೊದಲು ಕೆಲ ಸ್ಥಳೀಯ ಮುಣುಗುಬಂಟರನ್ನು ಕರೆಸಿ ಯತ್ನಿಸಿದರು. ಅವರ ಯತ್ನಕ್ಕೆ ಫಲ ಬಾರದಾದಾಗ ಅಮೇರಿಕನ್ನರತ್ತ ಅಧಿಕಾರಿಗಳ ದೃಷ್ಟಿ ಹರಿಯಿತು.

ಕೂಡಲೆ ಯುದ್ಧ ಕೈದಿಗಳ ಗುಂಪಿನಿಂದ ಮುಣುಗುಬಂಟರನ್ನು ಬೇರ್ಪಡಿಸಿ ಅವರನ್ನು ಉಪಚರಿಸಲಾರಂಭವಾಯಿತು. ಒಳ್ಳೆ ಬಟ್ಟೆ, ಒಳ್ಳೆ ವಸತಿ, ಒಳ್ಳೇ ಊಟ— ಎಲ್ಲ ಸೌಕರ್ಯಗಳು ಲಭ್ಯವಾದವು. ಇದರಿಂದ ಮುಣುಗುಬಂಟರಿಗೇ

ಎಲ್ಲರಿಗಿಂತ ಆಶ್ಚರ್ಯ ಉಂಟಾಯಿತು. ಹೀಗೇಕೆ ಎಂದು ಅವರು ಕೇಳತೊಡಗಿದರು. ಆಗ ಜಪಾನೀಯರ ಸಲುವಾಗಿ ಸ್ವಲ್ಪ ಮುಣುಗು ಹಾಕಬೇಕಾದ ಅಗತ್ಯವಿದೆ ಎಂದು ಅವರಿಗೆ ಹೇಳಲಾಯಿತು.

"ಖಜಾನೆ ಒಗೆದ ಸ್ಥಳವನ್ನೂ ಇವರು ಅರಿತಿದ್ದಾರೆ. ನಾವು ಒಳ್ಳೇ ಮುಳುಗುಗಾರರೆಂಬುದನ್ನು ಇವರು ಬಲ್ಲರು. ಒಲ್ಲೆನೆಂದರೆ, ಗುಂಡು ಹಾಕುತ್ತಾರೆ. ಆಮೇಲೆ ಬೇರೆ ಜಪಾನೀಯರನ್ನಾದರೂ ತಂದು ಅವರು ಸಂಪತ್ತನ್ನು ತೆಗೆದುಕೊಂಡು ಹೋಗದೆ ಬಿಡರು. ಏನು ಮಾಡಬೇಕು?" ಎಂದು ಅಮೇರಿಕನ್ ಸೈನಿಕರು ಚಿಂತಾಕ್ರಾಂತರಾದರು. ಅದೇ ಹೊತ್ತಿಗೆ ತಾವು ತೆಗೆದ ಒಂದೊಂದು ನಾಣ್ಯವೂ ಗುಂಡುಗಳಾಗಿ ಮಾರ್ಪಟ್ಟು ತಮ್ಮ ದೇಶವಾಸಿಗಳ ಹೃದಯವನ್ನು ಹಿಂಡಬಹುದಲ್ಲ ಎಂಬ ವಿಚಾರದಿಂದ ಅವರ ಮೈ ನಡುಗುತ್ತಿತ್ತು. "ಕೆಲಸದಲ್ಲಿ ತಡ ಮಾಡೋಣ!" ಎಂದನೊಬ್ಬ. ಉಳಿದವರು ನಕ್ಕರು. "ಏನು ಪ್ರಯೋಜನ?" ಎಂದು. ಯುದ್ಧ ಎಷ್ಟು ದಿನ ನಡೆದೀತು ಎಂಬುದೇನೂ ನಿರ್ದಿಷ್ಟವಾಗಿದ್ದಿಲ್ಲ. ಕೊನೆಗೆ ಒಪ್ಪಿಕೊಂಡರು. ತೀರದಲ್ಲಿ ಜಪಾನಿ ಸೈನಿಕರು ಕೋವಿಗಳನ್ನು ಹಿಡಿದುಕೊಂಡು ಸಾಲುಗಟ್ಟಿ ನಿಂತರು. ಅವರು ಮುಣುಗುವ ಸ್ಥಳವನ್ನು ತಪ್ಪದೇ ತೋರಿಸಿದಾಗ ಅಮೇರಿಕನ್ನರು ಚಕಿತರಾದರು.

ಅಮೇರಿಕನ್ ತುಕಡಿಯ ಮುಂದಾಳು ಸಾಯರ್ಸ್ ಎಂಬಾತನಾಗಿದ್ದ. ಆತನೇ ಮೊದಲು ನೀರಿಗಿಳಿದ. ಅವನೇ ಒಗೆದಿದ್ದ ಪೆಟ್ಟಿಗೆಗಳನ್ನು ಇಂದು ಅವನೇ ತಗೆಯಬೇಕಾಗಿತ್ತು. ೪೦ ಅಡಿ ನೀರಲ್ಲಿ ಮುಳುಗುವುದರೊಳಗಾಗಿ ಪೆಟ್ಟಿಗೆಗಳ ಪರ್ವತವೇ ಅವನ ಮುಂದೆ ಇತ್ತು. ಒಂದು ಪೆಟ್ಟಿಗೆಯನ್ನು ಮೇಲೆ ಕಳಿಸಿ ಆತ ಮೇಲೆ ಬಂದ. ಇನ್ನೊಬ್ಬ ಇಳಿದ. ಅವನೊಂದು ಕಳಿಸಿದ. ಪ್ರತಿ ಒಬ್ಬನೂ ೧೫ ನಿಮಿಷ ನೀರಲ್ಲಿ ಮುಳುಗಿರುತ್ತಿದ್ದ. ಮೂರನೆಯವನೂ ಒಂದನ್ನು ಮೇಲೆ ಕಳಿಸಿದ. ಆದರೆ ಮೇಲೆ ಕಳಿಸಿದಾಗ ನಡುವೆಯೆ ಆ ಪೆಟ್ಟಿಗೆಯ ಒಂದು ಮಗ್ಗಲಿನ ಹಲಗೆ ಬಿಚ್ಚಿ ನಾಣ್ಯಗಳೆಲ್ಲ ನೀರಿನ ತಳಕ್ಕೆ ಇಳಿದವು. ಅವು ಮುಳುಗುತ್ತಿದ್ದಾಗ ಮೀನುಗಳಂತೆ ಮಿನುಗುತ್ತಿದ್ದವು. ಆದರೂ ಜಪಾನೀಯರು ಅಷ್ಟೊಂದು ಖೇದಗೊಳ್ಳಲಿಲ್ಲ. ದಿನಾಲು ಮೂರು— ಮೂರೇ ಪೆಟ್ಟಿಗೆ ಸಿಕ್ಕರೂ ಸಾಕು. ತಿಂಗಳೆರಡು ತಿಂಗಳಲ್ಲಿ ಸಮಸ್ತ-ಸಂಪದ್ಭಾಂಡಾರ ಕೈಗೆ ಬರುವುದೆಂದು ಬಗೆದರು.

ಅಂದು ರಾತ್ರಿ ಅಮೇರಿಕನ್ ಮುಳುಗುಬಂಟರಿಗೆ ಮೇಜವಾನಿ. ಎಲ್ಲರೂ ಸಾಲಾಗಿ ಕೂತಿದ್ದರು. ಊಟ, ಬ್ರ್ಯಾಂಡಿ ಎದುರಿಗಿತ್ತು. ಆದರೆ ಮನಸ್ಸು ವಿಹ್ವಲವಾಗಿತ್ತು. ಕೈ ಹಾಕಲು ಮನಸ್ಸಾಗುತ್ತಿದ್ದಿಲ್ಲ. ತಾವು ತಮ್ಮ ಮಾತೃಭೂಮಿಗೆ ವಿಶ್ವಾಸಘಾತ ಮಾಡಿದೆವೆಂದು ನೊಂದಕೊಂಡ ಅವರು ಅಂದು ಊಟವನ್ನು ಹಾಗೇ ದೂರ ಸರಿಸಿಬಿಟ್ಟರು. ಆಗಲೇ ಶೂನ್ಯದಿಂದ ಅಂಧಕಾರವನ್ನು ಸೀಳಿ ಬೆಳಕಿನ ಕಿರಣವೊಂದು ಬಂದಂತೆ ಒಬ್ಬನಿಗೆ ಒಂದು ವಿಚಾರ ಹೊಳೆಯಿತು. ಮೇಲೆ ಕಳಿಸುವ ಪೆಟ್ಟಿಗೆಗಳ ಕೆಳಮಗ್ಗಲಿನ ಹಲಗೆಯನ್ನು ಸಡಿಲು ಮಾಡಿ ಕಳಿಸಿದರೆ ಸಾಕು. ತಮ್ಮ ಕಾರ್ಯ ಕೈಗೂಡಬಹುದು. ದೇಶದ್ರೋಹದಿಂದ ತಾವು ಮುಕ್ತರಾಗಿ ಮನಸ್ಸಿನ ಮಾಲಿನ್ಯವನ್ನು ತೊಳೆದುಕೊಳ್ಳಬಹುದೆಂದನಾತ. ಇನ್ನೊಬ್ಬನೆಂದ: "ಆದರೆ ನಾವು ಉದ್ದೇಶಪೂರ್ವಕ ಹೀಗೆ ಮಾಡುತ್ತಿದ್ದೇವೆಂದು ಅವರು ಭಾವಿಸಬಾರದಲ್ಲ. ಅದಕ್ಕಾಗಿ ಆಗಾಗ ಒಂದೊಂದನ್ನು ಸುರಕ್ಷಿತವಾಗಿಯೂ ಕಳಿಸಬೇಕು." ಮತ್ತೊಬ್ಬ ಇನ್ನೊಂದು ಸೂಚನೆಯಿತ್ತ. ಪೆಟ್ಟಿಗೆ ಒಡೆದಾಗ ಉದುರುವ ನಾಣ್ಯಗಳನ್ನು ತಮ್ಮ ಮುಳುಗು-ಬಟ್ಟೆಯಲ್ಲಿ ತುಂಬಿಕೊಂಡು ಅಲ್ಲಲ್ಲಿ ಚೆಲ್ಲಿಬಿಡಬೇಕು. ಅವು ಫಿಲಿಪಾಯಿನ್ ಜನರ ಕೈಗೆ ಸಿಕ್ಕಿ ಜಪಾನೀಯರ

ಅರ್ಥವ್ಯವಸ್ಥೆಯೆ ಗೊಂದಲಕ್ಕೀಡಾಗುವುದು.

ಈ ಉಪಾಯ ಸಾಕಷ್ಟು ಸಫಲವಾಯಿತು. ಒಂದು ವೇಳೆ ಉದುರುವ ನಾಣ್ಯಗಳನ್ನು ಹಿಡಿದುಕೊಳ್ಳಲು ಬಲೆಗಳನ್ನು ಪೆಟ್ಟಿಗೆಗಳ ಕೆಳಗೆ ಕಟ್ಟುವ ಯೋಚನೆ ಅವರಿಗೆ ಹೊಳೆದಿದ್ದರೆ ಅವರು ಇಡೀ ಸಂಪತ್ತನ್ನು ಸುರಕ್ಷಿತವಾಗಿ ಉಳಿಸಬಹುದಿತ್ತು. ಆದರೆ ವಿಧಿಲೀಲೆ. ಹಾಗಾಗಲಿಲ್ಲ. ಸಿಕ್ಕಿದ ಕೆಲವೇ ಪೆಟ್ಟಿಗೆಗಳು ಜಪಾನೀಯರನ್ನು ಆನಂದತುಂದಿಲರನ್ನಾಗಿ ಮಾಡಿದ್ದವು.

ಆದರೆ ಸ್ವಲ್ಪ ದಿನಗಳಲ್ಲೀ ಸಮಸ್ತ ಮನಿಲಾ ಆಖಾತದ ಪ್ರತಿಯೊಬ್ಬ ನಿವಾಸಿಯ ಹತ್ತಿರ ನಾಣ್ಯಗಳು ಹೆಚ್ಚಿದ್ದನ್ನು ಕಂಡು ಜಪಾನೀಯರು ಸಂಶಯಗೊಂಡರು. ಉಪ್ಪು ನೀರಿನ ಪರಿಣಾಮದಿಂದ ಈ ನಾಣ್ಯಗಳು ಕಪ್ಪಾಗಿದ್ದವೆಂಬುದನ್ನು ಅವರು ಕಂಡರು. ಆದರೆ ಈ ನಾಣ್ಯಪ್ರವಾಹವನ್ನು ತಡೆಯಲು ಯುಕ್ತಿ ಅವರ ಹತ್ತಿರ ಇರಲಿಲ್ಲ. ಈ ದುಡ್ಡನ್ನು ಅಮೇರಿಕನ್ನರೇ ಸಾಗಿಸಿದ್ದಾರೆನ್ನಬೇಕೆಂದರೆ ಹಾಗೆ ಮಾಡಲು ಅವರಿಗೆ ಅವಕಾಶವಾದರೂ ಯಾವಾಗ ದೊರೆಯುತ್ತಿತ್ತು ಎಂಬ ಪ್ರಶ್ನೆ ಇತ್ತು. ಇದರ ಗುಟ್ಟು ಹೀಗಿತ್ತು. ಅಮೇರಿಕನ್ ಮುಣುಗು-ಬಂಟರಿಗೆ ಮುಣುಗು ಬಟ್ಟೆ ತೊಡಿಸುವವರು ಫಿಲಿಪಾಯಿನ್ ನಾವಾಡಿಗರು. ಅಮೇರಿಕನ್ನರು ಅವರಿಗೆ ಶಭಾಸ್ ಎಂದು ಹೇಳಿ ಬೆನ್ನಮೇಲೆ ಕೈಯಾಡಿಸುವ ನೆವದಿಂದ ಅಥವಾ ಪ್ರೀತಿಯಿಂದ ಅಲಿಂಗಿಸುವ ನೆವದಿಂದ ಅಥವಾ ಇನ್ನಾವುದೇ ಹಂಚಿಕೆಯಿಂದ ಒಂದೊಂದು ಮುಷ್ಟಿ ನಾಣ್ಯಗಳನ್ನು ಅವರ ಜೇಬಿಗೆ ಸೇರಿಸುತ್ತಿದ್ದರು. ಮರುದಿನ ಈ ನಾಣ್ಯಗಳು ಪೇಟೆಯಲ್ಲಿರುತ್ತಿದ್ದವು.

ಇತ್ತ ಜಪಾನಿ ಸೈನ್ಯವು ಖಜಾನೆ ತೆಗೆಸಿ ಸಮ್ರಾಟನಿಗೆ ಅರ್ಪಿಸಿದ್ದರಿಂದ ಸ್ವಲ್ಪ ಗೌರವವೇನೊ ದೊರೆತಿತ್ತಾದರೂ ಅರ್ಥವ್ಯವಸ್ಥೆ ಕೆಡುತ್ತಿದೆ ಎಂಬ ಸುದ್ದಿಯೂ ಸಮ್ರಾಟನ ಕಿವಿ ಮುಟ್ಟದಿರಲಿಲ್ಲ. ಇಷ್ಟರಲ್ಲಿ ಒಂದು ಘಟನೆ ಸಂಭವಿಸಿತು. ಅದರಿಂದ ಸಮ್ರಾಟನ ಕೋಪಕ್ಕೆ ಜಪಾನಿ ಅಧಿಕಾರಿಗಳು ಗುರಿಯಾಗುವುದು ತಪ್ಪಿಹೋಯಿತು.

ದೊಡ್ಡ ಬಿರುಗಾಳಿ ಬಿಟ್ಟಿತು. ಸಾವಿರಾರು ಮನೆಗಳ ಚಪ್ಪರಗಳು ಹಾರಿದವು. ಗೋಡೆಗಳು ಕುಸಿದವು. ಸಮುದ್ರ ಎರಡು ಮೂರು ಮೈಲು ಒಳಗೆ ಬಂತು. ಮತ್ತು ಅದು ಹಿಂದೆ ಸರಿದಾಗ ರಭಸದೊಂದಿಗೆ ಎಳತಂದಿದ್ದ ನಾಣ್ಯಗಳು ದಡದ ಒಣ ನೆಲದಲ್ಲಿ ಉಳಿದಿತ್ತು. ಆದ್ದರಿಂದ ಜಪಾನಿ ಅಧಿಕಾರಿಗಳಿಗೆ ಪಾರಾಗಲು ಅನುವಾಯಿತು. ಈ ಏರಿಗೊಮ್ಮೆ ಬರುವ ನಾಣ್ಯಗಳಲ್ಲಿ ಹಲವನ್ನು ಆರಿಸಿಕೊಂಡು ದೇಶ ನಿವಾಸಿಗಳು ಹೋಗುತ್ತಿದ್ದರೆಂದು ಅವರು ಹೇಳತೊಡಗಿದರು. ಇದೂ ನಿಜವಿರಬಹುದು. ಆದರೆ ಅಮೇರಿಕೆಯವರು ಹೇಳುವುದು ಬೇರೆಯೆ. ತಾವು ಕಡಲಿನ ದುಡ್ಡು ಪಡೆದದ್ದರಿಂದಲೇ ಸಮುದ್ರ ರಾಜ ರೋಸಿಗೊಂಡು ಅಬ್ಬರಿಸುತ್ತಿದನ್ದೆಂದು ಭಾವಿಸಿ ಪಾಪ, ಬಡಪಾಯಿ ಫಿಲಿಪಾಯಿನ್ ನಿವಾಸಿಗಳು ತೆಗೆದುಕೊಂಡ ದುಡ್ಡನ್ನೂ ಮರಳಿ ಚೆಲ್ಲಲೆಂದು ಸಮುದ್ರತೀರಕ್ಕೆ ಬರುತ್ತಿದ್ದರಂತೆ!

ಆ ಸಲದ ಯತ್ನದಲ್ಲಿ ಹೊರತೆಗೆದ ಪೆಟ್ಟಿಗೆಗಳು ಕೆಲವೇ. ಇನ್ನೂ ಏನಿಲ್ಲೆಂದರೂ ಎರಡು ಎರಡೂವರೆ ಕೋಟಿ ರೂಪಾಯಿ ಬೆಲೆ ಬಾಳುವಷ್ಟಾದರೂ ನಾಣ್ಯಗಳು ಇರಬಹುದು. ನೋಡಿ. ಎದೆಯಿದ್ದರೆ ಸ್ವಲ್ಪ ಧೈರ್ಯ ಮಾಡಿರಿ. ಅದನ್ನು ತಕ್ಕೊಂಡು ಬನ್ನಿರಿ! . . . . ✶



ನಗೆಯಿಂದ ರಕ್ತಶುದ್ಧಿಯಾಗುತ್ತದೆ. —ಇಟಾಲಿಯನ್ ನಾಣ್ಣುಡಿ

ಇದುವೆ ಜೀವ, ಇದು ಜೀವನ

ಕುಂದಾಪುರ ಲೈನಿನಲ್ಲಿ ಕಂಡಕ್ಟರನಾಗಿದ್ದವನು ಅಕಸ್ಮಾತ್ತಾಗಿ ಮಂಗಳೂರು ಪುತ್ತೂರು ಲೈನಿಗೆ ವರ್ಗಾಯಿಸಲ್ಪಟ್ಟನು. ಪಾಪ ಹೊಸ ಲೈನು. ಸ್ಥಳಗಳ ಹೆಸರು ಗೊತ್ತಿಲ್ಲ. ಬಸ್ಸು ಮಂಗಳೂರಿನಿಂದ ಪುತ್ತೂರಿಗೆ ಹೋಗುತ್ತಿದ್ದಾಗ 'ಬಿ. ಸಿ. ರೋಡು' ಎಂಬಲ್ಲಿ ಹದಿನೈದು ವರ್ಷದ ಹುಡುಗಿ ಬಸ್ಸನ್ನು ಏರಿದಳು.

ಕಂಡಕ್ಟರ್ ಅವಳೊಡನೆ "ಎಲ್ಲಿಗೆ" ಎಂದು ಪ್ರಶ್ನಿಸಲು ಹುಡುಗಿಯು "ಮಾಣಿಗೆ" ಎಂದಳು. ಕಂಡಕ್ಟರ ಒಮ್ಮೆ ಚಕಿತನಾಗಿ ಬಳಿಕ ನಕ್ಕನು. ("ಮಾಣಿ" ಎಂದರೆ ತುಳು ಭಾಷೆಯಲ್ಲಿ ಹುಡುಗ ಎಂದರ್ಥ.) ಅರ್ಥವಾಗದೆ ಹಾಗೆ ಹೇಳಿರಬಹುದೆಂದು ಭಾವಿಸಿ, ಮತ್ತೊಮ್ಮೆ ಕಂಡಕ್ಟರ್ ಹುಡುಗಿಗೆ "ಎಲ್ಲಿಗೆ?" ಎಂದು ಕೇಳಿದಾಗಲೂ ಹುಡುಗಿ "ಮಾಣಿಗೆ" ಎಂದೇ ಹೇಳಿದಳು. ಕಂಡಕ್ಟರನ ಅವಸ್ಥೆಯನ್ನು ಕಂಡು ಕಡೆಗೆ ಬಳಿಯಲ್ಲಿದ್ದ ನಾನು "ಮಾಣಿ" ಎಂಬುದು ಮುಂದೆ ಸಿಗತಕ್ಕ ಊರಿನ ಹೆಸರೆಂದು ವಿವರಿಸಬೇಕಾಯಿತು.


— ಕುದುಂಬ್ಲಾಡಿ ನಾರಾಯಣ ಭಟ್

ಝಾನ್ಸಿಯಲ್ಲಿಳಿದು ಕಾನ್‌ಪುರ ಪ್ಯಾಸೆಂಜರ್ ಡಬ್ಬಿಯೊಂದರಲ್ಲಿ ಕುಳಿತಿದ್ದೆ. ನನ್ನ ಗಮನ ಅಂದಿನ ದಿನ ಪತ್ರಿಕೆಯಲ್ಲಿ ಮೂಡಿತ್ತು. "ನನ್ನ ಸೂಟ್ ಕೇಸ್ (Suitcase) ಎಲ್ಲಿ!" ಎಂಬ ಧ್ವನಿ ನನ್ನ ಚಿತ್ತವನ್ನು ಕದಲಿಸಿತು. "ನನಗೇನೂ ತಿಳಿಯದು" ಎಂದು ಎದುರಿಗೆ ಕುಳಿತಿದ್ದ ಮಧ್ಯವಯಸ್ಸಿನಾಕೆ ಆ ಧ್ವನಿಗೆ ಉತ್ತರಿಸಿದಳು. "ಅರೆ ನಿಮಗೆ ವಹಿಸಿ ಹೋದೆನಲ್ಲ!?!" ಎಂದ ಘಾಬರಿಯಿಂದ, ಆ ಧ್ವನಿಯಾತ. "ಇರಬಹುದು, ಆದರೆ ನನಗೆ ಗಮನವಿರಲಿಲ್ಲವೇನೋ!" ಎಂದು ಆಕೆ ನಿರ್ದಾಕ್ಷಿಣ್ಯವಾಗಿ ಹೇಳಿಬಿಟ್ಟಳು. ಆತನ ಕಂಪಿತ ಭಾವೋದ್ವೇಗಧ್ವನಿ -"ಏನೆಂದಿರಿ?.... ನಿಮಗೆ ವಹಿಸಿದ ಮೇಲೆ ಜವಾಬ್ದಾರಿ ಯಾರದು?" ಎಂದಿತು.

ನನ್ನ ಬದಿಯಲ್ಲಿದ್ದ ತಲೆನೆರೆತವರೊಬ್ಬರು ಆತನನ್ನು ಸಮಾಧಾನ ಪಡಿಸುತ್ತಾ "ನೀವು ಈ ಡಬ್ಬಿಯಲ್ಲೇ ಇದ್ದಿರೆಂಬುದು ಖಚಿತವೇ?" ಎಂದು ಪ್ರಶ್ನಿಸಿದರು.

"ಆದರಲ್ಲಿ ಯಾವ ಅನುಮಾನವೂ ಇಲ್ಲ,- ಈಕೆ ಇರುವ ಈ ಡಬ್ಬಿಯಲ್ಲೇ, ಈಕೆಗೇ ನನ್ನ ಸೂಟ್ ಕೇಸ್ (Suitcase)ನ್ನು ವಹಿಸಿ ನೋಡಿಕೊಳ್ಳುವಂತೆ ಹೇಳಿ-...." ಅಷ್ಟರಲ್ಲಿ ಅವಳು ಅಲ್ಲಿ ಕಾಣೆಯಾದಳು. ಆತ ಅನುಮಾನದಿಂದ ಡಬ್ಬಿಯ ಬಾಗಿಲ ಕಡೆಗೆ ನಡೆದ. ಆಕೆ ಸ್ವಲ್ಪ ದೂರದಲ್ಲಿ ಡಬ್ಬಿಗಳನ್ನು ದಾಟ ನಡೆಯುತ್ತಿದ್ದಳು. ಆತ ಮತ್ತೂ ಅನುಮಾನದಿಂದ ಆಕೆಯನ್ನು ಹಿಂಬಾಲಿಸಿದ. ಅವರಿಬ್ಬರ ಹಿಂದೆ ನಮ್ಮ ತಂಡವೇ ಹೊರಟಿತ್ತು. ಕೆಲವು ಡಬ್ಬಿಗಳನ್ನು ದಾಟ ಕೊನೆಗೆ ಅವಳು ಒಂದು ಡಬ್ಬಿಯ ಹತ್ತಿರ ನಿಂತಳು. ಮಂದಗಮನದಿಂದ ಆ ಡಬ್ಬಿ

ನೀವು






ಕೊಳ್ಳುವಾಗ

ಜೂಜು





ಆಡ

ಬೇಡರಿ

ಜೀವನ ಮತ್ತು ಸೌಂದರ್ಯವು ಜೂಜಾಡಲು ಬಹಳೇ ಮೌಲ್ಯವಾದವುಗಳು:— ಆದರೆ ನಿಮಗೆ ನಿಮ್ಮ ನಿಮ್ಮ ಅದೃಷ್ಟವನ್ನು ಪರೀಕ್ಷಿಸುವದೇ ಆದ ಪಕ್ಷಕ್ಕೆ, ನಿಮಗೆ ಬೇಕಾದ್ದನ್ನು, ಪಣ ತೊಡಿರಿ— ಆದರೆ ನಿಮ್ಮ ಸೌಂದರ್ಯವನ್ನು ಮಾತ್ರ ಬಿಟ್ಟು, ಒಮ್ಮೆ, ನಿಮ್ಮ ಶುದ್ಧವಾದ ಮತ್ತು ಜಾಜ್ವಲ್ಯವಾದ ಕಾಂತಿಯನ್ನು ನಿರ್ಲಕ್ಷಿಸಿದರೆ, ಜಗತ್ತಿನ ಯಾವ ಶಕ್ತಿಯೂ ಅದನ್ನು ಮರಳಿ ಕೊಡಲಾರದು. ನಿಮ್ಮ ಸೌಂದರ್ಯ ಕಾಂತಿಗಾಗಿ "ಅಫಘಾನ ಸ್ನೋ" ವನ್ನು ಅವಲಂಬಿಸಿರಿ. ಸೌಂದರ್ಯ ವೃದ್ಧಿಸುತ್ತದೆ.... ಅವು ನಿಜವಾಗಿಯೂ ಒಳ್ಳೇಯವಾಗಿರುವವು.... ಅವಲಂಬನೀಯವು........

ಯೋಗ್ಯ— ಬೆಲೆಯುಳ್ಳವು

ಅಫಘಾನ ಸ್ನೋ

ಸೌಂದರ್ಯ ವೃದ್ಧಿಸುತ್ತದೆ !

ಈ. ಎಸ್. ಪಾಟನವಾಲಾ,
ಮುಂಬಯಿ-೨೭ (ಭಾರತ)

ಯಲ್ಲಿ ಹತ್ತಿದಳು. ಆತ ಪೋಲೀಸನಂತೆ ಆಕೆಯ ಹಿಂದೆಯೇ ನಿಂತಿದ್ದ..ಸಿಕ್ಕಿತು..! ಎಂದು ಕೂಗಿ ಅವಳು ಆ ಡಬ್ಬಿಯ ಮೂಲೆಯೊಂದರ ಕಡೆಗೆ ಓಡಿದಳು. ಆತ ಆಕೆಗಿಂತ ಮೊದಲೇ ಆ ಮೂಲೆಗೆ ಹಾರಿ, ಅಲ್ಲಿ ಕೂಡುವ ಜಾಗದಲ್ಲಿ ಹಾಯಾಗಿ ನಿದ್ರಿಸುತ್ತಿದ್ದ ಸೂಟ್ ಕೇಸನ್ನು ಅಪ್ಪಿದ್ದ!

ಆ ಮಹಾ ತಾಯಿ ಜಾಗ ಹಿಡಿಯುವ ಆತುರದಲ್ಲಿದ್ದಾಗ ಆತ ಸೂಟ್ ಕೇಸನ್ನು ವಹಿಸಿ ಹೋಗಿದ್ದ ಜಾಗ ತೃಪ್ತಿಕರವಾಗದೆ ಅವಳ ಜಾಗ ಬೇರೆಯ ಡಬ್ಬಿಗೆ ಬದಲಾಗಿ ಈ ಪ್ರಸಂಗಕ್ಕೆ ಕಾರಣವಾಗಿತ್ತು.

—ಸೋಮಶೇಖರ ಬಾಣಾವರ

ನನ್ನ ಪೋಲೀಸ್ ಮಿತ್ರನೊಬ್ಬ ನನಗೆ ಹೇಳಿದ್ದಿದು:

ಒಂದು ದಿನ ಅವನೂ ಇನ್ನೊಬ್ಬ ಸಹ-ಪೋಲೀಸನೂ ಸೇರಿ ಒಬ್ಬ ಸುಪರಿಚಿತ ಕಳ್ಳನನ್ನು ಹಿಡಿದು ತಂದಿದ್ದರು. ಸ್ವಲ್ಪ ಹೊತ್ತಿನ ನಂತರ ಅವರ ಸಿ. ಐ. ಡಿ. ಅಧಿಕಾರಿ ಅಲ್ಲಿಗೆ ಬಂದರು. ಅವರು ಕಳ್ಳನನ್ನೊಮ್ಮೆ, ಪೋಲೀಸರನ್ನೊಮ್ಮೆ ಕೆಕ್ಕರಿಸಿ ನೋಡಿ "ಯಾಕಿವನನ್ನು ತಂದಿದ್ದೀರಿ ?" ಎಂದು ಕೇಳಿದರು.

"ನಿನ್ನೆ ರಾತ್ರಿ— ರಸ್ತೆಯ ಎರಡನೇ ಮಾಳಿಗೆಯಲ್ಲಿ ಬೀಗ ಒಡೆದು ಕಳವು ಮಾಡಿದವನು ಇವನೇ ಸಾರ್" ಎಂದ ನನ್ನ ಪೋಲೀಸ್ ಮಿತ್ರ.

"ಹೀಗೊ? ತಪ್ಪು ಒಪ್ಪಿದ್ದಾನೆಯೆ?"

"ಇಲ್ಲ ಸಾರ್."

"ಇವನನ್ನು ತಂದು ಎಷ್ಟು ಹೊತ್ತಾಯಿತು?"

"ನಾಲ್ಕು ತಾಸು. ಏನು ಮಾಡಿದರೂ ಒಪ್ಪಲಿಲ್ಲ ಸಾರ್."

"ಹೇಗೆ ಒಪ್ಪಿಯಾನು? ನೀನೇ ತಾನೆ ಇವನನ್ನು ಹಿಡಿದದ್ದು? ಶುದ್ಧ ಬಟಾಟೆ ತಲೆ ನೀನು! ಈ ಮುಠ್ಠಾಳ ಇಂಥಾ ಕಳ್ಳತನ ಮಾಡಿಯಾನೆಂದು ತಿಳಿಯೋ ನೀನು ಪೋಲೀಸ್ ಆಗಿರೋದಕ್ಕಿಂತ ಕತ್ತೆ ಕಾಯಲಿಕ್ಕೆ ಹೋಗು!"

ನನ್ನ ಮಿತ್ರ ಕಂಪೇರಿದ. "ಇಲ್ಲಾ ಸಾರ್, ನನಗೆ ಖಂಡಿತ...."

"ಮುಚ್ಚು ಬಾಯ್! ಈತನ್ನ ನಾನು ತಾಯಿ ಮೊಲೆ ಚೀಪುತ್ತಿದ್ದಾಗಿನಿಂದ ಬಲ್ಲೆ. ಬೇಲಿಗೆ ಒಣ ಹಾಕಿದ ಪಂಚೆ ಕದಿಯೋ ಯೋಗ್ಯತೆ ಇಲ್ಲದ ಇವನಿಗೆ ಎರಡನೇ ಮಹಡಿಯಲ್ಲಿ ಬೀಗ ಮುರಿಯುವ ಹಿಮ್ಮತ್ತು ಬಂದೀತೆ?"

"ಆದರೆ ಸಾರ್, ನಾನು ..."

"ಬಾಯಿ ತೆರೆದರೆ ಒದೀತೀನಿ. ನನಗ್ಗೊತ್ತೋ ಇವನ ಪರಾಕ್ರಮ. ಏಣೀ ಹತ್ತೋಕ್ಕೆ ಹೆದರೋ ಈ ಶುಂಭ ಗೋಡೇ ಹತ್ತಿ ಎರಡನೇ ಮಾಳಿಗೇಲಿ ಕಳವು ಮಾಡ್ತಾನಂತೆ!"


"ಆದರೆ ನನಗೆ ಖಂಡಿತ ಗೊತ್ತಿದೆ ಸಾರ್"

"ಏನು ಗೊತ್ತಿದೆ? ಇವನಿಗೆ ತಲೆಯೊಂದು ಬೇಕಲ್ಲ!"

ಇಷ್ಟರಲ್ಲಿ ನನ್ನ ಮಿತ್ರನಿಗಿಂತ ಕಳ್ಳ ಕೆಂಪೇರಿದ್ದ. ಅವ ಸಿಟ್ಟಿನಿಂದ ನಡುಗುತ್ತ ಅಧಿಕಾರಿಯನ್ನು ಧಿಕ್ಕಾರ ವಾಣಿಯಿಂದ ಸಂಬೋಧಿಸಿ, "ಏಯ್ ಇನಸ್ಪೆಕ್ಟರ್! ಶುಂಭ ಯಾರಂತ ಕೇಳು! ನಾನೇ ಆ ಕಳವು ಮಾಡಿದ್ದೇನೆ. ಇವೇ ಕೈಕಾಲುಗಳಿಂದ ಗೋಡೆ ಹತ್ತಿ! ತೋರಿಸಲೇ ನಿನಗೆ ಈ ಪೋಲೀಸ್ ಠಾಣೆಯ ಗೋಡೇ ಹತ್ತಿ?"

ಇನಸ್ಪೆಕ್ಟರ್ ಮುಖ ಅರಳಿತು. "ಬರೆದುಕೋ ಇವನ ಹೇಳಿಕೆ!" ಎಂದರು ಅವರು.

— ವಿ. ಸಿ. ತಿಮ್ಮಪ್ಪ



ಅಶ್ವತ್ಥ ಮರದ ನೆರಳಲ್ಲಿ....
ಪ್ರತಿ ದಿನದ ಕೆಲಸ ಮುಗಿದ ಮೇಲೆ, ಭಾರತದ ಹಳ್ಳಿಗರು ಹೆಚ್ಚಾಗಿ ಹಳ್ಳಿಯ ಒಂದು ಅಶ್ವತ್ಥದ ಮರದಡಿಯಲ್ಲಿ ಎಲ್ಲರೂ ಒಟ್ಟು ಕೂಡಿ ಹರಟೆ ಹೊಡೆಯುವುದು ಅವರ ಸಂಪ್ರದಾಯವಾಗಿರುವುದು. ಇಂದು ಅವರ ನಡುವೆ ಡ್ರೈಸೆಲ್ ಬ್ಯಾಟರಿಯಿಂದ ಚಲಿಸುವ ರೇಡಿಯೋಗಳನ್ನು ಕಾಣುತ್ತೇವೆ ಇಂತಹ ರೇಡಿಯೋಗಳಿಂದ ಅವರು ವರ್ತಮಾನಗಳನ್ನೂ ಮತ್ತು ಸುಮಧುರ ಸಂಗೀತಗಳನ್ನು ಪಡೆದು ಆನಂದಿಸುವುದು ಒಂದು ಸಾಮಾನ್ಯ ದೃಶ್ಯವಾಗಿ ಇಂದು ಪರಿಗಣಿಸಲ್ಪಟ್ಟಿರುತ್ತದೆ.
ಇಂದು ಭಾರತೀಯ ಹಳ್ಳಿಗನು ಸಂಗೀತದ ಬಗ್ಗೆ ಮತ್ತು ಅದನ್ನು ಒದಗಿಸುವ ಸಾಧನಗಳ ಬಗ್ಗೆ ಅಧಿಕ ಗಮನವನ್ನೀಯುತ್ತಿದ್ದಾನೆ.
ಇದರ ಪರಿಣಾಮವಾಗಿ ಆತನ ರೇಡಿಯೋ ಉತ್ತಮವಾಗಿ ಚಲಿಸಲು ಎಸ್ಟ್ರೆಲಾ ರೇಡಿಯೋ ಬ್ಯಾಟರಿಗಳನ್ನೇ ಉಪಯೋಗಿಸುತ್ತಿದ್ದಾನೆ
ದೀರ್ಘಕಾಲ ಬಾಳುವಂತೆ ತಯಾರಿಸಲ್ಪಟ್ಟ ಈ ಬ್ಯಾಟರಿ, ಡ್ರೈಸೆಲ್ ಬ್ಯಾಟರಿಯ ತಯಾರಿಕೆಯಲ್ಲಿ 20 ವರ್ಷಗಳ ಅಗಾಧ ಅನುಭವದ ಉತ್ಪಾದನೆಯಾಗಿರುತ್ತದೆ. ಎಸ್ಟ್ರೆಲಾ ಬ್ಯಾಟರಿಗಳು ಪ್ರಖ್ಯಾತವಾದ ಅಂತರರಾಷ್ಟ್ರೀಯ ಪ್ರಮಾಣಕ್ಕೆ ತಕ್ಕಂತೆ ತಯಾರಿಸಲ್ಪಟ್ಟು ಪರೀಕ್ಷಿಸಿ ಸಿದ್ಧಗೊಳಿಸಲ್ಪಟ್ಟಿವೆ.
ಇಂದೇ ನಿಮ್ಮ ರೇಡಿಯೋಗೆ ಎಸ್ಟ್ರೆಲಾ ಬ್ಯಾಟರಿಯನ್ನು ಜೋಡಿಸಿರಿ ನೀವು ಬಯಸುವ ಎಲ್ಲಾ ಗುಣಗಳು ಇವಲ್ಲಿ ಕೂಡಿವೆ.
ಎಸ್ಟ್ರೆಲಾ
ರೇಡಿಯೋ ಬ್ಯಾಟರಿ
ನಿಮ್ಮ ರೇಡಿಯೋ ವ್ಯಾಪಾರಿಯಲ್ಲೀಗ ದೊರೆಯುತ್ತದೆ
ESTRELA
ಎಸ್ಟ್ರೆಲಾ ಬ್ಯಾಟರೀಸ್ ಲಿಮಿಟೆಡ್.
ಬೊಂಬಾಯಿ · ಮದ್ರಾಸ್ · ಡಿಲ್ಲಿ · ಕಲ್ಕತ್ತ · ಕಾನ್ ಪೂರ್

J 5-7

ಅದಕ್ಕೆ ಪ್ರಕಾಶಕರೇ ಸಿಗಲಿಲ್ಲ— ಈಗ ಪ್ರತಿ ತಿಂಗಳು ೨ ಕೋಟಿ ಪ್ರತಿ ಮಾರುತ್ತದೆ.



ರೀಡರ್ಸ್ ಡೈಜೆಸ್ಟಿನ ಕಥೆ

ಪಾವೆಂ.

ರೀಡರ್ಸ್ ಡೈಜೆಸ್ಟ್" ಎಂಬ ಹೆಸರು ಇಂದು ಪತ್ರಿಕಾಪ್ರಪಂಚದಲ್ಲೊಂದು ಹೆಗ್ಗುರುತಾಗಿದೆ. ಪ್ರತಿ ತಿಂಗಳು ೨೬ ದೇಶಗಳಲ್ಲಿ ೧೩ ಭಾಷೆಗಳಲ್ಲಿ ಹೊರಡುವ ಅದರ ೩೦ ಆವೃತ್ತಿಗಳ ಎರಡು ಕೋಟಿ ಮೇಲ್ಪಟ್ಟು ಪ್ರತಿಗಳು ಮಾರಾಟವಾಗುತ್ತಿವೆ. ಇಷ್ಟು ಪ್ರಚಂಡ ಪ್ರಸಾರ ಯಾವ ದೇಶದ ಯಾವ ಪತ್ರಿಕೆಗೂ ಇಲ್ಲ. ಅಮೇರಿಕದಲ್ಲಿ ನ್ಯೂಯಾರ್ಕಿನ ಉತ್ತರದಲ್ಲಿರುವ ಪ್ಲೆಸೆಂಟ್‌ವಿಲೆಯ ಅದರ ೮೦ ಎಕರೆ ವಿಸ್ತಾರವಾದ ಸಂಪಾದಕೀಯ ಕಾರ್ಯಾಲಯಗಳಲ್ಲಿ ಒಂದು ನೂರು ಜನ ಸಂಪಾದಕ ಉಪಸಂಪಾದಕರು ಬೇರೆ ಬೇರೆ ಪತ್ರಿಕೆಗಳಲ್ಲಿ ಬಂದ ಲೇಖಗಳನ್ನು ಓದುವ, ಕತ್ತರಿಸುವ, ಸಂಕ್ಷೇಪಿಸುವ, ಪುನರ್ಲೇಖಿಸುವ ಕಾರ್ಯದಲ್ಲಿ ನಿರತರಾಗಿರುತ್ತಾರೆ. ಅದರ ಸಂಚಾರಿ ಸಂಪಾದಕರು ಡೈಜೆಸ್ಟಿಗೆ ಬೇಕಾದ ವಿಶೇಷ ಲೇಖನಗಳಿಗಾಗಿ ವಿಷಯಗಳನ್ನು ಕಂಡುಹಿಡಿಯಲು ಪಂಚಖಂಡಗಳನ್ನು ಸುತ್ತುತ್ತಾರೆ.

ಅದರ ವ್ಯವಹಾರ ಮತ್ತು ಪ್ರಚಾರ ಕಚೇರಿಗಳು ಬೇರೆಯೆ ಇವೆ. ಡೇಟನ್ ಎಂಬಲ್ಲಿ ಮೆಕ್‌ಕಾಲ್ ಮುದ್ರಣಾಲಯದಲ್ಲಿ ಅದರ ಅಮೇರಿಕನ್ ಸಂಸ್ಕರಣದ ಐದು ಲಕ್ಷ ಪ್ರತಿಗಳು ನಿತ್ಯ ಮುದ್ರಣ ಹೊಂದುತ್ತವೆ. ಇದೊಂದೇ ಆವೃತ್ತಿಗೇ ವರ್ಷಕ್ಕೆ ೫೦ ಸಾವಿರ ಟನ್ ಕಾಗದ ಬೇಕಾಗುತ್ತದೆ. ಇತರ ಆವೃತ್ತಿಗಳು ೩೪ ಸಾವಿರ ಟನ್ ಕಾಗದವನ್ನು ವೆಚ್ಚ ಮಾಡುತ್ತವೆ.

ಈ ಅಪೂರ್ವ ಪತ್ರಿಕೆಯ ಕಲ್ಪನೆ ೪೩ ವರ್ಷಗಳ ಹಿಂದೆ ಯುರೋಪಿನ ರಣರಂಗದ ಒಂದು ಆಸ್ಪತ್ರೆಯಲ್ಲಿ ಜನ್ಮ ತಾಳಿತು. ಡಿ ವಿಟ್ ವಾಲೇಸನೆಂಬ ೨೯ ವರ್ಷದ ಅಮೇರಿಕನ್ ತರುಣ ವರ್ಡನ್ ರಣರಂಗದಲ್ಲಿ ವಿಪರೀತ ಗಾಯಗೊಂಡು ಶುಶ್ರೂಷೆ ಹೊಂದುತ್ತಿದ್ದ. ಆತ ಭಾರಿ ಓದುಗುಳಿ. ಆಸ್ಪತ್ರೆಗೆ ಬರುತ್ತಿದ್ದ ಸೂ-

ರಾರು ಅಮೇರಿಕನ್ ಮಾಸಿಕ ಮತ್ತು ವಾರ ಪತ್ರಿಕೆಗಳನ್ನು ಆತ ಓದುತ್ತಿದ್ದ. ಅವನ ಜ್ಞಾನ ತೃಷ್ಣೆ ಅಗಾಧವಾಗಿತ್ತು. ಹಲವು ವಿಷಯಗಳನ್ನು ತಿಳಿದುಕೊಳ್ಳಲು ಆತ ಹಾತೊರೆಯುತ್ತಿದ್ದ. ಆದರೆ ಪತ್ರಿಕಾಲೇಖಗಳನ್ನೋದುತ್ತ ಹೋದಂತೆ ಅವನಿಗೆ ಇಷ್ಟು ಉದ್ದುದ್ದ ಲೇಖನಗಳು ಸಾಮಾನ್ಯ ಓದುಗನಿಗೆ ಅಗತ್ಯವೇ? ಅವನ್ನೋದಲು ಅವನಿಗೆ ಸಮಯವುಂಟೇ? ಎಂಬ ಯೋಚನೆ ಹುಟ್ಟಿತು. ಬೇರೆ ಬೇರೆ ಪತ್ರಿಕೆಗಳಲ್ಲಿ ಬಂದ ಮಹತ್ವದ ಲೇಖಗಳನ್ನು ಸಂಕ್ಷೇಪಿಸಿ ವಿವಿಧ ವಿಷಯಗಳನ್ನೊಳಗೊಂಡ ಹೊಸ ತರದ ಪತ್ರಿಕೆಯನ್ನೇ ಪ್ರಕಟಿಸಿದರೆ ತನ್ನಂತೆ ಬಹು ವಿಷಯಗಳನ್ನು ತಿಳಿಯುವ ಆಸೆಯುಳ್ಳವರಿಗೆ ಉಪಯೋಗವಾಗಲಿಕ್ಕಿಲ್ಲವೆ?

ಯುದ್ಧ ಮುಗಿದು ಸೈನ್ಯದಿಂದ ಬಿಡುಗಡೆ ಹೊಂದಿ ಮರಳಿದೊಡನೆ ವಾಲೇಸ್ ತನ್ನ ಕಲ್ಪನೆಗೆ ವಾಸ್ತವಿಕ ರೂಪ ಕೊಡಲನುವಾದನು. ಅವನ ಸೋದರತ್ತೆ ಲೈಬ್ರೇರಿಯನ್ ಆಗಿದ್ದ ಮಿನಿಯಾಪಾಲಿಸ್‌ನ ಸಾರ್ವಜನಿಕ ಪುಸ್ತಕಾಲಯದಲ್ಲಿ ಕುಳಿತು ಪತ್ರಿಕೆಗಳ ಹಳೇ ಹೊಸ ಸಂಚಿಕೆಗಳನ್ನು ತಿರುವಿ ಹಾಕಿ ಉತ್ತಮ, ಉಪಯುಕ್ತ ಲೇಖಗಳನ್ನು ಗುರುತು ಹಾಕಿಕೊಂಡನು. ಅವುಗಳನ್ನು ಸಂಕ್ಷೇಪಿಸುವ ಅಭ್ಯಾಸವನ್ನು ಪ್ರಾರಂಭಿಸಿದನು. ಲೇಖಕರ ಶೈಲಿ ಕೆಡಿಸದೆ, ಆಶಯವನ್ನು ಮೊಟಕಿಸದೆ, ಅವರ ಮಾತುಗಳಲ್ಲೇ ತಾನು ಮಾಡಿದ ಸಂಗ್ರಹಗಳು ಮೂಲಕ್ಕಿಂತಲೂ ಸುವಾಚ್ಯವಾಗಿವೆಯೆಂದು ಅವನಿಗೆ ಅನಿಸಿತು.

ಸಂಗ್ರಹ, ಸಂಕ್ಷೇಪಕಾರ್ಯ ವಾಲೇಸನಿಗೆ ತೀರ ಹೊಸದೇನೂ ಆಗಿರಲಿಲ್ಲ. ಕಾಲೇಜಿನಲ್ಲಿದ್ದಾಗಿಂದಲೇ ವೈವಿಧ್ಯಪೂರ್ಣ ಓದಿನ ಚಟವುಳ್ಳ ಆತ ಎಷ್ಟೋ ಲೇಖಗಳ ಕಟಿಂಗುಗಳನ್ನು ಕಲೆಹಾಕಿದ್ದ. ಕೆಲ ಕಾಲ ಒಂದು ಬ್ಯಾಂಕಿನಲ್ಲಿ ಅನಂತರ ಒಂದು ಪ್ರಕಾಶನ ಸಂಸ್ಥೆಯಲ್ಲಿ ದುಡಿದ ಆತ ರೈತರಿಗೆ ಬೇಕಾಗುವ ವಿಷಯಗಳನ್ನು ವಿವಿಧ ಮೂಲಗಳಿಂದ ಶೋಧಿಸಿ ಸಂಕ್ಷೇಪಿಸಿ ೧೯೧೬ ರಲ್ಲಿ ಪ್ರಕಟಿಸಿದ ೧೨೦ ಪುಟದ ಕೈಪಿಡಿಯ ಒಂದು ಲಕ್ಷ ಪ್ರತಿಗಳು ಮಾರಾಟವಾಗಿದ್ದವು.

೧೯೨೦ ರ ಪ್ರಾರಂಭದಲ್ಲಿ ಡಿ ವಿಟ್ ವಾಲೇಸ್ ತನ್ನ ನಿಯೋಜಿತ "ರೀಡರ್ಸ್ ಡೈಜೆಸ್ಟ್"ನ ಪ್ರಥಮ ಸಂಚಿಕೆಯ ಕೆಲ ನೂರು ಮಾದರಿ ಪ್ರತಿಗಳನ್ನು ಮುದ್ರಿಸಿಕೊಂಡನು. ಈ ಸಂಚಿಕೆಯಲ್ಲೇ ಆತ "ರೀಡರ್ಸ್ ಡೈಜೆಸ್ಟ್"ನ ನೀತಿಯನ್ನು ಸಂಕ್ಷಿಪ್ತವಾಗಿ ವಿವರಿಸಿದ್ದ. ಪ್ರತಿ ಸಂಚಿಕೆಯಲ್ಲಿ ೩೧ ಲೇಖಗಳು, ಪ್ರತಿಯೊಂದೂ ಉಪಯುಕ್ತ ಮತ್ತು ವಾಚನೀಯ ಲೇಖ. ಚುಟುಕಾದ, ಚುರುಕಾದ ಲೇಖ.

ಅಂದಿನ ಪ್ರಮುಖ ಪತ್ರಿಕೆಗಳಿಂದ ಆರಿಸಿದ ಈ ೩೧ ಲೇಖಗಳಲ್ಲಿ ಜೀವನಕಲೆ, ಕೌಟುಂಬಿಕ ಜೀವನ, ವ್ಯವಹಾರೋಪಯೋಗಿ ಜ್ಞಾನ ವಿಜ್ಞಾನ, ವಿನೋದ, ಚುಟುಕ, ವ್ಯಕ್ತಿ ಪರಿಚಯ— ಎಲ್ಲ ಬಗೆಯ ವೈಶಿಷ್ಟ್ಯಗಳೂ ತುಂಬಿದ್ದವು.

ಡಿ ವಿಟ್ ವಾಲೇಸ್ ಪ್ರಚಾರತಂತ್ರದಲ್ಲಿ ಪ್ರವೀಣನಾಗಿದ್ದ. ಸಾಮಾನ್ಯ ಜನರಿಗೆ ಸಂದೇಶಗಳನ್ನು ಹೃದಯಸ್ಪರ್ಶಿಯಾಗುವಂತೆ ಹೇಗೆ ಮುಟ್ಟಿಸಬೇಕೆಂದು ಅವನಿಗೆ ಗೊತ್ತಿತ್ತು. "ಜ್ಞಾನ ಸಂಪಾದನೆ ಸುಲಭವಲ್ಲ. ನಿಮ್ಮಲ್ಲನೇಕರಿಗೆ ಅದಕ್ಕೆ ಬೇಕಾದ ವೇಳೆ ಇಲ್ಲ. ಆಡಾಡುತ್ತ ಜ್ಞಾನ ಸಂಪಾದನೆ ಮಾಡಬೇಕಾದರೆ ರೀಡರ್ಸ್ ಡೈಜೆಸ್ಟ್ ಓದಿರಿ" ಇದು ಆತ ಪ್ರಥಮ ಸಂಚಿಕೆಯಲ್ಲಿ ಮುದ್ರಿಸಿದ ಜಾಹಿರಾತು. "ನಿಮಗೆ ಕಾಲೇಜಿಗೆ ಹೋಗಲು ಸಾಧ್ಯವಿಲ್ಲವೆ? ಹಾಗಾದರೆ ಕಾಲೇಜೇ ನಿಮ್ಮ ಬಾಗಿಲಿಗೆ ಬರುವಂತೆ ಮಾಡುವಾ."

ತನ್ನ ಡೈಜೆಸ್ಟಿನ ಯೋಗ್ಯತೆಯ ಬಗ್ಗೆ ವಾಲೇಸನಿಗೆ ಸಂಶಯವೇ ಇರಲಿಲ್ಲ. ಆದರೆ ಈ ಕಲ್ಪನೆ

ಯನ್ನನುಸರಿಸಿದ ಹೊಸತರದ ಪತ್ರಿಕೆ ಹೊರಡಿಸಲು ಸಿದ್ಧರಾದ ಪ್ರಕಾಶಕರು ಮಾತ್ರ ಅವನಿಗೆ ಸಿಗಲಿಲ್ಲ. ಯಾರೂ ಅವನ ಯೋಜನೆಯನ್ನು ಮೂಸಿ ನೋಡಲೂ ಸಿದ್ಧರಿರಲಿಲ್ಲ. ಬೇರೆ ಪತ್ರಿಕೆಗಳಲ್ಲಿ ಬಂದು ಹಳಸಿದ ಲೇಖಗಳನ್ನು ಓದಲು ಯಾರು ಪತ್ರಿಕೆ ಕೊಂಡಾರು? ಮೇಲಾಗಿ ಜನರಿಗೆ ಬೇಕಾದ್ದು ಕಥೆ ಕಾದಂಬರಿ; ಇಡೀ ಸಂಚಿಕೆ ಲೇಖಗಳಿಂದ ತುಂಬಿದ್ದರೆ ಯಾರೂ ಓದರು. ತುಂಬ ಕಲ್ಪಕ ಪ್ರಕಾಶಕನೆನಿಸಿದ, ಅನೇಕ ಜನಪ್ರಿಯ ಪತ್ರಿಕೆಗಳ ಮಾಲಕ ರುಡಾಲ್ಫ್ ಹರ್ಸ್ಟ್ ಕೂಡ ಈ ಪತ್ರಿಕೆಗೆ ಬಹಳವಾದರೆ ಮೂರು ಲಕ್ಷ ಚಂದಾದಾರರು ಸಿಕ್ಕಬಹುದೆಂದು ತೀರ್ಪಿತ್ತು ಬದಿಗೆ ಸರಿಸಿಬಿಟ್ಟನು. ವಾಲೇನ ಯೋಜನೆಯಿಂದ ಮನದಟ್ಟಾದ ಒಬ್ಬಳೇ ಒಬ್ಬಳೆಂದರೆ ಲೀಲಾ ಬೆಲ್ ಅಚೆಸನ್ ಎಂಬ ತರುಣ ಸಾಮಾಜಿಕ ಕಾರ್ಯಕರ್ತ್ರಿ ಮಾತ್ರ.

ಈ ನಿರಾಶೆ ಸಾಲದ್ದಕ್ಕೆ ೧೯೨೧ ರಲ್ಲಿ ಉಂಟಾದ ಯುದ್ಧೋತ್ತರ ಮಂದಿಯ ಗಡಿಬಿಡಿಯಲ್ಲಿ ವೆಸ್ಟಿಂಗ್‌ಹೌಸ್ ಇಲೆಕ್ಟ್ರಿಕ್ ಕಂಪೆನಿಯ ಪ್ರಚಾರ ಶಾಖೆಯಲ್ಲಿ ವಾಲೇಸನಿಗಿದ್ದ ನೌಕರಿ ಹೋಗಿಬಿಟ್ಟಿತು. ಈ ದುರ್ದೈವವು ಅವನನ್ನು ನಿರ್ಧಾರಕ್ಕೆ ಬರುವಂತೆ ಮಾಡಿತು: ಸ್ವಂತವಾಗಿಯೆ ತಾನು ತನ್ನ ರೀಡರ್ಸ್ ಡೈಜೆಸ್ಟನ್ನು ಪ್ರಕಾಶಿಸುತ್ತೇನೆ, ಎಂದು. ಇದಕ್ಕೆ ಬೇಕಾದ ಪರಿಪತ್ರವೊಂದನ್ನು ಸಿದ್ಧಪಡಿಸಿ ಪ್ರೊಫೆಸರ್, ಶಿಕ್ಷಕರು, ದಾಯಿಯರು ಮೊದಲಾದ ಸುಶಿಕ್ಷಿತ ಜನರ ವಿಳಾಸ ಪಡೆದು ಸಾವಿರಗಟ್ಟಳೆಯಲ್ಲಿ ಟಪಾಲಿನಲ್ಲಿ ಕಳಿಸಿದ. ಆಗಲೇ ಲೀಲಾ ಅಚೆಸನ್ನಳೊಡನೆ ಅವನ ಮೈತ್ರಿ ದೃಢವಾಗಿತ್ತು. ಅವಳನ್ನಾತ ಮದುವೆಯಾದ. ಪ್ರಣಯ ವಿಹಾರದಿಂದ ಮರಳಿದೊಡನೆ ತನ್ನಲ್ಲಿದ್ದ ಕೆಲ ಸಾವಿರ ಡಾಲರಗಳ ಸಂಗಡ ಸಾಲ ಮಾಡಿದ ೧,೩೦೦ ಡಾಲರಗಳನ್ನು ಸೇರಿಸಿ ಆತ ತನ್ನ ಪತ್ರಿಕೆಯನ್ನು ಮುದ್ರಣಕ್ಕೆ ಕೊಟ್ಟ.

ನ್ಯೂಯಾರ್ಕಿನ ಗ್ರೀನ್‌ವಿಚ್ ಗ್ರಾಮದ ಒಂದು ಚಾಳಿನಿಂದ ೧೯೨೧ ಫೆಬ್ರವರಿಯಲ್ಲಿ, ಪಳಗಿದ ಪ್ರಕಾಶಕರೆಲ್ಲರೂ ಏಕಕಂಠದಿಂದ ಇದು ಖಂಡಿತ ದಿವಾಳಿ ಏಳುತ್ತದೆಂದು ಭವಿಷ್ಯ ನುಡಿಯುತ್ತಿದ್ದಂತೆ, "ರೀಡರ್ಸ್ ಡೈಜೆಸ್ಟಿ"ನ ಪ್ರಥಮ ಸಂಚಿಕೆ ಪ್ರಕಟವಾಯಿತು. ಸಂಪಾದಕ ಪ್ರಕಾಶಕರೆಂದು ಡಿ ವಿಟ್ ವಾಲೇಸ್ ಮತ್ತು ಅವನ ನವೋಢಾ ಪತ್ನಿ ಲೀಲಾ ಆಚೆಸನ್ ವಾಲೇಸರ ಹೆಸರುಗಳು ಮುದ್ರಿತವಾಗಿದ್ದವು. (ಇಂದಿಗೂ ಅವು ಹಾಗೆಯೆ ಇವೆ.) ೫,೦೦೦ ಪ್ರತಿಗಳನ್ನು ಮಾತ್ರ ಮುದ್ರಿಸಲಾಗಿತ್ತು. ೫,೦೦೦ ಡಾಲರು ಬೆಲೆಯ ವರ್ಗಣಿಗಳು ದೊರೆತವು.

"ರೀಡರ್ಸ್ ಡೈಜೆಸ್ಟ್" ಮೊದಲು ಸಾವಕಾಶವಾಗಿ, ಆ ಮೇಲೆ ಯಾರೂ ಕಂಡು ಕೇಳಿರದ ವೇಗದಿಂದ ಪ್ರಗತಿ ಹೊಂದಿತು. ೧೯೨೩ ರಷ್ಟು ಹೊತ್ತಿಗೆ ೭,೦೦೦ ಪ್ರತಿಗಳು ಖರ್ಚಾಗುತ್ತಿದ್ದವು. ೧೯೨೯ ರಲ್ಲಿ ಅದರ ೪೦ ಪಟ್ಟಿಗಿಂತಲೂ ಹೆಚ್ಚು— ೨,೯೦,೦೦೦ ಪ್ರತಿಗಳು ಪ್ರತಿ ತಿಂಗಳೂ ಮುದ್ರಿಸಲ್ಪಡುತ್ತಿದ್ದವು. ೧೯೪೦ ರಲ್ಲಿ ಪ್ರಸಾರ ೨೪,೯೯,೦೦೦ ಕ್ಕೇರಿತ್ತು. ೧೯೩೮ ರಲ್ಲಿ ಬ್ರಿಟಿಶ್ ಆವೃತ್ತಿಯೊಂದನ್ನು ತೆಗೆದು "ರೀಡರ್ಸ್ ಡೈಜೆಸ್ಟ್" ವಿದೇಶಿ ಪತ್ರಿಕಾ ರಂಗದಲ್ಲಿ ಕಾಲಿಟ್ಟಿತು. ಒಡನೆ ಮತ್ತಾವ ಬ್ರಿಟಿಶ್ ಮಾಸಿಕಕ್ಕೆ ಮೀರಿದ ಪ್ರಸಾರ ಅದಕ್ಕೆ ಲಭ್ಯವಾಯಿತು. ಅನಂತರ ದಕ್ಷಿಣ ಅಮೇರಿಕದ ರಾಜ್ಯಗಳಿಗಾಗಿ ಸ್ಪಾನಿಶ್ ಮತ್ತು ಅದರ ಬೆನ್ನಿಗೇ ಪೋರ್ತುಗೀಸ್ ಆವೃತ್ತಿಗಳು ಹೊರಟವು. ಇಂದು ಡಚ್, ಅರಬ್ಬಿ, ಡೇನಿಶ್, ಫಿನ್ನಿಶ್, ಇಟಾಲಿಯನ್, ನಾರ್ವೇಜಿಯನ್, ಫ್ರೆಂಚ್, ಬ್ರೇಜಿಲಿಯನ್, ಸ್ವೀಡಿಶ್, ಜರ್ಮನ್, ಜಪಾನಿ ಭಾಷೆಗಳಲ್ಲಿಯೂ ಅದರ ಆವೃತ್ತಿಗಳು ಹೊರಡುತ್ತಿವೆ. ಕುರುಡರಿಗಾಗಿ ಬ್ರೇಲ್ ಲಿಪಿಯಲ್ಲಿ ಬೇರೆ ಮೂರು ಆವೃತ್ತಿಗಳು ಪ್ರಕಟವಾಗುತ್ತಿವೆ.

"ರೀಡರ್ಸ್ ಡೈಜೆಸ್ಟ್"ನ ಪ್ರಭಾವ ಪ್ರತಿ ತಿಂಗಳು ಮಾರುವ ಅದರ ೨ ಕೋಟಿ ೧೦ ಲಕ್ಷ ಪ್ರತಿಗಳಿಗಷ್ಟೇ ಮಿತವಾಗಿಲ್ಲ. ಅದು ಅಮೇರಿಕದ—ಮತ್ತು ಕೆಲ ಮಟ್ಟಿಗೆ ವಿದೇಶಗಳ—ಪತ್ರಿಕೋದ್ಯಮದ ರೂಪವನ್ನೇ ಬದಲಿಸಿದೆ. ಕಥೆಗಳನ್ನಷ್ಟೇ ಓದುಗರು ಮೆಚ್ಚುತ್ತಾರೆಂದು ನಂಬಿದ್ದ ಅಮೇರಿಕನ್ ಪತ್ರಿಕೆಗಳು "ರೀಡರ್ಸ್ ಡೈಜೆಸ್ಟ್"ನ ಯಶಸ್ಸನ್ನು ನೋಡಿ ಕಥೇತರ ಲೇಖನಗಳನ್ನು ಹೆಚ್ಚಾಗಿ ಪ್ರಕಟಿಸಲು ಈಗ ಧೈರ್ಯ ಮಾಡಿವೆ. ಗಂಭೀರ ಲೇಖಗಳಿಗೆ ಪತ್ರಿಕೆಗಳಲ್ಲಿ ಹೆಚ್ಚು ಸ್ಥಳ ದೊರೆಯುತ್ತಿದೆ.

ಯಶಸ್ಸಿನೊಡನೆ "ರೀಡರ್ಸ್ ಡೈಜೆಸ್ಟ್" ಕೊಡುಗೈಯಿಂದಲೇ ಲೇಖಕರಿಗೆ ಹಣ ಕೊಡಲಾರಂಭಿಸಿತು. ಮೂಲ ಪತ್ರಿಕೆಯವರು ಕೊಡುವುದಕ್ಕಿಂತ ಹೆಚ್ಚು ಗೌರವಧನವನ್ನು ಅದು ಪುನರ್ಮುದ್ರಣಕ್ಕಾಗಿ ಲೇಖಕರಿಗೆ ಕೊಡುತ್ತಿದೆಯೆಂದು ಹೇಳಲಾಗಿದೆ. ಹೀಗಾಗಿ ಅಮೇರಿಕದ ಲೇಖಕರು "ರೀಡರ್ಸ್ ಡೈಜೆಸ್ಟ್"ಗೆ ಸ್ವೀಕಾರಾರ್ಹವಾಗಬಹುದಾದಂತೆ ಲೇಖಗಳನ್ನು ಬರೆಯಲು ಯತ್ನಿಸುತ್ತಾರೆ! ಮೊದಲು ಕೇವಲ ಇತರ ಪತ್ರಿಕೆಗಳಿಂದ ಲೇಖಗಳನ್ನೆತ್ತುತ್ತಿದ್ದ ಅದು ಅನಂತರ ಸ್ವತಂತ್ರ ಲೇಖಗಳನ್ನೂ ಪ್ರಕಟಿಸಲಾರಂಭಿಸಿತು. ಕೆಲವೇಳೆ ತಾನೇ ಹೇಳಿ ಹಣ ಕೊಟ್ಟು ಯಾವುದಾದರೂ ಲೇಖ ಬರೆಸಿ ಮೊದಲು ಅದರ ದೀರ್ಘ ರೂಪವನ್ನು ಬೇರಾವುದಾದರೂ ಪತ್ರಿಕೆಯಲ್ಲಿ ಪ್ರಕಟಿಸಿ ಬಳಿಕ ಅದರ ಸಂಕ್ಷಿಪ್ತ ರೂಪವನ್ನು ತನ್ನಲ್ಲಿ ಅದು ಪ್ರಕಟಿಸುವುದೂ ಉಂಟು.

ಇಂದು "ರೀಡರ್ಸ್ ಡೈಜೆಸ್ಟ್"ನವರು ಕೇವಲ ಮಾಸ ಪತ್ರಿಕೆಯನ್ನು ಪ್ರಕಟಿಸುತ್ತಿಲ್ಲ. ಪ್ರತಿ ಸಂಚಿಕೆಯಲ್ಲಿ ಪ್ರಕಟವಾಗುವ ಪುಸ್ತಕ ಸಂಗ್ರಹವಲ್ಲದೆ ವರ್ಷಕ್ಕೆ ನಾಲ್ಕು ಸಲ ಮಹತ್ವದ ಇತರ ಗ್ರಂಥಗಳನ್ನು ಸಂಗ್ರಹರೂಪದಲ್ಲಿ ಅವರು ಪ್ರಕಟಿಸುತ್ತಾರೆ. ಅವುಗಳ ಒಂದು ಕೋಟಿ ಪ್ರತಿಗಳು ಮಾರುತ್ತವೆ.

೧೯೫೦ ರಲ್ಲಾಗಲೇ "ರೀಡರ್ಸ್ ಡೈಜೆಸ್ಟ್"ನ ಒಂದು ಕೋಟಿ ಪ್ರತಿಗಳು ಹೊರಡುತ್ತಿದ್ದವು. ಆದರೂ ಅದರ ಅಗಾಧ ವೆಚ್ಚವನ್ನು ತೂಗಿಸುವುದು ಕಷ್ಟವಾದುದರಿಂದ ಆ ವರ್ಷ ಜಾಹಿರಾತುಗಳನ್ನು ಸ್ವೀಕರಿಸಲು ಆರಂಭವಾಯಿತು. ಜಾಹಿರಾತಿನ ದರ, ಆಗಿನ ಅಮೇರಿಕನ್ ಆವೃತ್ತಿಗೆ ಮಾತ್ರ, ಪ್ರತಿಪುಟಕ್ಕೆ ಒಂದು ಸಲಕ್ಕೆ ೨೬,೦೦೦ ಡಾಲರ್ (ಸುಮಾರು ರೂ. ೧,೨೫,೦೦೦)! ಈ ದರದಲ್ಲಿಯೂ ಅದು ಔಷಧ, ಸಿಗರೇಟ್, ಮದ್ಯ ಮೊದಲಾದವುಗಳ ಜಾಹಿರಾತನ್ನು ಸ್ವೀಕರಿಸಲಿಲ್ಲ.

"ರೀಡರ್ಸ್ ಡೈಜೆಸ್ಟ್"ನ ಯಶಸ್ಸಿನ ಗುಟ್ಟೇನು? ವಾಲೇಸನಿಂದ ತರಬೇತುಹೊಂದಿದ ಅದರ ಸಂಪಾದಕ ಮಂಡಲಿಯವರು ಜನರು ಏನನ್ನು ಓದಬಯಸುತ್ತಾರೆ ಎಂಬುದನ್ನು ತಪ್ಪದೆ ಗುರುತಿಸಲು ಸಮರ್ಥರಾಗಿದ್ದಾರೆ. ಆದರೆ ಜನರಿಗೆ ಬೇಕಾಗಿದೆಯೆಂದು ಅದೆಂದೂ ಅಶ್ಲೀಲ ಅಥವಾ ಉದ್ವೇಗಪೂರ್ಣ ವಿಷಯಗಳನ್ನು ಕೊಡುವುದಿಲ್ಲ. ಶಾಶ್ವತ ಮಹತ್ವದ ಉಪಯುಕ್ತ ವಿಷಯುಗಳನ್ನಷ್ಟೇ ಆರಿಸಲಾಗುತ್ತದೆ. ಅದರ ಸಂಕ್ಷೇಪ ಕಾರ್ಯ ಅದ್ವಿತೀಯ ಕೌಶಲದಿಂದ ಪೂರೈಸಲ್ಪಡುತ್ತದೆ. ಒಬ್ಬಾನೊಬ್ಬ ಪ್ರಸಿದ್ಧ ಲೇಖಕ ತನ್ನ ಪುಸ್ತಕವನ್ನು ಇಷ್ಟು ಚೆನ್ನಾಗಿ ಸಂಕ್ಷೇಪಿಸಲು ಸಾಧ್ಯವಿದೆಯೆಂದು ತಾನು ಕಲ್ಪಿಸಿರಲೇ ಇಲ್ಲವೆಂದು ಹೇಳಿದ್ದಾನೆ.

ಡಿ ವಿಟ್ ವಾಲೇಸನಿಗೆ ಧರ್ಮಗುರುಗಳ ಸಂಗಡ ಘನಿಷ್ಠ ಸಂಬಂಧವಿರುವುದು ಅವನ ಯಶಸ್ಸಿಗೆ ಒಂದು ಕಾರಣವೆಂದು ಭಾವಿಸಲಾಗಿದೆ. ಅವನು ಪ್ರಬಲ ಧರ್ಮಗುರುಗಳ ಕುಟುಂಬದವನು ಮತ್ತು ಅವನ ಪತ್ನಿ ಒಬ್ಬ ಧರ್ಮಗುರುವಿನ ಮಗಳು. ಧಾರ್ಮಿಕ ಭಾವನೆಗಳಿಗೆ ವಿರುದ್ಧವಾದ ವಿಚಾರಗಳನ್ನು ಅವರು ಪ್ರಕಟಿಸುವುದಿಲ್ಲ; ದೇವರಲ್ಲಿ ಶ್ರದ್ಧಾ ಭಕ್ತಿಗಳನ್ನು

ಪ್ರೋತ್ಸಾಹಿಸುವ ಲೇಖಗಳು ಅದರಲ್ಲಿ ತಪ್ಪದೆ ಬರುತ್ತವೆ. ಪ್ರತಿಯಾಗಿ ಧರ್ಮಗುರುಗಳು ತಮ್ಮ ಉಪದೇಶಗಳಲ್ಲಿ ಈ ಪತ್ರಿಕೆಯನ್ನುಲ್ಲೇಖಿಸುವುದರಿಂದ ಅದರ ಪ್ರಚಾರ ಹೆಚ್ಚಾಗುತ್ತಿದೆಯೆಂದು ಆರೋಪಿಸುವವರುಂಟು.

"ರೀಡರ್ಸ್ ಡೈಜೆಸ್ಟ್"ನ ವಿರೋಧಿಗಳ ಮುಖ್ಯ ಆಕ್ಷೇಪವೆಂದರೆ, ಅದು ಜಟಿಲವಾದ ಸಮಸ್ಯೆಗಳನ್ನು ಓದುಗರ ಮುಂದಿಡುವುದಿಲ್ಲ. ಜೀವನ ಬಲು ಸರಳ, ಕೀಲಿಕೈ ಇದ್ದರೆ ಬೀಗ ತೆರೆಯಬಹುದಾದಂತೆ ಯಶಸ್ಸಿನ ಉಪಾಯವೊಂದು ಗೊತ್ತಿದ್ದರೆ ಬೇಕಾದ ಸಮಸ್ಯೆಯನ್ನೂ ಬಿಡಿಸಬಹುದೆಂಬ ಭ್ರಾಮಕ ಕಲ್ಪನೆಯನ್ನದು ಹುಟ್ಟಿಸುತ್ತದೆ.

ಈ ಆರೋಪದಲ್ಲಿ ನಿಜಾಂಶವಿರಬಹುದಾದರೂ "ರೀಡರ್ಸ್ ಡೈಜೆಸ್ಟ್"ನ ಪ್ರಚಂಡ ಪ್ರಭಾವವನ್ನು ಯಾರೂ ಅಲ್ಲಗಳೆಯಲಾರರು. ಓದುಗರ ಮನಸಿನ ಮೇಲೆ ಅದರ ಹಿಡಿತ ಅಂಥದು. ಇದಕ್ಕೆ ಕೆಲವೇ ಉದಾಹರಣೆಗಳು ಸಾಕು. ೧೯೪೮ ರಲ್ಲಿ ಇಟಲಿಯ ಚುನಾವಣೆಗಳಲ್ಲಿ ಕಮ್ಯೂನಿಸ್ಟರು ಸೋಲಲು "ರೀಡರ್ಸ್ ಡೈಜೆಸ್ಟ್"ನ ಇಟಾಲಿಯನ್ ಆವೃತ್ತಿಯಲ್ಲಿ ಪ್ರಕಟವಾದ ಲೇಖಗಳೇ ಕಾರಣವೆಂದು ಅಮೇರಿಕದ ವಿದೇಶಶಾಖೆ ಒಪ್ಪಿದೆ. ಸೋಯಾ ಬೀಜ ಕೃಷಿಯ ಬಗ್ಗೆ ಅದರ ಸ್ಪಾನಿಶ್ ಆವೃತ್ತಿಯಲ್ಲಿ ಬಂದ ಒಂದು ಲೇಖ ದಕ್ಷಿಣ ಅಮೇರಿಕದಲ್ಲಿ ಆ ಬೀಜದ ವಿಸ್ತಾರ ಕೃಷಿಗೆ ಪ್ರಚೋದನೆಯಿತ್ತಿತು. ರಸ್ತೆ ಅಪಘಾತಗಳನ್ನು ಕುರಿತು ಅದು ಪ್ರಕಟಿಸಿದ ಚಿತ್ರವತ್ತಾದ ಒಂದು ಲೇಖ ವಾಹನ ನಿಯಂತ್ರಣದ ಕ್ರಮಗಳ ಮೇಲೆ ಬಲವಾದ ಪರಿಣಾಮ ಮಾಡಿತು. ಜೀವನದಲ್ಲಿ ಹೀನವಾದುದಕ್ಕಿಂತ ಉದಾತ್ತವಾದುದನ್ನೇ ಒತ್ತಿ ಹೇಳುವ ಅದರ ನೀತಿ ಜನೋಪಕಾರಿಯಾಗಿಲ್ಲೆಂದು ಯಾರು ಹೇಳುತ್ತಾರೆ? ★



ಹೊಸದಾಗಿ ಶ್ರೀಮಂತಿಕೆ ಬಂದ ಮುಂಬಯಿಯ ದಂಪತಿಗಳು ಒಂದು ಭೋಜನ ಕೂಟಕ್ಕೆ ಆಮಂತ್ರಿತರಾಗಿದ್ದರು. ಮಾತು ತಾನ್‌ಸೇನನ ವಿಚಾರಕ್ಕೆ ತಿರುಗಿತು. ಶ್ರೀಮತಿ ನವಸಂಪನ್ನರು ನಡುವೆ ಬಾಯಿ ಹಾಕಿದರು: "ಯೋಗಾಯೋಗ ಹೇಗಿರುತ್ತೇ ನೋಡಿ. ಇದೇ ಬೆಳಿಗ್ಗೆ ನಾನು ತಾನ್‌ಸೇನ್ ಮತ್ತು ಅವನ ಹೆಂಡತಿ ಬೀಚಿಗೆ ಹೋಗುವ ೫ನೇ ನಂಬರ್ ಬಸ್ ಏರುವುದನ್ನು ನೋಡಿದೆ."

ಕೂಟದಲ್ಲಿ ಒಮ್ಮೆಲೇ ನಿಸ್ತಬ್ಧತೆಯಾಯಿತು. ಗಂಡನ ಮುಖ ಕೆಂಪೇರಿತು. ಮನೆಗೆ ಹಿಂತಿರುಗುತ್ತಿರುವಾಗ ಆತ ಹೇಳಿದ: "ಎಷ್ಟು ಹೇಳಿದರೂ ಬುದ್ಧಿಯಿಲ್ಲ ನಿನಗೆ. ನಿನಗೆ ಗೊತ್ತಿಲ್ಲದ ವಿಷಯ ಮಾತಾಡಬೇಡ ಅಂತ ಸಾವಿರ ಸಲವಾದರೂ ಹೇಳಿರಬೇಕು ನಾನು."

"ಏನಾಯಿತು ಅಂಥಾದ್ದೀಗ?"

"೫ನೇ ನಂಬರ್ ಬಸ್ಸು ಬೀಚಿಗೆ ಹೋಗೋದಿಲ್ಲ ಅಂತ ಇಷ್ಟು ದಿನವಾದರೂ ನಿನಗೆ ಗೊತ್ತಿರಬೇಡ?"



ನಯಗರಾ ಜಲಪಾತ ಸ್ತಬ್ಧವಾದಾಗ

ವಿವಿಧ ಮೂಲಗಳಿಂದ

೧೮೪೮ ಮಾರ್ಚ್ ೨೯ನೇ ದಿನ ಮಧ್ಯಾಹ್ನ ದಾಟುವ ವರೆಗೆ ನಯಗರಾ ಜಲಪಾತದ ಸುತ್ತ-ಮುತ್ತಲಲ್ಲಿ ಎಲ್ಲವೂ ನಿತ್ಯದಂತೆಯೇ ಇತ್ತು. ಜಗತ್ತಿನ ಅಪ್ರತಿಮ ಪ್ರಪಾತಗಳಲ್ಲೊಂದಾದ ನಯಗರಾ ಭೋರ್ಗರೆಯುತ್ತ ಸೆಕೆಂಡಿಗೆ ಐದು ಲಕ್ಷ ಟನ್ ನೀರನ್ನು ೧೬೦ ಅಡಿಗಳ ಎತ್ತರದಿಂದ ಕೆಳಗುರುಳಿಸುತ್ತಿತ್ತು. ನದಿಯ ಬದಿಯಲ್ಲಿದ್ದ ನಯಗರಾ ಫಾಲ್ಸ್ ಗ್ರಾಮದಲ್ಲಿ ಅದೇ ಎರಡು ದಿನ ಹಿಂದೆ ಧರ್ಮಪ್ರಚಾರಕನೊಬ್ಬನು, "ನೀವು ನಿಮ್ಮ ಪಾಪಾಚರಣೆಯನ್ನು ತೊರೆಯದೆ ಹೋದರೆ ನಯಗರಾ ಪ್ರಪಾತ ಬತ್ತಿ ಹೋದೀತು! ಎಚ್ಚರಿಕೆ!" ಎಂದು ತನ್ನೊಂದು ಭಾಷಣದಲ್ಲಿ ಹೇಳಿದ್ದುದು ಯಾರ ನೆನಪಿನಲ್ಲೂ ಇದ್ದಿಲ್ಲ.

ಆದರೆ ಸಂಜೆಗತ್ತಲು ಕವಿದು ಮನೆಮನೆಯಲ್ಲಿ ಊಟ ಬಡಿಸುತ್ತಿದ್ದಾಗ್ಗ ಜನರಿಗೆ ಏನೋ ಒಂದು ತರಹದ ವಿಚಿತ್ರ ಭಾವನೆಯುಂಟಾಗತೊಡಗಿತು. ಪ್ರತಿಯೊಬ್ಬನಿಗೂ ಅದು ಅನಿಸುತ್ತಿತ್ತು. ಆದರೆ ಯಾರೂ ಮಾತಾಡಲಿಲ್ಲ. ಅವರು ಬೆಳಕು ನಂದಿಸಿ ಮಲಗಿದರು. ನಡುರಾತ್ರಿಯಲ್ಲಿ ಒಮ್ಮೆಲೇ ಅಸ್ವಸ್ಥ ಚಿತ್ತದಿಂದ ಎಚ್ಚತ್ತರು. ಅವರು ಆಲಿಸಿದರು: ಎಲ್ಲವೂ ನಿಶ್ಶಬ್ದವಾಗಿತ್ತು. ನಯಗರಾ ಪ್ರಪಾತದ ಆ ಕಿವಿ ಗಡಚಿಕ್ಕುವ ಸಪ್ಪಳ ಸಂಪೂರ್ಣ ಸ್ತಬ್ಧವಾಗಿತ್ತು. ಅದರ ನಿರಂತರ ಭೋರ್ಗರೆಯಲ್ಲಿ ಜೀವಮಾನವೆಲ್ಲ ಕಳೆದ ಅವ-ರಿಗೆ ಅದರ ಮೌನವೇ ಎಚ್ಚರ ತಂದಿತ್ತು.

ಎಂದೂ ಇಲ್ಲದಷ್ಟು ರಭಸದಿಂದ ಬಟ್ಟೆ ತೊಟ್ಟುಕೊಂಡು ಜನ ಹೊರಗೆ ಧಾವಿಸಿದರು. ಪಂಜುಗಳು, ಕೊಳ್ಳಿಗಳು, ಮಿಣುಕು ಮೇಣಬತ್ತಿಗಳು ನದಿಯ ದಂಡೆಗಳ ಮೇಲೆ ಎರಡೂ ಕಡೆ ಕತ್ತಲೆಯಲ್ಲೊಂದು ಭೂತೋತ್ಸವವನ್ನು ನೆರೆಸಿದವು. ನೋಡಿ ಅವರಿಗೆ ಕಣ್ಣುಗಳನ್ನೇ ನಂಬುವುದು ಅಸಾಧ್ಯವಾಯಿತು. ನಯಗರಾ ಪ್ರಪಾತ ಬತ್ತಿ ಹೋಗಿತ್ತು. ಸಂಜೆಯಿಂದ ಅವರ ಮನಸ್ಸನ್ನು ಕಲಕುತ್ತಿದ್ದದ್ದು ನಯಗರಾದ ನಾವಕಾಶವಾಗಿ ಹೆಚ್ಚುತ್ತಿದ್ದ ಮೌನವೇ ಹಾಗಾದರೆ! ಜನಕ್ಕೆ ಪಾದ್ರಿಯ ಭವಿಷ್ಯ ನೆನಪಾಗಿ ಎದೆ ತಲ್ಲಣಿಸಿತು.

ಬೆಳಗಾಯಿತು. ಜನಸಮೂಹ ಹೆಚ್ಚಿತು. ಸಂಜೆಯೊಳಗೆ ಈ ಅದ್ಭುತ ದೃಶ್ಯ ನೋಡಲು ೫,೦೦೦ ಜನ ಸೇರಿತ್ತು. ಜನ ತುಸು ಚೇತರಿಸಿಕೊಂಡು ಬೆದರೆದೆಗಳಿಂದಲೇ ತಮಾಷೆ ಮಾತುಗಳನ್ನಾಡತೊಡಗಿದ್ದರು. ಸಂಯುಕ್ತ ಸಂಸ್ಥಾನದ ಕಡೆ ೧,೦೦೦ ಅಡಿ ಕೆನಡಾದ ಕಡೆ ೨,೦೦೦ ಅಡಿ ಅಗಲವಾಗಿ ಕೆಳಗುರುಳುತ್ತಿದ್ದ ಇಪ್ಪತ್ತಡಿ ದಪ್ಪವಾದ ಜಲರಾಶಿ ಈಗ ಬರಿ ಗೇಣಗಲವಾಗಿ ಚುಳುಗುಟ್ಟುತ್ತಿತ್ತಷ್ಟೇ. ಪ್ರಪಾತದ ಭಿತ್ತಿ ಯುಗಾಂತರಗಳಿಂದ ನಿರಂತರ ನೀರ ಸೆರಗಿನಿಂದ ಮುಚ್ಚಿದ್ದುದು ಈಗ ಬೆತ್ತಲಾಗಿ ಮಾನವದೃಷ್ಟಿಗೆ ಇದೇ ಮೊದಲ ಸಲ ಕಾಣತೊಡಗಿತ್ತು. ಪ್ರಪಾ

ತದ ಕೊರಕಲುಗಳು, ಗೋಡೆಯ ಪೊಳ್ಳುಗಳು ಇವನ್ನು ಜನ ಸೋಜಿಗದಿಂದ ನೋಡಿದರು. ಕೆಲ ದಿಟ್ಟರು ಪ್ರಪಾತದ ಹಿಂದಿನ ಗುಹೆಗಳಲ್ಲಿ ಹೊಕ್ಕು ಹೊರಬಂದರು. ಕೆಲವರು ಕುದುರೆಯೇರಿ ನದಿಯ ಒಣ ಪಾತ್ರವನ್ನು ದಾಟಿ ಕುದುರೆಗಳ ಖುರ ಒದ್ದೆಯಾಗಲಿಲ್ಲವೆಂದು ಸಾರಿದರು. ಬತ್ತಿದ ಹೊಂಡಗಳಲ್ಲಿ ಚಡಪಡಿಸುತ್ತಿದ್ದ ಮೀನುಗಳನ್ನು ಕೆಲವರು ಹಿಡಿದರು.

ಕೆಲ ವಿಚಾರಿಗಳು ನಿಸರ್ಗದ ಈ ಅಭೂತಪೂರ್ವ ಲೀಲೆಯ ಮೂಲವೇನೆಂದು ಶೋಧಿಸಲು ಹೊರಟರು. ಆದರೆ ಸಂಜೆ ಮೀರುತ್ತಿದ್ದರೂ ಪ್ರವಾಹ ಇನ್ನೂ ಮರಳದಿರುವುದನ್ನು ನೋಡಿ ಜನಸಾಮಾನ್ಯರು ಭಯದಿಂದ ತತ್ತರಿಸಿದರು. ಪಾದ್ರಿಯ ಭವಿಷ್ಯ ಇಷ್ಟು ಬೇಗ ನಿಜವಾಯಿತೆ? ಇಷ್ಟು ಮಟ್ಟಿಗೂ ತಮ್ಮ ಪಾಪದ ಕೊಡ ತುಂಬಿತ್ತೆ? ಇದು ಜಗತ್ಪ್ರಳಯದ ಆರಂಭವೆ?

ಭಯ ಹಬ್ಬಿತು. ಚರ್ಚುಗಳಲ್ಲಿ ಅಂದು ಸಂಜೆಯ ಪ್ರಾರ್ಥನೆಗೆ ಎಂದಿಗಿಂತಲೂ ಹೆಚ್ಚು ಜನ ಸೇರಿತು. ಜನ ತಮ್ಮೊಳಗೇ ಪಿಸುಗುಟ್ಟುತ್ತಿದ್ದರು. ಪಾದ್ರಿಗಳು ಗಂಭೀರವಾಗಿ ಉಪದೇಶಗಳನ್ನಿತ್ತರು. ದೇವಾ! ಒಮ್ಮೆಗೆ ನಮ್ಮ ನಯಗರಾವನ್ನು ಮರಳಿ ದಯಪಾಲಿಸು! ಎಂಬ ಪ್ರಾರ್ಥನೆಗಳಾದವು. ಜನ ತಮ್ಮ ಜನ್ಮದಲ್ಲೇ ಅಷ್ಟು ಏಕಚಿತ್ತದಿಂದ ಪ್ರಾರ್ಥಿಸಿರಲಿಕ್ಕಿಲ್ಲ.

ಅಂದು ರಾತ್ರಿ ಯಾವ ಮನೆಯಲ್ಲೂ ದೀಪ ಆರಲಿಲ್ಲ. ಎಲ್ಲೆಲ್ಲಿಯೂ ದಿಗಿಲು ಹಬ್ಬಿತ್ತು. ಮಕ್ಕಳು ಏನೇನೋ ಕೇಳುತ್ತಿದ್ದರು, ಹಿರಿಯರು ಉತ್ತರಿಸಲಾರದೆ ಕೆರಳುತ್ತಿದ್ದರು. ಅಂದು ನಿದ್ರಿಸಿದವರೇ ಧೀರರು.

ಜನ ಆಲಿಸುತ್ತ ಕಾಯುತ್ತಿದ್ದ ಹಾಗೆ ಮಾರ್ಚ್ ೩೦ ರ ಮಧ್ಯರಾತ್ರಿ ದಾಟಿ ಸ್ವಲ್ಪ ಸಮಯದ ನಂತರ ಪ್ರಪಾತದ ಕಡೆಯಿಂದ ಹೌದೋ ಅಲ್ಲವೋ ಎನ್ನುವಂತೆ ಸಪ್ಪಳ ಕೇಳತೊಡಗಿತು. ಇದು ತಮ್ಮ ಚಿತ್ತದ ಕಲ್ಪನೆಯಿರಬೇಕೆಂದು ಜನ ಮೊದಲು ಭಾವಿಸಿದರು. ಸ್ವಲ್ಪ ಸಮಯದಲ್ಲೇ ಸದ್ದು ಏರಿತು. ಬೆಳಗಿನ ಜಾವದಷ್ಟು ಹೊತ್ತಿಗೆ ಜಲಪಾತದ ಸುಪರಿಚಿತ ಕೂಗು ತನ್ನ ಸಮಸ್ತ ರೌದ್ರದೊಡನೆ ಪುನರಾರಂಭವಾಗಿತ್ತು. ಅದರ ಪ್ರಥಮ ಉದ್ರೇಕಕ್ಕೆ ಮನೆಗಳ ತಳಕಟ್ಟುಗಳು ಅದುರಿ ಗಚ್ಚು ಉದುರಿತು.

ನಯಗರಾದ ನೆರೆಹೊರೆಯ ನಿವಾಸಿಗಳು ಹುಚ್ಚೆದ್ದು ನದಿಯತ್ತ ಓಡಿದರು. ಧಾವಂತ ಜಲವನ್ನು ನೋಡಿ ಅವರು ದೇವರಿಗೆ ಕೃತಜ್ಞತೆಯನ್ನರ್ಪಿಸಿದರು. ಭಾವುಕರು ಸುಖದ ಕಣ್ಣೀರು ಸುರಿದರು; ಆ ವರೆಗೆ ಮೌನವಾಗಿದ್ದ ನಾಸ್ತಿಕರು ಧೈರ್ಯಗೊಂಡು, "ಪ್ರಳಯವಂತೆ ಪ್ರಳಯ! ಹುಚ್ಚು ಜನ!" ಎಂದರು.

ಈ ಅದ್ಭುತದ ನಿಜವಾದ ಕಾರಣ ತಿಳಿಯಲು ಸ್ವಲ್ಪ ಕಾಲ ಹಿಡಿಯಿತು. ೧೮೪೭-೪೮ ರ ಚಳಿಗಾಲ ಭೀಕರವಾಗಿತ್ತು. ಅದು ನಯಗರಾ ನದಿಯಲ್ಲಿರುವ ಎರೀ ಸರೋವರದಲ್ಲಿ ಭಾರೀ ಹಿಮದ ಗಡ್ಡೆಗಳುಂಟಾಗುವಂತೆ ಮಾಡಿತ್ತು. ಬೇಸಗೆಯ ಬಿರುಬಿಸಿಲಿಗೆ ಸರೋವರದ ದಂಡೆಗುಂಟ ಹಿಮದ ಹಾಳೆಯ ಅಂಚು ಕರಗಿ ಅದು ಮಜ್ಜಿಗೆಯಲ್ಲಿ ತೇಲುವ ಬೆಣ್ಣೆಯಂತಾಯಿತು. ಅಷ್ಟರಲ್ಲಿ ಗಾಳಿಯ ರಭಸ ಹೆಚ್ಚಿತು. ಇಡೀ ಹಿಮದ ಹಾಳೆ ಸರೋವರದಲ್ಲಿ ಮೇಲ್ಪದಿಗೆ ತಳ್ಳಲ್ಪಟ್ಟಿತು. ಮಾರ್ಚ ೨೯ ರಂದು ಅಪರಾಹ್ನದಲ್ಲಿ ಬಿರುಗಾಳಿಯ ಹೊಡೆತಕ್ಕೆ ಇಡೀ ಹಿಮಗಡ್ಡೆ ಸರೋವರದ ಮೇಲ್ಗಡೆ ನದಿಯ ಬಾಯಿಯನ್ನು ನುಗಿಸಿ ನದಿಯ ಉಗಮದಿಂದ ಬರುವ ನೀರನ್ನು ತಡೆದುಬಿಟ್ಟಿತು.

ಈ ಹಿಮಬಂಧವು ಕರಗಲು ೩೦ ತಾಸು ಹಿಡಿದಿತ್ತು. ಅಷ್ಟು ಕಾಲ ನಯಗರಾ ಸ್ತಬ್ಧ ನಿರ್ಜಲವಾಗಿತ್ತು ಮತ್ತು ಅಷ್ಟು ಹೊತ್ತು ಪ್ರಪಾತದ ಎರಡೂ ಮಗ್ಗಲಿನ ಜನಜೀವನ ಸ್ಥಗಿತವಾಗಿ ಹೋಗಿತ್ತು. ★

ಸರ್ಕಸ್ ಹುಲಿಗಳೊಳಗಿನ ಪ್ರೇಮ-ಮಾತ್ಸರ್ಯದಿಂದಾದ
ಅನಾಹುತ

ಹನ್ನೆರಡು ಹುಲಿಗಳ ಹಲ್ಲೆ

ಶಿವಾಜಿ ಶಂಕರ ಕಾರ್ಲೇಕರ

೧೯೩೭ ರಲ್ಲಿ ಜಗತ್ಪ್ರಸಿದ್ಧ ಕಾರ್ಲೇಕರ ಗ್ರ್ಯಾಂಡ್ ಸರ್ಕಸ್ಸಿನ ಕ್ಯಾಂಪು ಮಲಬಾರ್ ಪ್ರಾಂತದಲ್ಲಿತ್ತು. ಅಲ್ಲಿಯ ತಲಚೇರಿ ಎಂಬ ಊರಲ್ಲಿ ಈ ರೋಮಾಂಚಕಾರಕ ಘಟನೆ ಸಂಭವಿಸಿತು.

ಆ ಕಾಲದಲ್ಲಿ ಪ್ರೊ. ಕಾರ್ಲೇಕರರ ಸರ್ಕಸ್ಸೆಂದರೆ ಭಾರತದಲ್ಲಷ್ಟೇ ಅಲ್ಲ; ಇಡಿಯ ಏಶಿಯ ಖಂಡದಲ್ಲೇ ಅತಿ ದೊಡ್ಡ ಸರ್ಕಸ್ಸಾಗಿತ್ತು. ೨೫ ಆನೆಗಳು, ಹುಲಿ ಮತ್ತು ಸಿಂಹ ಸೇರಿ ೪೦ ಹಿಂಸ್ರ ಪಶುಗಳು, ೬೦ ಕುದುರೆಗಳು, ೧೨ ಒಂಟೆಗಳು, ೧೨ ಕರಡಿಗಳು, ಆರು ಆಸ್ಟ್ರೇಲಿಯನ್ ಕಾಂಗರೂಗಳು, ೨೫ ನಾಯಿ ಮತ್ತು ಗಿಳಿ, ಕೋತಿ ಮುಂತಾದ ಅನೇಕ ಪ್ರಾಣಿಗಳ ದೊಡ್ಡ ಮೃಗಾಲಯ; ೧೦,೦೦೦ ಪ್ರೇಕ್ಷಕರು ಸಹಜವಾಗಿ ಕೂಡ್ರಬಲ್ಲಷ್ಟು ವಿಶಾಲವಾದ ಡೇರೆ; ೧೦೦ ಅಡಿ ಎತ್ತ



ರದ ಮತ್ತು ಪ್ರತಿಯೊಂದಕ್ಕೆ ೫,೦೦೦ ರೂಪಾಯಿ ಬೆಲೆ ಇರುವ ನಡುವಿನ ನಾಲ್ಕು ಕಂಬಗಳು; ೫೦೦ ಕೆಲಸಗಾರರು; ೧೨೫ ಯುರೋಪಿಯನ್ ಆಟಗಾರರು; ಮಲಬಾರ್, ಮದ್ರಾಸ್ ಮತ್ತು ಬಂಗಾಲದ ಒಟ್ಟು ೧೦೦ ಆಟಗಾರರು; ಮಹಾರಾಷ್ಟ್ರ ಮತ್ತು ಚೀನದ ಒಟ್ಟು ೧೫೦ ಆಟಗಾರರು; ಅಲ್ಲದೆ ಇವರನ್ನೆಲ್ಲ ಹೊತ್ತೊಯ್ಯಲು ಕಂಪನಿಯದೇ ಸ್ವಂತ ४೦ ಟ್ರಕ್ಕುಗಳು. ಈ ವಿವರದಿಂದೇ ಸರ್ಕಸ್ ಎಷ್ಟು ದೊಡ್ಡದಿತ್ತೆಂದು ತಿಳಿಯಬಹುದಾಗಿದೆ.

ಅಂತೆಯೆ ಎಲ್ಲಿ ಹೋದರೂ ಆಗ ಈ ಸರ್ಕಸ್ಸಿಗೆ ಪ್ರೇಕ್ಷಕರು ಕಿಕ್ಕಿರಿಯುತ್ತಿದ್ದರು. ತಲಚೇರಿಯಲ್ಲಿ ಮೊದಲ ದಿನದ ಪ್ರೇಕ್ಷಕರ ಸಂಖ್ಯೆ ಎಷ್ಟು ದೊಡ್ಡದಿತ್ತೆಂದರೆ ಒಂದು ತಟ್ಟೆಯನ್ನು ಸ್ವಲ್ಪ ಅಸಾವಧಾನದಿಂದ ಒಗೆದರೂ ಎಲ್ಲಿ ಅದು ಪ್ರೇಕ್ಷಕರಲ್ಲೊಬ್ಬರ ತಲೆಗೇ ತ್ರಾಣವಾಗುವುದೊ ಎಂಬ ಭೀತಿ.

ಸರ್ಕಸ್ಸಿನ ವನ್ಯ ಶ್ವಾಪದಗಳಿಗೆ ಮಾಂಸವನ್ನು ಪೂರೈಸುವ ಗುತ್ತಿಗೆ ಒಬ್ಬ ಕಟುಕನ ಕಡೆಗಿತ್ತು. ತಲಚೇರಿಯಲ್ಲಿ ಅಂದೇ ಸರ್ಕಸ್ ಪ್ರಾರಂಭವಾಗಬೇಕಿತ್ತು. ಎಷ್ಟು ಯತ್ನಿಸಿದರೂ ಮಾಂಸ ಸಿಗಲಿಲ್ಲ. ಸರ್ಕಸ್ ಸುರುವಾಗುವ ಮುಂಚೆ ಅರ್ಧ ಗಂಟೆ ಹುಲಿ ಸಿಂಹಗಳಿಗೆಲ್ಲ ಮಾಂಸವನ್ನು ತಿನಿಸಿ ಆ ಮೇಲೆಯೆ ಆಟಕ್ಕೆ ತರುವುದು ನಮ್ಮ ನಿತ್ಯದ ರೀತಿಯಾಗಿತ್ತು. ಆದರೆ ಅಂದು ಇಡೀ ದಿನ ಹುಲಿ ಸಿಂಹಗಳನ್ನು ಉಪವಾಸ ಉಳಿಸಬೇಕಾಯಿತು. ಹಸಿದ ಪ್ರಾಣಿಗಳೊಂದಿಗೆ ಆಟವಾಡುವುದೆಂದರೆ ಪ್ರಾಣದ ಆಸೆ ಬಿಟ್ಟಂತೆಯೇ. ಹುಲಿ ಸಿಂಹಗಳ ಆಟಕ್ಕಾಗಿಯೆ ನಮ್ಮ ಸರ್ಕಸ್ಸಿನ ಖ್ಯಾತಿ. ಆದರೆ ಮೊದಲನೇ ದಿನವೇ ಆ ಆಟವನ್ನು ಬಿಟ್ಟರೆ ಕ್ಯಾಂಪು ಅಯಶಸ್ವಿಯಾಗುವ ಸಂಭವ. ಕೊನೆಗೂ ಮಾಲಕ ಶಂಕರರಾಯರು ಹಸಿದಿದ್ದ ಹುಲಿ ಸಿಂಹಗಳನ್ನೇ ಆಡಿಸುವ ನಿರ್ಧಾರ ಮಾಡಿದರು.

ಎಂದಿನಂತೆ ೯-೩೦ ಕ್ಕೆ ಆಟ ಪ್ರಾರಂಭವಾಯಿತು. ಪ್ರೊ. ಶಂಕರರಾಯರು ಮೊದಲು ಸಿಂಹಗಳ ಆಟ ಮುಗಿಸಿ ಆ ಮೇಲೆ ಹುಲಿಗಳ ಆಟ ತೋರಿಸಬೇಕೆಂದು ನಿಶ್ಚಯಿಸಿದರು. ಹುಲಿಗಿಂತ ಸಿಂಹ ಸ್ವಲ್ಪ ಕಡಿಮೆ ಕ್ರೂರವಾದ ಪ್ರಾಣಿ. ಸಿಂಹವು ಸಹಸಾ ಕಾರಣವಿಲ್ಲದೆ ಹಿಂಸೆಮಾಡಲು ಮುಂದಾಗುವುದಿಲ್ಲ. ಆರು ಸಿಂಹಗಳ ಆಟ ಯಶಸ್ವಿಯಾಗಿ ಮುಗಿಯಿತು. ಇನ್ನು ಹುಲಿಗಳದೇ ಚಿಂತೆ. ಆದರೆ ಉಪವಾಸವಿದ್ದ ಸಿಂಹಗಳಂತೆ ಹುಲಿಗಳೂ ತಮ್ಮ ಕ್ರೌರ್ಯವನ್ನು ಬದಿಗಿರಿಸಬಲ್ಲವೆಂದು ಭಾವಿಸಿ ಶಂಕರರಾಯರು ಹುಲಿಗಳನ್ನೂ ತರಿಸಿದರು.

೧೨ ಹುಲಿಗಳನ್ನು ಒಟ್ಟಿಗೆ ನಿಲ್ಲಿಸಿ ಆಟವಾಡಿಸುವುದು ಪ್ರೊ. ಶಂಕರರಾಯರ ರೀತಿಯಾಗಿತ್ತು. ಅವುಗಳಲ್ಲಿ ಆರು ಹೆಣ್ಣು ಆರು ಗಂಡು ಇದ್ದವು. ಹೆಸರುಗಳು ಹೀಗಿದ್ದವು: ೧. ಶಂಕರ ೨. ಗುಲಾಬ, ೩. ಶಿವಾಜಿ, ४. ಡೈಮಂಡ್, ೫. ಪ್ರತಾಪ, ೬. ಮೋತೀ; ಮತ್ತು ಹೆಣ್ಣು ಹುಲಿಗಳ ಹೆಸರು: ೧. ಪಾರ್ವತಿ ೨. ಸೀತಾ, ೩. ರೋಝಿ, ४. ಮೇರಿ, ೫. ರಾಣಿ, ೬. ಸಾವಿತ್ರಿ. ಹುಲಿಗಳನ್ನು ಪಂಜರದಿಂದ ಹೊರಗೆ ಬಿಟ್ಟಾಗಲೇ ಅವು ಸಾಕಷ್ಟು ಕೆರಳಿದ್ದುದು ಅಪ್ಪಳಿಸುತ್ತಿದ್ದ ಅವುಗಳ ಬಾಲಗಳಿಂದೇ ತೋರಿಬರುತ್ತಿತ್ತು. ಆದರೂ ಅವು ರಿಂಗಿನಲ್ಲಿ ತಮ್ಮ ತಮ್ಮ ಸ್ಥಳಗಳಲ್ಲಿ ಎಂದಿನಂತೆ ಹೋಗಿ ಕೂತವು. ಶಂಕರರಾಯರ ಸಹಾಯಕರು ಹನ್ನೆರಡು ಸ್ಟೂಲುಗಳನ್ನು ತಂದಿಟ್ಟರು. ಒಂದು ಗಂಡು ಒಂದು ಹೆಣ್ಣು ಹುಲಿ ಎದುರು ಬದುರಾಗಿ ನಡುವಿನ ಒಂದೊಂದು ಸ್ಟೂಲಿನಮೇಲೆ ಮುಂಗಾಲುಗಳನ್ನು ಊರಿ ನಿಲ್ಲುತ್ತಿದ್ದವು. ಅವುಗಳ ಹಿಂದೆ, ಗಂಡಿನ ಹಿಂದೆ ಗಂಡು ಹೆಣ್ಣಿನ ಹಿಂದೆ ಹೆಣ್ಣು ಹುಲಿಗಳು ನಿಲ್ಲುತ್ತಿದ್ದವು. ಎಲ್ಲಕ್ಕೂ ಮುಂದಿನ ಗಂಡು ಹುಲಿ ಶಂಕರ; ಹೆಣ್ಣು ಹುಲಿಗಳ ಸಾಲಿನಲ್ಲಿ ಮುಂದಿನದು ಪಾರ್ವತಿ.

ಎಂದಿನಂತೆ ಎರಡೂ ಸಾಲುಗಳು ಎದುರು ಬದುರಾಗಿ ನಿಂತವು. 'ಶಂಕರ' ಹುಲಿ 'ಪಾರ್ವತಿ' ಹುಲಿಯ ಮುಖವನ್ನು ನೆಕ್ಕಲಾರಂಭಿಸಿತು. ಪಾರ್ವತಿಯನ್ನು ಅದು ಪ್ರೀತಿಸುತ್ತಿತ್ತು. ಆದರೆ 'ಪಾರ್ವತಿ' ಮಾತ್ರ 'ಶಂಕರ' ನನ್ನು ಪ್ರೀತಿಸುತ್ತಿರಲಿಲ್ಲ. ಶಂಕರನ ಹಿಂದೆ ನಿಂತಿದ್ದ ಗುಲಾಬನಿಗೂ ಪಾರ್ವತಿಗೂ ಪರಸ್ಪರರ ಸ್ನೇಹ ಬೆಳೆದಿತ್ತು. ಮತ್ತು ಪಾರ್ವತಿಯ ಹಿಂದಿನ ಸೀತೆ ಶಂಕರನನ್ನು ಪ್ರೀತಿಸುತ್ತಿತ್ತು. ಸೀತೆಯ ಹಿಂದಿನ ರೋಝಿ ಗುಲಾಬನನ್ನು ಪ್ರೀತಿಸುತ್ತಿತ್ತು. ಶಂಕರ ಪಾರ್ವತಿಯ ಮುಖ ನೆಕ್ಕಲಿಕ್ಕೆ ಪ್ರಾರಂಭಿಸುತ್ತಲೇ ಸಿಟ್ಟಿಗೆದ್ದ ಗುಲಾಬ ಶಂಕರನ ಮೇಲೆ ನೆಗೆಯಿತು. ತನ್ನ ಪ್ರಿಯ ಶಂಕರನಿಗೆ ಬಂದ ವಿಪತ್ತನ್ನು ನೋಡಲಾರದೆ ಸೀತೆ ಗುಲಾಬನ ಮೇಲೆ ಹಾರಿಕೊಂಡಿತು. ಸೀತೆಯ ಮೇಲೆ ರೋಝಿ ಗುಲಾಬನ ಮೋಹದಿಂದ ಹಾರಿಕೊಂಡಿತು.

ಈ ಗದ್ದಲವು ಪ್ರಾರಂಭವಾದದ್ದು ಗುಲಾಬನಿಂದ. ಅಂತೆಯೆ ಶಂಕರರಾಯರು ಗುಲಾಬನ ಬೆನ್ನಮೇಲೆ ಚಬುಕಿನ ಬಾಸಾಳ ಎಬ್ಬಿಸಿದರು. (ಈ ಚಬುಕಿನಲ್ಲಿ ವಿದ್ಯುತ್ ಇರುತ್ತದೆಂದು ತಿಳಿಯುವ ಮಾತು ಸಂಪೂರ್ಣ ಸುಳ್ಳು. ಚಬುಕು ಸಾದಾ ಚರ್ಮದ್ದೇ.) ಚಬುಕು ಎಳೆದದ್ದರಿಂದ ಗುಲಾಬ ಕ್ರೋಧಾವಿಷ್ಟವಾಗಿ ಇಡೀ ಡೇರೆಯೆ ನಡುಗಿಹೋಗುವಂತೆ ಕ್ರೂರವಾಗಿ ಗರ್ಜಿಸಿತು.

ಅದು ನೆಗೆದು ಶಂಕರರಾಯರ ಮೈಮೇಲೆ ಏರಿಬಂತು. ಅವರು ಆತ್ಮಸಂರಕ್ಷಣೆಗೆಂದು ತಮ್ಮ ಕೈಯನ್ನು ಹುಲಿಯ ಬಾಯಿಗೆ ಅಡ್ಡ ಕೊಟ್ಟರು.

ಹುಲಿ ಅದನ್ನು ಕಟಕಟನೆ ಕಡಿಯಿತು. ಇದನ್ನು ನೋಡಿ ಶಂಕರರಾಯರ ಸಹಾಯಕನು ಗುಲಾಬನಿಗೆ ಮತ್ತೆ ಕೆಲ ಏಟುಗಳನ್ನು ಬಿಗಿದನು. ಅದು ಶಂಕರರಾಯರನ್ನು ಬಿಟ್ಟು ಅವನ ಮೇಲೆ ಎರಗಿತು. ಗುಲಾಬ ಸಹಾಯಕನ ಎದೆಯ ಮೇಲೆ ನಿಂತುದನ್ನು ನೋಡಿ ಸೀತೆ ಪುನಃ ಗುಲಾಬನ ಮೇಲೆ ನೆಗೆಯಿತು.

ಇಷ್ಟೆಲ್ಲ ನಡೆದಿರುವಾಗ ಎಲ್ಲ ಹುಲಿಗಳೂ ಒಂದರಮೇಲೊಂದು ಹಾರಿ ಹಾಹಾಕಾರವೆಬ್ಬಿಸಿಬಿಟ್ಟವು. ಜನರು ಗಾಬರಿಗೊಂಡು ಓಡಿಹೋಗಲಾರಂಭಿಸಿದರು. ಶಂಕರರಾಯರು ಹೊರಬಂದವರೆ ಜೇಬಿನಿಂದ ರಿವಾಲ್ವರ್ ತೆಗೆದು ಸಹಾಯಕನ ಎದೆಯ ಮೇಲೆ ನಿಂತ ಗುಲಾಬನನ್ನು ಗುಂಡಿಕ್ಕಿ ಕೊಂದರು. ಸಹಾಯಕನ ಪ್ರಾಣ ಉಳಿಸಲೆಂದು ಮೂವರು ಬೇರೆ ಕೆಲಸಗಾರರು ಜಾಳಿಗೆಯ ಕಟ್ಟಿನ ಒಳಗೆ ಆಗಲೆ ಬಂದುಬಿಟ್ಟಿದ್ದರು. ರೊಚ್ಚಿಗೆದ್ದ ಹುಲಿಗಳು ಅವರ ಮೈಮೇಲೆ ಹಾರಿ ಒಬ್ಬನ ಕರುಳನ್ನೇ ಹೊರಗೆಳೆದವು. ಆತ ಕೂಡಲೇ ಸತ್ತ. ಶಂಕರರಾಯರು ಮತ್ತೂ ಗುಂಡುಗಳನ್ನು ಹಾರಿಸಿ ಮೂರು ಹುಲಿಗಳನ್ನು ಕೊಂದರು.

ಈ ಗದ್ದಲದಲ್ಲಿ ಮೋಜಿನ ಸಂಗತಿಯೆಂದರೆ ಯಾವನ ಪ್ರಾಣ ಉಳಿಸಲೆಂದು ಕೆಲಸಗಾರರು ನುಗ್ಗಿದ್ದರೊ ಆ ಸಹಾಯಕನಿಗೆ ಹೇಳಿಕೊಳ್ಳುವಂಥ ಗಾಯವೇನೂ ಆಗಲಿಲ್ಲ. ಆದರೆ ಇತರ ಮೂರು ಕೆಲಸಗಾರರಲ್ಲಿ ಒಬ್ಬ ಆಗಲೇ ಸತ್ತು ಇನ್ನೊಬ್ಬ ಮುಂದೆ ದವಾಖಾನೆಯಲ್ಲಿ ನಾಲ್ಕು ದಿನಗಳ ತರುವಾಯ ಸತ್ತ. ಮೂರನೆಯವನೊಬ್ಬ ಪ್ರಾಣ ಉಳಿಸಿಕೊಂಡ. ಆ ಮೇಲೆ ಉಳಿದ ಹುಲಿಗಳನ್ನು ಹೇಗೋ ಕೊಳ್ಳಿಗಳಿಂದ ಹೆದರಿಸಿ ಪಂಜರಕ್ಕೆ ಸೇರಿಸಲಾಯಿತು ಶಂಕರರಾಯರ ಕೈ ನೆಟ್ಟಗಾಗಬೇಕಾದರೆ ಮೂರು ತಿಂಗಳು ಹಿಡಿಯಿತು. ಆದರೂ ಪ್ರಾಣ ಉಳಿಯಿತಲ್ಲ. ಅದೇ ದೊಡ್ಡ ಮಾತು!

*

ಚಕ್ಕುಲಿ ಎಲೆ-ಹೋಳಿಗೆಗೆ ಹೇಳಿತು...



"ಶುದ್ಧವಾದ ತುಷಾರ್ ನಿಂದ
ನನ್ನನ್ನು ತಯಾರಿಸಿದರೆ
ನನ್ನ ರುಚಿ
ಅತ್ಯಧಿಕವಾಗುತ್ತದೆ"

ತುಷಾರ್‌ನಲ್ಲಿ ಅಧಿಕ ಪುಷ್ಟಿಕರವಾದ ವಿಟಮಿನ್ 'ಎ' ಮತ್ತು 'ಡಿ' ಇರುವುದರಿಂದ ನೀವು ಅದನ್ನು ಉಪಯೋಗಿಸಿ ಮಾಡುವ ಅಡಿಗೆ ಉತ್ಕೃಷ್ಟವಾಗುತ್ತದೆ. ನೀವು ತುಷಾರ್‌ನಿಂದ ತಯಾರಿಸಿದ ಅಡಿಗೆಯ ರುಚಿ ಎಷ್ಟು ಚೆನ್ನಾಗಿರುತ್ತದೆ, ಅದರ ಪರಿಮಳ ಎಷ್ಟು ಉತ್ತಮವಾಗಿರುತ್ತದೆ ಎಂಬುದನ್ನು ನೀವೇ ನೋಡಿರಿ !





ತುಷಾರ್

ವಿಟಮಿನ್‌ಯುಕ್ತ ವನಸ್ಪತಿ

ತುಂಗಭದ್ರಾ ಇಂಡಸ್ಟ್ರೀಸ್ ಲಿ., ಕರ್ನೂಲ್

ಇದು ಹಸಿವು, ಇದು ವ್ಯಾಧಿ

ಕನ್ಹಯ್ಯಾಲಾಲ ಮಿಶ್ರ

ಏಸೆಕ್ಸ್ ನಗರದ ಹೊಲವೊಂದರಲ್ಲಿ ಒಬ್ಬ ಬಾಲಕನಿಗೆ ತಾಮ್ರದ ಒಂದು ಮೂರ್ತಿ ಸಿಕ್ಕಿತು. ಗರುಡ ದೇವತೆಯ ಈ ಮೂರ್ತಿ ಕಲಾ ದೃಷ್ಟಿಯಿಂದ ಅಮೂಲ್ಯ ವಸ್ತುವಾಗಿದೆ ಮಾತ್ರವಲ್ಲ, ರೋಮನ್ ಅವಶೇಷಗಳಿಗೆ ಸಂಬಂಧಿಸಿದ್ದಾಗಿರುವುದರಿಂದ ಐತಿಹಾಸಿಕ ದೃಷ್ಟಿಯಿಂದಲೂ ಈ ಮೂರ್ತಿ ಅಮೂಲ್ಯವಾಗಿದೆ.

ಆ ಬಾಲಕನಿಗೆ ಮೂರ್ತಿಯ ಮಹತ್ವದ ಅರಿವಿರಲಿಲ್ಲ. ಆತ ಒಬ್ಬ ಪ್ರವಾಸಿಕನಿಗೆ ಈ ಮೂರ್ತಿಯನ್ನು ಎರಡು ರೂಪಾಯಿಗಳಿಗೆ ಮಾರಿಬಿಟ್ಟ. ಸುದ್ದಿ ಹಬ್ಬಿತು, ಒಬ್ಬರಿಂದೊಬ್ಬರಿಗೆ ದಾಟುತ್ತ ಕೈಸ್ಟರ್ ವಸ್ತು ಸಂಗ್ರಹಾಲಯದ ಅಧಿಕಾರಿಯ ಕಿವಿಗೆ ಮುಟ್ಟಿತು. ಆತ ಹಿಗ್ಗಿದ. ಇತಿಹಾಸದ ಯಾವುದೊ ಒಂದು ಸೂಕ್ಷ್ಮ ಸಂಕೇತದ ವ್ಯಾಖ್ಯೆಗೆ, ಅದರ ಪುಷ್ಟಿಗೆ ಈ ಮೂರ್ತಿಯ ಅಗತ್ಯವಿತ್ತು.

ಅವರಿವರನ್ನು ಕೇಳುತ್ತ ಹುಡುಕುತ್ತ ಆ ಅಧಿಕಾರಿ ಆ ಬಾಲಕನ ಬಳಿಗೆ ಬಂದ. ಆದರೆ ಈಗ ಅವನ ಹತ್ತಿರ ಆ ಮೂರ್ತಿ ಇರಲಿಲ್ಲ. ಯಾರಿಗೆ ಮಾರಿದ್ದನೊ ಅವನ ಪತ್ತೆ ಹುಡುಗನಿಗೆ ಗೊತ್ತಿರಲಿಲ್ಲ. ಅಧಿಕಾರಿ ಪತ್ರಿಕೆಗಳಲ್ಲಿ ಜಾಹೀರಾತು ಕೊಟ್ಟ. ಆ ಮೂರ್ತಿ ಯಾರ ಬಳಿ ಇದೆಯೊ ಅವರು ತಿಳಿಸಬೇಕು ಎಂದು ಬಿನ್ನವಿಸಿಕೊಂಡ. ಮೂರ್ತಿಗಾಗಿ ದೇಶದಲ್ಲಿ ಎಲ್ಲ ಕಡೆಗೂ ಶೋಧ ನಡೆಯಿತು.

ಈ ಶೋಧದ ಗತಿ ಏನಾಯಿತು ಎಂದು ನಾವು ತಲೆ ಕೆರೆದುಕೊಳ್ಳುವುದು ಬೇಡ. ಆದರೆ ಮೂರ್ತಿಯ ಬೆಲೆಯನ್ನು ಅರಿಯದ ಬಾಲಕನಂತೆಯೆ ನಮ್ಮ ಸ್ಥಿತಿ ಇರುವುದಿಲ್ಲವೆ? ನಮಗೆ ಸಿಗುತ್ತಿರುವುದರ ಮಹತ್ವವನ್ನು ನಾವೆಲ್ಲಿ ತಿಳಿದುಕೊಳ್ಳುತ್ತಿದ್ದೇವೆ?

ತನ್ನ ಜೀವನದ ಕೊರತೆಗಳಿಂದ ತ್ರಸ್ತನಾದ ಭಕ್ತ ಒಂದು ದಿನ ದೇವಾಲಯದಲ್ಲಿ ಆಕ್ರೋಶಗೈದ. ಅವನ ಧ್ವನಿಯಲ್ಲಿ ಉದ್ವೇಗವಿತ್ತು, ಭಾಷೆ ಕಟುವಾಗಿತ್ತು. ಹೇಳಬಹುದಾದದ್ದನ್ನೆಲ್ಲ ಆತ ಹೇಳಿ ಹೊರಗೆ ಬಂದಾಗ ಅಲ್ಲಿ ಒಬ್ಬ ಭಿಕ್ಷುಕನನ್ನು ಕಂಡ. ಅವನ ಎರಡೂ ಕಾಲುಗಳು, ಎರಡೂ ಕೈಗಳು ಕತ್ತರಿಸಿಹೋಗಿದ್ದವು. ಆ ಅಸಹಾಯ ಮನುಷ್ಯ ಅತಿ ದೈನ್ಯದಿಂದ "ಪರದೇಶಿಗೆ ಏನಾದರೂ ಕೊಡಿ, ಸ್ವಾಮಿ" ಎಂದು ಬೇಡಿಕೊಳ್ಳುತ್ತಿದ್ದ. ಭಕ್ತ ಅವನನ್ನು ನೋಡುತ್ತಲೇ ನಿಂತ. ಮೊದಲು ಆತ ಅವಾಕ್ಕಾದ, ಆ ಮೇಲೆ ಸ್ತಬ್ಧನಾದ, ನಂತರ ಅಧೀರನಾದ. ತಿರುಗಿ ಒಳಗೆ ಓಡಿ ಪರಮಾತ್ಮನ ಮೂರ್ತಿಯ ಬಳಿ ಬಂದ. ಈಗ ಆತ ಭಾವಾವೇಶದಿಂದ ಗದ್ಗದಿತನಾಗಿದ್ದ. ದೀನನಾಗಿದ್ದ. ಅವನ ಕಣ್ಣುಗಳಲ್ಲಿ ನೀರಿತ್ತು. ಆತ ಕೈಮುಗಿದು ಹೇಳಿದ, "ಹೇ ಪ್ರಭು, ನೀನು ನನಗೆ ಇಷ್ಟೊಂದು

ಹಿಂದೀ "ಜ್ಞಾನೋದಯ" ದಿಂದ

ಸದೃಢವಾದ. ಸುಂದರವಾದ ಕೈಕಾಲುಗಳನ್ನು ಕೊಟ್ಟಿರುವೆ. ಆದರೆ ನಾನು ಅವುಗಳ ಮಹತ್ವವನ್ನೂ ಬೆಲೆಯನ್ನು ಅರಿಯದೆ ಅದನ್ನು ಕೊಡಲಿಲ್ಲ, ಇದನ್ನು ಕೊಡಲಿಲ್ಲ ಎಂದು ನಿನ್ನನ್ನು ಜರೆದೆ. ಪ್ರಭು, ನೀನು ನನಗೆ ಬಹಳಷ್ಟನ್ನು ಕೊಟ್ಟಿರುವೆ. ನಾನದಕ್ಕೆ ಕೃತಜ್ಞನಾಗಿದ್ದೇನೆ, ಸ್ವಾಮೀ."

ಈ ಭಕ್ತನ ಕಥೆಯಿಂದಲೂ ನಾವು ತಲೆಕೆಡಿಸಿಕೊಳ್ಳುವುದು ಬೇಡ. ನಮಗೆ ಪ್ರಾಪ್ತವಾಗಿರುವುದರಿಂದ, ಸುಲಭಸಾಧ್ಯವಿರುವುದರಿಂದ, ನಮ್ಮದೇ ಆಗಿರುವುದರಿಂದ, ನಾವು ಸುಖಪಡೆಯದೆ, ನಮ್ಮಲ್ಲಿ ಇಲ್ಲದಿರುವುದರ ಹಂಬಲದಿಂದ, ಅಪ್ರಾಪ್ಯ ವಸ್ತುವಿನ ಆಶೆಯಿಂದ ದುಃಖಿಸುವವರಂತೆಯೆ ನಮ್ಮ ಅವಸ್ಥೆಯೂ ಇಲ್ಲವೆ?

ಅಣುವ್ರತ ಆಂದೋಲನದ ಪ್ರವರ್ತಕ ಸಂತ ತುಲಸೀದಾಸರು ಈ ವಿಕೃತಿಯ ಚಿತ್ರವನ್ನು ಎರಡೇ ಶಬ್ದಗಳಲ್ಲಿ ತೋರಿಸಿದ್ದಾರೆ. ಅಂಥ ಚಿತ್ರವನ್ನು ಸಾವಿರಾರು ವಿದ್ವಾಂಸರು ಸಹಸ್ರಾರು ಪುಸ್ತಕಗಳಲ್ಲಿಯೂ ತೋರಿಸಲಾರರು. ಹಸಿವು ಮತ್ತು ವ್ಯಾಧಿ: ಇವೇ ಆ ಎರಡು ಶಬ್ದಗಳು.

ಸಂತರ ಮಾತುಗಳಿವು: "ಇಂದಿನ ಮಾನವನಿಗೆ ಪದವಿ, ಯಶಸ್ಸು ಮತ್ತು ಸ್ವಾರ್ಥಗಳ ಹಸಿವಲ್ಲ, ಅವುಗಳ ವ್ಯಾಧಿ ಅಂಟಿಕೊಂಡಿದೆ. ಬೇಕಾದಷ್ಟು ಬಳಿದುಕೊಂಡ ನಂತರವೂ ಈ ವ್ಯಾಧಿ ಗುಣವಾಗುವುದಿಲ್ಲ."

ನಾವು ಈ ಮಾತನ್ನು ತಿಳಿದುಕೊಂಡೆವಾದರೆ ಸುಖವನ್ನು ಪಡೆದೇವು. ಆಚರಣೆಯಲ್ಲಿ ತಂದಿದ್ದಾದರೆ ದುಃಖ ಸಂಕಟಗಳಿಗೆ ಪ್ರವೇಶವಿಲ್ಲದ ಪೂರ್ಣ ಜೀವನವನ್ನು ಹೊಂದಿಯೇವು. ಹಸಿವು ಆರೋಗ್ಯಕರವಾದದ್ದು. ಏಕೆಂದರೆ ಹಸಿವೆಯ ಮೊದಲನೆಯ ಫಲವೆಂದರೆ ಪ್ರಯತ್ನಗಳಿಗೆ ಉತ್ತೇಜನ; ಎರಡನೆಯದು ಪ್ರಾಪ್ತಿಯ ಸುಖ; ಮೂರನೆಯದು ತೃಪ್ತಿಯ ಆನಂದ. ಇದಕ್ಕೆ ವಿರುದ್ಧವಾಗಿ; ವ್ಯಾಧಿಯೆಂದರೆ ಅನಾರೋಗ್ಯ. ಅದರಲ್ಲಿ ಪ್ರಾಪ್ತಿಯ, ರುಚಿ ನೋಡುವ, ತೃಪ್ತಿಪಡುವ ಉತ್ತೇಜನವಿದೆ. ಇರುವುದೆಲ್ಲ ಉತ್ತೇಜನ, ಉತ್ತೇಜನವೇ ಉತ್ತೇಜನ.

ಅಂದರೆ ಉತ್ತೇಜನವಾದರೂ ಕೆಟ್ಟದ್ದೇ? ಅಲ್ಲ. ಅದು ಒಳ್ಳೆಯದು. ಏಕೆಂದರೆ ಅದು ಪ್ರಗತಿಯ ಪ್ರೇರಣಾಶಕ್ತಿಯಾಗಿದೆ.

ಉತ್ತೇಜನವೆಂದರೆ ಕೆಟ್ಟ ವಸ್ತುವೇ? ಹೌದು ಸ್ವಾಮಿ, ಅದು ಕೆಟ್ಟ ವಸ್ತು. ಏಕೆಂದರೆ ಅದು ಮುಂದುವರಿದು ಪ್ರಗತಿಯ ಬದಲು ಅಗತಿಯ ವಾಹನವಾಗುತ್ತದೆ. ಗುರಿ ಪ್ರಾಪ್ತವಾದಾಗಲೂ ಮನುಷ್ಯನನ್ನು ಅದು ನಿಲ್ಲಗೊಡುವುದಿಲ್ಲ. ಆಗ ಮನುಷ್ಯ ಮುನ್ನಡೆಯುವುದನ್ನು ಮರೆತು ಗಾಣದ ಎತ್ತಿನಂತೆ ಚಕ್ರಾಕಾರವಾಗಿ ಸುತ್ತತೊಡಗುತ್ತಾನೆ— ಎಲ್ಲಿಗೂ ಮುಟ್ಟುವುದಿಲ್ಲ.

ನಾವು ಪದವಿ, ಯಶಸ್ಸು, ಸ್ವಾರ್ಥಗಳ ಹಸಿವಿನಿಂದ ಉತ್ತೇಜಿತರಾಗಬೇಕೇ ಹೊರತು ಅವುಗಳ **ವ್ಯಾಧಿಯಿಂದಲ್ಲ** ಎಂಬುದೇ ಸಂತರ ನಿರ್ದೇಶನ.

ಹಸಿವು ಮತ್ತು ವ್ಯಾಧಿಗಳ ನಡುವಿನ ಗೆರೆ—ಗಡಿ ಯಾವುದು? ನಮಗೆ ಪ್ರಾಪ್ತಿಯ ಗಡಿಯ ಜ್ಞಾನವಿರಬೇಕು, ಆ ಜ್ಞಾನಕ್ಕೆ ಅಂಟಿಕೊಳ್ಳುವ ದೃಢತೆಯಿರಬೇಕು. ನಮಗೆ ಏನು ಬೇಕು, ಎಷ್ಟು ಬೇಕು ಎಂಬುದು ನಮಗೆ ತಿಳಿದಿರಬೇಕು. ಅಷ್ಟು ಸಿಕ್ಕಾಗ ನಾವು ಇನ್ನೂ ಹೆಚ್ಚನ್ನು ಬಯಸಬಾರದು. ಪುನಃ ಪುನಃ ಬಯಸಬಾರದು. ಇದೇ ಗಡಿ. ಈ ಗಡಿಯೆ ಹಸಿವು ವ್ಯಾಧಿಯಾಗದಂತೆ ನೋಡಿಕೊಳ್ಳುತ್ತದೆ. ಅದರಂತೆ ನಾವು ಸಿಕ್ಕಿದ್ದರಿಂದ ಸುಖ ಪಡೆಯಬೇಕು, ಸಿಗದಿರುವುದಕ್ಕಾಗಿ ನಮ್ಮಿಂದಾದ ಪ್ರಯತ್ನ ಮಾಡಬೇಕು. ಆದರೆ ಅದಕ್ಕಾಗಿ ದುಃಖಪಡಬಾರದು, ದುಃಖಪಟ್ಟುಕೊಂಡು ಸಿಕ್ಕಿದ್ದರ ಆನಂದವನ್ನು ಕಳೆದುಕೊಳ್ಳಬಾರದು.

ರಾಧಾಮೋಹನರು ಮಹೂ ಛಾವಣಿಯ ಯಶಸ್ವಿ ಡಾಕ್ಟರರು. ಸದ್ವ್ಯವಹಾರ ಅವರ



ಹಳದಿ
LUX
Yellow
ಹಸುರು
LUX
Green
ನೀಲಿ
LUX
Blue
ನಸುಗೆಂಪು
LUX
Pink
ಕಾಮನಬಿಲ್ಲಿನ ನಾಲ್ಕು ಬಣ್ಣಗಳಲ್ಲಿ ನನ್ನ ಲಕ್ಸ -ಹೌದು, ಬಿಳಿಬಣ್ಣದಲ್ಲಿ ಕೂಡ ಇದೆ'
ಎಂದು ಅನ್ನುತ್ತಾಳೆ
ಎಂ. ಎನ್. ರಾಜಂ
LTS.
ಹಿಂದುಸ್ತಾನ್ ಲೀವರ್ ಅವರ

ಸ್ವಭಾವ. ಅದೇ ಅವರ ಯಶಸ್ಸಿನ ಗುಟ್ಟು. ಒಂದು ದಿನ ಮಾತಿನ ನಡುವೆ ಹೇಳಿದರು: "ಜಗತ್ತಿನಲ್ಲಿ ಪ್ರತಿಯೊಬ್ಬನೂ ದುಃಖ ದುಃಖ ವೆಂದು ಕೂಗಿಕೊಳ್ಳುತ್ತಾನೆ. ಆದರೆ ನಿಜವಾಗಿ ಈ ಜಗತ್ತಿನಲ್ಲಿ ದುಃಖಿಗಳಾಗಿರುವವರು ತೀರ ಕಡಿಮೆ. ಸತ್ಯವೆಂದರೆ, ಯಾವನೂ ದುಃಖವೆಂದ ರೇನು, ಸುಖವೆಂದರೇನು ಎಂದು ಆಳವಾಗಿ ವಿಚಾರ ಮಾಡುವುದೇ ಇಲ್ಲ. ದುಃಖ, ದುಃಖ ವೆಂದು ಕೂಗುವುದೂ ಸುಖಗಳ ಸ್ವಪ್ನ ಕಾಣು ವುದೂ ಒಂದು ಚಟವಾಗಿಬಿಟ್ಟಿದೆ."

ನನ್ನ ಜಿಜ್ಞಾಸಾಪೂರ್ಣ ಕಣ್ಣುಗಳನ್ನು ಕಂಡು ಅವರು ಮತ್ತೂ ಅಂದರು: "ನನ್ನ ಮಾತಿನ ಒರೆ ಗಲ್ಲು ಯಾವುದು ಹೇಳಲೆ? ಯಾವನೇ ಆದರೂ ತನ್ನ ಇಡೀ ಜೀವನವನ್ನು ಇನ್ನೊಬ್ಬನ ಜೀವನ ದೊಂದಿಗೆ ಅದಲು ಬದಲು ಮಾಡಿಕೊಳ್ಳಲು ಸಿದ್ಧನಿದ್ದಾನೆಯೆ ಕೇಳಿ? ಯಾರೂ ಸಿದ್ಧರಿಲ್ಲ."

"ನೀವು ಜವಾಹರಲಾಲರೊಂದಿಗೆ ನಿಮ್ಮ ಜೀವನ ಅದಲು ಬದಲು ಮಾಡಿಕೊಳ್ಳಲು ಸಿದ್ಧ ರಿಲ್ಲವೇ?"

ಅವರು ಎರಡೂ ಕೈಗಳನ್ನೆತ್ತಿ ಆವೇಶದಿಂದ "ಇಲ್ಲ. ಇಲ್ಲ" ಎಂದರು.

ನಾನು "ಯಾಕೆ?" ಎಂದು ಕೇಳಿದೆ.

ಅವರು ಸ್ಥಿರ ಸ್ವರದಲ್ಲಿ ಹೇಳಿದರು: "ಜವಾ ಹರಲಾಲರ ಮನೆಯಲ್ಲಿ ಮಗನಿಲ್ಲ. ನನ್ನ ಮನೆ ಯಲ್ಲಿ ದುಡಿಯುವ ಇಬ್ಬರು ಸುಂದರ ಮಕ್ಕಳಿ ದ್ದಾರೆ. ಜವಾಹರಲಾಲರು ಮುದುಕರು. ನಾನು ನಡು ವಯಸ್ಸಿನವ. ನನ್ನ ಇಡೀ ಜೀವನವನ್ನು ಅವರೊಂದಿಗೆ ಹೇಗೆ ವಿನಿಮಯಿಸಲಿ, ನೀವೇ ಹೇಳಿ."

ಜೀವನದ ಎಂಥ ಪರಮ ಸತ್ಯವನ್ನು ಅವರು ನನ್ನ ಎದುರಿನಲ್ಲಿ ಇಟ್ಟಿದ್ದರು! ನಮಗೆ ಲಭ್ಯ ವಾದದ್ದರ ಸುಖವನ್ನು ಹೊಂದದೆ ಅಲಭ್ಯವಾದ ದ್ದಕ್ಕಾಗಿ ನಾವು ದುಃಖಪಡುತ್ತಿದ್ದೇವಲ್ಲ. ಕಂಕು ಳಲ್ಲಿ ಕೂಸನ್ನೆತ್ತಿಕೊಂಡು ಕೂಸನ್ನು ಊರಲ್ಲೆಲ್ಲ ಹುಡುಕುತ್ತ ಹೋದರೆ ಬರುವುದೇನು?

ಒಬ್ಬ ಕುರುಡ ಫಕೀರ ಹಾಡಿದ್ದ ಹಾಡೊಂದು ನೆನಪಿಗೆ ಬರುತ್ತದೆ. ಅದರ ಮೊದಲನೆಯ ಸಾಲು "ಹರ ಹಾಲ ಮಗನ ರಹ ರೇ ಬಂದೇ, ಹರ ಹಾಲ ಜತನ ಕರ ರೇ ಬಂದೇ." ಎಂದಿತ್ತು. ಈ ಹತ್ತು ಶಬ್ದಗಳಲ್ಲಿ ಜೀವನದ ಎಂಥ ಮಹತ್ವಾದ ಸೂತ್ರವಿದೆ! ನಾವು ವಿಶಿಷ್ಟ ಪರಿಸ್ಥಿತಿಯಲ್ಲಿಯೆ ಸುಖಿಗಳಾಗಿರುವುದರಲ್ಲಿ ಜೀವನದ ಪೂರ್ಣತೆ, ಸಾಫಲ್ಯ, ಕೃತಾರ್ಥತೆ ಇಲ್ಲ. ಎಂಥ ಪರಿಸ್ಥಿತಿಯಲ್ಲೂ ನಾವು ಸುಖಿಗಳಾ ಗಿರುವುದರಲ್ಲಿ ಜೀವನದ ಪರಿಪೂರ್ಣತೆಯಿದೆ.

ಅಂದರೆ ಅಪ್ರಾಪ್ಯದ ಬಗ್ಗೆ ಯೋಚಿಸುವುದು ಪಾಪವೆ? ಅಪರಾಧವೆ? ತಪ್ಪೇ? ಅಲ್ಲ. ಅಪ್ರಾ ಪ್ಯಕ್ಕಾಗಿ ನಾವು ಪ್ರಯತ್ನಿಸಬೇಕು, ಆದರೆ ಅಳ ಬಾರದು. ಇನ್ನು ಪ್ರಯತ್ನ ಮಾಡುವ ಶಕ್ತಿ ಯಿರದಿದ್ದರೆ? ಸಾಧನಗಳಿರದಿದ್ದರೆ? ಈ ಪ್ರಶ್ನೆ ಯೇನೋ ಮಾರ್ಮಿಕವಾದದ್ದು. ಆದರೆ ಅದಕ್ಕೆ ಆ ಕುರುಡು ಫಕೀರನ ಅರ್ಧ ಸಾಲಿನಲ್ಲಿ ಅದರ ಉತ್ತರವಿದೆ. "ಹರ ಹಾಲ ಜತನ ಕರ ರೇ ಬಂದೇ" ಪ್ರಯತ್ನ ಮತ್ತು ಉದ್ಯೋಗಗಳಿಗೆ ಅವಕಾಶವಿಲ್ಲದ ಯಾವ ಸಂದರ್ಭವೂ ಇರುವು ದಿಲ್ಲ. ಲಭ್ಯವಾದದ್ದರ ಸುಖವನ್ನು ಹೊಂದು ತ್ತಲೇ ಇದ್ದು ನಾವು ಅಪ್ರಾಪ್ಯ ವಿಷಯಕ್ಕಾಗಿ ಪ್ರಯತ್ನಮಾಡಬೇಕು. ಸರಳ ಮಾರ್ಗ ಎದುರಿ ಗಿರದಿದ್ದರೆ ಆ ಮಾರ್ಗದ ಶೋಧನೆಯಲ್ಲಿ ತೊಡಗಬೇಕು. ನಿರಾಶರಾಗಿ ಕರ್ಮಹೀನರಾಗ ಬಾರದು. ಅಪ್ರಾಪ್ಯದ ಪ್ರಾಪ್ತಿಗಾಗಿ ಪ್ರಯತ್ನ ಮಾಡುವಾಗ ನಮಗೆ ಪ್ರಾಪ್ತವಾದದ್ದನ್ನು ಮರೆಯಬಾರದು.

ಅಪ್ರಾಪ್ಯ ವಸ್ತುವಿನ ಪ್ರಾಪ್ತಿಗಾಗಿ ಮಾಡುವ ಪ್ರಯತ್ನಗಳಿಗೆ ಮೇರೆಯಿಲ್ಲವೆ? ಇದೆ. ನಮಗೆ ಸ್ವಲ್ಪವಾದರೂ ಸಿಕ್ಕಾಗ ಸುಖಿಗಳಾಗಬೇಕು, ಬಹಳಷ್ಟು ಸಿಕ್ಕಾಗ ಸಂತುಷ್ಟರಾಗಬೇಕು. ಎಲ್ಲ ವನ್ನೂ ಎಂದೂ ಬಯಸಬಾರದು. *



ತುಸುವೆ ಹೊತ್ತು ಉಳಿದಿದೆ

ಅನ್ನದಾಶಂಕರ ರಾಯ

ಲಾಲ ಬಾಬೂಗೆ ಯಾರೊ, 'ಇನ್ನು ಅಲ್ಪ ಮಾತ್ರ ವೇಳೆ ಉಳಿದಿದೆ' ಎಂದು ಹೇಳಿದಾಗ ಅವರು ಉಟ್ಟ ಬಟ್ಟೆಯಲ್ಲಿ ಸಹಜವಾಗಿ ಎಂಬಂತೆ ಹೊರಬಿದ್ದವರು ಕಣ್ಮರೆಯಾಗಿ ವೃಂದಾವನದಲ್ಲಿ ಕಾಣಿಸಿಕೊಂಡರು— ಒಬ್ಬ ಸಂನ್ಯಾಸಿಯಾಗಿ! ಮನೆಗೆ ಮರಳಲೇ ಇಲ್ಲ. ಇನ್ನು ಅಲ್ಪ ಕಾಲ ಮಾತ್ರ, ಉಳಿದಿದೆ' ಎಂದು ಹೇಳಿದವನಿಗೆ ತನ್ನ ಮಾತಿನ ಪರಿಣಾಮವೇನಾದೀತೆಂಬ ಅರಿವಿತ್ತೆ ?

*

ಬರ್ದ್ವಾನ್ ಸ್ಟೇಶನ್ನಿನಲ್ಲಿ ಮುಂಬಯಿಯಿಂದ ಬಂದ ಗಾಡಿ ನಿಂತಿತ್ತು. ಗ್ರೀಷ್ಮ ಋತು. ಸ್ನಾನಗೃಹದಿಂದ ಹೊರಬಿದ್ದು ಆರ್ಯ ಕುಮಾರ ನಂದಿಯವರು ತಮ್ಮ ಸ್ಥಳಕ್ಕೆ ಬಂದು ಸುಖವಾಗಿ ಕೂತರು. ಪೇಪರೊಂದನ್ನು ಕೊಂಡರು. ಮೊದಲೇ ಹೇಳಿಟ್ಟಂತೆ ಊಟ ಸಿದ್ಧವಿತ್ತು. ಓದುತ್ತೋದುತ್ತ ಊಟ ಮಾಡಿದರು.

ಆಗಲೇ ಶೀಖ ಜ್ಯೋತಿಷಿಯೊಬ್ಬ ಅವರ ಎದುರಿನ ಕಿಡಿಕಿಯಲ್ಲಿ ಕಾಣಿಸಿಕೊಂಡ. "ಬಾಬೂಜಿ, ನಿಮ್ಮ ಕೈ ಸ್ವಲ್ಪ ತೋರಿಸಿ," ಎಂದ. ತಮ್ಮ ಪುರುಷ ಪ್ರಯತ್ನದಿಂದ ಲಕ್ಷ್ಮೀಪತಿಯಾದ ಆರ್ಯಕುಮಾರರು ಅಂಥಾದ್ದನ್ನೆಲ್ಲ ನಂಬುವವರಲ್ಲವಾದರೂ ಊಟ ಮತ್ತು ಓದಿನಲ್ಲಿ ತಲ್ಲೀನರಾಗಿದ್ದುದರಿಂದ ಮೈಮರೆತು ಕೈ ಚಾಚಿದರು. "ಈ ಕೈ ಅಲ್ಲ" ಎಂದಾಗ ಅವರು ಆಗಲಿ ಎಂದು ಬಲಗೈ ಒರಸಿಕೊಂಡು ಮುಂದೆ ಮಾಡಿದರು.

ಗಾಡಿ ಬಿಡುವಷ್ಟರಲ್ಲಿತ್ತು. ಜ್ಯೋತಿಷಿ ನುಡಿದ: "ಬಾಬೂಜಿ, ಬಹಳ ಸ್ವಲ್ಪ ವೇಳೆ ಉಳಿದಿದೆ."

ಲಾಲ ಬಾಬೂ ಕತೆ ಆರ್ಯ ಬಾಬೂಗೆ ಗೊತ್ತಿರಲಿಲ್ಲ. ಮತ್ತೇನೋ ಕೇಳುವಷ್ಟರಲ್ಲಿ ಗಾಡಿ ಬಿಟ್ಟಿತು. ಆರ್ಯಬಾಬೂ ಒಂದು ರೂಪಾಯಿ ಚೆಲ್ಲಿದರು. ಅದನ್ನು ಜ್ಯೋತಿಷಿ ಮುಟ್ಟಲಿಲ್ಲ.

ಸ್ಪಾರ್ಕ್ ಎಕ್ಸ್‌ಚೇಂಜಿನ ರಿಪೋರ್ಟಿನತ್ತ ಹೊರಳುತ್ತ ಬಾಬೂಜಿ, "ಒಂದು ರೂಪಾಯಿ ಅವನಿಗೆ ಸಾಲದೇ?" ಎಂದು ಯೋಚಿಸತೊಡಗಿದರು.

ಅವನಿಗೆ ಹೆಚ್ಚು ಬೇಕಾಗಿತ್ತೇನೋ. ಅಂತೆಯೆ ಮುಟ್ಟಿರಲಿಕ್ಕಿಲ್ಲ. ಆದರೂ ಗಾಡಿ ಹೋದ ಮೇಲೆ ಖಂಡಿತವಾಗಿ ಅದನ್ನು ಎತ್ತಿಕೊಳ್ಳುತ್ತಾನೆ. ಆದರೆ ಈ ರೀತಿ ಅವರ ಜೀವನದಲ್ಲಿ ಎಂದೂ ಆಗಿರಲಿಲ್ಲ. ಎರಡು ಶಬ್ದಕ್ಕೆ ಒಂದು ರೂಪಾಯಿ ಸಾಲದೇನು? ಅಥವಾ ರಿಜರ್ವ್ಡ್ ಫಸ್ಟ್ ಕ್ಲಾಸ್ ಡಬ್ಬಿ ನೋಡಿಯೆ ಆತ ಹೆಚ್ಚು ಅಪೇಕ್ಷಿಸಿದನೆ?

ಪುಟ ತಿರುವುತ್ತ ಆಟದ ಪುಟಕ್ಕೆ ಬರುವಷ್ಟರಲ್ಲಿ ಆ ಜ್ಯೋತಿಷಿಯ ಚಿತ್ರ ಸ್ಮೃತಿಪಟಲದಿಂದ ಮಸುಕಾಗಿಬಿಟ್ಟಿತ್ತು. ಆದರೂ ಅವನ ಮಾತನ್ನು ಮಾತ್ರ ಇನ್ನೂ ಮರೆಯದಾಗಿದ್ದರು."ಬಾಬೂಜಿ, ಇನ್ನು ಸ್ವಲ್ಪವೆ ವೇಳೆ ಉಳಿದಿದೆ."

ಹಾಗೆಂದರೆ? ಗಾಡಿ ಬಿಡುವ ಹೊತ್ತಾಯಿತು ಎಂದೇ ಅಲ್ಲವೆ? ಹೌದು. ಕೈಯಲ್ಲಿ ದುಡ್ಡಿರಲಿಕ್ಕಿಲ್ಲ. ಗಿರಾಕಿ ಶ್ರೀಮಂತನಾಗಿ ಕಾಣಿಸಿದ, ದೊಡ್ಡ ಬಕ್ಷೀಸು ಸಿಗುತ್ತದೆ ಎಂದೇ ಆತ ಏನೊ ಹೇಳಿದ.

ಪೇಪರ್ ಮಡಚಿ ಬದಿಗಿಟ್ಟರು. ತನ್ನ ಕೈಮೇಲಿನ ಗೆರೆಗಳು ತನ್ನ ಆಯುಷ್ಯದ ಏರು ಇನ್ನು ಮುಗಿಯಿತೆಂದು ಸೂಚಿಸಿರಬಹುದೆ? ಹಾಗಾದರೆ ಇನ್ನು ವ್ಯಾಪಾರವನ್ನು ಹಿಡಿತದಲ್ಲಿರಿಸಿಕೊಂಡು ವಿಸ್ತಾರವನ್ನು ನಿಯಂತ್ರಿಸಬೇಕೆ? ಅಥವಾ ಇನ್ನೂ ಕೆಲ ಲಕ್ಷ ಸಿಗುವ ಸೂಚನೆ ಇರಬಹುದೆ? ಅಥವಾ ಕೆಲ ಕಂಪೆನಿಗಳ ಪಾರುಪತ್ಯ ವಹಿಸಿಕೊಳ್ಳಬೇಕೆಂದು ಅರ್ಥವೆ?

ವಯಸ್ಸೇನೂ ಹಣ್ಣಾಗಿರಲಿಲ್ಲ. ಉತ್ಕರ್ಷ ಒಂದು ಸ್ತಿಮಿತಕ್ಕೆ ಬಂದರೆ ಹತ್ತು ವರ್ಷಗಳ ತರುವಾಯ ಬರಬೇಕು. ಆಗಲೂ ಇವರ ಉತ್ಸಾಹ ನಲುಗುವ ಸಂಭವ ಇಲ್ಲ. ಎಪ್ಪತ್ತು ವರ್ಷದ ಮುಂದೆ ವಾನಪ್ರಸ್ಥದ ವಿಚಾರ. ಸಾಕಷ್ಟು ದುಡ್ಡಿದೆ. ದುಡಿಯುವ ಹಿಮ್ಮತ್ತಿದೆ. ಯಾಕೆ ಮುನ್ನುಗ್ಗಬಾರದು? ಆಯುಷ್ಯವೃದ್ಧಿಯ ಬಗ್ಗೆ ಸಾಕಷ್ಟು ಹೊಸ ವಿಷಯಗಳನ್ನು ವಿಜ್ಞಾನ ಕಂಡುಹಿಡಿದಿದೆ. ತಂಪು ಹವೆಯ ಸ್ಥಳಗಳಲ್ಲಿ ವಾಸಿಸಿದರೆ ಹೆಚ್ಚು ಕಾಲ ಬದುಕಬಹುದೆಂದು ಹೇಳುತ್ತಾರೆ. ಹೋಗಲಿ; ದಾರ್ಜಿಲಿಂಗ್‌ಗೆ ಹೋಗಿ ನಿಂತರಾಯಿತು.

ಗಾಡಿ ಹೌರಾಕ್ಕೆ ಬರುವುದರೊಳಗಾಗಿ ಆರ್ಯಕುಮಾರರ ಮನಸ್ಸಿನೊಂದು ಗೊತ್ತಿಗೆ ಬಂದಿತ್ತು. ಜ್ಯೋತಿಷಿಯ ಶಬ್ದಕ್ಕೆ ಏನಾದರೂ ಅರ್ಥವಿರಲೇಬೇಕು. ತನ್ನ ಕಾಲ ಸನ್ನಿಹಿತವಾಗಿರಬೇಕು. ಏನಿದ್ದರೂ ಬೇಗ ಬೇಗ ಮುಗಿಸಿಕೊಂಡು ಅಣಿಯಾಗಿರಬೇಕು. ಮೃತ್ಯುಎಂದರೇನು ಗಣಿತವಲ್ಲ; ಗ್ರಹಣ ಇಂಥಾ ದಿನ ಎಂದು ಹೇಳಬಹುದಾದರೂ ಮೃತ್ಯು ಇಂಥಾ ದಿನ ಎಂದು ಹೇಗೆ ತಿಳಿಯಬೇಕು? ಆದರೂ ಭಿಕ್ಷುಕನೊಬ್ಬನ ಮಾತನ್ನು ಬಾಬೂಜಿ ನಂಬಿದರಲ್ಲ, ಒಂದು ರೂಪಾಯಿಯನ್ನೂ ಕೊಟ್ಟು!

"ಥೆ! ಅವನನ್ನು ನಾನು ನಂಬುವುದಿಲ್ಲ!" ತಮಗೆ ತಾವೇ ಹೇಳಿಕೊಂಡರು.

ಗಾಡಿ ಹೌರಾ ಸ್ಟೇಶನ್ನಿನಲ್ಲಿ ನಿಂತಿತು. "ಅವನನ್ನು ನಾನು ನಂಬುವುದಿಲ್ಲ, ಅವನನ್ನು ನಾನು ನಂಬುವುದಿಲ್ಲ" ತಿರುಗಿ ತಿರುಗಿ ತಮ್ಮಷ್ಟಕ್ಕೆ ಅಂದುಕೊಂಡರು ಆರ್ಯಕುಮಾರರು. ಅವರ ಕಾರು ಸೇತುವೆಯ ಮೇಲಿಂದ ಗಂಗಾ ನದಿಯನ್ನು ದಾಟಿ ಸಾಗಿತ್ತು. ಅದರೊಂದಿಗೆ ಇವರ ತಲೆಯಲ್ಲಿ ವಿಚಾರಗಳು ಕೂಡಿಕೊಳ್ಳುತ್ತಿದ್ದವು. ತಾನಿಲ್ಲದೆ ಕಲ್ಕತ್ತೆ ಇರಬಲ್ಲುದು. ಗಂಗೆ ಇರಬಲ್ಲಳು. ತಾನಿಲ್ಲದೆ ಈ ನಾಡು...

ಗಾಡಿಯಿಂದ ಇಳಿದಾಗೊಮ್ಮೆ ಅಂದುಕೊಂಡರು: "ಅವನನ್ನು ನಾನು ನಂಬಲಾರೆ." ಇಷ್ಟು ದಿನ ತಾನಿದ್ದ ಮನೆ ತಾನಿಲ್ಲದೆ ಇರಬಲ್ಲದು ಎಂಬ ವಿಚಾರ ಆರ್ಯಬಾಬೂಗೆ ಅಸಹ್ಯವೆನಿಸಿತು.

ಹೆಂಡತಿಯನ್ನು ಕಂಡೊಡನೆಯೆ ಅವರ ಬಾಯಿಂದ ಈ ಶಬ್ದಗಳು ಹೊರಬಿದ್ದವು:

"ಅಫೀಮು ತಿಂದು......"

"ಏನನ್ನುತ್ತೀರಿ?" ಪತ್ನಿ ಮನೀಷಾ ಏನೂ

ಅರಿಯದೆ ಕೇಳಿದಳು. ಆ ಮನುಷ್ಯ 'ಹಿಪ್ನಾಟಿಜಂ' ಮಾಡಬಲ್ಲನೆ? ಮತ್ತೊಂದು ವಿಚಾರ ಬಂತು.

"ಇಲ್ಲ; ಏನೋ ಬೇರೆ ವಿಚಾರದಲ್ಲಿದ್ದೆ. ಅಷ್ಟೇ." ಈ ಉತ್ತರ ಪತ್ನಿಯ ಸಮಾಧಾನಕ್ಕೆ ಸಾಕಾಯಿತು.

ಆದರೆ ರಾತ್ರಿ ಕ್ಲಬ್ಬಿನಿಂದ ಬಂದಾಗ ಆರ್ಯ ಬಾಬೂ ಮತ್ತೆ "ಅಸಾಧ್ಯ!" ಎಂದು ಗೊಣಗಿದರು.

"ಏನಾಗಿದೆ? ಆಟ ಸರಿಯಾಗಲಿಲ್ಲೆಂದು ಅಸಮಾಧಾನವೆ?"

"ಹುಂ. ಅದೇ."

ಮನೀಷಾಗೆ ಎಲ್ಲವನ್ನೂ ಹೇಳಿಯೆ ಬಿಡಬಾರದೇಕೆ? ಆದರೆ ಇಂಥಾ ಕ್ಷುಲ್ಲಕ ವಿಷಯಗಳು ಸ್ತ್ರೀಯರ ಮನಸ್ಸನ್ನು ಸಾಕಷ್ಟು ಕದಡಿಬಿಡುವುದುಂಟು. ಮನೀಷಾ ಕಲಿತವಳೇನೋ ನಿಜ. ಆದರೆ ಸರಳ ಸ್ವಭಾವದವಳು. ಒಮ್ಮೆ ಒಬ್ಬ ಹಾವಾಡಿಗ ಕೊಳೆತ ಬೇರೊಂದನ್ನು ಹಾವಿನ ವಿಷಕ್ಕೆ ಔಷಧಿ ಎಂದು ಕೊಟ್ಟರೆ ಹತ್ತು ರೂಪಾಯಿ ಕೊಟ್ಟುಕೊಂಡಿದ್ದಳು.

*

ಆರ್ಯ ಕುಮಾರರಿಗಿದ್ದ ಇಬ್ಬರೂ ಕನ್ಯೆಯರ ವಿವಾಹವಾಗಿ ಅವರು ತಮ್ಮ ತಮ್ಮ ಮನೆಗಳಿಗೆ ಹೋಗಿದ್ದರು. ಮನೀಷಾ ಕೂಡ ತನ್ನ ಸಂಸಾರ ತಾನು ನಿರ್ವಹಿಸಿಕೊಂಡು ಹೋಗಬಲ್ಲವಳಾಗಿದ್ದಳು. ಅಕಸ್ಮಾತ್ ಆರ್ಯಕುಮಾರರಿಗೆ ಏನಾದರೂ ಆದರೆ ಮುಂದೇನು ಗತಿ ಎಂದು ಚಿಂತಿಸಬೇಕಾದ ಸ್ಥಿತಿಯೇನೂ ಇರಲಿಲ್ಲ.

ಆದರೆ ಮರಣದ ವಿಚಾರದಿಂದ ಅವರ ಮೈ ನಡುಗಿತು. ಉತ್ಸಾಹ ತಂದುಕೊಳ್ಳುವ ವಿಫಲ ಯತ್ನ ಮಾಡಿದರು. ತಮ್ಮ ಆಸ್ತಿಪಾಸ್ತಿಯ ಲೆಕ್ಕ ಹಾಕುವುದರಲ್ಲಿ ಕೆಲ ದಿನ ಕಳೆದರು.

ಎಲ್ಲ ಕೊಡುತಕ್ಕೊಳ್ಳುವುದನ್ನು ಮುಗಿಸಿಯೂ ೩೦ ಲಕ್ಷ ರೂಪಾಯಿ ನಗದು ಉಳಿಯುವುದೆಂದು ತಿಳಿದು ಅವರಿಗೆ ಸಂತೋಷವಾಯಿತು. ತಮ್ಮ ಪತ್ನಿ ಪುತ್ರಿಯರನ್ನು ಯಾರೂ ಮೋಸಗೊಳಿಸದಿದ್ದರೆ ಚಿಂತಿಸಬೇಕಾದ ಪ್ರಮೇಯವಿಲ್ಲ. ಮೂರು ಮನೆಗಳನ್ನೇ ಕಟ್ಟಿಸಿಬಿಟ್ಟರಾಯಿತು ಎಂದುಕೊಂಡರು.

ಎರಡು ಕಟ್ಟಡಗಳಲ್ಲಿ ಚಾಳುಗಳನ್ನು ಮಾಡಿ ಬಾಡಿಗೆ ಕೊಟ್ಟರೆ ಕೂತಲ್ಲಿ ಪ್ರತಿಫಲ. ಮೂರನೇ ಕಟ್ಟಡವನ್ನು ಕಾರಖಾನೆ, ಕಚೇರಿ, ಆಫೀಸು ಮುಂತಾದವಕ್ಕೆ ದೀರ್ಘ ಅವಧಿಯ ಕರಾರಿನಿಂದ ಕೊಡುವ ವಿಚಾರವಿತ್ತು. ಇದನ್ನೆಲ್ಲ ಗುಪ್ತವಾಗಿಡಲು ಸಾಧ್ಯವೆ? ಚಿಕ್ಕ ಅಳಿಯ ತನ್ನ ಪತ್ನಿ ದೂರ್ವಾಳಿಗೆ ಹೇಳಿದ. ಆಕೆ ತನ್ನ ತಾಯಿ ಮನೀಷಾಗೆ ತಿಳಿಸಿದಳು.

ತನಗೆ ಗೊತ್ತಾಗದಂತೆ ಏನನ್ನೂ ತನ್ನ ಪತಿ ಮಾಡನೆಂದು ತಿಳಿದ ಮನೀಷಾ ನಂಬಲಿಲ್ಲ. ಆದರೆ ಕೆಲವೇ ದಿನಗಳಲ್ಲಿ ಕಾಗದ ಪತ್ರಕ್ಕೆ ಸಹಿ ಮಾಡಬೇಕಾಗಿ ಬಂದಾಗ ಮನೀಷಾಗೆ ಮನವರಿಕೆಯಾಯಿತು.

"ಇದೆಲ್ಲ ಏನು? ಯಾಕೆ?"

"ನಿನ್ನ ಸಲುವಾಗಿ."

"ನೋಡಿ, ಆಸ್ತಿ ಬೇರೆಯವರ ಹೆಸರಿಗೆ ಮಾಡಿ ವ್ಯಾಪಾರದಲ್ಲಿ ಬಿದ್ದ ಹೊಡೆತ ತಪ್ಪಿಸಿಕೊಳ್ಳಬೇಡಿರಿ. ಬಿಕ್ಕಟ್ಟಿದ್ದರೆ ಎದೆಗೊಡಿರಿ. ಎದುರಿಸಿರಿ. ಹೇಡಿಯಂತೆ ಪಲಾಯನ ಮಾಡದಿರಿ. ಇಷ್ಟು ದಿವಸದ ಒಳ್ಳೇ ಹೆಸರನ್ನು ಈಗ ಕೆಡಿಸಿಕೊಳ್ಳಬೇಡಿರಿ."

ಅವಳ ಕಲ್ಪನೆ ತಪ್ಪೆಂದು ಹೇಗೆ ಹೇಳಬೇಕು? ನಿಜ ಕಾರಣವನ್ನಾದರೂ ಹೇಗೆ ಹೇಳಬೇಕು?

"ನನ್ನನ್ನು ನಂಬು. ನಾನು ನಿನ್ನನ್ನು ಯಾವುದೆ ತೊಡಕಿನಲ್ಲಿ ಹಾಕಬಯಸುವುದಿಲ್ಲ. ಮನುಷ್ಯನ ಜೀವನ ಕ್ಷಣಭಂಗುರ. ಐವತ್ತು ಮೀರಿದಮೇಲೆ, ಇದ್ದ ಆಸ್ತಿಯನ್ನು ಸ್ಥಿರಸ್ಥಾವರಗೊಳಿಸುವುದು ಪ್ರತಿಯೊಬ್ಬನ ಕರ್ತವ್ಯ."

ಹಾಗಿದ್ದರೆ ಗೋಪ್ಯವೇಕೆ ಎನ್ನುವುದೇ ಅವಳ ವಾದ.

ಬ್ರಾಹ್ಮೊ ಸಮಾಜದ ಇವಳನ್ನು ಲಗ್ನವಾದದ್ದರಿಂದಲೆ ಒಬ್ಬ ಹಿಂದೂ ಪತಿಯಾದರೂ ಬಾಬೂಜಿ ಹೆದರಬೇಕಾಗಿತ್ತು. ಬಿಟ್ಟುಹೋಗುವ ಹೆದರಿಕೆಯನ್ನೂ ಮನೀಷಾ ಹಲವು ಬಾರಿ ಹಾಕಿದ್ದಳು.

ನಡೆದ ಸಂಗತಿಯನ್ನು ಹೇಳಿಯೇಬಿಡೋಣವೆಂದುಕೊಂಡರು. ಆದರೆ ಆಕೆ ತನ್ನನ್ನು ಹುಚ್ಚನೆಂದರೆ? ಹುಚ್ಚನಲ್ಲವಾದರೆ ತಾನು ನಂಬಿದ್ದೇಕೆ? ನಂಬಿಲ್ಲವಾದರೆ ಈಗ ನಡೆಸಿದ್ದುದರ ಅರ್ಥವೇನು ?

ನಿಜವಾಗಿಯೂ ಆರ್ಯಕುಮಾರರು ನಂಬಿದ್ದರೆ? ಇಲ್ಲ. ಅವರದು ಪೂರಾ ವ್ಯಾಪಾರಿ ಜೀವ. ಪಾಶ್ಚಿಮಾತ್ಯರ ಪ್ರಭಾವದಿಂದ ಪೂರ್ಣ ಬದಲಾದವರು ಬೇರೆ. ಹೀಗಿರುವಾಗ 'ಭವಿಷ್ಯ'ವನ್ನು ನಂಬಬಹುದೇ? ಏನೂ ಹೊಳೆಯದೆ ಏನೂ ಹೇಳದೆ ಸುಮ್ಮನಾದರು.

ವಕೀಲರ ಹೇಳಿಕೆಯಂತೆ ಕಾಗದಪತ್ರಗಳ ಕರಡುಗಳು ತಯಾರಾದವು.

*

ಬಿರುಗಾಳಿ ಬೀಸುವ ಮುನ್ನ ಒಮ್ಮೊಮ್ಮೆ ಅಸ್ವಾಭಾವಿಕ ಶಾಂತಿ ಇರುವುದುಂಟು. ಬಿರುಗಾಳಿ ಬೀಸುತ್ತದೆ. ಮೊದಲು ನಿಶ್ಶಬ್ದ. ಒಂದು ಹಕ್ಕಿಯೂ ಕೂಗುವುದಿಲ್ಲ. ಬಿಸಿಲು ಭಯಂಕರವಾಗುತ್ತದೆ. ಬಳಿಕ ತರಗೆಲೆ ಹಾರುತ್ತದೆ. ಕೂಡಲೆ ಸುಂಟರಗಾಳಿಯ ತಾಂಡವ ಪ್ರಾರಂಭವಾಗುತ್ತದೆ. ಎತ್ತರ ಮರಗಳ ಟೊಂಗೆಗಳು ಮುರಿಯುತ್ತ ಚಪ್ಪರಗಳು ಹಾರುತ್ತವೆ. ಹಾಹಾಕಾರವೇಳುತ್ತದೆ.

ಆರ್ಯಕುಮಾರರ ಮನೋಭೂಮಿಯಲ್ಲೂ ಹಾಗೇ ನಡೆಯಿತು. ಕೊನೆಗೊಮ್ಮೆ ಮನಸ್ಸು ಗಟ್ಟಿಮಾಡಿ ನಡೆದ ಸಂಗತಿಯನ್ನು ಉಸುರಿದರು. ಶಬ್ದಗಳನ್ನು ಹುಡುಕಿಕೊಂಡು ಮಾತಾಡುವುದೆಂದರೆ ಅವರಿಗೆ ಒಂದು ಗುಡ್ಡವನ್ನೇ ಕೆತ್ತಿದಂತಾಯಿತು.

"ನೋಡು. ನನಗೆ ಆತ್ಮದ ಅಮರತ್ವದಲ್ಲಿ ವಿಶ್ವಾಸವಿಲ್ಲ. ಆದ್ದರಿಂದ ಎಲ್ಲವೂ ಸ್ಥಿರಸ್ಥಾವರವಾಗಿದ್ದರೆ ನೀವು ಮೂವರಿಗೂ ಚಿಂತಿಸಬೇಕಾದ ಅಗತ್ಯ ಉಳಿಯಲಾರದು."

"ಮಾತಾಡಲಿಕ್ಕೆ ಬಹಳ ಚೆನ್ನಾಗಿ ಕಲಿತಿದ್ದೀರಿ. ರಾಮಮೋಹನರಾಯರ ಮುಂಚೆಯೆ ನೀವು ಹುಟ್ಟಿದ್ದರೆ ನಿಮ್ಮ ಆಟ ಸಾಗುತ್ತಿತ್ತು. ನಿಜವಾಗಿ ನಿಮ್ಮ ಮನಸ್ಸಿನೊಳಗಿರುವುದೇನು ಹೇಳಲೆ? ನಾನು ಪುನರ್ವಿವಾಹವಾಗಬಾರದೆಂಬುದೇ ನಿಮ್ಮ ಇಚ್ಛೆಯಲ್ಲವೆ?"

"ಇಲ್ಲ. ಅಂದರೆ— ಮತ್ತೊಮ್ಮೆ—ಹೇಗೆ ? ನಿನ್ನ ಪುನರ್ವಿವಾಹ ಸಾಧ್ಯವಿಲ್ಲ. ನನ್ನ ನಾಲಿಗೆ ಅದನ್ನು ಉಚ್ಚರಿಸದು."

"ನನ್ನನ್ನು ಯಾರೂ ಲಗ್ನವಾಗಲಾರರು ಅಂತ ತಿಳಿದಿರುವಿರಾ? ಅಷ್ಟು ವೃದ್ಧಳೆ ನಾನು? ಇದನ್ನೆಲ್ಲ ತಲೆಯಲ್ಲಿ ಹಾಕಿಕೊಳ್ಳಲು ನಿಮಗೆ ಯಾರು ಹೇಳಿದರು? ಜ್ಯೋತಿಷಿ ದುಡ್ಡು ಕೇಳಿರಬೇಕು. ಗಾಡಿಬಿಡುವುದಕ್ಕೆ ಸ್ವಲ್ಪ ಹೊತ್ತು. ಕೊಡುವುದನ್ನು ಕೊಟ್ಟು ಮುಗಿಸಿರಿ ಅಂದಿರಬೇಕು. ಭಿಕ್ಷುಕರಂತೆ ದುಡ್ಡೆತ್ತಿದರೆ ತನ್ನ ಮರ್ಯಾದೆ ಹೋದೀತೆಂದು ತಿಳಿದು ಆತ ಗಾಡಿ ಹೋಗುವವರೆಗೆ ತಡೆದು ಆ ಮೇಲೆ ಖಂಡಿತ ರೂಪಾಯಿ ಎತ್ತಿಕೊಂಡಿರಬೇಕು. ಸುಮ್ಮನೆ ಅದನ್ನು ಗುಡ್ಡಮಾಡಿಕೊಂಡು ಕೂತಿದ್ದೀರಿ. ಆ ಜ್ಯೋತಿಷಿ ಹಾಗೆ ಹೇಳಿದರೆ ಎಂಭತ್ತು ರೂಪಾಯಿಗೆ ಎಂಭತ್ತು ವರ್ಷ ಗ್ಯಾರಂಟಿಯಾಗಿ ಹೇಳುವ ಇನ್ನೊಬ್ಬ ಜ್ಯೋತಿಷಿಯೂ ಸಿಗಬಹುದು. ಬೇಕಾದರೆ ನಾಳೆಯೆ ಅಂಥ ಒಬ್ಬನ ಕಡೆಗೆ ಹೋಗೋಣ."

*

"ನಾಳೆಗೇ ಪಿ. ಜಿ. ಹಾಸ್ಪಿಟಲ್ಲಿಗೆ ನಡೆಯಿರಿ. ಡಾಕ್ಟರರು ಒಮ್ಮೆ ಸಾದ್ಯಂತ ಪರೀಕ್ಷೆ ಮಾಡಲಿ. ಯಾವತ್ತೂ ನಿಮ್ಮ ಪ್ರಕೃತಿ ಚೆನ್ನಾಗಿರುತ್ತಿತ್ತು. ಈಗ ಏನಾಗಿದೆಯೋ ನೋಡಲಿ. ಒಂದು ವೇಳೆ

ಅಲ್ಲಿ ಬೇಡವೆನಿಸಿದರೆ ಡಾಕ್ಟರರೇ ಇಲ್ಲಿ ಬಂದು ಔಷಧೋಪಚಾರ ಮಾಡಬಹುದು."

"ಡಾಕ್ಟರ ಏನು ಹೇಳುತ್ತಾನೆ? ಸ್ವಾಸ್ಥ್ಯವಿಟ್ಟುಕೊಳ್ಳಿ. ದುರ್ಲಕ್ಷ್ಯ ಮಾಡಬೇಡಿ. ಇಷ್ಟೇ. ಅದರಿಂದೇನಾಗಬೇಕು? ಅಧಿದೈವಿಕಗಳನ್ನು ಎದುರು ನೋಡಲೂ ಸಾಧ್ಯವಿಲ್ಲ. ಮೊದಲೇ ಜಾಗ್ರತೆ ವಹಿಸಿ ತಡಗಟ್ಟಲೂ ಸಾಧ್ಯವಿಲ್ಲ. ಎರಗುವುದು ಎರಗಲೇಬೇಕು. ಇದು ನಿನ್ನ ಗುರುದೇವರೇ ಹೇಳಿದ ಮಾತು."

ಶಾಂತಿನಿಕೇತನದ ಪದವೀಧರಳಾದ ಮನೀಷೆಗೆ ರವೀಂದ್ರರ ಒಂದು ನುಡಿ ಎತ್ತಿ ಹೇಳಿದರೂ ಸಾಕು. ಬಾಯಿ ಕಟ್ಟಿದಂತಾಗುತ್ತಿತ್ತು.

"ಗುರುದೇವರಲ್ಲ; ಅವರಣ್ಣ ದ್ವಿಜೇಂದ್ರನಾಥರು ಹೇಳಿದ ಮಾತಿದು" ಎಂದಳು.

"ಹಾಗಾದರೆ ಇನ್ನೂ ಘನವಾಯಿತು."

"ನೀವು ಸುಮ್ಮನೆ ಅಡ್ಡಿ ಮಾಡುತ್ತೀರಿ. ಇಲ್ಲ; ನಿಮ್ಮ ಮನೋರೋಗದ ನಿವಾರಣೆಗಾಗಿ ಪರೀಕ್ಷೆ ನಡೆಯಲೇಬೇಕು. ನಿಮಗೆ ಬೇಕಾದ್ದನ್ನೇ ಮಾಡಗೊಟ್ಟರೆ ಅಷ್ಟು ಮಾಡಿ ನೀವು ಮತ್ತೇನೂ ಮಾಡಲಿಕ್ಕೆ ಉಳಿಯದೆ ಸುಮ್ಮನೆ ಕೂಡಬಹುದು. ಮತ್ತು ನೀವು ಯಾವುದಕ್ಕಾಗಿ ಚಿಂತಿಸುತ್ತೀರೊ ಅದೂ ನಡೆದುಹೋದೀತು. ಜ್ಯೋತಿಷಿ ಸರಿಯಾಗಿ ಹೇಳಿದ್ದನೆಂದೇ ನೀವು ಸಾಧಿಸಬಹುದು. ನನಗೆ ಬೇಕಾದ್ದು ನಿಮ್ಮ ದುಡ್ಡೆಂದು ನಿಮಗೆ ಯಾರು ಹೇಳಿದರು? ಯಾರನ್ನು ನಾನು ಲಗ್ನವಾದೆನೊ ಅವರೇ ಇಲ್ಲದಿದ್ದರೆ ಉಳಿದ ಸಂಪತ್ತಿನಿಂದ ನನಗೇನಾಗಬೇಕು? ಇನ್ನು ಮಕ್ಕಳು. ಅವರಿಗೆ ಅವರ ಮನೆಗಳಿವೆ. ಅವರ ಮನೆಯಲ್ಲಿ ನಾನು ಹೇಗೆ ಇರಲಿ?"

"ಇದೆಲ್ಲ ನನಗೆ ಅರ್ಥವಾಗುತ್ತದೆ. ಆದರೆ.... ಆದರೆ.. ನಾನು ನಿರ್ಧಾರ ಮಾಡಿಬಿಟ್ಟಿದ್ದೇನೆ."

"ಹಾಗಿದ್ದರೆ ನಾನೂ ನಿರ್ಧಾರಮಾಡುವೆ. ಒಂದಿಲ್ಲೊಂದು ಬಗೆಯಲ್ಲಿ ಆತ್ಮಹತ್ಯೆ ಮಾಡಿಕೊಂಡೇ ತೀರಬೇಕೆಂದು ನಿರ್ಧಾರ ಮಾಡಿರುವುದಾದರೆ ಆ ನಿಮ್ಮ ಘನ ಕಾರ್ಯ ನಡೆಯುವ ಮುಂಚೆಯೆ ಕೆಲ ದಿನ ನಿಮ್ಮನ್ನು ನನ್ನಿಂದ ಮುಕ್ತರನ್ನಾಗಿ ಮಾಡುವೆ. ಇನ್ನು ಮೇಲೆ ನೀವು ನನ್ನ ಪತಿಯಲ್ಲ. ನಾನು ನಿಮ್ಮ ಪತ್ನಿಯಲ್ಲ. ನಿಮ್ಮ ಸಂಪತ್ತನ್ನು ನೀವು ಯಾರಿಗೆ ಬೇಕಾದರೂ ಕೊಡಬಹುದು. ಅದು ನನಗೆ ಸಂಬಂಧಪಟ್ಟದ್ದಲ್ಲ."

"ಉಳಿದ ಕೆಲವೇ ದಿನಗಳಲ್ಲೂ ನನಗೆ ಶಾಂತಿ ಸಿಗಬಾರದೆಂದು ನಿನ್ನ ಆಸೆಯೆ? ನನ್ನದೇನಿದ್ದದ್ದು ನಿನಗೂ ನಿನ್ನ ಕನ್ಯೆಯರಿಗೂ ಸೇರಿದ್ದು. ಅದನ್ನು ನಿಮಗರ್ಪಿಸಿ ಅಷ್ಟಾದರೂ ಚಿತ್ತಶಾಂತಿ ಗಳಿಸುವೆ. ನನಗೆ ಅನುವು ಮಾಡಿಕೊಡು."

*

ಒಂದು ದಿನ ಆರ್ಯ ಕುಮಾರರು ಆಫೀಸಿನಿಂದ ಬಂದಾಗ ಮನೀಷಾ ಮನೆಯಲ್ಲಿರಲಿಲ್ಲ. ಅವಳು ಹೋದದ್ದೆಲ್ಲಿ, ಯಾವಾಗ ತಿರುಗಿ ಬರುವಳು—ಎಂಬುದು ಯಾರಿಗೂ ಗೊತ್ತಿರಲಿಲ್ಲ. ಮಕ್ಕಳಿಗೆ ಫೋನ್ ಮಾಡಿ ಕೇಳಿದರು. ಅವರಿಗೂ ಗೊತ್ತಿರಲಿಲ್ಲ. ಪರಿಚಯವಿದ್ದ ಎಲ್ಲರನ್ನೂ ಕೇಳಿದರು. ಯಾರಿಂದೂ ಏನೂ ತಿಳಿಯಲಿಲ್ಲ.

ಅಂದು ರಾತ್ರಿ ಆಕೆ ಮರಳಲಿಲ್ಲ. ತವರಿಗೇನಾದರೂ ಹೋದಳೆ? ಅಲ್ಲಿಯೂ ಇಲ್ಲವೆಂದು ತಿಳಿಯಿತು.

ಪೋಲೀಸ್ ಕಮಿಶನರರು ಸ್ನೇಹಿತರಾಗಿದ್ದರು. ಅಪಘಾತಗಳೇನಾದರೂ ಸಂಭವಿಸಿವೆಯೆ? ಎಂದು ಕೇಳಿದರು. ಇಲ್ಲ.

ಮರುದಿನವೂ ಆಕೆ ಬರಲಿಲ್ಲ. ಚಿಂತೆ ಹೆಚ್ಚಿತು. ಆಳನ್ನು ಕಳಿಸಿ ಐದಾರು ಪೇಪರ್ ತರಿಸಿದರು. ಎಲ್ಲಿಯೂ ಸುದ್ದಿಯೆ ಇಲ್ಲ.

"ಮನೀಷಾ ಎಲ್ಲಿ?" ಎಂದರೆ ಏನು ಹೇಳಬೇಕು? ಸುಳ್ಳು ಹೇಳಬೇಕು! ಹೇಳಿದರು. "ಆಕೆಯ ತಮ್ಮನ ಮೈಯಲ್ಲಿ ಸ್ವಾಸ್ಥ್ಯವಿಲ್ಲ. ತವರಿಗೆ ಹೋಗಿದ್ದಾಳೆ. ಎಂದು ಬರುವಳೊ ನಿಶ್ಚಿತವಿಲ್ಲ."

ಮಗಳು ದೂರ್ವಾ ಬಂದಳು. ಕೇಳಿದಳು.

ಬಿಗಿದ ಕಂಠದಿಂದ ಹೇಳಿದರು. ಬಟ್ಟೆಬರೆ, ಕಾಟಿನ ಮೇಲೆ, ಕೆಳಗೆ-ಎಲ್ಲ ಕಡೆ ಹುಡುಕಿ ಏನಾದರೂ ಸಂದೇಶ ಸಿಗುವುದೇ ನೋಡಿದರು. ಆದರೆ ವ್ಯರ್ಥ!

ಕೊನೆಗೆ ಗುಟ್ಟು ರಟ್ಟಾಯಿತು. ಗುಜು ಗುಜು ಹಬ್ಬಿತು. ಹಿರಿಯ ಮಗಳು ಪುಷ್ಪಾ ಬಂದು ರಾಮಾಯಣವನ್ನೆ ಮಾಡಿದಳು. ನೆರೆಹೊರೆಯವರ ವರೆಗೂ ಸುದ್ದಿ ಮುಟ್ಟಿತು. ಆರ್ಯಕುಮಾರರು ನಾಚಿಕೊಂಡರು. ಮನೀಷಾ ೪೫ ಮೀರಿದ ಪ್ರೌಢೆ. ಆದರೂ ಕೆಲವರು ಸಂಶಯಗೊಂಡರು. ಆರ್ಯಕುಮಾರರು ಜನರನ್ನು ಕಾಣುವುದನ್ನೆ ಬಿಟ್ಟರು. ಕುಡಿಯುವುದು ಹೆಚ್ಚಾಯಿತು.

ಅವರ ಹಸ್ತಕ ಕೊನೆಗೆ 'ಉಗುರುಗನ್ನಡಿ'ಯ ಪ್ರಯೋಗ ಮಾಡಬಾರದೇಕೆ ಎಂದು ಪ್ರಶ್ನಿಸಿದ.

"ಹಾಗೆಂದರೆ ಏನು?"

"ಗೊತ್ತಿಲ್ಲದವರು ಅದನ್ನು ತಿಳಿಯರು." ಮೈಮೆನ್‌ಸಿಂಗ್‌ನ ಮುಸಲ್ಮಾನನೊಬ್ಬನನ್ನು ಕರೆಸಲಾಯಿತು. ಅವನೊಂದಿಗೆ ಒಬ್ಬಳು ಹುಡುಗಿ ಬಂದಳು. ಆವಳು ಅಲ್ಲಿ ಇಲ್ಲಿ ದಾರಿಯಲ್ಲಿ ಕಲ್ಕತ್ತೆಯನ್ನು ಸ್ವಲ್ಪ ನೋಡಿರಬಹುದಷ್ಟೆ; ಆದರೆ ಹೌರಾ ಬ್ರಿಜ್, ಖರಗಪುರ, ಪುರಿ ದೇವಾಲಯ ಮುಂತಾದುವನ್ನೆಲ್ಲ ಕಣ್ಮುಟ್ಟ ನೋಡಿದಂತೆ ವಿವರಿಸತೊಡಗಿದಳು. ಅವು ಅವಳ ಶಬ್ದಗಳಾಗಿರಲು ಸಾಧ್ಯವೇ ಇಲ್ಲ. ಅವಳ ತಂದೆ ಸಂಮೋಹನಗೊಳಿಸಿರಬೇಕು. ಅವನ ಶಬ್ದಗಳನ್ನೇ ಈಕೆ ನುಡಿಯುತ್ತಿರಬೇಕು.

"ನೀನು ಏನು ನೋಡಿದೆ?" ಆರ್ಯಕುಮಾರರು ಕೇಳಿದರು.

ಹುಡುಗಿ ಹೆಬ್ಬೆರಳ ಉಗುರನ್ನು ಏಕಚಿತ್ತದಿಂದ ನೋಡಿ ಹೇಳಲಾರಂಭಿಸಿತು:

"ಒಬ್ಬ ಸ್ತ್ರೀಯನ್ನು ನೋಡಿದೆ."

"ಹೇಗಿದ್ದಳು?"

"ಸುಂದರಿ."

"ವಯಸ್ಸು? ಇಪ್ಪತ್ತೆ?"

"ಹೆಚ್ಚು."

"ನಲುವತ್ತೆ?"

"ಹೌದು. ಬಸ್ ಕಾಣುತ್ತಿದೆ."

"ಟ್ರ್ಯಾಮ್ ಅಲ್ಲವೆ?"

"ಅಲ್ಲ. ಈಗ ಅಲ್ಲೊಂದು ಬ್ರಿಜ್ ಇದೆ. ಕೆಳಗೆ ನದಿ ಹರಿಯುತ್ತಿದೆ."

ಅಂತೂ ಕಲಿಸಿಕೊಟ್ಟಿದ್ದನ್ನು ಈಕೆ ಹೇಳುತ್ತಿಲ್ಲ ಎಂದು ಬಾಬೂಜಿಯವರಿಗೆ ಖಾತ್ರಿಯಾಯಿತು. ಕೈಕಟ್ಟಿಕೊಂಡು ನಿಂತ ತಂದೆಯನ್ನು ಆಗಾಗ ನೋಡುತ್ತಿದ್ದಳು.

ಕೊನೆಗೊಂದು ಗುಡ್ಡದ ವರ್ಣನೆ ಮಾಡಿ ಹುಡುಗಿ ನಿಲ್ಲಿಸಿದಳು.

ಕೂಡಲೆ ತಂದೆ, "ಇಂದು ಅವಳಿಗೆ ಉಪವಾಸ. ಇಂದು ಹೆಚ್ಚು ಏನನ್ನೂ ಆಕೆ ಹೇಳಲಾರಳು. ಇಷ್ಟೇ ಸಾಕು" ಎಂದು ವಿನಂತಿ ಮಾಡಿದ. ಆಗಲಿ ಎಂದರು ಬಾಬೂಜಿ.

ಮರುದಿನ ಆ ಹುಡುಗಿಯನ್ನು ಏಕಾಂತದಲ್ಲಿ ಕರೆಸಿ, "ಆಕೆ ಒಬ್ಬಳೆ ಇರುವಳೊ ಅಥವಾ ಜೊತೆಯಲ್ಲಿ ಮತ್ತಾರಾದರೂ ಇರುವರೊ?" ಎಂದು ಕೇಳಬೇಕೆಂದಿದ್ದರು.

ಆದರೆ ನೇಪಾಲ ಬಾಬೂ ಬಂದು, "ಆಕೆ ತಾಯಿಗಾಗಿ ಅಳುತ್ತಿದ್ದಾಳೆ. ಅವಳ ತಂದೆ ಕರೆದುಕೊಂಡು ಹೊರಟಿದ್ದಾನೆ"ಂದು ತಿಳಿಸಿದರು.

ಕೊನೆಗೆ ಕನ್ಯೆಯರಿಬ್ಬರನ್ನೂ ಕರೆಸಿ, "ನಾನು ನಿಮ್ಮ ತಾಯಿಯನ್ನು ಹುಡುಕಲು ಹೊರಟಿದ್ದೇನೆ. ನಾನು ಬರುವ ವರೆಗೆ ಮನೆಯ ಕಡೆಗೆ ಲಕ್ಷ್ಯವಿರಲಿ. ವ್ಯವಹಾರವನ್ನು ಮ್ಯಾನೇಜರ ನೋಡಿಕೊಳ್ಳುತ್ತಾನೆ" ಎಂದು ತಿಳಿಸಿದರು.

ಮಧ್ಯಾಹ್ನ ಅವರು ಮನೆಯನ್ನು ಬಿಟ್ಟರು. ಯಾರ ಲಕ್ಷ್ಯಕ್ಕೂ ಬರಲಿಲ್ಲ. ಡ್ರೈವರ ಮಲಗಿದ್ದ. ಉಳಿದವರು ವಿಶ್ರಾಂತಿ ಹೊಂದುತ್ತಿದ್ದರು. ಇದ ಪಹರೆಯವನನ್ನು ಸಿಗರೇಟ್ ತರಲು ಕಳಿಸಿದ್ದರು. ಏಕಾಕಿಯಾಗಿ ಹೊರಬಿದ್ದರು.

ಆರ್ಯಕುಮಾರರು ಮೊದಲು ಸಿಂಹಾಚಲಕ್ಕೆ ಹೋದರು. ಅಲ್ಲಿಯ ಬ್ರಾಹ್ಮಣರನ್ನು ಕೇಳಿದರು. ಅವರು "ಅಂಥ ಸ್ತ್ರೀಯನ್ನು ನಾವು ನೋಡಿದ್ದೇವೆ" ಎಂದರು. ಆದರೆ ಕೆಲವರು ತಿಂಗಳ ಹಿಂದೆಂದೂ ಕೆಲವರು ಒಂದು ವಾರದ ಹಿಂದೆಂದೂ ಹೇಳಿದರು.

ಮದ್ರಾಸಿಗೆ ಹೋದರು. ಪಾರ್ಥಸಾರಥಿಯ ಗುಡಿಯಲ್ಲಿ ಕೇಳಿದರು. ಅಲ್ಲಿಯೂ ಅದೇ ಉತ್ತರ. ಅಲ್ಲಿಂದ ಪಕ್ಷಿತೀರ್ಥ, ಮುಂದೆ ತಿರುವಣ್ಣಾಮಲೆ, ಶ್ರೀರಂಗ, ಮದುರೆ, ರಾಮೇಶ್ವರ, ಧನುಷ್ಕೋಟಿ, ಕನ್ಯಾಕುಮಾರಿ. ಎಲ್ಲಿ ಹೋದರೂ ಅಷ್ಟೇ ಸಂವಾದ. ಅನಿರ್ಧಾರಿತ!

ಎಲ್ಲರೂ ಸುಳ್ಳು ಹೇಳಿರಲು ಸಾಧ್ಯವಿಲ್ಲ. ಅವರು ಹೇಳುವ ಸ್ತ್ರೀ ಮನೀಷಾ ಅಲ್ಲದೆ ಬೇರಾರೂ ಇರಲು ಸಾಧ್ಯವಿಲ್ಲ. ನಾಲ್ವತ್ತು ಮೀರಿದ ಮೇಲೂ ತೆಳ್ಳನ್ನ ಮೈಕಟ್ಟು, ಬಡವಾದ ನಡು ಇರುವ ನಾರಿ ಬಂಗಾಲದಲ್ಲಿ ಮತ್ತಾರೂ ಇರಲು ಸಾಧ್ಯವಿಲ್ಲ. ಇನ್ನೂ ಅವಳ ಕೂದಲು ಮಿಂಚುತ್ತಿದೆ. ಆಶಾಂಕುರವೆದ್ದಿತು.

ಹೊರಡಬೇಕು. ನಿಜ. ಆದರೆಯಾವ ದಿಕ್ಕಿಗೆ? ಭೂಮಿ ಮುಗಿದು ಸಮುದ್ರ ಪ್ರಾರಂಭವಾದ ಆ ದೃಶ್ಯ. ಮೂರು ಸಮುದ್ರಗಳ ತೆರೆಗಳು ರಭಸದಿಂದ ಅಪ್ಪಳಿಸುತ್ತಿರುವುದು. ಇದನ್ನೆಲ್ಲ ನೋಡುತ್ತಿದ್ದಂತೆ, ನಿಸರ್ಗದ ವೈಭವದತ್ತ ತಾನು ಈವರೆಗೆ ನೋಡದೆ ಹೋದ ಕೊರತೆಯ ಅರಿವು ಅವರಿಗಾಯಿತು.

ನೋಡನೋಡುತ್ತಿದ್ದಂತೆಯೆ ಅವರಿಗೆ ಮನೆಗೆ ಮರಳುವ ಆಸೆ ಇಂಗತೊಡಗಿತು. ಬರುವಾಗ ಹೇಳಿಬಂದಿದ್ದ ಹೊಸ ಕಟ್ಟಡದ ಕೆಲಸ ಎಲ್ಲಿಯವರೆಗೆ ಬಂದಿದೆ, ಹೇಗೆ ಸಾಗಿದೆ ಎಂಬುದನ್ನು ವಿಚಾರಿಸುವ ಆಸೆಯೂ ಮೂಡಲಿಲ್ಲ. ಪರದೇಶೀಯನಾದ ಮ್ಯಾನೇಜರ ಪ್ರಾಮಾಣಿಕತನದಿಂದ ತನ್ನ ವ್ಯವಹಾರವನ್ನು ಸಾಗಿಸುತ್ತಾನೆಂಬ ಭರವಸೆ ಅವರಿಗಿತ್ತು.

ಕನ್ಯಾಕುಮಾರಿಯ ಮೂರ್ತಿಯನ್ನು ಅನಿಮಿಷ ನೇತ್ರಗಳಿಂದ ಅವಲೋಕಿಸುವುದು ನಿತ್ಯದ ಕಾರ್ಯವಾಯಿತು. ನೋಡುತ್ತಿದ್ದಂತೆ ಒಂದು ದಿನ ಅವರ ಕಣ್ಣ ಮೇಲಿಂದ ಒಂದು ಪರದೆ ಸರಿದ ಅನುಭವ ಅವರಿಗಾಯಿತು. ಅವರ ಮುಂದಿದ್ದ ಮೂರ್ತಿಯಲ್ಲಿ ಅವರ ಅನ್ವೇಷಣೆಯ ದೇವಿ ಮೈ-ತಾಳಿರುವಂತೆ ಭಾಸವಾಯಿತು.

ಉಳಿದ ಕತೆ ಲಾಲ ಬಾಬುವಿನಂತೆಯೇ. ಜನರು ಕರೆಯಲು ಬಂದರು. "ನೀವೇ ಯಜಮಾನ. ನೀವಲ್ಲದ ಮನೆ ಶೂನ್ಯ. ನಡೆಯಿರಿ" ಎಂದು ಅಂಗಲಾಚಿದರು.

"ಇಲ್ಲಿ ಸುಖವಾಗಿದ್ದೇನೆ. ಅಲ್ಲಿ ದುಃಖಕಾದಿದೆ. ನಾನು ಬರಲಾರೆ," ಎಂದುತ್ತರಿಸಿದರು ಇವರು.

ಕನ್ಯೆಯರು ಬಂದರು.

ಅವರಿಗೆ ಹೇಳಿದರು. "ಮರಳುವುದು ಮುಖ್ಯವಲ್ಲ. ಹುಡುಕುವುದು ಮುಖ್ಯ. ನಾನೀಗ ಹುಡು-ಕಿದ್ದೇನೆ. ಇಲ್ಲಿ ಅವಳನ್ನು ಪಡೆದಿದ್ದೇನೆ. ನಾನಿನ್ನು ಮರಳಿ ಹೋಗುವುದೇ ಆದರೆ ಅವಳೊಂದಿಗೇ ಹೋಗಬೇಕು."

ಈಗ ಅವರಲ್ಲಿ ಮೊದಲಿನ ಭೀತಿ ಉಳಿದಿರಲಿಲ್ಲ. ಹೊಸ ಆವರಣದಲ್ಲಿ ಸಮಯ ಸರಿಯಿತು. ಇನ್ನೂ ಎಷ್ಟು ಕಾಲ ಶೇಷವಿತ್ತೊ ತಿಳಿದಿರಲಿಲ್ಲ. ಈಗ ಹುಡುಕುವ ಚಿಂತೆಯನ್ನೂ ಬಿಟ್ಟಿದ್ದರು. ಅವರ ಮನಸ್ಸಿಗೆ ಈಗ ನೆಮ್ಮದಿ ಲಭಿಸಿತ್ತು. ಇವರಿಗಾಗಿ ಕಾಲಚಕ್ರವೂ ವ್ಯವಹಾರ ಚಕ್ರವೂ ನಿಂತಿರಲಿಲ್ಲ. ಎಲ್ಲವೂ ಸುಗಮವಾಗಿ ಸಾಗಿತ್ತು.

ಕನ್ಯೆಯರು ಸೇವೆಗೆಂದು ಬಿಪಿನ್ ಎಂಬವನನ್ನು ಕಳಿಸಿದರು. ಒಂದು ದಿನ ಬಿಪಿನ್ ಓಡು-ತೋಡುತ್ತ ಬಂದು, "ಬಾಬೂಜೀ, ಟೆಲಿ-ಗ್ರಾಮ್," ಎಂದ.

ಮನೀಷಾಳ ಟೆಲಿಗ್ರಾಮಾಗಿತ್ತು. ಮಂಗಳವಾರ ಬರುವುದಾಗಿ ತಿಳಿಸಿದ್ದಳು.

ತಿರುತಿರುಗಿ ಓದಿದರು. ಎಷ್ಟು ಸಲವಾದರೂ

ಚಿತ್ತ ತೃಪ್ತವಾಗಲೊಲ್ಲದು. ತಿರುತಿರುವಿ ತಂತಿ ಕಳಿಸಿದ ದಿನಾಂಕ, ಅಂಚೆ, ಅಕ್ಷರ-ಎಲ್ಲವನ್ನೂ ನೋಡಿದರು. ಮಂಗಳವಾರವೆ ಆಕೆ ಬರುವುದಾದರೆ ಆಕೆ ಕಲ್ಕತ್ತೆಯಿಂದ ವಿಮಾನ ಮೂಲಕ ಮದ್ರಾಸಿಗೆ ಬಂದು ಮದ್ರಾಸಿನಿಂದ ರೈಲಿನಲ್ಲಿ ಬಂದು ಕೊನೆಯ ಹಂತವನ್ನು ಕಾರಿನಿಂದ ಮುಗಿಸುವಳೆಂದು ಲೆಕ್ಕಿಸಿದರು. ದಾರಿಕಾಯಲು ಮನಸ್ಸು ಕೇಳದಾಯಿತು. ಆತುರತೆ ಅತಿಯಾಯಿತು. ೫೫ ಮೈಲು ದೂರದ ರೇಲ್ವೆ ಸ್ಟೇಶನ್ ತಿರುನೆಲ್ವೆಲ್ಲಿಗೆ ಹೋದರು. ದಾರಿಯಲ್ಲೇ ತನ್ನ ಸ್ವಾಗತಕ್ಕೆ ತನ್ನಗಂಡಬರಬಹುದೆಂದು ಮನೀಷಾ ತಿಳಿದಿರಲಿಲ್ಲ. ಅವರು ಬಂದು ನಿಂತಿರುವುದರಿಂದ ಸಾನಂದಾಶ್ಚರ್ಯವಾಗದಿರಲಿಲ್ಲ.

ಕಣ್ಣೀರು ಕೂಡಿ ಬಂದವು. ಇಬ್ಬರೂ ಮೂಕರಾಗಿ ನಿಂತಿದ್ದರು. ಕೂಡಿಕೊಂಡೆ ಹೆಜ್ಜೆ ಇಡುತ್ತಿದ್ದರು. ವಿಚಾರದಲ್ಲಿ ಮುಳುಗಿಹೋಗಿದ್ದರು.

*

ಮನೀಷಾ ಕಲ್ಕತ್ತೆಯಲ್ಲಿಯೆ ಅಡಗಿ ನಿಂತಿದ್ದಳು. ಗುಜರಾತಿ ಕುಟುಂಬ ಒಂದರಲ್ಲಿ ದಾಯಿಯಾಗಿ ಕೆಲಸ ಮಾಡಿದ್ದಳು. ಅಲ್ಲಿರುವವರೆಗೂ ಅವಳು ತನ್ನ ಹೆಸರು "ಸಾವಿತ್ರಿ ಸಿಂಹಾ, ಪಾಟ್ನಾ" ಎಂದು ಹೇಳಿದ್ದಳು.

"ಹೆಸರು ಸಾವಿತ್ರಿ ಯಾಕೆ?"

"ಯಾಕಿರಬಾರದು? ನಾನಾದರೂ ನನ್ನ ಗಂಡನ ಜೀವ ಉಳಿಸಲಿಕ್ಕೇ ಯತ್ನಿಸಿದ ಅಧುನಿಕ ಸಾವಿತ್ರಿಯಲ್ಲವೆ? ದಾರಿ ಬೇರೆಯಾದರೂ ಗುರಿ ಒಂದೇ ಅಲ್ಲವೆ? ನಿಮ್ಮ ಕಾರ್ಯವನ್ನು ತಡೆಯುವ ಶಕ್ತಿ ನನಗಿಲ್ಲದಾಯಿತು. ನಿಮ್ಮ ಚಿತ್ತಭ್ರಾಂತಿಯಿಂದ ನಿಮ್ಮನ್ನು ಉಳಿಸಲು ಒಂದೇ ದಾರಿ ಇತ್ತು. ಅದೆಂದರೆ ನಿಮ್ಮನ್ನು ಪ್ರವಾಸದಲ್ಲಿ ತೊಡಗಿಸುವುದು. ಹೊಸ ಹೊಸ-ಜನ, ಜಾಗ, ಜಾತ್ರೆಗಳನ್ನು ನೀವು ನೋಡುವಂತೆ ಮಾಡುವುದು."

"ಉಗುರುಗನ್ನಡಿಯೇ ನನ್ನ ಪ್ರಯಾಣಕ್ಕೆ ಕಾರಣವಾಯಿತು."

"ಅದಕ್ಕೆ ನಾನೇ ಕಾರಣಳು. ನೇಪಾಲ ಬಾಬೂ ನನ್ನ ಸ್ನೇಹಿತರಾಗಿ ನೆರವಾದರು."

"ಇದೆಲ್ಲ ನೇಪಾಲ ಬಾಬೂಗೆ ಗೊತ್ತಿತ್ತೆ? ಎಂಥಾ ವಿಶ್ವಾಸಘಾತ!"

"ಅವರಂಥ ಮಿತ್ರ ಹುಡುಕಿದರೂ ಸಿಗಲಾರರು. ನಿಮ್ಮ ಕನ್ಯೆ, ಅಳಿಯಂದಿರಿಗೂ ಅವರು ಈ ವಿಷಯ ತಿಳಿಸಿರಲಿಲ್ಲ. ನಿಮ್ಮ ಸಮಾಚಾರವನ್ನು ಪ್ರತಿವಾರ ಅವರು ನನಗೆ ತಿಳಿಸುತ್ತಿದ್ದರು."

"ಪ್ರತಿ ವಾರ? ನನ್ನ ಸಮಾಚಾರ ಅವನಿಗೆ ಹೇಗೆ ತಿಳಿಯುತ್ತಿತ್ತು! ಮತ್ತು ಆತ ನಿನ್ನೊಂದಿಗೆ ಪತ್ರವ್ಯವಹಾರ ಮಾಡಿದ್ದು ಹೇಗೆ?"

"ಯಾಕಾಗಬಾರದು? ಕಛೇರಿಗೆ ತಂತಿ ಕೊಟ್ಟು ದುಡ್ಡು ನೀವು ಕೇಳುತ್ತಿದ್ದಿರಿ. ನಿಮ್ಮ ಪ್ರವಾಸದ ದಾರಿ ಎಲ್ಲ ಗೊತ್ತಾಗುತ್ತಿತ್ತು. ಕನ್ಯಾಕುಮಾರಿಯಲ್ಲಿ ನೀವು ಬಹಳ ದಿನ ಉಳಿಯಲಾರಿರೆಂದುಕೊಂಡಿದ್ದೆ. ಆದರೆ ತಿಂಗಳ ಹಿಂದೆ ತಿಂಗಳು ಕಳೆದರೂ ನೀವು ಮಿಸುಕದೆ ಉಳಿದದ್ದರಿಂದ ನಾನು ಹೆದರಿದೆ. ನಿಮ್ಮ ಆರೋಗ್ಯವೇನಾದರೂ ಈ ಮಧ್ಯೆ ಕೆಟ್ಟಿತ್ತೆ? ನಿಮ್ಮನ್ನು ಕರೆತರಲು ನಾನೇ ಜನರನ್ನು ಕಳಿಸುತ್ತಿದ್ದೆ."

ಆರ್ಯಕುಮಾರರು ನಿಸರ್ಗ ಸಾನ್ನಿಧ್ಯದಲ್ಲಿ ತನ್ನ ಅಂತಶ್ಚೇತನೆಗೆ ಹೇಗೆ ನೆಮ್ಮದಿ ದೊರೆಯಿತೆಂಬುದನ್ನು ಹೇಳಿದರು.

"ಹಾಗೆ ಹೇಳಬೇಡಿ. ನಾನು ಬಾರದೆ ಹೋಗಿದ್ದರೆ ನೀವು ಎಂದೂ ಹಿಂದಿರುಗುತ್ತಿದ್ದಿಲ್ಲವೆ?"

"ಹೌದು. ನಾನು ದೇವತೆಯ ರೂಪದಲ್ಲಿ ನಿನ್ನನ್ನು ಕಂಡಿದ್ದೆ. ನಡೆ. ಇನ್ನು ನಾವು ಪುನಶ್ಚ ಹೊಸತಾಗಿ ನಮ್ಮ ಜೀವನವನ್ನು ಪ್ರಾರಂಭಿಸುವಾ."

ನವದಂಪತಿಗಳಂತೆ ಅವರು ಮರಳಿ ಊರಿಗೆ ಹೋದರು. ಮತ್ತೊಂದು ದೀರ್ಘಪ್ರಯಾಣ ಅವರಿಗಾಗಿ ಅನಂತದವರೆಗೆ ದಾರಿಯನ್ನು ಚೆಲ್ಲಿಕೊಂಡು ಕಾದಿತ್ತು. ★

ಉಪ್ಪು ಬಿಟ್ಟು ಸುಖನಿದ್ರೆ ಮಾಡಿರಿ!

"ಹಿಂದುಸ್ತಾನ ಸ್ಟ್ಯಾಂಡರ್ಡ್"
ಆಧಾರದಿಂದ

ಮಾನವನ ಅನೇಕ ಕಷ್ಟಗಳಿಗೆ ಉಪ್ಪನ್ನು ಆರೋಪಿಯಾಗಿ ಮಾಡಲಾಗಿದೆ.* ಅನೇಕ ರೋಗಗಳಲ್ಲಿ ಉಪ್ಪನ್ನು ವರ್ಜಿಸಲು ವೈದ್ಯರು ಸೂಚಿಸುತ್ತಾರೆ. ಈಗ ಹೊಸತೊಂದು ಆರೋಪ ಈ ಸಕಲ ರುಚಿಗಳ ರಾಜನ ಮೇಲೆ ಬಂದಿದೆ. ಉಪ್ಪು ನಿದ್ರಾನಾಶಕ್ಕೂ ಕಾರಣವಾಗುತ್ತದೆಂದು ವಿಜ್ಞಾನಿಗಳು ಹೇಳತೊಡಗಿದ್ದಾರೆ.

ಈ ಹೊಸ ಅಂಶವನ್ನು ಕಂಡುಹಿಡಿದ ವಿಜ್ಞಾನಿ ಸ್ವತಃ ನಿದ್ದೆಗೇಡಿನಿಂದ ನರಳುವವರು. ಅವರ ಹೆಸರು ಪ್ರೊಫೆಸರ್ ಕೊಯಿರಾಲ್ಟ್. ಫ್ರಾನ್ಸಿನ ಅತಿ ದೊಡ್ಡ ಮಿಲಿಟರಿ ಆಸ್ಪತ್ರೆಯ ನರ-ಮನೋರೋಗ ವಿಭಾಗದ ಮುಖ್ಯಸ್ಥರಾದ ಪ್ರೊ. ಕೊಯಿರಾಲ್ಟರು ಐದು ವರ್ಷ ಕಾಲ ತಮ್ಮ ಈ ಸಿದ್ಧಾಂತವನ್ನು ನೂರಾರು ಪ್ರಯೋಗಗಳಿಂದ ಖಂಡಿತ ಮಾಡಿಕೊಂಡ ನಂತರ ಸಾವಿರಾರು ನಿದ್ರಾನಾಶ ರೋಗಿಗಳ ಮೇಲೆ ಪರೀಕ್ಷಿಸಿ ನೋಡಿದ್ದಾರೆ.

ಉಪ್ಪಿಗೆ ಪ್ರೊ. ಕೊಯಿರಾಲ್ಟರು ಸಂಪೂರ್ಣ "ಮರಣದಂಡನೆ" ವಿಧಿಸುವುದಿಲ್ಲ. ರಾತ್ರಿಯಲ್ಲಿ ಹೆಚ್ಚು ಉಪ್ಪು ತಿನ್ನುವುದರಿಂದ ಮಾತ್ರ ನಿದ್ದೆಗೇಡಾಗುತ್ತದೆಂದು ಅವರು ಹೇಳುತ್ತಾರೆ. ಆದ್ದರಿಂದ ನಿದ್ದೆಗೇಡಿನಿಂದ ಪಾರಾಗಬೇಕಾದರೆ ರಾತ್ರಿಯೂಟದಲ್ಲಿ ಮಾತ್ರ ನೀವು ಉಪ್ಪನ್ನು ವರ್ಜಿಸಿದರೆ ಸಾಕು.

ರಾತ್ರಿಯಲ್ಲಿ ಹೆಚ್ಚು ಉಪ್ಪು ತಿನ್ನುವುದರಿಂದ ನಿದ್ರೆಯ ಮೇಲಾಗುವ ದುಷ್ಪರಿಣಾಮವನ್ನು ತೋರಿಸಲು ಪ್ರೊ. ಕೊಯಿರಾಲ್ಟರು ತಮ್ಮ ಆಸ್ಪತ್ರೆಗೆ ಬಂದ ಕೆಲ .ನಿದ್ರಾಸಂಚಾರಿ ರೋಗಿಗಳ ಮೇಲೆ ಒಂದು ನಾಟಕೀಯ ಪ್ರಯೋಗವನ್ನು ಮಾಡಿದರು. ಆಸ್ಪತ್ರೆಗೆ ಬಂದಾಗ ಅವರಿಗೆ ಆಗೊಮ್ಮೆ ಈಗೊಮ್ಮೆ ಮಾತ್ರ ನಿದ್ರೆಯಲ್ಲಿ ಎದ್ದು ಓಡಾಡುವ ಅಭ್ಯಾಸವಿತ್ತು. ಅವರಿಗೆ ಪ್ರೊ. ಕೊಯಿರಾಲ್ಟರು ಸಂಜೆಯೂಟದೊಡನೆ ಕೆಲ ದಿನಗಳ ವರೆಗೆ ದೊಡ್ಡ ಪ್ರಮಾಣದಲ್ಲಿ ಉಪ್ಪನ್ನು ಕೊಟ್ಟರು. ಹೀಗೆ ಕೊಟ್ಟಾಗ ಪ್ರತಿಯೊಬ್ಬ ರೋಗಿಯೂ ನಿದ್ದೆಯಲ್ಲಿ ದಿನವೂ ರಾತ್ರಿಯೆಲ್ಲ ಓಡಾಡತೊಡಗಿದ. ಆಸ್ಪತ್ರೆಯಲ್ಲೆಲ್ಲ ರೋಗಿಗಳು ಅಲೆಯುತ್ತಿದ್ದರಲ್ಲದೆ ಎಚ್ಚರಗೊಂಡಾಗ ತುಂಬ ಅಪಾಯಕರ ಸನ್ನಿವೇಶಗಳಲ್ಲಿ ತಾವಿರುವುದನ್ನು ಕಂಡು ಗಾಬರಿಗೊಳ್ಳುತ್ತಿದ್ದರು.

ಅನಂತರ ಅದೇ ರೋಗಿಗಳಿಗೆ ಅವರು ರಾತ್ರಿಯಡಿಗೆಯಲ್ಲಿ ಉಪ್ಪು ಹಾಕುವುದನ್ನು ಸಂಪೂರ್ಣ ನಿಲ್ಲಿಸಿದರು. ಹೀಗೆ ನಿರ್ಲವಣ ಭೋಜನವನ್ನು ಒಂದು ವಾರದ ವರೆಗೆ ಪಡೆದ ನಂತರ ಪ್ರತಿ

---

* 'ಕಸ್ತೂರಿ' ಡಿಸೆಂಬರ್ ೧೯೬೦ ಸಂಚಿಕೆಯಲ್ಲಿ "ನಿಮ್ಮ ಆಹಾರದಲ್ಲಿ ಎಷ್ಟು ಉಪ್ಪು ಬೇಕು?" ಲೇಖನವನ್ನು ನೋಡಿರಿ.

ದಣಿದಿರುವಾಗ ಮಲಗದಿರಿ

ಸ್ವಪ್ನಗಳಲ್ಲಿ ನಮಗೆ ಅಸಂಖ್ಯ ಹೊಸ ಹೊಸ ವಸ್ತುಗಳ ಪರಿಚಯವಾಗುತ್ತದೆ. ಆದರೆ ಈ ಸಂಬಂಧದಲ್ಲಿ ಒಂದು ವಿಶಿಷ್ಟ ಮಾತನ್ನು ನೆನಪಿಟ್ಟುಕೊಳ್ಳಬೇಕು. ಅದೆಂದರೆ ಬಹಳ ದಣಿದಿರುವಾಗ ಎಂದೂ ಮಲಗಬಾರದು. ಹೀಗೆ ಮಲಗಿದಾಗ ನೀವೊಂದು ಬಗೆಯ ಅಚೇತನಾವಸ್ಥೆಯಲ್ಲಿರುತ್ತೀರಿ. ಆಗ ಸ್ವಪ್ನಗಳು ಕಾಣುವವಾದರೂ ನಿಮಗೆ ಅವುಗಳ ಮೇಲೆ ಒಂದಿಷ್ಟೂ ನಿಯಂತ್ರಣವಿರುವುದಿಲ್ಲ. ಊಟಕ್ಕೆ ಮೊದಲು ಹೇಗೆ ನೀವು ವಿಶ್ರಾಂತಿ ಪಡೆಯುವುದು ಅಗತ್ಯವೊ ಹಾಗೆಯೆ ಮಲಗುವ ಮೊದಲು ವಿಶ್ರಾಂತಿಪಡೆಯುವ ರೀತಿಯನ್ನು ತಿಳಿದುಕೊಳ್ಳಬೇಕಾಗುತ್ತದೆ.

ಮಲಗುವ ಮೊದಲು ವಿಶ್ರಾಂತಿ ಪಡೆಯುವ ಅನೇಕ ರೀತಿಗಳಿವೆ. ಒಂದು ಪದ್ಧತಿ ಹೀಗಿದೆ: ಮೊದಲಿಗೆ ಮನಸ್ಸನ್ನು ನಿಶ್ಚಿಂತಗೊಳಿಸಬೇಕು. ಹಾಸಿಗೆಯ ಅಥವಾ ಆರಾಮ ಖುರ್ಚಿಯ ಮೇಲೆ ಉದ್ದಕ್ಕೆ ಮೈಸಡಿಲುಬಿಟ್ಟು ಮಲಗಿಕೊಳ್ಳಬೇಕು. ಆಮೇಲೆ ಪ್ರತಿಯೊಂದು ಜ್ಞಾನತಂತುವನ್ನು ಶಿಥಿಲಗೊಳಿಸಲು ಯತ್ನಿಸಬೇಕು. ಎಲ್ಲ ಜ್ಞಾನತಂತುಗಳನ್ನು ಒಮ್ಮೆಲೇ ಅಥವಾ ಒಂದಾದ ಮೇಲೊಂದರಂತೆ ಶಿಥಿಲಗೊಳಿಸುತ್ತ ಹೋಗಬೇಕು. ಹೀಗೆ ಪೂರ್ಣ ವಿಶ್ರಾಂತಿ ಪಡೆಯುವಂತೆ ಮಾಡಿಕೊಳ್ಳಬೇಕು. ಹೀಗೆ ಸಮಸ್ತ ಶರೀರ ಸಡಿಲಾದಾಗ ನೀವು ಹಾಸಿಗೆಯ ಮೇಲೆ ಒಂದು ಚಾದರ ಮುದುಡಿ ಬಿದ್ದಂತಿರುವಿರಿ. ಅವಯವಗಳನ್ನು ಈ ರೀತಿ ಸಡಿಲುಬಿಟ್ಟುಕೊಂಡು ಆಮೇಲೆ ಮನಸ್ಸಿನ ಕಾರ್ಯಕಲಾಪವನ್ನು ನಿಲ್ಲಿಸಬೇಕು.

ಇಷ್ಟಾದ ಮೇಲೆ ನಿಮಗೆ ಯಾವಾಗ ನಿದ್ದೆ ಹತ್ತಿತ್ತೆಂದೂ ತಿಳಿಯುವುದಿಲ್ಲ. ಬೆಳಿಗ್ಗೆ ನೀವು ತುಂಬ ಪ್ರಸನ್ನಚಿತ್ತದಿಂದ ಕೂಡಿದವರಾಗಿ ಏಳುವಿರಿ.

ಹೀಗೆ ಮಾಡದೆ, ನೀವು ಒಂದಿಷ್ಟೂ ವಿಶ್ರಾಂತಿ ಹೊಂದದೆ ಮಲಗಿದರೆ ನೀವು ಚೇತನಾಹೀನ ನಿದ್ದೆಯನ್ನು ಮಾಡುವಿರಿ. ಇದರಿಂದ ನಿಮ್ಮ ದೇಹ ಮನಸ್ಸುಗಳೆರಡಕ್ಕೂ ನಿಜ ವಿಶ್ರಾಂತಿ ಸಿಗುವುದೇ ಇಲ್ಲ. ದೇಹ ಮನಸ್ಸುಗಳನ್ನು ಶಿಥಿಲಗೊಳಿಸುವುದು ಒಮ್ಮೆಲೆ ಸಾಧ್ಯವಾಗಲಿಕ್ಕಿಲ್ಲ. ಆದರೆ ಧೈರ್ಯದಿಂದ ಪ್ರಯತ್ನಿಸುತ್ತ ಹೋಗಬೇಕು. *

ಶ್ರೀ ಮಾತಾಜಿ

ಯೊಬ್ಬ ರೋಗಿಗೂ ಇರುಳೆಲ್ಲ ಪ್ರಶಾಂತ ಗಾಢ ನಿದ್ರೆ ಬರತೊಡಗಿತು.

ನಿದ್ರಾನಾಶ ರೋಗಿಗಳ ಮೇಲೂ ಪ್ರಯೋಗಗಳು ಇದೇ ಬಗೆಯ ಪರಿಣಾಮವನ್ನು ತೋರಿಸಿವೆ. ಹೀಗೇಕಾಗುತ್ತದೆ? ನಾವು ತಿನ್ನುವ ಉಪ್ಪಿನಲ್ಲಿ ಬಹು ಭಾಗವು ಶರೀರಕ್ಕೆ ಅಗತ್ಯವಿರುವುದಿಲ್ಲ. ಅದನ್ನು ನಮ್ಮ ಜೀವಕೋಶ ಅಥವಾ ಜೀವಕಣಗಳು ಹೊರಗೆ ಹಾಕಬೇಕಾಗುತ್ತದೆ. ನಮ್ಮ ಜೀವಕಣಗಳು ಬೇಡದ್ದನ್ನು ಹೊರಗೆ ಹಾಕಲು ಮತ್ತು ಬೇಕಾದ್ದನ್ನು

ತೆಗೆದುಕೊಳ್ಳಲು ನಿರಂತರವಾಗಿ ಮುಚ್ಚಿ ತೆರೆಯುವ ಕೋಣೆಗಳಂತಿರುತ್ತವೆಂದು ಪ್ರೊ. ಕೊಯಿರಾಲ್ಪರು ಹೇಳುತ್ತಾರೆ. ನಿದ್ರಾಕಾಲದಲ್ಲಿ ಶರೀರ ವಿಶ್ರಾಂತಿಯಲ್ಲಿರುವಾಗ ಅನಗತ್ಯ ಉಪ್ಪನ್ನು ಹೊರಗೆ ಹಾಕಲು ಜೀವಕಣಗಳು ಮಿತಿಮೀರಿ ದುಡಿಯಬೇಕಾಗಿ ಬರುತ್ತದೆ. ಕಣಗಳಲ್ಲಿ ಉಪ್ಪು ಅತಿರೇಕವಾಗಿದ್ದರೆ ಅವು ಶ್ರಮವನ್ನು ಸಹಿಸಲಾರದೆ ಬಾಗಿಲನ್ನು ಪೂರ್ತಿ ಮುಚ್ಚಿಬಿಡುತ್ತವೆ ಇಲ್ಲವೆ ಸದಾ ತೆರೆದಿಟ್ಟು ಬಿಡುತ್ತವೆ. ಮೊದಲನೆಯದಾದರೆ ಉಪ್ಪು ಒಳಗೇ ಉಳಿಯುತ್ತದೆ, ಎರಡನೆಯದಾದರೆ ಅತಿ ರಭಸದಿಂದ ಅದು ಹೊರತಳ್ಳಲ್ಪಡುತ್ತದೆ. ಎರಡೂ ಸ್ಥಿತಿಗಳಲ್ಲಿ ಶರೀರ ಉತ್ತೇಜನಗೊಂಡು ನಿದ್ರಾನಾಶ, ದುಃಸ್ವಪ್ನ, ನಿದ್ರಾಸಂಚಾರಗಳುಂಟಾಗಬಹುದು.

ನಿದ್ರಾನಾಶದಿಂದ ಬಳಲುವವರಿಗೆ ಪ್ರೊ. ಕೊಯಿರಾಲ್ಪರ ಸೂಚನೆ ಇದು : ರಾತ್ರಿಯೂಟದಲ್ಲಿ ಮಾಂಸವನ್ನೂ ಉಪ್ಪನ್ನೂ ಸಂಪೂರ್ಣ ವರ್ಜಿಸಿರಿ. ತರಕಾರಿಯನ್ನು ಬೇಯಿಸಿ ಅಥವಾ ಹಸಿಯಾಗಿ ಹೆಚ್ಚು ತೆಗೆದುಕೊಳ್ಳಿರಿ. ಅನಂತರ ತಾಜಾ ಹಣ್ಣು ಹಂಪಲು ಸೇವಿಸಿರಿ. ಹಗಲಲ್ಲಿ ಬೇಕಾದಷ್ಟು ಮಾಂಸ, ಉಪ್ಪು ತಿನ್ನಲಡ್ಡಿಯಿಲ್ಲ. ಈ ಪಥ್ಯವನ್ನು ಅನುಸರಿಸಿದರೆ ನಿದ್ರಾನಾಶ, ನಿದ್ರಾಸಂಚಾರಗಳಿಂದ ನೀವು ಮುಕ್ತರಾಗುವಿರಷ್ಟೇ ಅಲ್ಲ, ಸ್ಥೂಲಕಾಯದಿಂದ ಬಳಲುವವರು ತಮ್ಮ ತೂಕ ಇಳಿಯುತ್ತಿರುವುದನ್ನೂ ಕಂಡು ಸಮಾಧಾನ ತಾಳಬಹುದು. ✶

ಆಗ ನನಗೆ ಒಂಭತ್ತು ವರ್ಷ. ಮಂದಿರಕ್ಕೆ ನಿತ್ಯ ಹೋಗುತ್ತಿದ್ದ ತಾಯಿಯ ಜೊತೆಯಲ್ಲಿ ನಾನೂ ಹೋಗುತ್ತಿದ್ದೆ. ಮಂದಿರದಲ್ಲಿ ನನ್ನ ಮನಸ್ಸೆಳೆಯುತ್ತಿದ್ದುದು ದೇವರಲ್ಲ; ಧಾರ್ಮಿಕ ವಿಧಿಗಳಲ್ಲ; ಕೇವಲ ಮುಖ್ಯ ಪೂಜಾರಿಯ ಟೊಪ್ಪಿಗೆ! ಅದರ ಅಂದ ಕಂಡು ನಾನು ತಾಯಿಯ ಹತ್ತಿರ ನನಗೂ ಅಂಥ ಒಂದು ಟೊಪ್ಪಿಗೆ ಕೊಡಿಸು ಎಂದು ಹಟ ಹೂಡಿದೆ. ಮಕ್ಕಳ ಹಟವೆಂದು ಆಕೆ ದುರ್ಲಕ್ಷ್ಯ ಮಾಡಲೆತ್ನಿಸಿದರೂ ನಾನು ಕೇಳದ್ದರಿಂದ ಅವಳು "ಮಗೂ, ಅದು ಸಾಮಾನ್ಯ ಟೊಪ್ಪಿಗೆಯಲ್ಲ. ಬಲು ಶ್ರೇಷ್ಠವಾದುದು. ಸದಾಚಾರಿಗಳಿಗಷ್ಟೇ ಅದು ಸಿಗುತ್ತದೆ" ಎಂದಳು.

ಸದಾಚಾರವೆಂದರೆ ಏನೆಂಬುದನ್ನು ತಾಯಿ ತಿಳಿಸಿ ಹೇಳಿದಳು. ಟೊಪ್ಪಿಗೆಗಾಗಿ ನಾನು ತಾಯಿ ಬಳಿಯಲ್ಲಿ ಪ್ರತಿಜ್ಞೆ ಮಾಡಿದೆ: "ಅಮ್ಮಾ ಇಂದಿನಿಂದ, ಈ ನಿಮಿಷದಿಂದ ನಾನು ಸದಾಚಾರದ ಎಲ್ಲ ನಿಯಮಗಳನ್ನು ಪಾಲಿಸುತ್ತೇನೆ. ಸರ್ವಪ್ರಾಣಿಮಾತ್ರದಲ್ಲಿ ದಯೆ ತೋರುವೆ. ಸತ್ಯ ಚಾರಿತ್ರ್ಯಗಳನ್ನು ಉಜ್ವಲವಾಗಿರಿಸುವೆ. ಅಂಥ ಟೊಪ್ಪಿಗೆ ಮಾತ್ರ ಬೇಕೇ ಬೇಕು!"

ತಾಯಿ ನಕ್ಕು ಹೇಳಿದಳು. "ಹಾಗಾದರೆ ಅಂಥ ಟೊಪ್ಪಿಗೆ ನಿನ್ನ ತಲೆಯಮೇಲೆ ಇದ್ದೇ ಇದೆ." ಆಗ ಅವಳ ಮಾತು ನನಗೆ ಅರ್ಥವಾಗಲಿಲ್ಲ. ಆದರೆ ಮುಂದೆ ನಾನು ಜೀವನವನ್ನು ಸೂಕ್ಷ್ಮವಾಗಿ ಅವಲೋಕಿಸುತ್ತ ಹೋದಂತೆ ಅವುಗಳ ತಿರುಳು ನನ್ನ ಚಿತ್ತದಲ್ಲಿ ಮೂಡತೊಡಗಿತು. ಆ ಪವಿತ್ರ ಟೊಪ್ಪಿಗೆಯನ್ನು ತಲೆಯಮೇಲೆ ಧರಿಸುವ ಅರ್ಹತೆಯನ್ನುಳಿಸಿಕೊಳ್ಳಲು ಇಂದಿಗೂ ಯತ್ನಿಸುತ್ತಿದ್ದೇನೆ.


—ಬ್ರಹ್ಮೀ ಪ್ರಧಾನಿ ಯು ನು

ಈಗ

ಬ್ರೂಕ್ ಬಾಂಡ್ ಚಹಾ

ಮೆಟ್ರಿಕ್ ತೂಕದ ಪೊಟ್ಟಣಗಳಲ್ಲಿ





ಇಂದಿನಿಂದ ಬ್ರೂಕ್ ಬಾಂಡ್ ಚಹಾ ಮೇಲೆ ನಮೂದಿಸಿದ ಮೆಟ್ರಿಕ್ ತೂಕದ ಪೊಟ್ಟಣ- 500 ಗ್ರ್ಯಾಮ್, 250 ಗ್ರ್ಯಾಮ್, 100 ಗ್ರ್ಯಾಮ್ ಮತ್ತು 50 ಗ್ರ್ಯಾಮ್-ಗಳಲ್ಲಿ ಸಿಗುತ್ತದೆ. ಇದು ಈವರೆಗೆ ಮಾರಲ್ಪಡುವ- 1 ಪೌ., ½ ಪೌ., ¼ ಪೌ. ಮತ್ತು 2 ಪೌ.- ತೂಕದ ಪೊಟ್ಟಣಕ್ಕೆ ಅಂದಾಜಿನಲ್ಲಿ ಹೋಲುತ್ತದೆ, ಆದರೆ ಸುಮನಾಗಿ ಅಲ್ಲ.

ಈವರೆಗೆ ನೀವು ಕೊಳ್ಳುವ ಚಹದ ಪರಿಮಾಣವನ್ನು ನಿಮ್ಮ ಅಂಗಡಿಯವನಿಗೆ ತಿಳಿಸಿದ್ದಲ್ಲಿ ಅತನು ಮೆಟ್ರಿಕ್ ತೂಕಕ್ಕೆ ಅಂದಾಜಿನಲ್ಲಿ ಹೋಲುವ ಪೊಟ್ಟಣವನ್ನು ನಿಮಗೆ ಕೊಡುವನು. ನೆನಪಿನಲ್ಲಿಡಿ, ತೂಕದಲ್ಲಿ ಈ ಪರಿವರ್ತನೆಯಾದರೂ ಬ್ರೂಕ್ ಬಾಂಡ್ ಚಹದ ತಾಜಾತನ ಮತ್ತು ಉತ್ಕೃಷ್ಟತೆಯಲ್ಲಿ ಏನೂ ಬದಲಾವಣೆಯಿಲ್ಲ.

ನಿಮ್ಮ ನೆಚ್ಚಿನ

ಬ್ರೂಕ್ ಬಾಂಡ್ ಚಹಾವನ್ನು

ಮೆಟ್ರಿಕ್ ತೂಕಗಳಲ್ಲಿ ಕೊಳ್ಳಿರಿ

ಬ್ರೂಕ್ ಬಾಂಡ್ ಇಂಡಿಯಾ ಪ್ರೈವೇಟ್ ಲಿಮಿಟೆಡ್

IWTBB 27

ವಿಜ್ಞಾನ ಈಗ ಗರ್ಭಸ್ಥ ಶಿಶುವಿನ ಲಿಂಗವನ್ನು ಹೇಳಬಲ್ಲದಲ್ಲದೆ ಬೇಕಾದಂತೆ ಗಂಡು ಹೆಣ್ಣು ಮಕ್ಕಳು ಹುಟ್ಟುವಂತೆ ಮಾಡಬಲ್ಲದು!



ಗಂಡೋ ಹೆಣ್ಣೋ?

ಗಂಗಾಧರ

ಯಾವ ಗರ್ಭಿಣಿ ತನ್ನ ಬಸಿರಲ್ಲಿರುವ ಮಗು ಗಂಡೋ ಹೆಣ್ಣೋ ಎಂದರಿಯಲು ಆಸೆ ಪಡುವುದಿಲ್ಲ? ಈ ಆಸೆ ಎಷ್ಟು ತಮಾಷೆಯಾದ ಕಲ್ಪನೆಗಳಿಗೆ ಜನ್ಮವಿತ್ತಿಲ್ಲ?

ನೀವು ಕೇಳಿಲ್ಲವೆ? ಹೊಟ್ಟೆಯಲ್ಲಿರುವ ಮಗು ಗಂಡಾಗಿದ್ದರೆ ಬಸಿರಿಗೆ ಹುಳಿ ತಿನ್ನುವ ಆಸೆಯಾಗುತ್ತದೆ; ಹೆಣ್ಣಾಗಿದ್ದರೆ ಸಿಹಿ ತಿನ್ನುವ ಹಂಬಲವಾಗುತ್ತದೆ ಎಂದು? ಗಂಡಿಗೆ ಬಲ ಬಲ ಹೆಣ್ಣಿಗೆ ಎಡ ಬಲ, ಎಂಬುದರಿಂದ ಬಸಿರಿಯ ಬಲ ಮೊಲೆ ಊದಿದರೆ ಗಂಡಾಗುತ್ತದೆಂದು? ಗರ್ಭಿಣಿಗೆ ಬಹಳ ಆಲಸ್ಯ, ನಿದ್ದೆ, ಬಂದರೆ ಗಂಡಾಗುತ್ತದೆಂದು? ಆಧುನಿಕ ವಿಜ್ಞಾನ ಇವೆಲ್ಲವನ್ನೂ ಸುಳ್ಳೆಂದು ತೋರಿಸಿಕೊಟ್ಟಿದೆ. ಆದರೆ ಈ ಕಥೆಗಳನ್ನು ಸೃಷ್ಟಿಸಿದ ನಿಮ್ಮಜ್ಜಿಯನ್ನು ನಕ್ಕು ಪ್ರಯೋಜನವಿಲ್ಲ. ಹಿಂದಿನ ಕಾಲದಲ್ಲಿ ವಿಜ್ಞಾನಿಗಳೆನಿಸಿದವರು ಕೂಡ ಇಂಥ ಭ್ರಾಮಕ ಕಲ್ಪನೆಗಳನ್ನು ಇಟ್ಟುಕೊಂಡಿದ್ದರು ಭಾರತೀಯ ವೈದ್ಯಶಾಸ್ತ್ರದಲ್ಲಿ ಪುರುಷನ ಬಲ ವೃಷಣದಿಂದ ಹೊಮ್ಮಿದ ವೀರ್ಯವು ಗಂಡು ಮಗುವಿಗೂ ಎಡ ಬದಿಯದರಿಂದ ಬಂದದ್ದು ಹೆಣ್ಣಿಗೂ ಕಾರಣವಾಗುತ್ತದೆಂಬ ಹೇಳಿಕೆಯಿದೆ ಆದರೆ ಸಾವಿರಾರು ವರ್ಷ ಹಿಂದೇಕೆ ಹೋಗಬೇಕು? ೧೭ನೇ ಶತಮಾನದ ಒಬ್ಬ ಪ್ರಸಿದ್ಧ ಯುರೋಪಿಯನ್ ಡಾಕ್ಟರ ಹೊಟ್ಟೆಯಲ್ಲಿ ಗಂಡು ಮಗುವಿದ್ದರೆ ತಾಯಿಯ ಬಲಗಣ್ಣು ಎಡಗಣ್ಣಿಗಿಂತ ರಭಸದಿಂದ ಚಲಿಸುವುದು ಎಂದು ದೃಢವಾಗಿ ಹೇಳಿದ್ದಾನೆ.

ಇವೆಲ್ಲವೂ ಕಟ್ಟು ಕಥೆಗಳೆಂದು ಗೊತ್ತಾದದ್ದು, ಪ್ರಾಣಿಗಳ ಪುನರುತ್ಪತ್ತಿ ವಿಧಾನವು ಪ್ರಾಯೋಗಿಕ ವಿಜ್ಞಾನದ ಪರಿಶೀಲನೆಗೊಳಪಟ್ಟ ಮೇಲೆಯೆ. ಮಗುವಿನ ಲಿಂಗವು ಕೇವಲ ಪುರುಷನ ವೀರ್ಯದಲ್ಲಿರುವ ಬೀಜಗಳಿಂದ ನಿರ್ಧರಿಸಲ್ಪಡುವುದೆಂದು ಅದು ತೋರಿಸಿಕೊಟ್ಟಿತು. ವೀರ್ಯದಲ್ಲಿ ಎರಡು ಬಗೆಯ ಬೀಜಗಳಿವೆ. ಅವಕ್ಕೆ X ಮತ್ತು Y ಎಂದು ಹೆಸರಿಡಲಾಗಿದೆ. ಪ್ರತಿಯೊಂದು ಸಂಯೋಗದಲ್ಲೂ ಈ ಎರಡೂ ಜಾತಿಯ ಬೀಜಗಳು ಲಕ್ಷಗಟ್ಟಳೆಯಲ್ಲಿ ಹೊರಹೊಮ್ಮಿ ಗರ್ಭಕೋಶದತ್ತ ಧಾವಿಸುತ್ತವೆ. ಸ್ತ್ರೀಯ ಅಂಡಾಣುವನ್ನು ಮೊದಲು ಸಂಧಿಸುವುದು X ಜಾತಿಯ ಬೀಜವಾಗಿದ್ದರೆ ಹೆಣ್ಣೂ Y ಜಾತಿಯದಾಗಿದ್ದರೆ ಗಂಡೂ ಹುಟ್ಟುತ್ತದೆ.

ಇದೆಲ್ಲ ನಿಜ, ಆದರೆ ಗರ್ಭದಲ್ಲಿರುವುದು ಗಂಡೋ ಹೆಣ್ಣೋ ಎಂದು ತಿಳಿಯುವ ಬಗೆ

ಹೇಗೆ? ವಿಜ್ಞಾನಕ್ಕೆ ಈ ವರೆಗೆ ಖಾತ್ರಿಯಾದ ಯಾವ ವಿಧಾನವೂ ತಿಳಿದಿರಲಿಲ್ಲ.

ಈಚೆಗೆ ಅಕಸ್ಮಾತ್ತಾಗಿ ಕಂಡುಹಿಡಿಯಲ್ಪಟ್ಟ ಸಂಗತಿಗಳು ಗರ್ಭಸ್ಥ ಶಿಶುವಿನ ಲಿಂಗ ನಿರ್ಣಯ ಮಾಡಲು ನೆರವಾಗುವಂತೆ ಕಾಣುತ್ತದೆ. ಕೆನಡಾದ ಕೆಲ ಡಾಕ್ಟರರು ವೈಮಾನಿಕ ವೈದ್ಯಕೀಯ ಸಂಶೋಧನೆಯಲ್ಲಿ ನಿರತರಾಗಿದ್ದರು. ಈ ಪರಿಶೀಲನೆಗಳಲ್ಲಿ ಅವರು ಹುಡುಕುತ್ತಿದ್ದ ಸಂಗತಿಗಳಿಗಿಂತ ಬೇರೆಯೆ ಆದ ಒಂದು ತಥ್ಯ ಹೊರಬಿತ್ತು. ಯಾರ ಯಾರದೋ ಬಾಯೊಳಗಿಂದ ಕೆರೆದುಕೊಂಡ ಮ್ಯೂಕಸ್ ಮೆಂಬ್ರೇನ್‌ನ ಕಣಗಳನ್ನು ವಿಶೇಷ ಬಣ್ಣ ಕೊಟ್ಟು ಸೂಕ್ಷ್ಮ ದರ್ಶಕದಲ್ಲಿ ಪರೀಕ್ಷಿಸುತ್ತಿದ್ದಾಗ ಕೆಲ ಕಣಗಳ ಕೇಂದ್ರದಲ್ಲಿ ವಿಶಿಷ್ಟ ರೀತಿಯ ಕಲೆ ಬಿದ್ದಿದ್ದುದನ್ನು ಅವರು ಗಮನಿಸಿದರು.

ಹೆಚ್ಚಿನ ಶೋಧನೆ ಮಾಡಿದಾಗ ಇಂಥ ಕಣಗಳೆಲ್ಲವೂ ಹೆಂಗಸರ ಬಾಯೊಳಗಿಂದ ಕೆರೆದುಕೊಂಡ ಮ್ಯೂಕಸ್‌ಮೆಂಬ್ರೇನಿನವುಗಳೇ ಎಂದು ಸಿದ್ಧವಾದವು. ಹಾಗಾದರೆ ಸ್ತ್ರೀ ಮತ್ತು ಪುರುಷ ಶರೀರಗಳ ಕಣಗಳಲ್ಲಿರುವ ಭೇದವನ್ನು ಇಷ್ಟು ಸುಲಭವಾಗಿ ಗೊತ್ತುಹಚ್ಚಲು ಬರುವುದೇ? ಅನಂತರ, ಮೊದಲು ಯಾವ ಲಿಂಗದವರದೆಂದು ಹೇಳದೆ, ಸ್ತ್ರೀಪುರುಷರಿಬ್ಬರಿಂದ ತೆಗೆದುಕೊಂಡ ಕೆರೆತಗಳನ್ನೂ ಪರೀಕ್ಷಕರ ಕಡೆ ಕಳಿಸಿದ್ದಾಯಿತು. ಅವರು ಇದು ಪುರುಷರದು ಇದು ಸ್ತ್ರೀಯರದು ಎಂದು ವಿಂಗಡಿಸಿಕೊಟ್ಟ ಮೇಲೆ ಹೋಲಿಸಿ ನೋಡಿದಾಗ ಅವರು ಮಾಡಿಕೊಟ್ಟ ವರ್ಗೀಕರಣ ಚಾಚೂ ತಪ್ಪದೆ ಸರಿಯಾಗಿತ್ತು

ಈ ಖಾತ್ರಿಯಾದ ಶೋಧವನ್ನು ಈಗ ವಿಜ್ಞಾನಿಗಳು ಗರ್ಭಸ್ಥ ಶಿಶುವಿನ ಲಿಂಗನಿರ್ಣಯಕ್ಕೆ ಉಪಯೋಗಿಸಿಕೊಳ್ಳುವ ಹವಣಿಕೆಯಲ್ಲಿದ್ದಾರೆ. ನಿಜ, ಗರ್ಭದಲ್ಲಿರುವ ಮಗುವಿನ ಬಾಯಿಯಿಂದ ಕೆರೆತಗಳನ್ನು ತೆಗೆದುಕೊಳ್ಳಲು ಬರುವುದಿಲ್ಲ. ಆದರೆ ಗರ್ಭಕೋಶದಲ್ಲಿ ಮಗುವನ್ನು ಆವರಿಸಿರುವ ದ್ರವದಲ್ಲಿ ಅದರ ಶರೀರದಿಂದಲೇ- ತಾಯಿಯ ಶರೀರದಿಂದಲ್ಲ,— ಹುಟ್ಟಿದ ಕಣಗಳು ಬಿಡಿಯಾಗಿ ತೇಲುತ್ತಿರುತ್ತವೆ. ಈ ಗರ್ಭಜಲವನ್ನು ಮಗು ಹುಟ್ಟುವ ಮೊದಲೇ ತುಸುವೆ ಹೊರಗೆ ತೆಗೆದುಕೊಳ್ಳಲು ಸಾಧ್ಯವಿದೆ. ಅದರಲ್ಲಿ ತೇಲುವ ಕಣಗಳನ್ನು ಮೇಲ್ಕಾಣಿಸಿದ ಪರೀಕ್ಷೆಗೊಳಪಡಿಸಿದರೆ ಅದು ಗಂಡೋ ಹೆಣ್ಣೋ ಎಂದು ಖಚಿತವಾಗಿ ಹೇಳಲು ಸಾಧ್ಯವಿದೆ. ಗರ್ಭಜಲದ ಮಾದರಿಯನ್ನು ಹೊರದೆಗೆಯುವಾಗ ರೋಗಾಣುಗಳೇನಾದರೂ ಒಳ ಸೇರಿಕೊಂಡುಬಿಟ್ಟರೆ ಮಗುವಿಗೆ ಅಪಾಯವಾದೀತೆಂಬ ಒಂದೇ ಒಂದು ಭಯವಿದೆ. ಆದರೆ ಇದನ್ನು ನಿವಾರಿಸುವ ಉಪಾಯವನ್ನು ಡಾಕ್ಟರರು ಇಂದಿಲ್ಲ ನಾಳೆ ಕಂಡುಹಿಡಿಯದೆ ಬಿಡರು. ಅದು ಸಾಧ್ಯವಾದಾಗ ಪ್ರತಿಯೊಬ್ಬ ಗರ್ಭಿಣಿಯೂ ತಾನು ಏನನ್ನು ಹಡೆಯಲಿದ್ದೇನೆಂದು ಗರ್ಭ ನಿಂತ ಕೆಲ ವಾರಗಳೊಳಗೇ ತಿಳಿದುಕೊಂಡು ಸಮಾಧಾನ ಹೊಂದಬಲ್ಲಳು.

ಆದರೆ ಇದರಲ್ಲೇನು ಸಮಾಧಾನ? ಎಂದು ನೀವು ಕೇಳುವಿರಿ. "ಗರ್ಭದಲ್ಲಿದ್ದ ಮಗುವಿನ ಲಿಂಗ ತಿಳಿದುಕೊಂಡಿದ್ದಾಯಿತು. ನನಗೆ ಗಂಡು ಮಗು ಬೇಕೆಂದಿದ್ದು ಹೊಟ್ಟೆಯಲ್ಲಿದ್ದ ಮಗು ಹೆಣ್ಣೆಂದಾದರೆ ಮತ್ತಷ್ಟು ದುಃಖವಲ್ಲವೆ?" ಗಂಡುಬೇಕೆಂದಾಗ ಗಂಡು, ಹೆಣ್ಣುಬೇಕೆಂದಾಗ ಹೆಣ್ಣು ಪಡೆಯಲು ಸಾಧ್ಯವಾಗದ ಹೊರತು ತಂದೆ ತಾಯಿಗಳಿಗೆ ಎಂದೂ ಸಮಾಧಾನವಾಗದು.

ಬಯಸಿದಂತೆ ಗಂಡು-ಹೆಣ್ಣು ಮಗುವಾಗಲು ಹಿಂದಿನ ಕಾಲದಿಂದಲೂ ಹಲವು ಉಪಾಯಗಳು ಜನರಿಗೆ ಗೊತ್ತಿವೆ. ಅವುಗಳಲ್ಲಿ ಕೆಲವು ಗರ್ಭಧಾರಣೆಗೆ ಮೊದಲೇ ಮತ್ತು ಕೆಲವು ಗರ್ಭ ನಿಂತಮೇಲೆ ಪ್ರಯೋಗಿಸತಕ್ಕವು. ಉದಾಹರಣೆಗೆ ನಮ್ಮ ಪ್ರಾಚೀನ ಪುಸ್ತಕಗಳು ಗರ್ಭಾ-

ಧಾನ ಕಾಲದಲ್ಲಿ ಗಂಡಸು ಎಡ ಅಥವಾ ಬಲ ಮಗ್ಗಲಾಗಿ ಮಲಗುವುದರಿಂದ ಹೆಣ್ಣು ಅಥವಾ ಗಂಡು ಪಡೆಯಬಹುದೆನ್ನುತ್ತವೆ. ಕೆಲವು ಗರ್ಭ ಧಾರಣೆಯನಂತರ ವಿಶಿಷ್ಟ ಆಹಾರ ಸೇವನೆ ಮಾಡಿದರೆ ಗಂಡನ್ನೇ ಹಡೆಯಲು ಸಾಧ್ಯವೆಂದೂ ಹೇಳುತ್ತವೆ. ಎಲ್ಲಕ್ಕೂ ಸರಳ ಉಪಾಯ ಝುಕೋಸ್ಲೊವಾಕಿಯದ ಅಜ್ಜಮ್ಮನದು. ವಧು ವನ್ನು ಗಂಡು ಹುಡುಗನ ಟೊಪ್ಪಿಗೆಯಿಂದ ಹೊಡೆ ದರೆ ಗಂಡು ಕೂಸು ಹುಟ್ಟುವುದೆಂದು ಅವಳು ಗ್ಯಾರಂಟಿ ಕೊಡುತ್ತಾಳೆ!

ದುರ್ದೈವದಿಂದ ಇವೆಲ್ಲ ಉಪಾಯಗಳು ಸರಾಸರಿ ಹತ್ತರಲ್ಲಿ ಐದು ಸಲ ಮಾತ್ರ ಯಶಸ್ವಿ ಯಾಗುತ್ತವೆ. ಕಾರಣವಿಷ್ಟೇ. ಆಧುನಿಕ ವಿಜ್ಞಾ ನವು ಗರ್ಭಧಾರಣೆಯಾದ ಮೇಲೆ ಶಿಶುವಿನ ಲಿಂಗವನ್ನು ಬದಲಾಯಿಸುವುದು ಸಾಧ್ಯವಿಲ್ಲೆಂದು ಹೇಳುತ್ತದೆ. ಗರ್ಭಾಧಾನ ಕಾಲದಲ್ಲಿ ವೀರ್ಯದಲ್ಲಿ ರುವ X ಬೀಜ ಓಟದಲ್ಲಿ ಗೆದ್ದು ಸ್ತ್ರೀಯ ಅಂಡ ವನ್ನು ಫಲಿತಗೊಳಿಸುವುದೋ Y ಬೀಜ ಆ ಕಾರ್ಯವನ್ನು ಸಾಧಿಸುವುದೋ ಎಂದು ಮುಂದಾಗಿ ಹೇಳುವ ಉಪಾಯವೂ ಇಲ್ಲದ್ದರಿಂದ ಇಷ್ಟ ಪ್ರಕಾರ ಗಂಡು ಅಥವಾ ಹೆಣ್ಣು ಹಡೆಯುವಂತೆ ಮಾಡಲು ತನ್ನಿಂದಾಗದೆಂದು ವಿಜ್ಞಾನ ಕೈಚೆ- ಲ್ಲಿತ್ತು.

ಇಂದು ಸಂಶೋಧಕರು ಈ ಅಡಚಣಿಯನ್ನೂ ಗೆದ್ದಿರುವಂತೆ ಕಾಣುತ್ತದೆ. ಜಗತ್ತಿನ ಅನೇಕ ಪ್ರಯೋಗ ಶಾಲೆಗಳಿಂದ ಬಂದ ವರದಿಗಳ ಪ್ರಕಾರ ಪುರುಷವೀರ್ಯದಲ್ಲಿ ಸಾಧಾರಣವಾಗಿ ಸರಿಸಮ ಬೆರೆತಿರುವ X ಮತ್ತು Y ಬೀಜಗಳನ್ನು ಬೇರ್ಪಡಿಸಲು ಸಾಧ್ಯವಾಗಿದೆಯೆಂದು ಈ ವರದಿ ಗಳು ಹೇಳುತ್ತವೆ. ಗಂಡು ಮೊಲದ ವೀರ್ಯದಲ್ಲಿ ವಿಶಿಷ್ಟ ರೀತಿಯಿಂದ ವಿದ್ಯುತ್ ಸಂಚಾರ ಮಾಡಿ ದಾಗ X ಮತ್ತು Y ಬೀಜಗಳು ಬಹುಮಟ್ಟಿಗೆ ಬೇರ್ಪಟ್ಟವು. ಹೀಗೆ ಬೇರ್ಪಟ್ಟ ಬೀಜಗಳನ್ನು ಕೃತಕ ಗರ್ಭಧಾರಣ ಪ್ರಕ್ರಿಯೆಯಿಂದ ಹೆಣ್ಣು ಮೊಲಗಳ ಗರ್ಭದಲ್ಲಿ ನಡಲಾಗಿ ಬಹುಮಟ್ಟಿಗೆ ಅಪೇಕ್ಷಿಸಿದ ಲಿಂಗದ ಮರಿಗಳೇ ಆಗಿವೆ.

ಈ ತಂತ್ರವು ಮಾನವ ವೀರ್ಯದ ಮೇಲೆ ಸಫಲವಾಗಲಾರದೆಂದು ನಂಬಲು ಕಾರಣಗ ಳಿಲ್ಲ. ಒಂದೇ ಒಂದು ವಿಶೇಷವೆಂದರೆ, ನೈಸ ರ್ಗಿಕ ಗರ್ಭಾಧಾನದಿಂದ ಬಯಸಿದಂತೆ ಗಂಡು ಹೆಣ್ಣು ಪಡೆಯಲು ಬಾರದು. ಪುರುಷನ ವೀರ್ಯವನ್ನು ತೆಗೆದುಕೊಂಡು, ವಿದ್ಯುತ್ಸಂಚಾರ ದಿಂದ X ಮತ್ತು Y ಬೀಜಗಳನ್ನು ಬೇರ್ಪಡಿಸಿ, ಯಾವುದು ಬೇಕೋ ಆ ಬೀಜಗಳುಳ್ಳ ವೀರ್ಯಾಂಶವನ್ನೇ ಹೆಂಗಸಿಗೆ ಕೃತಕ ಗರ್ಭಾಧಾನ ವಿಧಾನದಿಂದ ಒದಗಿಸಬೇಕು.

ಹೆಂಗಸರು ಇದಕ್ಕೆ ಒಪ್ಪಬಹುದೆ? ವಿದೇಶ ಗಳಲ್ಲಿ ಎಷ್ಟೋ ಮಕ್ಕಳಾಗದ ಮಹಿಳೆಯರು ಕೃತಕ ಗರ್ಭಧಾರಣ ವಿಧಾನದಿಂದ ಮಕ್ಕಳನ್ನು ಪಡೆಯುತ್ತಿದ್ದಾರೆ— ಪರಪುರುಷ ವೀರ್ಯದಿಂದ ಕೂಡ. ಭಾರತದಂಥ ಪಾತಿವ್ರತ್ಯಪ್ರಿಯ ದೇಶ ಗಳಲ್ಲಿ ಕೂಡ ಅಪೇಕ್ಷಿತ ಲಿಂಗದ ಸಂತಾನ ಪಡೆ ಯಲು ಹೆಂಗಸರು ಹಿಂಜರಿಯಬೇಕಾದ ಪ್ರಮೇ- ಯವಿಲ್ಲ. ಏಕೆಂದರೆ ಇದನ್ನು ಸ್ವಂತ ಗಂಡನ ವೀರ್ಯದಿಂದಲೇ ಸಾಧಿಸಬಹುದೆಂಬುದನ್ನು ಗಮ ನಿಸಬೇಕು. ಗಂಡ-ಹೆಂಡಿರಿಬ್ಬರೂ ಡಾಕ್ಟರರಾ- ಗಿರುವವರು ಈ ಪ್ರಯೋಗ ಮಾಡುವುದಾದರೆ ಯಾವ ದಂಪತಿಗಳೂ ಇದಕ್ಕೆ ಒಪ್ಪಬಹುದು. ಅಪೇಕ್ಷಿತ ಸಂತಾನ ಪ್ರಾಪ್ತಿಯ ಆತುರ ಹೆಚ್ಚಾ- ಗಿರುವರಂತೂ ಒಪ್ಪಿಯೇ ತೀರುವರು.

ಈ ವಿಧಾನ ಪ್ರಚಾರಕ್ಕೆ ಬಂದಾಗ ಆಗಬಹು ದಾದ ಪರಿಣಾಮಗಳನ್ನು ಊಹಿಸಿದರೆ ಮಾತ್ರ ಹೆದರಿಕೆ ಬರುತ್ತದೆ. ಭಾರತದಲ್ಲಿ ಎಲ್ಲ ತಾಯಂ- ದಿರಿಗೂ ಪುತ್ರಸಂತಾನದ ಹೆಬ್ಬಯಕೆ. (ಪುರುಷ ದ್ವೇಷಿಗಳಿಗೆ ಕೂಡ!) ಅಪೇಕ್ಷಿಸಿದಂತೆ ಗಂಡು ಹಡೆಯಬಹುದಾದರೆ ಖಂಡಿತವಾಗಿ ನಮ್ಮ ದೇಶ ದಲ್ಲಂತೂ ಗಂಡುಮಕ್ಕಳ ಸ್ಫೋಟಕ ಹೆಚ್ಚಳ ವಾದೀತು. ಆಗಲೇ ಭಾರತದಲ್ಲಿ ೧೦೦೦ ಗಂಡಸ

ರಿಗೆ ೯೪೦ ಮಾತ್ರ ಹೆಂಗಸರಿದ್ದಾರೆಂದು ಜನಗಣತಿಯ ವರದಿ ಹೇಳುತ್ತದೆ. ಗಂಡುಮಕ್ಕಳ ಸ್ಫೋಟಕ ಹೆಚ್ಚಳವು ತೀವ್ರವಾದ ಹೆಣ್ಣಿನ 'ಬರಗಾಲ'ವನ್ನುಂಟುಮಾಡಬಹುದು. ಕನ್ಯಾಪಿತರು ಆ ದಿನವನ್ನು ಎರಡೂ ಕೈಗಳಿಂದ ಸ್ವಾಗತಿಸಬಹುದು. ನಮ್ಮ ಇಡೀ ನೈತಿಕ ದೃಷ್ಟಿಕೋಣವೇ ಬದಲಾಗಬಹುದು. ಆದರೆ ಮಾನವ ಕುಲಕ್ಷಯಕ್ಕೆ ಅದು ನಾಂದಿಯೂ ಆಗಬಹುದು. *

ತಳಕಟ್ಟು ಮತ್ತು ಮಾಳಿಗೆ

ದಿಲ್ಲಿಯ ಖಾರಿಬಾವಲಿ ಎಂಬ ಭಾಗದಲ್ಲಿ ಇರುತ್ತಿದ್ದ ಪೋಸ್ಟ್‌ಮಾಸ್ತರ ಲಾಲಾ ಹುಕೂಮತರಾಯರು ತಿರುಗಾಡಲಿಕ್ಕೆ ಹೊರಟಿದ್ದರು. ಎದುರಿಗೆ ಬಾಲ್ಯದ ಸ್ನೇಹಿತರಾದ ಪಂಡಿತ ವೀರಭಾನರು ಅವರಿಗೆ ಕಾಣಿಸಿಕೊಂಡರು. ದೀರ್ಘಕಾಲದ ನಂತರದ ಭೆಟ್ಟಿ. ಇಬ್ಬರೂ ಗಾಢವಾಗಿ ಒಬ್ಬರನ್ನೊಬ್ಬರು ಆಲಿಂಗಿಸಿದರು. ಬಿಟ್ಟು ಬೇರೆಯಾಗಿ ಉಸಿರು ಆಡಲು ಅನುವಾಗುವಂತೆ ಎದೆ ಸ್ವಲ್ಪ ತೆರವಾಗುತ್ತಲೆ ಲಾಲಾಜಿ ಕೇಳಿದರು: "ಅಲ್ಲ ಪಂಡಿತಜಿ, ಈಗ ಎಲ್ಲಿ ಇರುವುದು? ದಿಲ್ಲಿಗೆ ಬಂದ ಕಾರಣ?"

"ನಾವು ಇಲ್ಲಿಯೆ ಇರುತ್ತೇವೆ!"

"ಇಲ್ಲಿಯೆ? ಎಲ್ಲಿ?"

"ಖಾರಿಬಾವಲಿಯಲ್ಲಿ."

"ಖಾರಿಬಾವಲಿಯಲ್ಲಿಯೆ? ಎಲ್ಲಿ?

"ಅನಾರ ಗಲ್ಲಿಯಲ್ಲಿ.?"

"ಯಾರ ಮನೆಯಲ್ಲಿ?"

"ಶೇಠ ಬನವಾರಿಲಾಲರ ಮನೆಯಲ್ಲಿ"

"ಅಯ್ಯೋ, ಆ ಮನೆಯಲ್ಲಿಯೆ?"

"ಯಾಕೆ, ಅದರಲ್ಲೇನಿದೆ?"

"ನಾವು ಅಲ್ಲಿಯೇ ಇರುತ್ತಿದ್ದೆವು."

"ಮುಂದೆ ಏನಾಯಿತು?"

"ಅದರ ನೆಲಗಟ್ಟು ಸಡಿಲಾಗಿದೆ."

ಆಗ ಪಂಡಿತ ವೀರಭಾನರು ನಿಶ್ಚಿಂತೆಯ ಉಸಿರೆಳೆದು ಹೇಳಿದರು: "ಹೀಗೊ? ಸರಿ. ಹಾಗಾದರೆ ಭಯವಿಲ್ಲ ಬಿಡಿ. ನಾವು ಅಟ್ಟದ ಮೇಲಿರುತ್ತೇವೆ."

—ಉಪೇಂದ್ರನಾಥ 'ಅಶ್ಕ'

*

ಮೊಟ್ಟಮೊದಲು ಯಾವ ಸ್ತ್ರೀಯ ಹಣೆಗೆ ಅವಳ ಪ್ರಿಯಕರನು ಮುತ್ತಿಟ್ಟನೊ ಆ ಸ್ತ್ರೀ ಎತ್ತರ ಹಿಂಬಡದ ಬೂಟುಗಳನ್ನು ಕಂಡುಹಿಡಿದಳು.

—ಕ್ರಿಸ್ಟೊಫರ್ ಮೊರ್ಲೆ



ಲೈಫ್‌ಬಾಯ್ ಎಲ್ಲಿದೆಯೋ ಅಲ್ಲಿದೆ ಆರೋಗ್ಯ!

ಲೈಫ್‌ಬಾಯ್‌ಯಿಂದ ಮಹದಾನಂದ! ಲೈಫ್‌ಬಾಯ್‌ಯಿಂದ ಮಾಡಿದ ಸ್ನಾನದಿಂದ ನಿಮ್ಮಲ್ಲಿ ಮೂಡುವುದು ಆರೋಗ್ಯದ ನವೋಲ್ಲಾಸ! ಲೈಫ್‌ಬಾಯ್ ಕೊಳೆಯಲ್ಲಿರುವ ಕ್ರಿಮಿಗಳನ್ನು ತೊಳೆದು ತೆಗೆಯುತ್ತದೆ—ಮನೆಯುವರೆಲ್ಲರನ್ನು ಆರೋಗ್ಯದಲ್ಲಿಡುತ್ತದೆ!

L. 23-X 29 KN

ಹಿಂದುಸ್ಥಾನ್ ಲೀವರ್ ಅವರ ತಯಾರಿಕೆ

J 5-11

**ಆಫ್ರಿಕನ್
ಅಂಧ ಶ್ರದ್ಧೆಯ
ದುರಂತ ಘಟನೆ**

ಕನ್ನಡಿಯೊಳಗಿನ ಭೂತ



ಮೋಹನ ಕಾಲೇವರ

ಮಧ್ಯ ಆಫ್ರಿಕದಲ್ಲಿ 'ಸ್ವಿಫ್ಟ್ ರಿವರ್' ಎಂಬ ಹೆಸರಿನ ಪ್ರದೇಶವೊಂದಿದೆ. ನದಿ ಅಲ್ಲಿ ಅತಿ ವೇಗದಿಂದ ಹರಿಯುವ ಕಾರಣದಿಂದ ಅದಕ್ಕೆ ಈ ಹೆಸರು ಪ್ರಾಪ್ತವಾಗಿದೆ. ಈ ಪ್ರದೇಶ ನನ್ನ ಇಲಾಖೆಯಲ್ಲಿ ತೀರ ಒಳಗಿದೆ. ನನ್ನನ್ನು ಆ ಜನ ಈಗ ಇಪ್ಪತ್ತೇಳು ವರ್ಷಗಳ ಹಿಂದೆಯೆ ಇಲ್ಲಿ ಬಿಟ್ಟು ಹೋಗಿದ್ದಾರೆ. ನಾನು ಅವಿವಾಹಿತ. ಹಾಗಿದ್ದುದೇ ಒಳಿತಾಯಿತು. ಆ ನೀರಸ ಸ್ಥಳದಲ್ಲಿ ವಾಸವಾಗಿರುವುದು ಯಾವ ಸ್ತ್ರೀಗೂ ಸಾಧ್ಯವಾದ ಮಾತಲ್ಲ.

'ಸ್ವಿಫ್ಟ್ ರಿವರ್' ಕಾಂಗೊದ ಒಂದು ಸಹಾಯಕ ನದಿ. ಟ್ರಿಯಾಸಿಕ್ ಪರ್ವತದಿಂದ ಇದು ಕೆಳಗೆ ಕೊಳ್ಳದಲ್ಲಿ ಅಬ್ಬರಿಸುತ್ತ ಸಾಗಿದೆ. ಇಲ್ಲಿ ಯಾವ ಬೆಳೆಯಾಗಲಿ, ಕಂದ ಮೂಲಗಳಾಗಲಿ ಬೆಳೆಯುವುದಿಲ್ಲ. ಅಸಂಖ್ಯ ನದಿ ಹಳ್ಳಗಳು ವೇಗವಾಗಿ ಹರಿಯುತ್ತ ಮಣ್ಣನ್ನು ಕೊಚ್ಚಿ

" ಸಾರಿಕಾ " ದಿಂದ

ಕೊಂಡು ಹೋಗುವುದರಿಂದ ಭೂಮಿ ಬಂಜ ರಾಗಿದೆ.

ಈ ಪ್ರದೇಶದಲ್ಲಿ ವಾಸಿಸುತ್ತಿದ್ದ ಜನ ತಾವು "ಕಲಾರು ಜಾತಿ" ಯವರು ಎಂದು ಹೇಳಿ ಕೊಳ್ಳುತ್ತಿದ್ದರು. ಇವರಿಗೆ ಸತ್ಯ ಮಿಥ್ಯಗಳ ಅರಿವಿಲ್ಲದಿರುವುದರಿಂದ ಇವರ ಇತಿಹಾಸವನ್ನು ಹೇಳುವುದು ಕಠಿಣ. ಇಷ್ಟು ಅಪ್ರಿಯ ಜಾತಿ ಯೊಡನೆ ನನಗೆ ಸಂಬಂಧ ಎಂದೂ ಬರಲಿಲ್ಲ ವೆಂದು ನನ್ನ ಆಫ್ರಿಕದಲ್ಲಿನ ೪೦ ವರ್ಷಗಳ ಅನು ಭವದಿಂದ ಹೇಳುವೆ. ನದಿಯ ಆಚೆ ದಂಡೆಯಲ್ಲಿ ಕಾಲಿರಿಸಿದ ಒಬ್ಬನೂ ಆ ಜನರಲ್ಲಿರಲಿಲ್ಲ. ನದಿ ಯನ್ನು ದಾಟುವುದೆಂದರೆ ಮೃತ್ಯುವನ್ನಾಲಿಂಗಿಸಿ ದಂತೆ ಎಂದು ನಂಬುತ್ತಿದ್ದರವರು.

ಶ್ರೇಷ್ಠ ಮಾನವಶಾಸ್ತ್ರಿ ಡಾ. ಹರ್ಶೋಲ್ಡರು ಈ ಜಾತಿಯ ಅಧ್ಯಯನ ಮಾಡಲು ಬಂದಿದ್ದರು. ಕಲಾರು ಜನರು ತಮ್ಮ ಜೊತೆಗಾರರನ್ನೇ ಬಬೂನ್‌ಗಳಂತೆ ಜಿಗಿದು ಭರ್ಜಿಯಿಂದ ಇರಿದು ಕೊಲ್ಲುವುದನ್ನು ಕಂಡಿದ್ದರು. ಈ ಜನರಲ್ಲಿ ಹಲ ವಾರು ರೋಗಗಳು ಮನೆ ಮಾಡಿದವು. ಎಷ್ಟೋ ಜನ ಕುಂಟರೂ ಕುರುಡರೂ ಆಗಿದ್ದರು. ಆದರೆ ಇವರಲ್ಲಿರುವ ಭೀಕರ ರೋಗವೆಂದರೆ ನರಹತ್ಯಾ ರೋಗವೆಂದೇ ಡಾ. ಹರ್ಶೋಲ್ಡರ ಅಂಬೋಣ ವಿದೆ. ಕಲಾರು ಜನ ಬೇಟೆಯಾಡಿ ಜೀವಿಸು ತ್ತಿದ್ದರು. ಅವರು ಬೇಟೆಯಾಡುತ್ತಿದ್ದ ಅಪೂರ್ವ ರೀತಿಯು ೧೯೫೩ ರಲ್ಲಿ ಆಫ್ರಿಕಕ್ಕೆ ಬಂದ ಬೆನ-ಡಾಕರ ಬೇಟೆ ತಂಡದ ಲಕ್ಷ್ಯವನ್ನು ಈ ಪ್ರದೇಶ ದತ್ತ ಸೆಳೆದಿತ್ತು.

'ಸ್ವಿಫ್ಟ್ ರಿವರ್' ನೀರು ಯಾವಾಗಲೂ ರಾಡಿ ಯಾಗಿಯೆ ಇರುತ್ತದೆ. ಅನ್ನದ ಅಗತ್ಯವಿರುವ ಕಲಾರು ಜನ ಮೀನು ಹಿಡಿಯಲು ಒಂದು ಅಪೂರ್ವ ಯುಕ್ತಿಯನ್ನು ಹುಡುಕಿದ್ದರು. ಅದ ರಿಂದ ಅವರ ಜಾತಿಯಲ್ಲಿ ಅಧಿಕ ಸಂಖ್ಯೆಯಲ್ಲಿ ರುವ ಕುರುಡರು ಕೂಡ ಮೀನು ಹಿಡಿಯಬಲ್ಲವ-ರಾಗಿದ್ದರು. ಇವರು ಹಕ್ಕಿಗಳನ್ನು ಹಿಡಿಯುವ ತಂತ್ರ ಇದಕ್ಕೂ ಅದ್ಭುತವಾಗಿತ್ತು. ಆಕಾಶ ದಲ್ಲಿ ಬಹು ವೇಗದಿಂದ ಹಾರುವ 'ಸ್ವಿಫ್ಟ್' ಪಕ್ಷಿ ಗಳು ನೆಲದ ಮೇಲೆ ಇಳಿಯುವುದಿಲ್ಲವಾದ್ದರಿಂದ ಬಲೆಗಳಲ್ಲಿ ಅವುಗಳನ್ನು ಹಿಡಿಯಲು ಬರುತ್ತಿರ ಲಿಲ್ಲ. ಕಲಾರು ಜನರಿಗೆ ಬಿಲ್ಲುಬಾಣಗಳ ಪರಿ ಚಯವೂ ಇರಲಿಲ್ಲ. ಹಸಿವಿನಿಂದ ಕಂಗಾಲಾದ ಈ ಜನ ಕೊನೆಗೆ ಬೀಳಲಿನಿಂದ ಒಂದು ಬಗೆಯ ಗಾಳಿ ಪಟ ತಯಾರಿಸಿದರು. ಆಕಾಶದಲ್ಲಿ ಅದನ್ನು ಹಕ್ಕಿಗಳ ನಡುವೆ ಹಾರಿಸಿ ಅದರ ಸಹಾಯದಿಂದ ಅವರು ಸಾವಿರಾರು ಹಕ್ಕಿಗಳನ್ನು ಬೇಟೆಯಾಡಲು ಕಲಿತರು.

ಬೇಟೆಗಾರ ತಂಡದ ನಾಯಕರಾದ ಪ್ರೊಫೆ ಸರ್ ಬೆನಡಾಕರ ಪತ್ನಿ ಕಲಾರು ಜನರ ದುಃಖ ದುಮ್ಮಾನಗಳನ್ನು ಕಂಡು ಮರುಗಿ ಅವರನ್ನು ಕ್ರಿಶ್ಚನ್ನರನ್ನಾಗಿ ಮಾಡಲು ನಿರ್ಧರಿಸಿದಳು. ತನ್ನ ಪ್ರಯೋಗಕ್ಕಾಗಿ ಅವಳು ಕೋಬೊ ಮತ್ತು ಗೋಲು ಎಂಬಿಬ್ಬರು ಯುವಕರನ್ನಾರಿ ಸಿದಳು. ಬೆನಡಾಕ್ ತಂಡದ ಸಾಮಾನನ್ನು ಹೊತ್ತೊಯ್ಯಲು ನಾನು ಇವರನ್ನು ಒದಗಿಸಿದ್ದೆ.

ಭೀಕರ ದಾರಿದ್ರ್ಯದ ಮಧ್ಯದಲ್ಲಿ ಒಂದು ಜನಾಂಗದ ಅಳಿದುಳಿದ ಈ ಜನರು ತಮ್ಮ ಪರಿ ಸರ ಮತ್ತು ಪರಸ್ಪರರೊಡನೆ ಬಲು ಸೂಕ್ಷ್ಮ ಎಳೆಯಿಂದ ಬಂಧಿಸಲ್ಪಟ್ಟವರಾಗಿದ್ದರು. ಎಂಥ ಕ್ಷುಲ್ಲಕವಾದದ್ದೇ ಇರಲಿ, ಹೊಸ ಪರಿಸ್ಥಿತಿ ಎಂ-ದರೆ ಅವರಿಗೆ ಗಂಡಾಂತರಕಾರಿಯಾಗಿರುತ್ತಿತ್ತು. ಬೆನಡಾಕ್ ತಂಡ ಹೊರಟು ಹೋದ ನಂತರ ಒಂದರ ನಂತರ ಒಂದರಂತೆ ವೇಗದಿಂದ ಜರು ಗಿದ ಭಯಾನಕ ಘಟನೆಗಳನ್ನು ನಾನು ಅವರ ಮಾಂತ್ರಿಕ ಪುರೋಹಿತ ಟಗುರುವಿನ ಬಾಯಿಂದ ಕೇಳಿದೆ. ಈ ಕೋಲಾಹಲದ ಕಾಲದಲ್ಲಿ ನಾನೆಲ್ಲೋ ಬೇರೆಡೆಗೆ ಹೋಗಿದ್ದೆ. ಈ ಮೂರು ತಿಂಗಳುಗಳು ಈ ಜನರಿಗೆ ದುರ್ಭಾಗ್ಯದ ತಿಂಗ ಳುಗಳಾಗಿಬಿಟ್ಟವು. ನನಗೇನಾದರೂ ಇದರ ಕಲ್ಪನೆಯಿದ್ದಿದ್ದರೆ ನಾನು ಬೆನಡಾಕ್ ತಂಡಕ್ಕೆ

ನನ್ನ ಇಲಾಖೆಯಲ್ಲಿ ಕಾಲಿಡಗೊಡುತ್ತಿರಲಿಲ್ಲ.

ಕ್ರಿಶ್ಚನ್ ಧರ್ಮಕ್ಕೆ ಸೇರಿದ ಕೋಬೊನಿಂದ ಈ ಘಟನೆ ಆರಂಭವಾಗುತ್ತದೆ. ಬೆನಡಾಕ್ ತಂಡ ಹೊರಟು ಹೋದ ಮೇಲೆ ಖಾಲಿಯಾದ ಡೇರೆಗಳನ್ನು ಸ್ವಚ್ಛಮಾಡಲು ಆತ ಹೋಗಿದ್ದ. ಅಲ್ಲಿ ಆತನಿಗೆ ಬಂಗಾರದ ಲೇಪ ಹಚ್ಚಿದ್ದ ಒಂದು ಪೌಡರಿನ ಡಬ್ಬಿ ಸಿಕ್ಕಿತು. ಊರ ಗೌಡನ ಅಂಜಿಕೆಯಿಂದ ಆತ ಅದನ್ನು ಅಡಗಿಸಿಟ್ಟುಕೊಂಡ. ನಿತ್ಯವೂ ತಾನು ಒಬ್ಬನೆ ಇದ್ದಾಗ ಆ ಹೊಳೆಯುವ ಡಬ್ಬಿಯನ್ನು ನೋಡುತ್ತಿದ್ದ. ಒಂದು ದಿನ ಅಕಸ್ಮಾತ್ತಾಗಿ ಅವನ ಬೆರಳು ಆ ಡಬ್ಬಿಯ ಬಟನ್ನಿಗೆ ಒತ್ತಿ ಮುಚ್ಚಳ ತೆರೆಯಿತು. ಡಬ್ಬಿಯ ಒಳಗಡೆ ಕನ್ನಡಿಯಿತ್ತು. ಕೋಬೊನ ಕೈಯಿಂದ ಡಬ್ಬಿ ಜಾರಿ ಬಿತ್ತು. ಅಯ್ಯೋ! ಆತ ಬೆಚ್ಚಿದ. ಆದರೆ ಮತ್ತೆ ಧೈರ್ಯದಿಂದ ಡಬ್ಬಿಯನ್ನೆತ್ತಿಕೊಂಡು ಒಳಗೆ ನೋಡಿದ. ಅಲ್ಲಿ ಕಂಡ ದೃಶ್ಯದಿಂದ ತತ್ತರಿಸಿಹೋದ.

ಯಾವುದೇ ವಸ್ತುವಿಗೆ ಹೊಳಪು ಕೊಡುವಂಥ ಕಲೆ ಈ ಜನರಿಗೆ ಗೊತ್ತಿರಲಿಲ್ಲ. 'ಸ್ವಿಫ್ಟ್ ರಿವರ್'ನ ನೀರು ಕೂಡ ಯಾವಾಗಲೂ ಕೊಳಕಾಗಿರುತ್ತದೆಂದು ಈ ಮೊದಲೇ ನಾನು ಹೇಳಿದ್ದೇನೆ. ತನ್ನ ಜನರಂತೆ ಕೋಬೊ ಕೂಡ ಇದುವರೆಗೆ ತನ್ನ ಮುಖವನ್ನು ಯಾವುದೇ ಹೊಳೆಯುವ ವಸ್ತುವಿನಲ್ಲಿ ನೋಡಿರಲಿಲ್ಲ. ಕನ್ನಡಿಯಲ್ಲಿ ತನ್ನ ಮುಖವನ್ನು ಆತನಿಗೆ ಗುರುತಿಸುವುದಾಗಲಿಲ್ಲ. ಕನ್ನಡಿಯಲ್ಲಿ ಕಾಣಿಸುವ ಮುಖ ತನ್ನ ಬಾಲ್ಯದಲ್ಲೇ ಸತ್ತಿದ್ದ ತನ್ನ ತಂದೆಯದು, ಅದು ತನ್ನನ್ನು ದಿಟ್ಟಿಸಿ ನೋಡುತ್ತಿದೆ ಎಂದೇ ಆತ ತಿಳಿದ. ಈ ಕನ್ನಡಿ ಮಂತ್ರದ ಕನ್ನಡಿ ಎಂದು ಆತನು ಭಾವಿಸಿದ.

ಕಲಾರು ಜನ ಪಿತೃಪೂಜಕರು. ಅವರು ತಮ್ಮ ಕುಟುಂಬದ ಮೃತಜನರಿಗೆ ತುಂಬ ಅಂಜುತ್ತಿದ್ದರು. ವಿದೇಶೀಯರ "ಮಂತ್ರಮಾಟ"ದಲ್ಲಿ ಕೈ ಹಾಕಿದ್ದಕ್ಕಾಗಿ ತನ್ನನ್ನು ಶಿಕ್ಷಿಸಲು ತನ್ನ ತಂದೆ ಮರಳಿ ಬಂದಿದ್ದಾನೆಂದೇ ಕೋಬೊ ತಿಳಿದುಕೊಂಡ. ಆತ ಓಡಿ ಹೋಗಿ ತನ್ನ ಕ್ರಿಶ್ಚನ್ ಜೊತೆಗಾರ ಗೋಲೂಗೆ ಎಲ್ಲವನ್ನೂ ಹೇಳಿದ. ಗೋಲು ಡಬ್ಬಿಯಲ್ಲಿ ಇಣಕಿದಾಗ ಆತನಿಗೆ ಅವನ ಸತ್ತ ತಂದೆ ತನ್ನನ್ನು ನೋಡುತ್ತಿರುವುದು ಕಾಣಿಸಿತು.

ಅವರು ಆ ಡಬ್ಬಿಯನ್ನು ಒಂದು ಗಿಡದ ಪೊದರಿನಲ್ಲಿಟ್ಟರು. ಆದಷ್ಟು ಬೇಗನೆ ಕಿಶ್ಚನ್ ಧರ್ಮವನ್ನು ಮರೆಯಲು ಪ್ರಯತ್ನಿಸುತ್ತ ಮತ್ತೆ ತಮ್ಮ ಕಾಡು ಜೀವನದಲ್ಲಿ ಸಮಾವಿಷ್ಟರಾದರು.

ಪ್ರತಿರಾತ್ರಿ ಅವರು ಸರದಿ ಪ್ರಕಾರ ಆ ಡಬ್ಬಿಯನ್ನು ನೋಡಲು ಹೋಗುತ್ತಿದ್ದರು. ದಿನವೂ ರಾತ್ರಿ ತನ್ನ ಗಂಡ ಹೊರಗೆ ಹೋಗುವುದನ್ನು ಕಂಡು ಸಂಶಯಗೊಂಡ ಕೋಬೊನ ಹೆಂಡತಿ ಅಕಾಕೊ ಒಂದು ರಾತ್ರಿ ಅವನಿಗೆ ತಿಳಿಯದಂತೆ ಅವನನ್ನು ಹಿಂಬಾಲಿಸಿದಳು. ಗಿಡದ ಪೊದರಿನಿಂದ ಡಬ್ಬಿಯನ್ನು ಹೊರ ತೆಗೆದು ಕೋಬೊ ಅದನ್ನು ಪೂಜಿಸುವುದನ್ನೂ ಅವಳು ಕಂಡಳು. ಅವನು ಹೋದಮೇಲೆ ಅಕಾಕೊ ಆ ಡಬ್ಬಿಯನ್ನೆತ್ತಿಕೊಂಡು ಕೈಯಲ್ಲಿ ಆಡಿಸುತ್ತಿದ್ದಾಗ ತಟ್ಟನೆ ಅದರ ಬಾಯಿ ತೆರೆಯಿತು. ಪೌಡರನ್ನು ಮೂಸಲೆಂದು ಅವಳು ಡಬ್ಬಿಯನ್ನು ಮೂಗಿನ ಹತ್ತಿರ ಹಿಡಿದಾಗ ಅವಳಿಗೆ ತನ್ನನ್ನು ನೋಡುತ್ತಿದ್ದ ಎರಡು ಕೆಂಪು ಕಣ್ಣುಗಳು ಕಾಣಿಸಿದವು. ಅವಳು ಸರ್ರನೆ ಕೈ ಮುಂದೆ ಚಾಚಿದಳು. ಕನ್ನಡಿಯಲ್ಲಿ ಅವಳಿಗೆ ತನ್ನ ಮೃತ ಅಕ್ಕನನ್ನು ಕಂಡಂತಾಯಿತು. ಅವಳ ಅಕ್ಕ ಕುರೂಪಿಯೂ ವಿಕಾರ ಕಣ್ಣುಳ್ಳವಳೂ ಆಗಿದ್ದಳು. ತನ್ನ ಗಂಡ ಅವಳೊಡನೆ ಬಹು ದಿನಗಳಿಂದ ಅನೈತಿಕ ಸಂಬಂಧವಿಟ್ಟುಕೊಂಡಿರಬೇಕೆಂದೂ ಯಾವ ಮಂತ್ರ-ಮಾಟಗಳಿಗೂ ಹೆದರದೆ ಸತ್ತಮೇಲೂ ಅವಳನ್ನು ಏಕಾಂತದಲ್ಲಿ ಸಂಧಿಸುತ್ತಿರಬೇಕೆಂದೂ ಅಕಾಕೊ ತಿಳಿದಳು. ಪ್ರೇತಾತ್ಮಗಳೊಡನೆ ಈ ರೀತಿ ಸಂಬಂಧವಿಟ್ಟುಕೊಳ್ಳುವುದು ಅಕ್ಷಮ್ಯ ಅಪರಾಧ

ವೆಂದು ಕಲಾರು ಜನ ತಿಳಿಯುತ್ತಾರೆ.

ಅಕಾಕೊ ನೆಟ್ಟಗೆ ಗೋಲೂನ ಹೆಂಡತಿ ತುಂಬಾಳ ಬಳಿಗೆ ಹೋದಳು. ಅವಳಿಗೆ ಮನವರಿಕೆ ಮಾಡಿಕೊಡಲೆಂದು ಅವಳ ಕೈಗೆ ಅಕಾಕೊ ಕನ್ನಡಿ ಕೊಟ್ಟಳು. ತುಂಬಾ ನೋಡಿದಾಗ ಕನ್ನಡಿಯಲ್ಲಿ ಕೆಲ ವರ್ಷಗಳ ಹಿಂದೆ ಸತ್ತಿದ್ದ ಅವಳ ಅಕ್ಕ ಕಾಣಿಸಿದಳು. ತನ್ನ ಮುದಿ ಅಕ್ಕನೊಡನೆ ಕೋಬೊ ಇಂಥ ದುರ್ವ್ಯವಹಾರ ಮಾಡುತ್ತಾನಲ್ಲ ಎಂದು ಅವಳಿಗೆ ಸಂತಾಪವಾಯಿತು. ಅಷ್ಟರಲ್ಲಿ ಗುಡಿಸಲಿನ ಒಳಗೆ ಬಂದ ಗೋಲು ಸಿಟ್ಟಿನಿಂದ ಕನ್ನಡಿಯನ್ನು ತುಂಬಾಳಿಂದ ಕಸಿದುಕೊಂಡ.

“ಈ ಡಬ್ಬಿ ಮಾಟದ ಡಬ್ಬಿ. ಇದರಲ್ಲಿ ನನ್ನ ಅಪ್ಪನಿದ್ದಾನೆ. ನಾನು ಪ್ರತಿ ರಾತ್ರಿ ಅವನನ್ನು ಭೆಟ್ಟಿಯಾಗುತ್ತೇನೆ” ಎಂದ ಗೋಲು. ಗೋಲು ಸುಳ್ಳು ಹೇಳಿ ತನ್ನ ಅಕ್ಕನ ಮತ್ತು ಮಿತ್ರ ಕೋಬೊನ ಪಾಪವನ್ನು ಮರೆಮಾಡಲು ಯತ್ನಿಸುತ್ತಿದ್ದಾನೆಂದು ತುಂಬಾ ತಿಳಿದಳು.

ಮರುದಿನ ಅವರು ಗೌಡನ ಎದುರು ದೂರು ಕೊಟ್ಟರು. ಮತ್ತೆ ಆ ಡಬ್ಬಿ ಹೇಗೆ ಅಕಾಕೊಳ ಕೈಗೆ ಬಂದಿತ್ತೊ ತಿಳಿಯದು. ಅವರು ಸಾಕ್ಷಿಗೆಂದು ಆ ಡಬ್ಬಿಯನ್ನು ಗೌಡನ ಮುಂದಿಟ್ಟರು. ತಮ್ಮ ಗಂಡಂದಿರು ಮಾಡಿದ ಅನ್ಯಾಯಕ್ಕಾಗಿ ಅವರಿಗೆ ಮರಣದಂಡನೆಯಾಗಬೇಕೆಂದು ಕೇಳಿಕೊಂಡರು.

ಜಾಲುವಾ ಕಲಾರು ಜನರ ಕೊನೆಯ ಗೌಡನಾಗಿದ್ದ. ಕ್ರೌರ್ಯಕ್ಕಾಗಿ ತುಂಬ ಹೆಸರುವಾಸಿಯಾಗಿದ್ದ. ಕಲಾರು ಜನರಲ್ಲಿ ಗೌಡ ಪಟ್ಟ ವಂಶಪರಂಪರಾಗತವಾಗಿ ಬರುತ್ತಿರಲಿಲ್ಲ. ಮಂತ್ರ-ಮಾಟ ಶಕುನಗಳ ಆಧಾರದ ಮೇಲೆ ಗೌಡನ ಆಯ್ಕೆಯಾಗುತ್ತಿತ್ತಾದ್ದರಿಂದ ಗೌಡನಾದವನಿಗೆ ತನ್ನ ಪಟ್ಟವನ್ನು ಕಾಯ್ದುಕೊಳ್ಳುವ ಚಿಂತೆ ಸದಾ ಬಾಧಿಸುತ್ತ ಇರುತ್ತಿತ್ತು.

ಕ್ರಿಶ್ಚನ್ ಧರ್ಮ ಸ್ವೀಕರಿಸಿದ ಕಾರಣದಿಂದಾಗಿ ಕೋಬು ಮತ್ತು ಗೋಲು ಇಬ್ಬರೂ ಜಾಲುವಾನ ದೃಷ್ಟಿಯಲ್ಲಿ ಹೀನರಾಗಿಬಿಟ್ಟಿದ್ದರು. ಸಂಧಿ ದೊರೆಯಲು ಆತ ಅವರಿಬ್ಬರನ್ನೂ ವಿಧಿಪೂರ್ವಕವಾಗಿ ಕೊಲ್ಲಿಸಿದ. ಆ ಮೇಲೆ ಅಕಾಕೊಳ ಕೈಯಿಂದ ಡಬ್ಬಿಯನ್ನು ಕಸಿದುಕೊಂಡ. ಆ ರಭಸಕ್ಕೆ ಅದರ ಮುಚ್ಚಳ ತೆರೆಯಿತು. ಕನ್ನಡಿಯಲ್ಲಿ ಪ್ರತಿಬಿಂಬಿತವಾದ ಸೂರ್ಯ ಪ್ರಕಾಶ ಜಾಲುವಾನ ಮುಖಕ್ಕೆ ಬಡಿಯಲು ಆತ ತನ್ನ ಪೀಠದಿಂದ ಜಗಿದೆದ್ದ. ಕನ್ನಡಿಯಿಂದ ಸೂರ್ಯನ ಬಿಂಬ ಜಾರಿ ಅಲ್ಲಿ ಅವನಿಗೆ ಸ್ವಂತದ ಪ್ರತಿಬಿಂಬ ಕಾಣಿಸಿತು. ಧೈರ್ಯದಿಂದ ಆತ ನೋಡಿದ. ಕಣ್ಣಿಗೆ ಬಿದ್ದ ದೃಶ್ಯದಿಂದ ಅವನ ಮೈ ಕೂದಲು ನೆಟ್ಟಗಾದವು. ಜಾಲುವಾನಿಗೆ ತಾನು ತನ್ನ ಮುಖವನ್ನೆ ಕಂಡೆನೆಂದು ನಂಬಿಗೆಯಾಯಿತು. ಏಕೆಂದರೆ ಕನ್ನಡಿಯಲ್ಲಿ ಕಾಣಿಸಿದ ಆಕೃತಿಯ ತಲೆಯ ಮೇಲೆ ಅವನು ಧರಿಸಿದ್ದ ಶಿರಸ್ತ್ರಾಣವಿತ್ತು. ಜಾಲುವಾ ಆ ಕ್ಷಣದಲ್ಲಿ ಅಕಾಕೊ ಮತ್ತು ತುಂಬಾಳನ್ನು ಕೊಲ್ಲಿಸಿದ. ಆದರೂ ಆತನ ಅಂಜಿಕೆ ಹೋಗಲಿಲ್ಲ. ಭಯದ ಭರದಲ್ಲಿ ಆತ ಇನ್ನೊಂದು ಮೂರ್ಖ ಕೆಲಸ ಮಾಡಿದ. ಮಾಟಗಾರ ಪುರೋಹಿತ ಟಗುರುವಿಗೆ ತನ್ನ ಗುಡಿಸಲಿನಲ್ಲಿ ತನ್ನನ್ನು ಒಬ್ಬನೇ ಬಂದು ಕಾಣಬೇಕೆಂದು ತಿಳಿಸಿದ. ಟಗುರು ಅವನ ನಂಬಿಗೆಯ ಮನುಷ್ಯನಾಗಿದ್ದ.

ಟಗುರು ಬರುವುದನ್ನು ಕಂಡೊಡನೆ ಜಾಲುವಾ ತನ್ನ ಹೆಂಡಂದಿರನ್ನೆಲ್ಲ ಹೊಡೆದು ಹೊರಗೋಡಿಸಿದ. ಕನ್ನಡಿಯಲ್ಲಿ ತನ್ನ ಚಿತ್ರ ಕಂಡ ವಿಚಾರವನ್ನು ಟಗುರುವಿಗೆ ಹೇಳಿ ಜಾಲುವಾ ಕನ್ನಡಿಯನ್ನು ಅವನ ಕೈಗಿತ್ತ. ಟಗುರುವಿಗೆ ಕನ್ನಡಿಯಲ್ಲಿ ಬಿಳಿ ಬಣ್ಣ ಬಳಿದ ತನ್ನ ಮುಖ ಕಂಡಿತು. ಈಗ ಸಂದೇಹಕ್ಕೆ ಆಸ್ಪದ ಉಳಿಯಲಿಲ್ಲ.

ಈ ದೃಶ್ಯದ ಅರ್ಥ ಟಗುರು ಮಟ್ಟಿಗೆ ಸ್ಪಷ್ಟವಾಗಿತ್ತು. ಜಾಲುವಾನ ಮುಖದ ಬದಲು ಕನ್ನಡಿಯಲ್ಲಿ ಅವನ ಮುಖ ಕಂಡಿತ್ತು. ಆದ್ದರಿಂದ ಈಗ ಕಲಾರು ಜಾತಿಯ ಹೊಸ ನಾಯಕ

ತಾನೇ ಸೈ ಎಂದಾತನಿಗೆ ಖಂಡಿತವಾಯಿತು! ಆತ ಎದ್ದು ಜಾಲುವಾನ ಬಳಿ ಹೋಗಿ ತನ್ನ ಕತ್ತಿಯಿಂದ ಅವನ ರುಂಡ ಹಾರಿಸಿದ. ಆ ಮೇಲೆ ಎಲ್ಲರನ್ನೂ ಕರೆದು "ಜಾಲುವಾ ಸತ್ತ. ಮಾಟದ ಡಬ್ಬಿ ನನ್ನನ್ನು ನಾಯಕನನ್ನಾಗಿ ಆರಿಸಿದೆ. ಯಾರಿಗಾದರೂ ಈ ಮಾತಿನಲ್ಲಿ ನಂಬಿಕೆಯಾಗದಿದ್ದರೆ ಅವರು ಈ ಕನ್ನಡಿಯಲ್ಲಿ ನೋಡಲಿ" ಎಂದು ಡಬ್ಬಿಯನ್ನು ಜನರ ಕೈಗೆ ಕೊಟ್ಟ.

ಮೊದಲು ಕನ್ನಡಿ ನೋಡಿದವನಿಗೆ ಅವನ ಮೂರು ಜನ ಮೃತ ಅಣ್ಣಂದಿರು ಕಾಣಿಸಿದರು. ಆ ಮೂವರೂ ಸತ್ತಿದ್ದರಷ್ಟೇ. ಆದ್ದರಿಂದ ತಾನೇ ಜನಾಂಗದ ನಾಯಕನಾದೆ ಎಂದು ಅವನು ತಿಳಿದ. ಎರಡನೆಯವನಿಗೆ ತನ್ನ ಸತ್ತ ತಂದೆಯ ಮುಖ ಕಾಣಿಸಿತು. ಮೂರನೆಯವನಿಗೆ ಕಂಡದ್ದು ಯಾರ ಮುಖ ಎಂದು ಗುರುತು ಹತ್ತಲಿಲ್ಲ. ಆದರೂ ತಾನೇ ನಾಯಕ ಎಂದಾತ ತಿಳಿದ. ಡಬ್ಬಿ ಒಬ್ಬರ ಕೈಯಿಂದ ಇನ್ನೊಬ್ಬರ ಕೈಗೆ ಹೋಯಿತು. ಜನ ತಮ್ಮ ತಮ್ಮ ಪ್ರತಿಬಿಂಬವನ್ನು ಅದರಲ್ಲಿ ಕಂಡರು.

ಒಮ್ಮೆಂದೊಮ್ಮೆ ಜನರ ಮಧ್ಯದಿಂದ ಒಬ್ಬ ಮುಂದೆ ಬಂದು ತಾನೇ ನಾಯಕ ಎಂದ. ಟಗುರು ತತ್‌ಕ್ಷಣ ಅವನನ್ನು ಇರಿದು ಕೆಡವಿದ. ಶುರುವಾಯಿತು ಕಾಳಗ. ಪ್ರತಿಯೊಬ್ಬನೂ ತಾನೇ ನಾಯಕ ಎಂದು ಬಡಿದಾಡತೊಡಗಿದರು. ಭರ್ಜಿಗಳು ಹಾರಾಡಿದವು. ರಕ್ತದ ಕಾಲುವೆ ಹರಿಯಿತು. ಕೆಲವೇ ಜನ ಬದುಕುಳಿಯುವವರೆಗೂ ಈ ಹತ್ಯಾಕಾಂಡ ನಡೆಯಿತು. ಈ ಉಳಿದವರು ಓಡಿ ಹೋಗಿ ಅಡವಿಯಲ್ಲಿ ಅಡಗಿಕೊಂಡರು.

ಟಗುರು ತನ್ನ ಚಾತುರ್ಯದಿಂದ ತನ್ನ ಪ್ರೀತಿಯ ಮಗನ ಜೊತೆ ಪ್ರಾಣ ಉಳಿಸಿಕೊಂಡು ಪಾರಾದ. ಒಂದು ದಿನ ರಾತ್ರಿ ಬೆಳದಿಂಗಳಲ್ಲಿ ಆತ ತನ್ನ ಭಾಗ್ಯದ ವಿಡಂಬನೆಯ ಚಿತ್ರವನ್ನು ಕಾಣಲೆಂದು ಆ ಡಬ್ಬಿಯನ್ನು ತೆರೆದು ನೋಡಿದ. ಆಗ ಬಳಿಯಲ್ಲೇ ನಿಂತಿದ್ದ ಅವನ ಮಗ ಡಬ್ಬಿಯನ್ನು ಕಸಿದುಕೊಂಡು ಕನ್ನಡಿಯಲ್ಲಿ ನೋಡಿದ. ಆತನ ಬೆರಳು ತನ್ನಷ್ಟಕ್ಕೆ ಮೂಗಿನ ಮೇಲೆ ಹೋದಾಗ ಕನ್ನಡಿಯಲ್ಲಿರುವಾತನೂ ಹಾಗೆಯೆ ಮಾಡಿದ್ದನ್ನು ಆತ ಕಂಡ. ಇದರಿಂದ ತಾನೇ ನಾಯಕ ಎಂದು ಆತನಿಗೆ ನಂಬಿಕೆಯಾಯಿತು.

ಟಗುರು ಆಗೇನೂ ಮಾತಾಡದೆ ನಿದ್ದೆ ಬಂದಿತೆಂದು ಮಲಗಿದ. ಮಗ ನಿದ್ದೆಯಲ್ಲಿ ಗೊರಕೆ ಹೊಡೆಯತೊಡಗಲು ಕಲ್ಲೊಂದನ್ನು ಎತ್ತಿಕೊಂಡು ಅದರಿಂದ ಅವನ ತಲೆ ಜಜ್ಜಿಬಿಟ್ಟ.

ಇದೇ ಸಮಯದಲ್ಲಿ ನಾನು ತಿರುಗಿ ಬಂದೆ. ತನ್ನದೊಂದು ಬೆಲೆ ಬಾಳುವ ಪೌಡರಿನ ಡಬ್ಬಿ ಕಳೆದಿದೆ ಎಂದು ಬೆನಡಾಕನ ಪತ್ರ ಬಂದಿತ್ತು. ನಾನದನ್ನು ಹುಡುಕಿಸಬೇಕೆಂದೂ ಬರೆದಿದ್ದ. ನಾನು ಬಂದ ಕೆಲ ದಿನಗಳಲ್ಲಿ ಹಸಿವಿನಿಂದ ವ್ಯಾಕುಲನಾದ, ದಣಿದು ಬೆಂಡಾದ ಟಗುರು ನನ್ನ ಬಳಿಗೆ ಬಂದ. ಆತನೇನೂ ಬಹು ದಿನ ಬದುಕಲಿಲ್ಲ. ಆದರೆ ಆತ ನನಗೆ ಇದೆಲ್ಲ ಸಮಾಚಾರವನ್ನು ಹೇಳಿದ. ಆತ ಸತ್ತಾಗ ಆತನ ಬಳಿ ಡಬ್ಬಿ ಸಿಗಲಿಲ್ಲ. ಆತ ಅದನ್ನೆಲ್ಲಿ ಅಡಗಿಸಿಟ್ಟಿದ್ದನೊ ಏನೊ.

ಕೆಲವರ್ಷಗಳು ಕಳೆದವು. 'ಸ್ವಿಫ್ಟ್ ರಿವರ್' ಪ್ರದೇಶ ಈಗ ನಿರ್ಜನವಾಗಿತ್ತು. ನಾನು ಒಂದು ದಿನ ಬಂದೂಕನ್ನು ಹೆಗಲ ಮೇಲೆ ಹಾಕಿಕೊಂಡು ಹೊರಟಿದ್ದೆ. ಒಂದೆಡೆ ಒಂದು ಬಬೂನ್ ಗದ್ದಲ ನಡೆಸಿತ್ತು. ಕಳ್ಳ ಹೆಜ್ಜೆಯಿಂದ ಸಮೀಪ ಹೋಗಿ ನೋಡಿದೆ. ಅದು ಒಂದು ಕೈಯನ್ನು ಕೆಳಗೂರಿಕೊಂಡು ಮಲ ವಿಸರ್ಜನೆ ಮಾಡುತ್ತಲಿತ್ತು. ಅದರ ಇನ್ನೊಂದು ಕೈಲಿ ಬಂಗಾರದ ಲೇಪವಿದ್ದ ಆ ಡಬ್ಬಿಯಿತ್ತು. ನಾನು ಗುಂಡುಹಾರಿಸಿದೆ. ಬಬೂನ್ ಸತ್ತುಬಿತ್ತು. ಮರುದಿನ ನಾನು ಆ ಡಬ್ಬಿಯನ್ನು ಶ್ರೀಮತಿ ಬೆನಡಾಕಳಿಗೆ ಕಳಿಸಿದೆ. ಆದರೆ ಇದುವರೆಗೂ ಅದು ಮುಟ್ಟಿದ ಬಗ್ಗೆ ನನಗೆ ಏನೂ ಗೊತ್ತಾಗಿಲ್ಲ. *

ನಗೆಮಲ್ಲಿಗೆ

ಒಬ್ಬ ಹುಡುಗ ಮನೆಯಿಂದ ಪಲಾಯನ ಹೇಳಿದ್ದ. ಆಗ ಅವನ ತಂದೆ ಪತ್ರಿಕೆಯಲ್ಲಿ ಈ ಮುಂದಿನ ಜಾಹೀರಾತು ಕೊಟ್ಟ:

"ಪ್ರೀತಿಯ ಚಿ. ಶಂಕರನಿಗೆ. ಎಲ್ಲಿದ್ದರೂ ಕೂಡಲೆ ಹೊರಟು ಬಾ. ನೀನು ಹೋದಂದಿನಿಂದ ನಿನ್ನ ತಾಯಿ ಅನ್ನ ನೀರು ಮುಟ್ಟಿಲ್ಲ. ಆದ್ದರಿಂದ ಕೂಡಲೆ ಹೊರಟು ಬಾ. ಹೊರಟು ಬರದಿದ್ದರೆ ನಿನ್ನ ಬೆನ್ನು ಚರ್ಮ ಸುಲಿದೇನು."

*

ಬ್ರಿಟಿಶ್ ಕಾದಂಬರಿಕಾರ ರುಡ್ಯಾರ್ಡ್ ಕಿಪ್ಲಿಂಗನಿಗೆ ಅವನು ಬರೆದ ಪ್ರತಿ ಶಬ್ದಕ್ಕೆ ಆರು ಶಿಲಿಂಗ್‌ನಂತೆ ಸಂಭಾವನೆ ದೊರೆಯುತ್ತದೆಂದು ಓದಿದ ಒಬ್ಬ ಕಿಡಿಗೇಡಿ ಅವನಿಗೊಂದು ಪತ್ರ ಬರೆದ: "ಮಹನೀಯರೆ, ನಿಮಗೆ ಪ್ರತಿ ಶಬ್ದಕ್ಕೆ ಆರು ಶಿಲಿಂಗ್ ಸಿಗುತ್ತದಂತಲ್ಲಾ. ನಾನೀಗ ಆರು ಶಿಲಿಂಗ್ ಕಳಿಸಿದ್ದೇನೆ. ಒಂದು ಶಬ್ದ ಕಳಿಸಿರಿ."

ಕಿಪ್ಲಿಂಗ್ ಉತ್ತರ ಬರೆದ: "ಥ್ಯಾಂಕ್ಸ್."

*

ಲಾಟರಿಯಲ್ಲಿ ೫೧ ರಿಂದ ಕೊನೆಗೊಳ್ಳುವ ನಂಬರ್‌ನ ತಿಕೀಟೇ ಬೇಕೆಂದು ಹಟಹಿಡಿದು ಕೊಂಡ ಒಬ್ಬ ತರುಣಿಗೆ ರೂ. ೫೦,೦೦೦ ಬಹುಮಾನ ಬಂತು.

ಸುದ್ದಿಗಾರನೊಬ್ಬ ಅವಳನ್ನು ಕಂಡು "೫೧ ರಿಂದ ಅಂತ್ಯವಾಗುವ ನಂಬರೇ ಬೇಕೆಂದು ನೀವು ಯಾಕೆ ಹೇಳಿದಿರಿ?" ಎಂದು ಕೇಳಿದ.

"ನೋಡಿ, ಏಳು ದಿನ ಸಂತತವಾಗಿ ನನಗೆ ಕನಸಿನಲ್ಲಿ ಏಳನೇ ಅಂಕಿ ಕಾಣಿಸಿತ್ತು. ಏಳು ಏಳಲೆ ಐವತ್ತೊಂದು ತಾನೆ? ಅದೇ ನಂಬರಿನ ತಿಕೀಟುಕೊಂಡೆ," ಎಂದಳಾಕೆ.

*

"ಇದು ಸೂರ್ಯೋದಯದ ಚಿತ್ರವೊ, ಸೂರ್ಯಾಸ್ತದ ಚಿತ್ರವೊ?"

"ಖಂಡಿತ ಸೂರ್ಯಾಸ್ತದ್ದು."

"ಅಷ್ಟುದೃಢವಾಗಿಹೇಗೆಹೇಳುತ್ತೀರಿ?"

"ಈ ಚಿತ್ರ ಬರೆದವನನ್ನು ನಾನು ಚೆನ್ನಾಗಿ ಬಲ್ಲೆ. ಆತ ಮಧ್ಯಾಹ್ನ ೧೨ ಹೊಡೆಯುವವರೆಗೂ ಹಾಸಿಗೆ ಬಿಟ್ಟು ಎದ್ದಿರುವುದಿಲ್ಲ."

*

"ನಿಮ್ಮ ಹೆಂಡತಿ ಬೇರೆಯವರಲ್ಲಿ ಅಡಿಗೆ ಮಾಡಿ ನಿಮ್ಮ ಹೊಟ್ಟೆ ಹೊರೆಯುತ್ತಾಳೆ. ನಿಮಗೆ ನಾಚಿಕೆಯಾಗುವುದಿಲ್ಲವೆ?"

"ಆಗುತ್ತದೆ. ಆದರೆ ಉಪಾಯವಿಲ್ಲ. ಬೇರೆ ನೌಕರಿ ಮಾಡಲಿ ಎಂದರೆ ಅವಳಿಗೆ ಓದು ಬರೆಯಲು ಕೂಡ ಬರುವುದಿಲ್ಲ."

*

ಆ ನೂತನ ಕವಿ ತನ್ನ ಮಿತ್ರನ ಎದುರು ತಾನು ಬರೆದ ಕವಿತೆಯ ಅರ್ಥವನ್ನು ಒಂದು ತಾಸಿನ ವರೆಗೆ ವಿವರಿಸಿ ಹೇಳಿ ಬಳಿಕ ನುಡಿದ "ಕವಿತೆ ಎಂದೊಡನೆ ನನಗೆ ಎಲ್ಲಿಲ್ಲದ ಉತ್ಸಾಹ ಬರುತ್ತದೆ. ಈಗ ನೋಡು, ಇಲ್ಲಿಗೆ ಬರುವಾಗ ನನಗೆ ವಿಪರೀತ ತಲೆ ನೋವಿತ್ತು. ಈಗ ಹೋಗಿಬಿಟ್ಟಿತು."

"ಹೋಗಿಲ್ಲ. ನೀನು ಅದನ್ನು ನನಗೆ ಕೊಟ್ಟಿರುವಿ" ಎಂದ ಅವನ ಮಿತ್ರ.

"ಏನ್ರಿ, ಪ್ರತಿನಿತ್ಯ ಮಲಗುವ ಮುಂಚೆ ಬ್ಯಾಟರಿ ಬಿಟ್ಟು ನೋಡುತ್ತೀರಲ್ಲ, ಏನು ಸಮಾಚಾರ?"

"ಇಲೆಕ್ಟ್ರಿಕ್ ದೀಪವನ್ನು ನಂದಿಸಿದ್ದೇನೋ ಇಲ್ಲವೊ ಎಂದು ಖಾತ್ರಿ ಮಾಡಿಕೊಳ್ಳಲು."

*

ತಾಯಿ: "ನಮ್ಮ ಕಿಟ್ಟೀ ಗಣಿತದ ಬಗ್ಗೆ ನನಗೆ ಬಹಳ ಚಿಂತೆ ಹತ್ತಿದೆ. ಏಳೂ ನಾಲ್ಕು ಹನ್ನೆರಡು ಅನ್ನುತ್ತಾನೆ."

ತಂದೆ: "ಏಳು ವರ್ಷದ ಹುಡುಗನ ಮಟ್ಟಿಗೆ ಅಡ್ಡಿಯಿಲ್ಲ. ಬರಿ ಎರಡು ಹೆಚ್ಚು ಕಡಿಮೆಯಾಗಿದೆಯಷ್ಟೆ."

*

ಗಿರಾಕಿ– 'ಏಟ್ ಡೇ ಕ್ಲಾಕ್' ಎಂಬ ಗಡಿಯಾರ ಬಂದಿದೆಯಂತಲ್ಲ! ಅದರ ವೈಶಿಷ್ಟ್ಯ ಏನು?

ವ್ಯಾಪಾರಿ– ಕೀಲಿಕೊಡದೆ ಅದು ಎಂಟು ದಿನಗಳ ವರೆಗೂ ನಡೆಯುತ್ತದೆ.

ಗಿರಾಕಿ– ಹಾ! ಕೀಲಿ ಕೊಟ್ಟರೆ ಅದು ಎಷ್ಟು ದಿನ ನಡೆಯುತ್ತೆ?

*

ಬ್ರಹ್ಮಚಾರಿ– ವಿವಾಹಿತ ಜೀವನದ ಸುಖ ಶಾಂತಿಗಳ ಕ್ಷಣಗಳಿಗಾಗಿ ಎಷ್ಟೋ ಸಾರಿ ನಾನು ಹಂಬಲಿಸಿ ಕಳವಳಗೊಳ್ಳುತ್ತೇನೆ ಎಂಬ ಮಾತನ್ನು ಒಪ್ಪಿಕೊಳ್ಳುತ್ತೇನೆ.

ವಿವಾಹಿತ– ನಾನೂ ಹಾಗೆಯೇ, ಸ್ವಾಮೀ.

*

ಯಾವುದೋ ಒಂದು ಸಣ್ಣ ವ್ಯವಹಾರದ ಸಂಬಂಧದಲ್ಲಿ ಅಭಿಪ್ರಾಯ ಕೇಳಿದಾಗ ತಮ್ಮ ಪದ್ಧತಿಯಂತೆ ದೊಡ್ಡ ಬಿಲ್ಲನ್ನು ವಕೀಲರು ರಾಮರಾಯರಿಗೆ ಕಳಿಸಿದ್ದರು.

ಒಂದು ವಾರದ ನಂತರ ವಕೀಲರಿಗೆ ರಸ್ತೆಯಲ್ಲಿ ರಾಮರಾಯರ ಭೆಟ್ಟಿಯಾಯಿತು. ರಾಮರಾಯರು "ನಮಸ್ಕಾರ ವಕೀಲರೇ, ಇಂದು ಹವೆ ತಂಪಾಗಿದೆಯಲ್ಲವೆ?" ಎಂದವರೇ ಅವಸರದಿಂದ "ನಾನು ನಿಮ್ಮ ಅಭಿಪ್ರಾಯ ಕೇಳುತ್ತಿಲ್ಲ. ನನ್ನದನ್ನು ಹೇಳುತ್ತಿದ್ದೇನೆ ಅಷ್ಟೇ," ಎಂದರು.



"ಟೈಮ್ ತಿಳೀಬೇಕೆ? ಹನ್ನೊಂದ್ರಲ್ಲಿ ಮೂವತ್ತೆಂಟು ನಿಮಿಷ ಎಂಟೂ ಪಾಯಿಂಟ್ ಸೊನ್ನೆ ಎರಡು ಸೆಕೆಂಡ್ ಕಳಿ. ಉತ್ರಾನೇ ಟೈಮ್!"

— ಶ್ರೀಕಾಂತ ನಾಡಿಗ

ದೇವರ ಇಡುಗಂಟು

ಮೂಲ ಹಿಂದಿ:
ರತನಲಾಲ ಜೋಶಿ

ಚಂದ್ರಾಸ್ತವಾಗುವಾಗ ನಾವು ಎಂಟು ಮೈಲು ದಾರಿ ಕ್ರಮಿಸಿದ್ದೆವು. ತಪ್ಪಲು ಪ್ರದೇಶದಿಂದ ಈಗ ನಾವು ಕೆಳಗಿಳಿಯುತ್ತಿದ್ದೆವು. ಇಲ್ಲಿ ಅಡವಿ ದಟ್ಟವಾಗಿತ್ತು. ಎತ್ತರವಾಗಿ ಬೆಳೆದ ಮರಗಳು ಮುಗಿಲು ಮುಟ್ಟುವ ಪ್ರಯತ್ನದಲ್ಲಿದ್ದಂತಿದ್ದವು. ಅವುಗಳ ನಡುವಿನ ನೆಲದಲ್ಲಿ ಬೆಳೆದ ಕಂಟಿ ಸಾಂದ್ರವಾಗಿದ್ದು ಅಡ್ಡ ಗೋಡೆಯಂತೆ ವ್ಯಾಪಿಸಿತ್ತು. ಕ್ರಿಮಿಕೀಟಕಗಳ ಸದ್ದು ರಾತ್ರಿಯ ಭಯಾನಕತೆಯನ್ನು ಹೆಚ್ಚಿಸುತ್ತಿತ್ತು. ಒಂದು ಚಕ್ಕಡಿ ಗಾಡಿ, ಎರಡು ಕುದುರೆ— ಇವಿಷ್ಟು ನಮ್ಮ ತಂಡ! ಗಾಡಿಯಲ್ಲಿ ಮಿತ್ರನೊಬ್ಬನ ಪತ್ನಿ ಹಾಗೂ ನಾಲ್ಕು ಮಕ್ಕಳು. ಒಂದು ಕುದುರೆಯ ಮೇಲೆ ಠಾಕೂರ ಗೋಪಾಲಸಿಂಹ, ಮತ್ತೊಂದರ ಮೇಲೆ ನಾನು.

ಕಲ್ಲು ಬಂಡೆಯ ದಾರಿ. ರಾಜಸ್ಥಾನದ ಆಗ್ನೇಯ ದಿಕ್ಕಿನ ಅಡವಿಯಲ್ಲಿ ಪ್ರವಾಸಮಾಡಿದವರೇ ಈ ದಾರಿಯ ತೊಂದರೆಗಳನ್ನು ಬಲ್ಲರು. ಹಳೆ ಕಾಲದ ರಸ್ತೆ. ಹೊಸ ಯುಗದ ಸ್ಪರ್ಶವೂ ಇಲ್ಲ. ಇಲ್ಲಿಯ ನೆಲ ಇನ್ನೂ ಉಗಿಬಂಡಿಯನ್ನು ಕಂಡಿಲ್ಲ.

ಕಲ್ಲುಗಳ ಮೇಲಿಂದ ಬಂಡಿಯ ಗಾಲಿಗಳು ಉರುಳುತ್ತಿದ್ದವು. ಅದರ ಹಿಂದಿನಿಂದ ನಡೆದ ಕುದುರೆಗಳೆರಡೂ ಕಿವಿ ನೆಟ್ಟಗೆ ಮಾಡಿ ಶಬ್ದವೇಧಿಯಾಗಿ ನಡೆದಿದ್ದವು. ಮಗ್ಗಲಿನ ಗಿಡಗಂಟಿಯಿಂದ ಒಂದು ಮೊಲ ನೆಗೆದು ಬಂದು ಎಡಬದಿಯ ಕಂಟಿಯಲ್ಲಿ ಮರೆಯಾಯಿತು. ಎತ್ತುಗಳು ಒಮ್ಮೆಲೆ ತಡೆದವು. ಕುದುರೆಯ ಕಡಿವಾಣವನ್ನೆಳೆಯುತ್ತ ಠಾಕೂರರು ಅಂದರು, "ಪಂಡಿತಜಿ, ಕಿರುಬ ಬೆನ್ನು ಹತ್ತಿ ಬರುವಂತಿದೆ. ಜಾಗ್ರತೆ. ಕುದುರೆಗಳನ್ನು ಕಂಡರಂತೂ ಅದು ಬಿಡುವುದಿಲ್ಲ."

ಕುದುರೆಗಳ ನಡುಕ ನನ್ನ ಗಮನಕ್ಕೂ ಬಂದಿತು. "ಬೆಳದಿಂಗಳು ಒಳ್ಳೇ ಹೊತ್ತಿನಲ್ಲೇ ಕೈಕೊಟ್ಟಿತಲ್ಲ. ನಾವೀಗ ಕಣಿವೆಯಲ್ಲಿದ್ದೇವೆ. ಬೇಗ ಇಲ್ಲಿಂದ ಪಾರಾಗಬೇಕು." ನಾನೆಂದೆ.

ನಾವಿಬ್ಬರೂ ಹೆಗಲಿಗೇರಿಸಿದ್ದ ಕೋವಿಗಳನ್ನು ಸಜ್ಜುಮಾಡಿ ಹಿಡಿದು ನಡೆದೆವು. ಎದುರಿಗೆ ಒಂದು ಮೃಗಮಿಥುನ ಹಾಯ್ದು ಹೋಯಿತು. ಠಾಕೂರರು ಅಂದರು, 'ಪಂಡಿತಜೀ, ಚಿಗರೆಗಳು ಅಡ್ಡ ಹೋದುವಲ್ಲ; ಇನ್ನು ದೇವಿ ಭಗವತಿಯೆ ಕಾಯಬೇಕು." ಅವರು ತಮ್ಮ ಕತ್ತಿಯನ್ನು ಹಿರಿದರು. ಅಂಥ ಕರಾಳ ಕತ್ತಲೆಯಲ್ಲೂ ಕತ್ತಿ ಹೊಳೆಯುತ್ತಿತ್ತು. ೬೨ ವರ್ಷದ ಆ ರಜಪೂತನ ಧೈರ್ಯಸಾಹಸಗಳನ್ನು ಕಂಡು ನಾನು ಚಕಿತನಾದೆ.

ತೀರ ನನ್ನ ಹತ್ತರ ಬಂದು ಅವರು ಪಿಸುಗುಟ್ಟಿದರು, "ಪಂಡಿತಜೀ, ದೂರದಲ್ಲಿ ಜನ

ನಡೆಯುತ್ತಿದ್ದಾರೆಂದು ಕಾಣುತ್ತದೆ. ಕನಿಷ್ಠ ಏಳೆಂಟು ಜನವಾದರೂ ಇರಬೇಕು. ಇಂದೇನೋ ಅನಾಹುತವಿದೆ ಎಂದು ತೋರುತ್ತಿದೆ!"

ನಾನೂ ಕಿವಿಗೊಟ್ಟು ಸದ್ದನ್ನು ಆಲಿಸಿದೆ. ಕೆಲವರು ನಮ್ಮತ್ತ ಬರುತ್ತಿದ್ದುದು ನಿಜವಾಗಿತ್ತು. ತುಂಬ ಬೆಳೆದು ನಿಂತ ಮರಗಳೂ ಮೇಲೆ ನಕ್ಷತ್ರ ಮಂಡಿತ ಆಕಾಶವೂ ಕಾಲಿದಾಸನ ಯಕ್ಷನ ಹೃದಯದಲ್ಲಿ ಅಥವಾ ಆಧುನಿಕ ಕವಿಯ ಹೃದಯದಲ್ಲಿ ಕಾವ್ಯದ ಸೆಲೆ ಹುಟ್ಟಿಸುವಂತಿದ್ದವು. ಆದರೆ ಕಾವ್ಯಸ್ಫುರಿಸುವ ಸ್ಥಿತಿ ನಮ್ಮದಾಗಿರಲಿಲ್ಲ. ನಾನಾ ಬಗೆಯ ಶಂಕೆಗಳು ಮನಸ್ಸಿನಲ್ಲಿ ಒಟ್ಟಾಗಿದ್ದವು. ಹೆಜ್ಜೆಹೆಜ್ಜೆಗೂ ನಾವು ವಿಪತ್ತಿಯನ್ನು ಸಮೀಪಿಸುತ್ತಿದ್ದೇವೆ ಎಂದು ಎನಿಸುತ್ತಿತ್ತು.

ಕುದುರೆಯ ಖುರಪುಟದ ಸದ್ದಿನ ಗುಂಗಿನಲ್ಲಿ ನಾವು ಸಾಗಿದ್ದಂತೆಯೆ ಅಕಸ್ಮಾತ್ ನನ್ನ ಕಣ್ಣಿಗೆ ಎರಡು ಪ್ರಜ್ವಲಿಸುವ ಕಣ್ಣುಗಳು ಕಾಣಿಸಿದವು. ಎದುರಿನ ರಸ್ತೆಯ ದಂಡೆಗೆ, ನಮ್ಮಿಂದ ಸುಮಾರು ಇಪ್ಪತ್ತು ಇಪ್ಪತ್ತೈದು ಅಡಿ ದೂರದಲ್ಲಿ ಹುಲಿ ಮಲಗಿತ್ತು. ಅದರ ನಿಶ್ಚಲತೆಯನ್ನು ಕಂಡರೆ ಅದಕ್ಕೆ ನಮ್ಮ ಸುಳಿವೇ ಹತ್ತಿರಲಿಲ್ಲವೆನಿಸುತ್ತಿತ್ತು. ಠಾಕೂರರಿಗೆ ನಾನು ಸನ್ನೆ ಮಾಡಿದೆ. ಅವರು ಒರೆಯಲ್ಲಿ ಕತ್ತಿಯನ್ನು ಹಾಕಿ ಅಂದರು,

"ಪಂಡಿತಜಿ, ಸಾವಧರಾಗಿರಿ. ಈಗ ನಾನು ಗುಂಡು ಹಾಕುತ್ತೇನೆ. ಶ್ವಾಪದ ಹಸಿದಿದೆ. ಹಾಗೇ ಬಿಟ್ಟರೆ ನಮ್ಮ ಮೇಲೆ ದಾಳಿ ಮಾಡದೆ ಬಿಡುವುದಿಲ್ಲ."

ನಾನು ಅವರನ್ನು ತಡೆದೆ. ಹುಲಿ ಹಸಿದಂತೆ ತೋರಲಿಲ್ಲ. ಹಸಿದ ಹುಲಿ ರಸ್ತೆಯ ದಂಡೆಗೆ ಕೂಡ್ರುವುದೇ ಇಲ್ಲ. ಮತ್ತು ಜನರ ಗುಂಪಿನ ಮೇಲೆಹಾರಿ ಬರುವುದೂ ಇಲ್ಲ. ಮನುಷ್ಯ ರಕ್ತದ ರುಚಿ ಹತ್ತಿದ ಹುಲಿಯೂ ಎದುರಾಎದುರು ಮನುಷ್ಯರ ಗುಂಪಿನ ಮೇಲೆ ಏರಿಬರುವುದಿಲ್ಲ.

ಎತ್ತುಗಳು ಗಾಡಿಯವನಿಗಿಂತ ಮೊದಲೆ ಹುಲಿಯನ್ನು ನೋಡಿದ್ದವು. ಅವು ಸಪ್ಪತ್ತಿಗೆ ಹರಿದು ಓಡಲು ಯತ್ನಿಸಿದವು. ನಾವು ಕಿಂಕರ್ತವ್ಯ ವಿಮೂಢರಾದೆವು. ಹುಲಿ ಇನ್ನೂ ಕಲ್ಲಿನಂತೆ ಶಾಂತವಾಗಿ ಕೂತಿತ್ತು. ನಾವು ಕುದುರೆಗಳನ್ನು ಗಾಡಿಯ ಮುಂದೆ ಒಯ್ದು, ಹುಲಿಯ ಮೇಲೆ ಕಣ್ಣಿಟ್ಟು ಮುಂದೆ ಸಾಗಿದೆವು. ಮೂವತ್ತು ಅಡಿ ಹೋಗಿರಬೇಕು; ಅಷ್ಟರಲ್ಲಿ ಹುಲಿ ಎದ್ದು ನಿಂತಿತು.

ನಾವು ಕುದುರೆಯಿಂದ ಇಳಿದೆವು. ಹುಲಿ ನಾಲ್ಕು ಹೆಜ್ಜೆ ನಡೆದು ಮತ್ತೆ ಕಂಟಿಯಲ್ಲಿ ಹೊಕ್ಕಿತು. ಸಾವಕಾಶವಾಗಿ ಮುಂದೆ ಸಾಗಿದೆವು. ಹುಲಿಯ ಗುಡುಗು ಇನ್ನೂ ಹೆದರಿಸುತ್ತಿತ್ತು.



ಒಮ್ಮೆಲೆ ಕುದುರೆಗಳು ಹೂಂಕರಿಸಿ ನೆಗೆದುವು. ಠಾಕೂರರ ಬಂದೂಕಿನ ಸಪ್ಪಳವಾಯಿತು. ಕಿರುಬ ಬೆನ್ನಟಿ ಬಂದಿತ್ತು. ಠಾಕೂರರ ಕುದುರೆಯ ಮೇಲೆ ಹಾರಿ ಅದರ ಗೋಣಿಗೆ ಮುಂಗಾಲಿನಿಂದ ಒಂದು ಹೊಡತ ಕೊಟ್ಟಿತು. ನುರಿತ ಕು-

ಮರೆ. ಅಂತೆಯೆ ನೋವನ್ನು ತಾಳಿಕೊಂಡಿತು. ಠಾಕೂರರ ಗುಂಡು ಗುರಿ ತಪ್ಪಿತ್ತು. ಈಗ ಕಿರುಬ ಅವರ ಮೈಮೇಲೆ ಜಿಗಿಯಿತು. ಕ್ಷಣ ಮಾತ್ರ, ಮೃತ್ಯು ಗರ್ಜನೆ ಅಡವಿಯನ್ನೇ ವ್ಯಾಪಿಸಿ ಕೊಂಡಂತೆನಿಸಿತು.

ಮತ್ತೆರಡು ಗುಂಡಿನ ಸಪ್ಪಳದೊಂದಿಗೆ ಕಿರುಬ ಸತ್ತುಬಿದ್ದಿತು. ನನ್ನ ಬಂದೂಕಿನ ಗುಂಡುಗಳು ಅದನ್ನು ಕೊಂದಿದ್ದವು. ಹಿಲಾಲು ಹೊತ್ತಿಸಿ ನೋಡಿದೆವು. ಒಂದು ಗುಂಡು ಅದರ ಗುಂಡಿಗೆಯನ್ನೇ ಹೊಕ್ಕು ತನ್ನ ಕಾರ್ಯ ಪೂರ್ಣ ಗೊಳಿಸಿತ್ತು.

*

ಮುಂಜಾನೆ ನಾವು ನಮ್ಮ ಮುಕ್ಕಾಮಿಗೆ ಹೋಗುವ ಬದಲು ನಾರಾಯಣಗಾಂವದ ಧರ್ಮ ಶಾಲೆಯಲ್ಲಿಯೆ ಉಳಿದೆವು. ಕಿರುಬ ಸತ್ತ ಮೇಲೆ ನಾವು ಮುಂದೆ ಸಾಗಿದ್ದೆವು. ಅಷ್ಟರಲ್ಲಿ ಬಂಡಿಯ ಒಂದು ಗಾಲಿ ಮುರಿಯಿತು. ಇನ್ನೇನು ಎರಡು ಮೂರು ದಿನ ಈ ದಟ್ಟಡವಿಯಲ್ಲಿ ಉಪವಾಸ ಉಳಿಯಬೇಕಾಗುವುದೇನೊ ಎಂದಿದ್ದೆವು. ಆ-ದರೆ ಹಿಂದೆ ಕಾಲ ಸಪ್ಪಳ ಕೇಳಬಂದಿದ್ದ ಜನ ಈಗ ಸಮ್ಮುಖರಾದರು.

ಅವರು ಕಳ್ಳರೋ ಸಂಭಾವಿತರೋ ನಾನು ಹೇಳಲಾರೆನಾದರೂ ನಮ್ಮೊಂದಿಗೆ ಅವರು ಮಾತಾಡುವ ರೀತಿ ಸಂಭಾವಿತವಾಗಿತ್ತು. ಅವರೇ ನಮ್ಮನ್ನು ನಾರಾಯಣಗಾಂವಕ್ಕೆ ಮುಟ್ಟಿಸಿದರು. ಅಲ್ಲದೆ ಚಕ್ಕಡಿಯನ್ನೂ ದುರಸ್ತಿ ಮಾಡಿ ಕೊಟರು.

ನಾರಾಯಣಗಾಂವದ ಆ 'ಸರಾಯಿ'ಯನ್ನು ನಾನು ಸಾಯುವವರೆಗೂ ಮರೆಯಲಾರೆನು. ನಾಲ್ಕು ದಿನ ನಾವು ಅಲ್ಲಿ ಇದ್ದರೆ, ನಾಲ್ಕು ದಿನದ ಅನುಭವ ನಮ್ಮನ್ನು ಒಂದು ಸ್ವಪ್ನಲೋಕದಲ್ಲಿ ಒಯ್ದು ಬಿಟ್ಟಂತಿತ್ತು: ಇಲ್ಲಿಯ ಅಪೂರ್ವ ಅನುಭವಸಂಪತ್ತು ನನ್ನ ಪಾಲಿಗೆ ಕುಬೇರನ ಭಂಡಾರವೇ ಸೈ. ನಮ್ಮ ವಿಚಾರಸೃಷ್ಟಿಯ ಸಾಕಾರರೂಪ ಪ್ರತ್ಯಕ್ಷದಲ್ಲಿ ಆಗುವುದು ಕ್ವಚಿತ್ತೇ! ಅದು ಭಾಗ್ಯ!

೧೬,೦೦೦ ಜನವಸತಿಯ ಊರು. ಸ್ವಚ್ಛ ಸುಂದರವಾದ ಆವರಣ; ಹತ್ತಿರವೇ ಹರಿದು ಹೋಗುವ ನದಿಯೊಂದಿದೆ. ಸುತ್ತುಮುತ್ತೆಲ್ಲ ಸಣ್ಣ ಸಣ್ಣ ಗುಡ್ಡಗಳಿವೆ. ಈ ಊರು ಪ್ರಸಿದ್ಧ ವಾಗಿದೆ. ಊರಿಗೆ ಕೀರ್ತಿ ಬಂದುದು ಒಬ್ಬ ವ್ಯಕ್ತಿಯಿಂದ. ಆ ವ್ಯಕ್ತಿಯ ಹೆಸರು ಚಾಂದ-ಮಲಜಿ ಶೇಠ.

ಶೇಠಜಿಯವರ ವಯಸ್ಸು ೯೨. ಈಗಲೂ ಅವರು ಬೆಳಿಗ್ಗೆ ಎಂಟಕ್ಕೇ ಅಂಗಡಿಯಲ್ಲಿ ಹಾಜರಿರುತ್ತಾರೆ. ನಡೆಯಲು ತ್ರಾಣವಿಲ್ಲ. ಆದರೂ ಮೊಮ್ಮಕ್ಕಳ ಹೆಗಲ ಮೇಲೆ ಕೈ ಇಟ್ಟು ಬರುತ್ತಾರೆ. ನಾವು ಇಳಿದಿದ್ದ ಛತ್ರ, ಅವರದೇ ಇತ್ತು. ಛತ್ರದಲ್ಲಿ ಪ್ರವಾಸಿಕರಿಗೆ ಎಲ್ಲ ಸೌಕರ್ಯ ಒದಗಿಸಿ ಕೊಡುವ ಅವರನ್ನು ಯಾವ ಪಯಣಿಗನೂ ಮರೆಯಲಾರ.

ನಾವು ಹೋದ ಮೇಲೆ ಸ್ವಲ್ಪ ಹೊತ್ತಿನಲ್ಲೇ ಅವರ ಮೊಮ್ಮಕ್ಕಳಿಬ್ಬರೂ ಬಂದರು. ಶ್ರೀಮಂತರಾದರೂ ಸಾಮಾನ್ಯ ಉಡುಪು. ಆದ-ರಾತಿಥ್ಯದಲ್ಲಿ ಸದಾ ಮುಂದು. ನಮ್ಮ ವಸತಿ ವ್ಯವಸ್ಥೆ ಮಾಡಿದ್ದಲ್ಲದೆ ರಾತ್ರಿ ಎರಡು ಗಂಟೆಯಾದರೂ ನಮಗೆ ವಿಶ್ರಾಂತಿ ದೊರೆಯಲೆಂದು ತಾವೇ ಎಚ್ಚರುಳಿದು ಅವಶ್ಯವೆನಿಸಿದ್ದನ್ನು ಒದಗಿಸುತ್ತಿದ್ದರು.

ಅವರ ರೀತಿಯಿಂದ ನನಗೆ ಇಮರ್ಸನ್‌ನ ಒಂದು ಸಾಲು ನೆನಪಾಯಿತು. "ಯಾವ ಸದ್ಗುಣಗಳ ಕೊರತೆಗಾಗಿ ನಾವು ಕೊರಗುತ್ತೇವೊ ಅವು ಪೃಥ್ವಿಯ ಮೇಲೆ ದೃಗ್ಗೋಚರವಾಗದೇ ಹೋದರೆ ಸದ್ಗುಣ ಸಮುದ್ರನಾದ ಈಶ್ವರನು ಇದ್ದು ಪ್ರಯೋಜನವೇನು?"

ಮಧ್ಯಾಹ್ನ ನಾನು ಶೇಠಜಿಯವರನ್ನು ಕಂಡೆ. ಮಂಚದ ಮೇಲೆ ಕೂತಿದ್ದರು. ದೊಡ್ಡ ಅಂಗಡಿ. ಪೆನಿಸಿಲಿನ್‌ಇಂದ ಮಸಾಲೆ ಸಾಮಾನಿನ ವರೆಗೆ

ಎಲ್ಲವೂ ಅಲ್ಲಿ ಸಿಗುತ್ತಿತ್ತು. ಪ್ರತಿ ಸಾಮಾನನ್ನೂ ಒಪ್ಪಓರಣದಿಂದ ಇರಿಸಿದ್ದರು.

ಪ್ರಪಂಚದಲ್ಲಿ ನಡೆದ ಸುದ್ದಿ ಸಮಾಚಾರಗಳನ್ನು ನನ್ನಿಂದ ಕೇಳಿಕೊಂಡರು. ಆಮೇಲೆ ನಾನು ಪ್ರಾರಂಭಿಸಿದೆ. " ನಿಮ್ಮ ವಯಸ್ಸು ಈಗ ಎಷ್ಟಿರಬಹುದು ?"

ಅವರು ನಕ್ಕು ನುಡಿದರು. "೯೨. ಮಾಡಿದ ಪುಣ್ಯದ ವಯಸ್ಸನ್ನು ಎಣಿಸಬೇಕು. ಬದುಕಿದ ಶರೀರದ್ದನ್ನಲ್ಲ. ಶರೀರವನ್ನು ಉಪಯೋಗಿಸಿಯೇ ಇಲ್ಲ. ಅಂದಾಗ ಅದರ ವಯಸ್ಸಿನ ಲೆಕ್ಕವಾದರೂ ಯಾಕೆ ಬೇಕು ?"

"ಶೇಠಜಿ, ನೀವು ಮಾಡಿದ ಕೆಲಸವನ್ನು ಲೋಕದಲ್ಲಿ ಕೆಲವರೆ ಮಾಡುತ್ತಾರೆ. ಸಾವಿರಾರು ಜನ ಇಂದು ನಿಮ್ಮನ್ನು ಕೊಂಡಾಡುತ್ತಾರೆ. ನೀವು ಅಜಾತಶತ್ರುಗಳು. ನನ್ನ ಜೀವನದಲ್ಲಿ ನಿಮ್ಮಂಥವರನ್ನು ನಾನು ಕಂಡದ್ದು ಇದೇ ಮೊದಲ ಸಲ."

"ಪಂಡಿತಜಿ, ನಾನು ಅಶಿಕ್ಷಿತ. ನಾನೇನು ಮಾಡಬಲ್ಲೆ? ಏನೊ ಈಶಪ್ರೇರಣೆಯಿಂದ ತಿಳಿದ ಮಟ್ಟಿಗೆ ನಡೆಸಿದ್ದೇನೆ. ನನ್ನ ಅಜ್ಜ ಒಂದು ದೀಪವನ್ನು ಹಚ್ಚಿದ್ದಾರೆ. ಅದಕ್ಕೆ ಎಣ್ಣೆ ಹಾಕುತ್ತಿರುವುದು ನಮ್ಮ ಕೆಲಸ. ಮುಂದಿನ ಪೀಳಿಗೆ ಏನು ಮಾಡುವುದೊ ಹೇಳಲಾರೆ.

"ನನ್ನ ಅಜ್ಜ ತರುಣರಿದ್ದಾಗ, ನಿಷ್ಕಾಂಚನರಿದ್ದರು. ದುಡಿಯುವ ಹುರುಪು ಬಹಳ. ಸುತ್ತಮುತ್ತಿನ ಊರುಗಳಿಗೆ ಹೋಗಿ ಕಿರಾಣಿ ಸಾಮಾನನ್ನು ಮಾರುತ್ತಿದ್ದರು. ಸ್ವತಃ ಅತ್ಯಲ್ಪ ವೆಚ್ಚದಲ್ಲಿ ಸಂಸಾರ ಸಾಗಿಸುತ್ತಿದ್ದರು. ದಿನಾಲು ಸಂಜೆಗೆ ತಪ್ಪದೆ ಆರತಿಯ ಹೊತ್ತಿಗೆ ರಾಘವಜಿಯ ಮಂದಿರಕ್ಕೆ ಹೋಗುತ್ತಿದ್ದರು. ಮೂವತ್ತು ವರ್ಷ ಕಷ್ಟ ಕಾರ್ಪಣ್ಯಗಳನ್ನನುಭವಿಸಿ ೬೦,೦೦೦ ರೂಪಾಯಿ ಕೂಡಿಸಿದರು. ಆಗ ಅವರು ೫೨ ವರ್ಷದವರಾಗಿದ್ದರು.

"ಧನತ್ರಯೋದಶಿಯ ದಿನ ಮುಂಜಾನೆಯಿಂದ ಅವರು ಶಾಂತರಾಗಿದ್ದರು. ಮಧ್ಯಾಹ್ನ ತಮ್ಮ ಕುಟುಂಬೀಯರನ್ನೆಲ್ಲ ತಮ್ಮ ಹತ್ತಿರ ಕರೆಸಿಕೊಂಡರು. ತಮ್ಮ ಕೂಡಿಟ್ಟ ಹಣದೊಂದಿಗೆ ಅವರೆಲ್ಲರನ್ನು ಕರೆದುಕೊಂಡು ರಾಘವಜಿಯ ಮಂದಿರಕ್ಕೆ ಹೋದರು. ಬೆವರು ಸುರಿಸಿ ಸಂಪಾದಿಸಿದ ಮೂವತ್ತು ವರ್ಷದ ಗಳಿಕೆಯನ್ನು ದೇವರ ಚರಣಗಳಲ್ಲಿ ಅರ್ಪಿಸಿ ನಮಸ್ಕರಿಸಿ ಮನೆಗೆ ಮರಳಿದರು.

"ಮನೆಗೆ ಬಂದಾಗ ಆನಂದ ಅವರ ಅಂತರಂಗವನ್ನು ತುಂಬಿಕೊಂಡಿತ್ತು. ಮೂವತ್ತು ವರ್ಷದ ಕರ್ಮನಿಷ್ಠ ಜೀವನವನ್ನೇ ಅವರು ಈಶ ಚರಣಗಳಲ್ಲಿ ಅರ್ಪಿಸಿದ್ದರು.

"ಮಂದಿರದ ಪೂಜಾರಿಗಳಾದರೂ ಒಬ್ಬ ಮಹರ್ಷಿಗಳು. ಊರ ಪಂಚರನ್ನು ಕರೆಸಿದರು. ಅಜ್ಜನ ವೃತ್ತಾಂತವನ್ನು ಅರುಹಿದರು. ಊರಿಗೆ ಊರೇ ಬೆರಗಾಯಿತು.



"ದೀಪಾವಳಿಯ ದಿನ ಮಂದಿರದಿಂದ ನಮ್ಮ ಮನೆಯ ಕಡೆಗೆ ಒಂದು ಮೆರವಣಿಗೆ ಬಂತು: ಮುಂದೆ ವಾದ್ಯ ಮೇಳ. ಹಿಂದೆ ಪಲ್ಲಕ್ಕಿ. ಅದರ ಹಿಂದೆ ಪೂಜಾರಿ, ಅವನ ಕೈಯಲ್ಲಿ ಅಜ್ಜನ 'ಅರ್ಪಣೆ'. ಅವನ ಹಿಂದೆ ಊರ ಜನಸಮುದಾಯ. ದೇವರ ನಾಮದ ಜಯಘೋಷ ಗಗನವನ್ನು ಭೇದಿಸ್ಸ

ತ್ತಿತ್ತು. ಮಹಿಳೆಯರು ಹಾಡುತ್ತಿದ್ದ ಗೀತಗಳ ಮಧುರ, ಮಂಗಲರವ ವಾತಾವರಣವನ್ನು ಪವಿತ್ರಗೊಳಿಸುತ್ತಿತ್ತು.

"ಅದೊಂದು ಅಭೂತಪೂರ್ವ ದೃಶ್ಯ. ಸ್ವತಃ ದೇವರೇ ಭಕ್ತನ ಮನೆಗೆ ನಡೆತರುವ ದೃಶ್ಯ. ಹೆಜ್ಜೆಹೆಜ್ಜೆಗೆ ದೇವರ ಪೂಜೆ, ಆರತಿ ನಡೆಯುತ್ತಿತ್ತು. ಮೆರವಣಿಗೆ ಮನೆಯ ಮುಂದೆ ಬಂತು.

"ನಮ್ಮ ಅಂಗಳದಲ್ಲಿ ಬಂದು ಮೆರವಣಿಗೆ ನಿಂತಿತು. ಆಗ ನಾನು ಆರು ವರ್ಷದವನಿದ್ದೆ. ಆದರೆ ನೋಡುತ ನಿಂತ ಜನರ ದೃಷ್ಟಿಯಿಂದ ಹೆಚ್ಚಿದ್ದು ಉಕ್ಕಿದ ಅಭಿಮಾನದಿಂದ ರಕ್ತದ ಒತ್ತಡ ಇಂದಿಗೂ ನನಗೆ ನೆನಪಿಗೆ ಬರುತ್ತಿದೆ. ನೀವೇ ಹೇಳಿ ಪಂಡಿತಜಿ, ಸಾವಿರಾರು ವರ್ಷದಲ್ಲೂ ಲಭಿಸದ ಅಂಥ ದೃಶ್ಯದ ಮೇಲಿಂದ ಪ್ರಾಣವನ್ನು ನಿವಾಳಿಸಿ ಧನ್ಯನಾಗಬಯಸದವನು ಯಾರಾದರೂ ಇರಬಹುದೆ?

"ಪಲ್ಲಕ್ಕಿ ಇಳಿಸಿ, ಅಜ್ಜ ಅಜ್ಜಿಯರನ್ನು ಕರೆದರು. ಅಜ್ಜನ ಹಣೆಗೆ ತಿಲಕ ಹಚ್ಚಿದರು. ಮತ್ತು ಅವರು ಅರ್ಪಿಸಿದ್ದ ಹಣವನ್ನೆಲ್ಲ ಅವರ ಕೈಯಲ್ಲಿತ್ತು, ಆಶೀರ್ವದಿಸಿ ಪೂಜಾರಿ ಹೀಗೆಂದರು: 'ಭಗನಲಾಲಜಿ, ದೇವರ ಇಚ್ಛೆಯಮೇರೆಗೆ ತಾವೇ ದೇವರ ಗುಮಾಸ್ತರಾಗಿ ಈ ಹಣವನ್ನು ಜತನವಾಗಿ ಇಡುವುದಲ್ಲದೆ ಎಲ್ಲ ಕಾರ್ಯಭಾರವನ್ನು ನೋಡಿಕೊಳ್ಳಬೇಕು.'

"ತಮ್ಮ ತ್ಯಾಗವನ್ನು ನಾವು ಮೆಚ್ಚಿದ್ದೇವೆ. ಈ ದುಡ್ಡಿನಿಂದ ಬರುವ ಉತ್ಪನ್ನದ ೫% ಮಾತ್ರ ನೀವು ಸ್ವಂತಕ್ಕಾಗಿ ಉಪಯೋಗಿಸಬಹುದೆಂದು ಪಂಚರು ಸಲಹೆ ಇತ್ತಿದ್ದಾರೆ. ಇದನ್ನು ಲೋಕಹಿತಕ್ಕಾಗಿಯೇ ಉಪಯೋಗಿಸಬೇಕು. ಮತ್ತು ಒಂದು ಪೈಯ ಲೆಕ್ಕವೂ ತಪ್ಪದಂತೆ ಚೊಕ್ಕವಾಗಿ ಲೆಕ್ಕ ಇಡಬೇಕೆಂದು ರಾಘವಜಿಯ ಇಷ್ಟವಿದೆ. ಧನ್ಯರಾದಿರಿ ಶೇಠಜಿ. ಕ್ಷಣಮಾತ್ರದಲ್ಲಿ ನೀವು ಜೀವನ್‌ಮುಕ್ತರಾದಿರಿ. ಇನ್ನು ದೇವರ ಆದೇಶವನ್ನು ಶಿರೋಧಾರ್ಯವೆಂದು ಬಗೆದು ವಂಶಪಾರಂಪರಿಕವಾಗಿ ಈ ಕಾರ್ಯವನ್ನು ಮುಂದುವರಿಸಿರಿ. ನಿಮ್ಮ ವಂಶಜರು ಈ ಪವಿತ್ರ ಯಜ್ಞದ ಅಮೃತಪ್ರಾಶನ ಮಾಡಲಿ.'

"ಅಜ್ಜನ ಕಣ್ಣುಗಳಿಂದ ಅಶ್ರುಧಾರೆ ಹರಿಯತೊಡಗಿದವು. ದೇವರ ಅಡಿಗಳಲ್ಲಿ ಸಾಷ್ಟಾಂಗ ಎರಗಿದರು. ಆರಾಧ್ಯ ದೈವತದ ಮುಂದೆ ಹೊಟ್ಟೆ ತುಂಬ ಅಳುವವರಿದ್ದರವರು. ಅಂದು ದೇವ-ಭಕ್ತರ ನಡುವಿನ ಅಂತರ ಅಳಿದುಹೋಗಿತ್ತು."

ಶೇಠಜಿಯವರ ಕಣ್ಣುಗಳಿಂದೂ ನೀರು ಹರಿಯುತ್ತಿದ್ದವು. ಕಂಠದ ನರ ಉಬ್ಬಿದ್ದವು. ಒಬ್ಬ ಅಜ್ಞಾತ ವ್ಯಾಸನೊ ವಾಲ್ಮೀಕಿಯೊ ಹಾಡಿದ ಮಹಾಕಾವ್ಯವೊಂದರ ರಸಭರಿತವಾದ ಅಧ್ಯಾಯವದಾಗಿತ್ತು. ಅದು ಲಿಖಿತ ಗ್ರಂಥವಲ್ಲದಿದ್ದರೂ ಕತೆಯ ರೂಪದಿಂದ ಸೂತ್ರವಷ್ಟೇ ಉಳಿದುಕೊಂಡದ್ದಾಗಿತ್ತು.

ಅವರ ಕತೆ ಕೇಳುತ್ತಿದ್ದಂತೆ ನನಗೆ ಇಬ್ಬರು ಕವಿಗಳ ಭೆಟ್ಟಿಯ ಒಂದು ಪ್ರಸಂಗ ನೆನಪಿಗೆ ಬಂತು.

ಸರೋಜಿನಿ ನಾಯುಡು ಅವರು ಒಮ್ಮೆ ಶಾಂತಿನಿಕೇತನಕ್ಕೆ ಹೋಗಿದ್ದರು. ಆ ಹಿಂದೆ ಕೆಲ ದಿವಸಗಳಿಂದ ರವೀಂದ್ರನಾಥರು ಕಾವ್ಯಲೇಖನವನ್ನು ನಿಲ್ಲಿಸಿದ್ದರು. ಬರೇ ಸಾಪ್ತಾಹಿಕ ನಿಬಂಧಗಳನ್ನು ಮಾತ್ರ ಬರೆಯುತ್ತಿದ್ದರು. ರವೀಂದ್ರನಾಥರು ಕಾವ್ಯವನ್ನು ನಿಲ್ಲಿಸಿದ್ದು ಸರೋಜಿನಿಯವರಿಗೆ ಸರಿದೋರಲಿಲ್ಲ. ಉದ್ವಿಗ್ನರಾಗಿ ಅವರು ರವೀಂದ್ರನಾಥರ ಮುಂದೆ ಹೇಳಿದರು: "ತಾವು ಕವಿತೆ ಬರೆಯುವುದನ್ನು ನಿಲ್ಲಿಸಿದ್ದು ಅಸಂತೋಷಕರ. ನೀವು ಈಗ ಏಕೆ ಕವಿತೆ ಬರೆಯುವುದಿಲ್ಲ?"

"ಅಂಥಾ ಬದಲಾವಣೆಯೆ ಆಗಿಲ್ಲ. ಒಂದು ಮಹಾಕಾವ್ಯ ಬರೆಯಬಯಸುತ್ತೇನೆ. ಆದರೆ ಯೋಗ್ಯ ವಿಷಯವೆ ಸಿಗುತ್ತಿಲ್ಲ."

"ತಮ್ಮ ಮಾತಿನ ಅರ್ಥವೇ ಗೊತ್ತಾಗುವುದಿಲ್ಲ."

"ಐತಿಹಾಸಿಕ ಅಥವಾ ಪೌರಾಣಿಕ ನಾಯಕನ ಗುಣಗಾನ ಮಾಡುವ ಇಚ್ಛೆ ನನಗಿಲ್ಲ. ಇಂದಿನ ರಾಜಕೀಯ ಮುಂದಾಳೊಬ್ಬನ ತಲೆಗೆ ಕಿರೀಟವಿಡುವ ಇಚ್ಛೆ ನನಗಿಲ್ಲ. ಸ್ವಪ್ರಯತ್ನದಿಂದ ತೇಜಸ್ವಿಯಾದ ಈ ಭೂಮಿಯ ಸುಪುತ್ರನೇ ನನ್ನ ಕಾವ್ಯದ ನಾಯಕನಾಗಬೇಕೆಂದು ನನ್ನ ಇಚ್ಛೆ. ಅಂಥವನ ಗುಣಗಾನ ಮಾಡಲು ನನ್ನ ಲೇಖನಿ ಹಾತೊರೆಯುತ್ತಿದೆ. ತಮ್ಮ ಕರ್ತೃತ್ವದ ಸರ್ವಸ್ವವನ್ನು ಲೋಕಲೋಕೇಶ್ವರನ ಚರಣದಲ್ಲಿ ಸುರಿಯುವ ಸುಪುತ್ರನನ್ನು ವರ್ಣಿಸಲು ನನ್ನ ಕಲ್ಪನಾಶಕ್ತಿ ಉತ್ಸುಕವಾಗಿದೆ."

ರವೀಂದ್ರನಾಥರಿಗೆ ಶೇಠಜಿಯವರ ಸುದ್ದಿ ಮುಟ್ಟಲಿಲ್ಲವೆಂದು ಮನನೊಂದೆ. ಇದೇ ಪಾತ್ರವನ್ನು ಪ್ರಮುಖವಾಗಿಟ್ಟುಕೊಂಡು ಅವರು ಅಜರಾಮರ ಚರಿತ್ರೆಯನ್ನೇ ನಿರ್ಮಿಸುತ್ತಿದ್ದರೇನೊ ಎಂದು ನನಗನಿಸುತ್ತದೆ. ಆದರೆ ತಮ್ಮ ಚರಿತ್ರೆ ಬರೆಸಿಕೊಳ್ಳಲು ಕವಿಗಳ ಕಡೆಗೆ ಹೋಗುವ ಅಗತ್ಯ ಭಗನಲಾಲಜಿ ಅಥವಾ ಚಾಂದಮಲಜಿ ಅವರಂಥವರಿಗೇನು? ಯಶಸ್ಸನ್ನಾಗಲಿ ಕೀರ್ತಿಯನ್ನಾಗಲಿ ಉಪಭೋಗಿಸಲು ಬದುಕುವುದಿಲ್ಲ ಅವರು. ತ್ಯಾಗದಲ್ಲೇ ತಮ್ಮ ಜೀವನದ ಸಾರ್ಥಕ್ಯವನ್ನು ಅವರು ಕಾಣುತ್ತಾರೆ.

ಅಜ್ಜ ಹಚ್ಚಿದ ಈಶ್ವರನ ಇಡುಗಂಟಿನ ದೀವಿಗೆಯನ್ನು ಅಖಂಡ ನಂದಾದೀಪವಾಗಿ ಮೊಮ್ಮಗನ ಮುಪ್ಪಿನಲ್ಲೂ ಅವರ ಕುಟುಂಬೀಯರು ಸತ್ಯನಿಷ್ಠೆಯ ಎಣ್ಣೆ ಎರೆದು ಉರಿಸಿ ಇಟ್ಟಿದ್ದಾರೆ. ಅವರ ಅಂಗಡಿ ಆದರ್ಶ ಅಂಗಡಿ. ಮೋಸ, ಅನುಚಿತ ಲಾಭ, ಕಳ್ಳಪೇಟೆ ಇವು ಸ್ವಲ್ಪವೂ ಅಲ್ಲಿಲ್ಲ. ಅವರ ಸತ್ಯ ವ್ಯವಹಾರದಿಂದಲೇ ರಾಘುವಜಿಯ ಸಂಪತ್ತು ದ್ವಿಗುಣಿತ ತ್ರಿಗುಣಿತವಾಗುತ್ತ ನಡೆದಿದೆ. ದೇವರ ಸ್ವಂತ ಅಂಚೆಕಟ್ಟೆ ಇದೆ. ಆಸ್ಪತ್ರೆ ಇದೆ. ವಿದ್ಯಾಲಯವಿದೆ. ನ್ಯಾಯಾಲಯವಿದೆ. ಎಲ್ಲ ಶಾಖೆಗಳನ್ನು ಚಾಂದಮಲಜಿಯವರ ಕುಟುಂಬೀಯರೇ ನಡೆಸುತ್ತಾರೆ. ಊರಿಗೆ ಸ್ವಂತ ವಿದ್ಯುದುತ್ಪಾದನಗೃಹವೊಂದಿದೆ. ಓಣಿ ಓಣಿಗೆ ನೀರಿನ ನಳ. ಸುದೃಢ ಮತ್ತು ಸರಳ ಸ್ವಭಾವದ ನಗುಮುಖದ ಜನ !

ಈ ಊರ ಮೇಲೆ ಸರಕಾರದ ನಿಯಂತ್ರಣ ನಾಮಮಾತ್ರ. ಹಿಂದೆ ಸಂಸ್ಥಾನಿಕರ ರಾಜ್ಯವಿದ್ದಾಗಲೇ ಈ ಊರಿಗೆ 'ರಾಘುವಜಿಯ ಊರೆ'ಂದು ಹೆಸರು ಕೊಟ್ಟಿದ್ದಾರೆ. ಕೆಲ ವರ್ಷಗಳ ಹಿಂದೆ ಈ ಸೀಮೆ ಬರಗಾಲದಿಂದ ಪೀಡಿತವಾಯಿತು. ಆದರೆ ಈ ಊರಲ್ಲಿ ಮಾತ್ರ ಆದರ ಬಾಧೆ ಎಳ್ಳಷ್ಟೂ ತಟ್ಟಲಿಲ್ಲ. ಆದರೆ ತಾವು ಸುಖದಲ್ಲಿದ್ದಾಗ ತಮ್ಮ ನೆರೆಹಳ್ಳಿಯವರು ಅನ್ನಾನ್ನ ಗತಿಗೀಡಾಗಿ ಒದ್ದಾಡುವುದು ಶೇಠಜಿಯವರಿಗೆ ಸರಿದೋರಲಿಲ್ಲ. ಅವರು ಒಂದು ದೊಡ್ಡ ಕೆರೆ ತೋಡುವ ಕಾರ್ಯ ಪ್ರಾರಂಭಿಸಿದರು. ಮೂರು ತಿಂಗಳು ಜನರಿಗೆ ಕೆಲಸ ಕೊಟ್ಟರು. ಕೆಲಸಕ್ಕೆ ಪ್ರತಿಫಲವಾಗಿ ಕಾಳನ್ನು ಕೊಡುತ್ತಿದ್ದರು.

"ಪಂಡಿತಜಿ, ಬರಗಾಲ ಬೀಳುವ ಮುಂಚೆಯೇ ಎರಡು ವರ್ಷಗಳ ಹಿಂದೆ ನನಗೆ ಮುಂದೆ ಹೀಗೆ ಆದೀತೆಂದು ಅನ್ನಿಸಿತ್ತು. ಆಗ ನನ್ನ ವಿಚಾರಕ್ಕಾಗಿ ನಾನು ಅನುತಾಪಪಟ್ಟೆ. ಏನೇ ಆಗಲಿ, ಸಂರಕ್ಷಣೆಯ ತಕ್ಕ ಉಪಾಯ ಈಗಲೇ ಪ್ರಾರಂಭಿಸಿದರೆ ಕೆಟ್ಟೇನು ಎಂದುಕೊಂಡು ನಾನು ಅಂದಿನಿಂದಲೇ ಧಾನ್ಯವನ್ನು ಹಗೆಯಲ್ಲಿ ಹಾಕಿ ಇಡತೊಡಗಿದೆ. ಈಶಕೃಪೆಯಿಂದ ಸುತ್ತಮುತ್ತಿನ ಹತ್ತೆಂಟು ಹಳ್ಳಿಗಳಿಗೆ ಮೂರು ವರ್ಷ ಸಾಲುವಷ್ಟು ಧಾನ್ಯ ಸಂಗ್ರಹ ಸ್ವಲ್ಪ ಅವಧಿಯಲ್ಲೆ ಸಿದ್ಧವಾಯಿತು. ಅಂದಿನ ನೆನಪು ಬಂದರೆ ಇಂದಿಗೂ ಹೊಟ್ಟೆ ಹೊಸೆಯುತ್ತದೆ. ಅಂತೂ ದೇವರೇ ಸಂಕಟದಿಂದ ಪಾರು ಮಾಡಿದ. ಇಲ್ಲವಾದರೆ ವ್ಯವಸ್ಥಾಪಕರಾದ ನಮ್ಮ ಕರ್ತವ್ಯಚ್ಯುತಿಯಾಗುತ್ತಿತ್ತು."

ಶೇಠಜಿಯವರ ಮೇಲಿನ ಉದ್ಗಾರ ಕೇಳಿ ನನಗೆ ಇರಾಣದ ಶೇಖ ಸಾದಿಯ ಈ ಸಾಲು ನೆನಪಾಯಿತು: "ಖುದಾ, ನೀನು ಯಾರನ್ನಾದರೂ

ರಾಜನನ್ನಾಗಿ ಮಾಡುವುದಿದ್ದರೆ ಮೊದಲು ಅವನಲ್ಲಿ ರಾಜನ ಹೃದಯ ಸ್ಥಾಪಿಸು. ಈಗಿನ ನಿನ್ನ ಸೃಷ್ಟಿಯಲ್ಲಿ ಎಲ್ಲ ಅನರ್ಥವಾಗಿದೆ. ಬಹಳಷ್ಟು ರಾಜರು ರಾಜನ ಹೃದಯವಿಲ್ಲದೆ ಸುಮ್ಮನೆ ರಾಜ ರಾಗಿದ್ದಾರೆ."

ಚಾಂದಮಲಜಿಯವರ ಆದರ್ಶ ಕಣ್ಮುಂದೆ ಇರಿಸಿಕೊಂಡು ಯಾರಾದರೂ ಮೇಲಿನಂತೆ ದೇವ ರನ್ನು ಕೇಳಿಕೊಂಡರೆ ನ್ಯಾಯದ ತಕ್ಕಡಿ ಹಿಡಿದು ಕೊಂಡು ಕೂತ ಧರ್ಮರಾಜನು ಭಕ್ತನ ಕೇಳಿಕೆ ಯನ್ನು ಈಶ್ವರನಲ್ಲಿಗೆ ಮುಟ್ಟಿಸಬಹುದು.

ಆ ಮೇಲೂ ನಾನು ನಾರಾಯಣಗಾಂವಕ್ಕೆ ಹತ್ತೆಂಟು ಸಲ ಹೋದೆ. ಶೇಠಜಿಯವರ ಅತಿ-ಥಿಯಾಗಿಯೆ ಉಳಿದೆ. ಅವರೊಟ್ಟಿಗೆ ಊಟ ಮಾಡಿದೆ. ಅವರ ಆಹಾರ ಸಾದಾ ಮತ್ತು ಸಾತ್ವಿಕ.

ಒಮ್ಮೆ ಹೀಗೆಯೆ ಮಾತಾಡುವಾಗ ಧನದೌಲ ತ್ತಿನ ಬಗ್ಗೆ ಹೀಗೆಂದರು:—"ಪಂಡಿತಜಿ, ನಾನು ಅಶಿಕ್ಷಿತ. ಕೇಳಿ ತಿಳಿದದ್ದೆ ನಮ್ಮ ಜ್ಞಾನ. ಧನದಿಂದ ಎಂದಿಗೂ ತೃಪ್ತಿ ದೊರಕದೆಂಬುದು ನಿಮಗೂ ಗೊತ್ತಷ್ಟೆ. ಕೇನೋಪನಿಷತ್ತಿನಲ್ಲಿ ಹೇಳಿಲ್ಲವೆ— 'ನ ವಿತ್ತೇಣ ತರ್ಪಣೀಯೋ ಮನುಷ್ಯಃ' (ದುಡ್ಡಿನಿಂದ ಮನುಷ್ಯನಿಗೆ ತೃಪ್ತಿ-ಯಾಗದು) ಅಂದ ಮೇಲೆ ಧನದ ಮೋಹ ಯಾಕೆ?

"ಇದರರ್ಥ ಧನಾರ್ಜನೆಯನ್ನು ವರ್ಜಿಸ ಬೇಕೆಂದಲ್ಲ. ಧನ ಸಾಧನ, ಅದಿಲ್ಲದೆ ಮನುಷ್ಯನ ಯಾವ ಸಾಧನೆಯೂ ಪೂರ್ಣವಾಗದು. ಆದರೆ ಮನುಷ್ಯ ಅದಕ್ಕೆ ಎಂದೂ ಒಳಗಾಗಬಾರದು. ಅರಬಿಯರಲ್ಲಿ ಒಂದು ಕತೆ ಇದೆ. ನಮ್ಮ ಮೌಲವಿ ಹೇಳಿದ್ದರು :

"ಈಶ್ವರನು ಸಂಪತ್ತಿಗೆ ರೂಪ ಕೊಟ್ಟು ಧರೆಗೆ ಅಟ್ಟಿದ. ಆಕೆ ಚಂಚಲೆ. ಹಟಮಾರಿ. ಒಂದು ಕಡೆ ನಿಲ್ಲುವವಳಲ್ಲ. ಪಾತರಗಿತ್ತಿಯಂತೆ ಸದಾ ಚಲಿಸುವವಳು. ಅಲ್ಲದೆ ತನ್ನೊಂದಿಗೆ ಲಕ್ಷಾಂ-ತರ ಜನರನ್ನೂ ಓಡಾಡಿಸುವವಳು. ಇದರಿಂದ ಲೋಕದಲ್ಲಿ ಹಾಹಾಕಾರವೆದ್ದಿತು. ಕೆಲ ದಿನ ಗಳಲ್ಲೆ ಲಕ್ಷ್ಮಿ ಈಶನಿರ್ಮಿತ ಸೃಷ್ಟಿಯನ್ನು ಅಸ್ತ ವ್ಯಸ್ತಗೊಳಿಸಿದಳು. ದೇವರೂ ಕೊನೆಗೆ ಸಹನೆ ಮೀರಿ ಅವಳನ್ನು ಸ್ವರ್ಗಕ್ಕೆ ಕರೆಸಿಕೊಂಡು ಅವಳ ಕಣ್ಣು ಕೀಳಿಸಿದ. ಅಂದಿನಿಂದ ಅವಳ ಕಣ್ಣಿಗೆ ಏನೂ ಕಾಣುವುದಿಲ್ಲ.

"ಕುರುಡಿಯಾದರೂ ಸ್ವಭಾವ ಹಿಂದಿನದೇ ಇದೆ. ತಾನೇ ಸ್ವಾಮಿನಿಯಾಗಬೇಕೆಂದು ಅವಳ ಇಚ್ಛೆ. ಅದಾಗದಂತೆ ನೋಡಿಕೊಂಡು ಅವ-ಳನ್ನೇ ತನ್ನ ವಶದಲ್ಲಿಟ್ಟುಕೊಂಡು ಯೋಗ್ಯರೀತಿ ಯಲ್ಲಿ ದುಡಿಸಬೇಕಾದ್ದು ಮಾನವನ ಕರ್ತವ್ಯ'.

"ಪಂಡಿತಜಿ, ಲಕ್ಷ್ಮಿಯನ್ನು ಆಳುವುದು ಸಾಮಾನ್ಯವಲ್ಲ. ಅದನ್ನು ಜನಕನಂಥ ರಾಜರ್ಷಿ ಗಳೇ ಮಾಡಬಲ್ಲರು. ನನ್ನ ಅಜ್ಜನ ದಾರಿಯೆ ಯೋಗ್ಯವಾಗಿತ್ತೆಂದು ನನಗೆ ಅನಿಸುತ್ತದೆ. ಈಶ್ವ ರನಿಗರ್ಪಿಸಿದ ಹೊರತು ಲಕ್ಷ್ಮಿ ತನ್ನ ಸ್ವಭಾವ ಬಿಡಳು. ಅವಳಿಂದ ಅಲಿಪ್ತರಾಗಿರುವ ಸುಲಭ-ತಮ ಉಪಾಯವೆಂದರೆ ಇದೇ....ಅನ್ಯರ ಸೊತ್ತನ್ನು ಕಾಯುವುದರಿಂದ ಹೃದಯದಲ್ಲಿ ಅನಾಸಕ್ತಿ ಜಾಗೃತವಾಗುತ್ತದೆ. ಸ್ತ್ರೀಯರು ಮಂಗಲದೀಪವನ್ನು ಮಂದಿರದಲ್ಲಿ ಒಯ್ಯುವಾಗ ಅದರ ಮೇಲೆ ನೀರ ಹನಿ ಬೀಳಬಾರದೆಂದೂ ಗಾಳಿ ಸೋಂಕಿ ಅದು ಆರಿಹೋಗಬಾರದೆಂದೂ ತಮ್ಮ ಹೃದಯದ ತೀರ ಹತ್ತಿರಕ್ಕೆ ಹಿಡಿದಿರು ತ್ತಾರೆ."

*

ಶಿವಾಜಿ ಮಹಾರಾಜರ ಮನಸ್ಸು ತಡೆಯಲಿಲ್ಲ. ಮಂತ್ರಿ ಅಪ್ಪಾಜಿಯನ್ನು ಕರೆದು ಹೇಳಿದರು "ಸ್ವಾಮೀಜಿ ಬಂದರೆಂದರೆ ನನ್ನನ್ನು ಕರೆಯಿರಿ."

ನಿತ್ಯದಂತೆ ರಾಮದಾಸ ಸ್ವಾಮಿಗಳು ನಗರ ದಲ್ಲಿ ಭಿಕ್ಷಾಟನೆಗೆ ಹೊರಟರು. ಭಿಕ್ಷೆ ಮುಗಿಸಿ ಮಠಕ್ಕೆ ಮರಳಿದಾಗ ಅಪ್ಪಾಜಿ ಅಲ್ಲಿ ಬಂದಿ ದ್ದರು. ನಮಸ್ಕರಿಸಿ ಗುರುಚರಣದಲ್ಲಿ ಮಡಿಚಿದ

ಒಂದು ಹಾಳೆಯನ್ನು ಇಟ್ಟರು. ಸ್ವಾಮಿಗಳು ಓದತೊಡಗಿದರು. "ತಮ್ಮ ದಾಸಾನುದಾಸನಾದ ಶಿವಾ ತಮ್ಮ ಪಾದಂಗಳಲ್ಲಿ ತನ್ನ ಸಕಲ ಸಾಮ್ರಾಜ್ಯವನ್ನು ಅರ್ಪಿಸುತ್ತಾನೆ. ಇನ್ನಾದರೂ ತಮ್ಮ ಭಿಕ್ಷಾಟನೆ ನಿಲ್ಲಬಹುದಲ್ಲವೆ?"

ಸ್ವಾಮಿಗಳು ನಕ್ಕರು. ಮತ್ತೆ ಕಾಗದವನ್ನು ಮಡಚಿ ತಮ್ಮ ಆಸನದ ಕೆಳಗಡೆ ಇಟ್ಟರು. ಮರುದಿನ ಶಿವಾಜಿ ಮಹಾರಾಜರನ್ನು ಕರೆಸಿ ನುಡಿದರು. "ರಾಜ್ಯವನ್ನಂತೂ ಅರ್ಪಿಸಿರುವೆ. ಇನ್ನು ಅರಮನೆಯಲ್ಲಿದ್ದು ಏನು ಮಾಡುವೆ? ಇಲ್ಲಿಯೆ ಬಂದುಬಿಡು. ನನಗೂ ನೆರವಾಗು."



ಮಹಾರಾಜರು ಆನಂದಿತರಾದರು. ಕಾವಿ ಬಟ್ಟೆ ಧರಿಸಿ ಮಠಕ್ಕೆ ಬಂದರು. ಸ್ವಾಮಿಗಳು ಅವರ ಕೈಗೊಂದು ಭಿಕ್ಷಾಪಾತ್ರ ಕೊಟ್ಟರು. ಮತ್ತು ತನ್ನೊಂದಿಗೆ ಭಿಕ್ಷೆಗೆ ಕರೆದುಕೊಂಡು ನಡೆದರು. ಜನರು ಆಶ್ಚರ್ಯಚಕಿತರಾಗಿಬಿಟ್ಟರು. ಮೂರು ದಿನ ಹೀಗೆ ನಡೆಯಿತು. ನಾಲ್ಕನೇ ದಿನ ಅವರ ಕಾಗದವನ್ನೇ ಮರಳಿ ಅವರ ಕೈಗಿತ್ತು "ಇಕೋ, ನನ್ನ ಇಡಗಂಟಿದು. ಇದನ್ನು ಚೆನ್ನಾಗಿ ರಕ್ಷಿಸುವ ಭಾರ ನಿನ್ನನ್ನು ಕೂಡಿದೆ. ಇಕೊ ಈ ಜೋಳಿಗೆ. ಇದನ್ನು ಹರಿದು ಧ್ವಜ ಮಾಡು. ನನಗಾಗಿ ಈ ರಾಜ್ಯದ ರಕ್ಷಣೆ ವೃದ್ಧಿ ಮಾಡು. ಸದ್ಧರ್ಮ ಸತ್ಕರ್ಮಗಳ ಪ್ರಸಾರಕ್ಕಾಗಿ ಹೆಣಗು" ಎಂದು ಉಪದೇಶಿಸಿದರು.

ಎಷ್ಟೇ ಸಂಕಟ ಬಂದರೂ ಸಂನ್ಯಾಸಿ ಇತ್ತ ಸಂಪತ್ತಿನ ನಂದಾದೀಪ ಶಿವಾಜಿಯ ಹೃದಯದಲ್ಲಿ ಕೊನೆಯುಸಿರ ವರೆಗೂ ಪ್ರಜ್ವಲಿಸುತ್ತ ಉಳಿಯಿತು. ಆ ದೀಪದ ಬೆಳಕಿನಿಂದ ಶಿವಾಜಿಯ ಹೆಸರಷ್ಟೆ ಬೆಳಗಿತೆಂದಲ್ಲ, ಶತಕಾನು ಶತಕಗಳಿಂದ ನಿದ್ರಿಸಿದ್ದ ಮಹಾರಾಷ್ಟ್ರ ಎಚ್ಚತ್ತು ದೇದೀಪ್ಯಮಾನ ನಕ್ಷತ್ರದಂತೆ ಹೊಳೆಯಲಾರಂಭಿಸಿತು.

ಶಿವಾಜಿಯ ಈ ತ್ಯಾಗದಿಂದ ರವೀಂದ್ರರ ಲೇಖನಿ ಒಮ್ಮೆ ಜಾಗ್ರತವಾಯಿತು. ಕಾವ್ಯ ಪ್ರವಾಹ ತಡೆಯಿಲ್ಲದೆ ಹರಿಯಲಾರಂಭಿಸಿತು. ಅದನ್ನು ನೋಡಿದಾಗ ಭಾವ ಕವಿಗಳು ಮನೆ ಬಿಟ್ಟು ಹೊರಬರುವುದಿಲ್ಲವೇಕೆ? ತಮ್ಮ ಪ್ರತಿಭೆಯ ಪಕ್ಷಿಯನ್ನು ಲೋಕಜೀವನದ ಅನಂತ ಗಗನದಲ್ಲಿ ಹಾರಬಿಡುವುದಿಲ್ಲವೇಕೆ? ಎನಿಸುತ್ತದೆ. ಹಾಗೆ ಹೃದಯವನ್ನು ಸಾಮಾನ್ಯ ಜೀವನದ ಆಸ್ವಾದದಲ್ಲಿ ತೊಡಗಿಸಿದರೆ ಪ್ರತಿ ಮಾನವನ ಹೃದಯವೂ ಒಂದು ಮೋಹಕ ಕಾವ್ಯವೆನ್ನಿಸದಿರಲಾರದು.

*

ಇಂಥ ಕಲ್ಪನಾಜೀವಿ ಕವಿ ಸಂಪ್ರದಾಯವನ್ನು ಇಂಗ್ಲಿಷ್ ಕವಿ ಆಡೆನ್ನರೂ ಕಟು ಶಬ್ದಗಳಿಂದ ಟೀಕಿಸುತ್ತಾರೆ: "ವರ್ಷಾನು ವರ್ಷ ಕಾಲ ಗೋರಿಯ ತಳದಲ್ಲಿ ನಿದ್ದೆ ಮಾಡುತ್ತಿರುವವರ ಮೇಲೆ ಕೀರ್ತಿ ಕನಸುಗಳನ್ನು ಅರ್ಪಿಸುವ ಕವಿಗಳನ್ನು ಪ್ರಜ್ಞಾಶಾಲಿಗಳೆಂದು ಕರೆದರೆ ನಾನು ಅಸತ್ಯವಾದಿಯಾದೇನು. ನಿಮ್ಮ ಸುತ್ತಮುತ್ತ ನಡೆಯುತ್ತಿರುವ ಬಾಳಿನ ಸುಖದುಃಖಗಳನ್ನು ನಿಮ್ಮಲ್ಲಿ ಅಳವಡಿಸಿಕೊಂಡು, ಪ್ರೇರಣೆ ಬಂದಂತೆ ಅದನ್ನು ಎದೆಗವಚಿಕೊಳ್ಳುವುದನ್ನು ಬಿಟ್ಟು, ಪುಸ್ತಕಾಲಯದಲ್ಲಿ ಗದ್ದಲು ತಿಂದ ಗ್ರಂಥಗಳನ್ನು ನಿಮ್ಮ ಗಂಟಲಲ್ಲಿಳಿಸುವ ಹವ್ಯಾಸಕ್ಕೇಕೆ ಬೀಳುತ್ತೀರಿ? ಅರಳಿದ ಗುಲಾಬಿಗಳ ಸುಂದರ ಉದ್ಯಾನ ನಿಮ್ಮೆದುರಿ

ಗಿದೆ. ನಿಮ್ಮ ಗೂಡಿನಿಂದೊಮ್ಮೆ ಹೊರಬೀಳಿರಿ .... ನಿಮ್ಮ ಮನದ ಕಣ್ಣುಗಳಲ್ಲಿ ಆತ್ಮೀಯತೆಯ ಬೆಳಕು ಮಿರುಗಲಿ. ಆಗ ಪ್ರತಿಯೊಬ್ಬ ಮಾನವನ ಹೃದಯವೂ ಒಂದು ಕಾವ್ಯವಾಗಿದೆಯೆಂಬಂಶ ನಿಮ್ಮ ಗಮನಕ್ಕೆ ಬಂದೀತು. ಭೂಮಿಯಲ್ಲಿ ಒಂದೊಂದು ಅಂಗೈಯಲ್ಲೂ ಒಂದೊಂದು ಜೀವಂತ ಕಥೆ ಮೊಳಕೆಯೊಡೆಯುತ್ತಿದೆ.

ಆಡೆನ್ ಮಹಾಕವಿ ಇದ್ದಾರೆ. ಮಾನವ್ಯದ ಪ್ರತಿನಿಧಿ ಎಂದು ಏನು ಬೇಕಾದ್ದನ್ನು ಹೇಳುವ ಅಧಿಕಾರ ಅವರಿಗಿದೆ. ಅವರಂತೆ ನಾನು ತಕರಾರು ಮಾಡಲಾರೆ. ಆದರೆ ಇನ್ನೊಂದು ವ್ಯಕ್ತಿಯ ಜೀವನದ ಬಗ್ಗೆ ಹೇಳದಿರಲಾರೆ. ಅವರು ಶಿವನಾರಾಯಣಜಿ ಎಂಬ ಸಾಮಾನ್ಯ ವ್ಯಕ್ತಿ. ಅಂಥವರು ನಮ್ಮ ಸುತ್ತಮುತ್ತ ನೂರಾರು ಜನರು ಸಿಗಬಹುದು.

ಇಂದು ಅವರನ್ನು ಗುರುತಿಸುವ ಜನ ತುಂಬ ಇದ್ದಾರೆ. ಆದರೆ ಹಿಂದೊಮ್ಮೆ ಅವರ ನೆರೆಹೊರೆಯವರಿಗೂ ಗೊತ್ತಿಲ್ಲದಂತಿದ್ದರವರು. ಆಗ ಅವರ ವಿನಾಶಕಾಲ ಸನ್ನಿಹಿತವಾಗಿತ್ತು. ಅದು ನಡೆದದ್ದು ಹೀಗೆ—

ಅವರ ಸೊಸೆ ಪಾರ್ವತಿ ಮೇಜಿನ ಮೇಲೆ ನೀರಿನ ಲೋಟ ಇಟ್ಟು ಹೋದಳು. ಕ್ಷಣಕಾಲ ತೀಕ್ಷ್ಣ ದೃಷ್ಟಿಯಿಂದ ಮಾವನನ್ನು ನೋಡಿದಳು.

ಮನೋಗತವನ್ನು ತಿಳಿದಳು. ಮುಂಬರುವ ಸಂಕಟದ ಸೂಚನೆ ಆಗಲೆ ಅವಳಿಗೆ ಗೊತ್ತಾಯಿತೇನೊ! ಅವಳ ನಡಿಗೆ ಮಂದವಾಯಿತು. ಎದೆ ನಡುಗಲಾರಂಭಿಸಿತು. ಇಷ್ಟು ದಿನ ಇದನ್ನೆಲ್ಲ ಕಟ್ಟಿಕೊಂಡು ತನಗೇನಾಗಬೇಕು ಎಂದು ಆಕೆ ತಾತ್ಸಾರ ಮಾಡುತ್ತಿದ್ದಳು. ಆದರೆ ಇಂದು ಸ್ವಸ್ಥವಾಗಿ ಕೂಡಲು ಅವಳಿಂದಾಗಲಿಲ್ಲ. ತಾನು ಕಲಿತವಳೂ ಅಲ್ಲ. ಮೇಲಾಗಿ ಅತ್ತೆಯ ಮನೆಯ ಸೊಸೆ ಎಂದುಕೊಳ್ಳುತ್ತಿದ್ದ ಅವಳಿಗೆ ಇಂದು ಎಲ್ಲ ಬಂಧನಗಳನ್ನು ಮುರಿದು ಸ್ಪಷ್ಟ ಮಾತಾಡಬೇಕೆನಿಸಿತು. ಅವಳ ಕಣಕಣವೂ ಉತ್ತೇಜಿತವಾಯಿತು.

ದುಃಖವು ಅಸಹನೀಯವಾದರೆ ಸ್ತ್ರೀ ಅಳುತ್ತಾಳೆ. ಪಾರ್ವತಿಯ ಕಣ್ಣಲ್ಲೂ ನೀರು ಬಂತು. ಆದರೆ ಇಂದು ಹಬ್ಬ, ದೀಪಾವಳಿ. ತಡೆದಳು. ಕಣ್ಣೊರಸಿಕೊಂಡಳು.

ಸಂಜೆಯಾಯಿತು— ದೀಪಮಾಲೆಗಳು ಮನೆಮನೆಗೆ ಮೆರಗು ತಂದುಕೊಟ್ಟವು. ಮನೆಮನೆಯಲ್ಲಿ ಸುಮಂಗಲೆಯರು ತುಪ್ಪದ ದೀಪ ಹಚ್ಚಿ ತುಲಸೀ ಕಟ್ಟೆಯ ಮುಂದಿಟ್ಟರು. ಅಲಂಕಾರಗಳನ್ನು ತೊಟ್ಟು ಮನೆಗಳನ್ನು ಸಿಂಗರಿಸಿದರು. ಅವರ ಮುಖಚರ್ಯೆಯಲ್ಲಿ ಭವಿಷ್ಯಕ್ಕಾಗಿ ಮಾಡಿದ ಪ್ರಾರ್ಥನೆಯ ತೇಜಸ್ವಿ ಪ್ರಕಾಶವು ಬೆಳಗಿತು. ಪಾರ್ವತಿಯೂ ಸಿಂಗಾರವಾದಳು. ಹಾಸಿಗೆ ಹಿಡಿದ ಅತ್ತೆಗೂ ಉತ್ತಮ ಪೀತಾಂಬರ ಉಡಿಸಿದಳು.

ರಾತ್ರಿ ೧೧ ಆಯಿತು. ರಸ್ತೆಯ ಮೇಲಿನ ಜನರ ಹೋಗು- ಬರುವ ಗದ್ದಲ ವಿರಲವಾಯಿತು. ಶಿವನಾರಾಯಣಜಿ ಮನೆಗೆ ಬಂದರು. ಊಟ ಮಾಡುವುದಿಲ್ಲೆಂದು ಹೇಳಿ ಮಲಗುವ ಕೋಣೆಗೆ ಹೋದರು. ಮಾವನ ಮುಖ ನೋಡಿ ಅವಳ ಚಿತ್ತ ಕಲಕಿದಂತಾಯಿತು. ಧೈರ್ಯ ಮಾಡಿ ಅವರ ಹತ್ತಿರ ಹೋಗಿ ಹೇಳಿದಳು. "ಅತ್ತೆಯವರ ಪ್ರಕೃತಿ ಇಂದು ಬಹಳ ಚಿಂತಾಜನಕವಾಗಿದೆ. ನಿಮ್ಮನ್ನು ಕರೆದಿದ್ದಾರೆ."

ಶಿವನಾರಾಯಣರು ಪತ್ನಿಯ ಬಳಿ ಹೋದರು. ವಿಚಾರ ಮಾಡುತ್ತಾ ಉಳಿಯುವ ಸಮಯವಿದಲ್ಲೆಂದು ಬಗೆದು ಪಾರ್ವತಿ ಅವರ ಕೋಟಿನ ಎಲ್ಲ ಜೇಬುಗಳನ್ನು ಹುಡುಕಿದಳು. ಒಳಗಿನ ಕಿಸೆಯಲ್ಲಿ ಕೆಲವು ಪೊಟ್ಟಣಗಳು ಸಿಕ್ಕವು. ಬಿಚ್ಚಿ ನೋಡಿದಾಗ ಎದೆ ದಸ್ಸೆಂದಿತು.

ಅರ್ಧ ಗಂಟೆ ಬಿಟ್ಟು ಶಿವನಾರಾಯಣರು ಮರಳಿ ತಮ್ಮ ಕೋಣೆಗೆ ಬರುತ್ತಲೇ ಪಾರ್ವತಿ ಅವರ ಹಿಂದಿನಿಂದ ಬಂದು ಅವರ ಮುಂದೆ ಅರಿ

ವೆಯ ಗಂಟೊಂದನ್ನು ಇಟ್ಟಳು. "ಮನೆಯಲ್ಲಿ ಇಷ್ಟು ದುಡ್ಡು ಇರಲಾಗಿ ನೀವು ಚಿಂತಿಸಬೇಕೆ? ಈ ಆಭರಣ ಮಾರಿ ಐದಾರು ಸಾವಿರವಾದರೂ ಬರಬಹುದು. ನೀವೇ ಮನೆಯ ಹಿರಿಯರು. ನಮ್ಮ ಸರ್ವಸ್ವವೂ ನೀವೇ. ನೀವೇ ಆತ್ಮಹತ್ಯೆ ಮಾಡಿಕೊಂಡರೆ ನಾವು ಯಾರನ್ನು ಮೊರೆಹೊಗಬೇಕು?"

ಕ್ಷಣಕಾಲ ಧೈರ್ಯ ಮಾಡಿ ಇಷ್ಟು ನುಡಿದು, ವಿಷದ ಪುಡಿಯನ್ನು ಕಿಟಿಕಿಯಿಂದ ಹೊರಗೆ ಕಸದ ಗುಂಡಿಯಲ್ಲಿ ಚೆಲ್ಲಿದವಳೇ ಸರಕ್ಕನೆ ಹೊರಬಿದ್ದು ಹೋದಳು.

ಶಿವನಾರಾಯಣರು ಜೂಜು ಆಡುತ್ತಿದ್ದರು. ೧೫ ವರ್ಷ ಅದನ್ನೇ ಮಾಡಿದ್ದರು. ಕಳೆದ ಮೂರು ತಿಂಗಳಿಂದ ಆಟ ಇವರ ಕೈಬಿಟ್ಟು ಯಾವತ್ತೂ ಸೋಲೇ ಪಾಲಿಗೆ ಬರುತ್ತಿತ್ತು. ಪತ್ನಿಯ ಒಡವೆಗಳನ್ನು ಮಾರಿಯೂ ೧೦-೧೨ ಸಾವಿರ ರೂಪಾಯಿ ಸಾಲವಾಗಿತ್ತು. ದೀಪಾವಳಿ ಸಮೀಪಿಸಿದಂತೆ ನಿರಾಶೆ ಹೆಚ್ಚಿತು. ಕೊನೆಗೆ ಪ್ರಾಣತ್ಯಾಗದ ನಿರ್ಣಯ ಮಾಡಿದ್ದರು.

ಕೆಲ ಹೊತ್ತು ಅಸ್ವಸ್ಥರಾಗಿಯೆ ಕೋಣೆಯಲ್ಲಿ ಸುತ್ತಾಡಿ ಬಟ್ಟೆತೊಟ್ಟು ಗಂಟನ್ನೆತ್ತಿಕೊಂಡು ಮನೆಯಿಂದ ಹೊರಬಿದ್ದರು. ಜೂಜಿನ ಅಡ್ಡೆಗೆ ಬಂದರು. ಅವರೆದುರು ಒಂದು ಆಕಳು ತನ್ನ ಕರುವಿಗೆ ಮೊಲೆ ಕುಡಿಸುತ್ತ ನಿಂತಿತ್ತು. ಶುಭ ಸೂಚನೆ ಇದಕ್ಕಿಂತ ಬೇರೆ ಇನ್ನೇನಾಗಬೇಕು? ಪ್ರಸನ್ನ ಚಿತ್ತದಿಂದ ಮಹಾ ಲಕ್ಷ್ಮಿಯ ಪ್ರಾರ್ಥನೆ ಮಾಡುತ್ತ ಇಂದು ಧನಲಾಭವಾಗಲೆಂದು ಮನದಲ್ಲಿ ಬಯಸುತ್ತ ಹೆಜ್ಜೆ ಮುಂದಿಡುವುದೇ ತಡ, ಅವರ ಬಗಲೊಳಗಿನ ಗಂಟು ಕೆಳಗೆ ಬಿತ್ತು.

ಸಪ್ಪಳಕ್ಕೆ ಕೆಲವರು ಕಣ್ಣು ತಿರುಗಿಸಿ ನೋಡಿದರು. ಶಿವನಾರಾಯಣರು ಲಗುಬಗೆಯಿಂದ ಗಂಟನ್ನೆತ್ತಿಕೊಂಡರು. ಪಿಟ್ಟೆನ್ನದೆ ಹಾಗೇ ಹೊರಳಿ ಹಿಂತಿರುಗಿ ನಡೆದರು. ಜೂಜುಗಾರರಲ್ಲಿ ಶ್ರೀಮಂತರೆಂದು ಖ್ಯಾತಿವೆತ್ತವರಿವರು. ಇಂದು ಹಣದ ಬದಲು ಚಿನ್ನವನ್ನೇ ತಂದಿದ್ದರಲ್ಲ. ನೋಡಿದವರು ಏನೆಂದು ಕೊಂಡರೋ!

ಮನೆಗೆ ಹೋಗಿ ಏನೂ ಮಾತಾಡದೆ ನಿದ್ರಿಸಿದರು. ಮರುದಿನ ಅವರು ಮನೆಯಲ್ಲಿರಲಿಲ್ಲ. ಅವರ ಮೇಜಿನ ಮೇಲೆ ಒಂದು ಪತ್ರವಿತ್ತು. ಪಾರ್ವತಿಯ ಎದೆ ಡವಡವ ಎಂದು ಬಡಿದು ಕೊಳ್ಳಲಾರಂಭಿಸಿತು. ಬಿಚ್ಚಿ ಓದಿದಳು.

"…. ನಾನು ಇಲ್ಲಿಂದ ೧೧೭ ಮೈಲು ದೂರದ ಒಂದು ಊರಿಗೆ ಹೋಗಿದ್ದೇನೆ. ಅಲ್ಲಿ ಅರಿವೆ ಅಂಗಡಿ ತೆಗೆಯುವ ವಿಚಾರವಿದೆ. ಎಲ್ಲ ಸ್ಥಿರವಾದ ಮೇಲೆ ನಿಮ್ಮೆಲ್ಲರನ್ನು ಕರೆದೊಯ್ಯುವೆ. ಪಾರ್ವತಿ ಇಂದು ನನ್ನ ಕೈಗಿತ್ತಿರುವ ದಿವ್ಯ ನಿಧಿಯನ್ನು ಜೂಜಿನ ಕರಾಳ ದವಡೆಗೆ ಒಡ್ಡುವುದಕ್ಕಿಂತ ಒಂದು ವ್ಯವಸಾಯದಲ್ಲಿ ತೊಡಗಿಸಿ ಗೃಹಲಕ್ಷ್ಮಿಯ ಈ ಇಡುಗಂಟನ್ನು ನಿತ್ಯ ನಿಯಮದಿಂದ ಪೂಜಿಸುತ್ತಾ ಹಿಂದಿನ ಜೀವನದ ಪಾಪಗಳನ್ನು ತೊಳೆದುಕೊಳ್ಳಲು ಪ್ರಯತ್ನಿಸುವೆ. ನನ್ನ ಜೀವಮಾನದಲ್ಲಿ ಇಂದು ಮೊದಲ ಬಾರಿ ನನಗೆ ಸದ್ಬುದ್ಧಿಯುಂಟಾಗಿದೆ. ನನ್ನ ಕರ್ತೃತ್ವವನ್ನು ತೋರಿಸಲು ಹೊಸ ದಾರಿಯೂ ತೋಚಿದೆ. ಹೇಡಿಯಂತೆ ಆತ್ಮಹತ್ಯೆ ಮಾಡಿಕೊಳ್ಳುವುದಕ್ಕಿಂತ ಜೀವಿಸಿದ್ದು ಹಿಂದಿನ ಪಾಪದ ಪರಿಮಾರ್ಜನೆ ಮಾಡಲೆಳೆಸುತ್ತಿದ್ದೇನೆ. ನನ್ನ ಸೊಸೆಯ ಇಡುಗಂಟಿನ ಕೇವಲ ರಕ್ಷಕನು ನಾನು. ನನ್ನಂಥ ನರಾಧಮನ ಪ್ರಾರ್ಥನೆಯನ್ನೂ ಈಶ್ವರನು ಕೇಳುವನಾದರೆ ಆತ, ನಾಡಿನ ಮೂಲೆ ಮೂಲೆಯಲ್ಲೂ ಬಿದ್ದು ಕೊಳೆಯುತ್ತಿರುವ ಪಾಪಿಗಳನ್ನು ಸನ್ಮಾರ್ಗಕ್ಕೆ ತರಲಿ. ದೀಪ ತೋರಿ, ದಾರಿ ನೀಡಿ, ಸುಸಂಸ್ಕಾರದ ಬಲವನ್ನೀಯಲಿ!"

೧೩ ವರ್ಷಗಳು ಕಳೆದಿವೆ. ಅವರ ಅಂಗಡಿ ಈಗ ಒಳ್ಳೇ ಊರ್ಜಿತ ಸ್ಥಿತಿಯಲ್ಲಿದೆ. ಶಿವನಾರಾಯಣರು ರಾತ್ರಿ ಹಗಲು ದುಡಿದರು. ಹೊಸ ಹೊಸ ಉದ್ಯೋಗ ಕೈಕೊಂಡರು.

ಅವರೊಂದಿಗೆ ಸಂಬಂಧ ಬಂದ ಎಲ್ಲರೂ ಅವರ ಪ್ರಾಮಾಣಿಕತನವನ್ನೂ ಸತ್ಯ ನಿಷ್ಠೆಯನ್ನೂ ಕೊಂಡಾಡುತ್ತಾರೆ.

ನೀವು ಮೋಹನಗಡಕ್ಕೆ ಹೋದರೆ ಶಿವ-ನಾರಾಯಣರ ವ್ಯಕ್ತಿಮತ್ತ್ವದ ಪ್ರಭಾವದಿಂದ ಊರು ಹೇಗೆ ಸುಧಾರಿಸಿದೆ ಎಂಬುದನ್ನು ಕಾಣುವಿರಿ. ಮನೆಗೆ ಹೋದರೆ ಬೆಳ್ಳಿಯ ಸಿಂಹಾಸನದ ಮೇಲೆ ಒಂದು ಸಣ್ಣ ಗಂಟನ್ನು ಇರಿಸಿದ್ದು ಕಾಣುತ್ತದೆ. ಅದರ ಮೇಲೆ ದಿನಾಲೂ ಹೊಸ ಹೂ ಏರಿಸುತ್ತಾರೆ. ಅದರ ಮುಂದೊಂದು ಅಖಂಡ ದೀಪ ಉರಿಯುತ್ತಿರುತ್ತದೆ. ಅವರ ಇಡುಗಂಟಿನ ದೀವಿಗೆ ಇದೇ. ಈ ದೀಪದ ಪ್ರಕಾಶದಲ್ಲಿ ಅವರ ಹೃದಯ ಅರಳುತ್ತದೆ. ಉದಾತ್ತ ಭಾವನೆಗಳಿಂದ ತುಂಬಿ ತುಳುಕುತ್ತದೆ.

ಕತೆ ಇಲ್ಲಿ ಮುಗಿಯಿತು. ಆದರೆ ಹೃದಯದ ಮಿಡಿತ ಮುಚ್ಚಿಡಲಾರೆ. ಪ್ರೇರಣೆಯ ಮಹತ್ವ ದೆದುರು ಶಿರಬಾಗದಿರಲಾರೆ.

ಪ್ರೇರಣೆ ಮೂಕವಾಗಿರುತ್ತದೆ. ಅದು ನಮ್ಮ ಅಂತಃಕರಣವನ್ನು ಪ್ರವೇಶಿಸುವಾಗ ಶಬ್ದರೂಪವನ್ನೇನೂ ತಾಳಿರುವುದಿಲ್ಲ. ಆದರೆ ಪ್ರೇರಣೆಯ ಸ್ಪರ್ಶ ಹೊಂದಿದ ಶಬ್ದಗಳ ಶಕ್ತಿ ಮಾತ್ರ ಅಳೆಯಲಸದಳವಿರುತ್ತದೆ. ಅಣುಬಾಂಬೂ ಆ ಶಕ್ತಿಯನ್ನು ತೊಡೆದುಹಾಕದು. ಅದನ್ನು ಜಗತ್ತಿನ ಯಾವ ಶಕ್ತಿಯೂ ಕೊಲ್ಲದು.

ವೇದದಲ್ಲಿ ಶಬ್ದಕ್ಕೆ ಬ್ರಹ್ಮವೆಂದು ಕರೆಯಲಾಗಿದೆ. ಸಾಕಾರಬ್ರಹ್ಮ— ಹೌದು. ಶಬ್ದಬ್ರಹ್ಮವನ್ನು ನಿರ್ಮಿಸುವ ಪ್ರೇರಣೆಯ ಮಹತ್ವ ಅದಕ್ಕೂ ಮಿಗಿಲಾದದ್ದು!

ವಾಲ್ಮೀಕಿ, ದಾಂತೆ, ಶೇಕ್ಸಪಿಯರ, ಹಾಫಿಜ್ ರವೀಂದ್ರ, ಬುದ್ಧ, ಯೇಸೂ, ಮಹಮ್ಮದ, ಗಾಂಧಿ, ಮಾಯಿಕೆಲ್ ಎಂಜಲೊ, ಅವನೀಂದ್ರ, ನಂದಲಾಲ ಬೋಸ್— ಕೇವಲ ಇವರ ವರೆಗೇ ಈ ಪ್ರೇರಣೆಯ ದೂತರು ಮುಟ್ಟುತ್ತಾರೆಂದಲ್ಲ. ಅವರು ಸರ್ವಾಂತರ್ಯಾಮಿಗಳು. ಛಗನಲಾಲಜಿ ಮತ್ತು ಶಿವನಾರಾಯಣಜಿಯವರ ಹೃದಯದಲ್ಲೂ ಅವರು ಪ್ರವೇಶಿಸುತ್ತಾರೆ. ಮನೋ-ಮಂದಿರದಲ್ಲಿ ನಿದ್ರಿಸುವ ವೈಭವವನ್ನು ಹೊಡೆದೆಬ್ಬಿಸುತ್ತಾರೆ.

*


'ಕೋಳೀ ಕಾಳಗ' ವನ್ನು ಕಾಣದವರು, ಕಡೆಗೆ ಹಾಗೆ ನಡೆಯುತ್ತದೆಂದು ಕೇಳದವರು ವಿರಳ. ಕೋಳಿ ಕಾಳಗ ನಡೆಯುವಾಗ ಬೇರೆ ಸ್ಪರ್ಧೆಗಳಲ್ಲಿ ಹಣ ಕಟ್ಟುವಂತೆ 'ಬಾಜಿ' ಕಟ್ಟಿ ಸಾವಿರಾರು ರೂಪಾಯಿ ಗೆಲ್ಲುವವರೂ ಇದ್ದಾರೆ. ಈ 'ಕೋಳಿ ಕಾಳಗ' ಈಗ ಐರೋಪ್ಯ ರಾಷ್ಟ್ರಗಳಲ್ಲಿ ಮುಖ್ಯವಾಗಿ ಹಾಲೆಂಡಿನಲ್ಲಿ ವಿಪರೀತವಾಗಿ ಬೆಳೆದಿದೆ.

ಅಲ್ಲಿ ಕೋಳಿ ಸಾಕಣೆ ಕೇಂದ್ರವೊಂದರಲ್ಲಿ ಪ್ರಚೋದಕರಿಲ್ಲದೆ ಕೋಳಿಗಳು ಕಾಳಗಕ್ಕೆ ನಿಲ್ಲಲು ಪ್ರಾರಂಭಿಸಿದುವಂತೆ. ಮಾರ್ಡಿನ್ ಸ್ಟಿಂಡರ್ ಎಂಬ ಆ ಕೇಂದ್ರದ ಸಾಹುಕಾರನು ವಿಪರೀತ ಗೊಂದಲಕ್ಕೀಡಾದನಂತೆ. ಬರೀ ಜಗಳವಾದರೆ ಹೋಗಲೆನ್ನಬಹುದು. ಆದರೆ ಸೋತ ಕೋಳಿಯನ್ನು ಉಳಿದ ಕೋಳಿಗಳು ಕುಕ್ಕಿ ಕುಕ್ಕಿ ಕೊಲ್ಲಲು ಪ್ರಾರಂಭಿಸಿಬಿಟ್ಟವಂತೆ;

ಇದಕ್ಕೆ ಪರಿಹಾರವೇನು? ಎಂದು ಚಿಂತಿಸಿದ ಮಾರ್ಡಿನ್ ಸ್ಟಿಂಡರ್ ಕಟ್ಟಕಡೆಗೆ ಕೋಳಿಗಳ ಕಣ್ಣಿಗೆ ಸರಿಯಾಗುವಂತೆ ಅಲ್ಯೂಮಿನಿಯಂನಲ್ಲಿ ಕನ್ನಡಕಗಳನ್ನು ಕೂಡಿಸಿ ಹಾಕಿದನಂತೆ. ಈ ಕನ್ನಡಕಗಳನ್ನು ಧರಿಸುವುದರಿಂದ ಕೋಳಿ ನೆಲವನ್ನು ಮಾತ್ರ ನೋಡಲು ಸಾಧ್ಯವಾಗುತ್ತಿದ್ದುದ್ದರಿಂದ ಕಾಳಗ ನಿಂತಿತಂತೆ.


—ಬಿ. ಆರ್. ಶಂಕರ್






ನೊಡೆಲ್ ೦೩:೪: ೬ವಾಲ್ವ, ಅಲ್ ವೇವ್ಹ
೪ ಬ್ಯಾಂಡ ಪಿಯಾನೋ ಕೀ ಸ್ವಿಚ್ ಏಸಿ
ಅಥವಾ ಎಸಿ/ಡಿಸಿ (ಎರಡು ಮಾಡಲ್)

ನೀವು ಯಾರೇ ಇದ್ದರೂ.....




ನೀವು ಮರ್ಫಿ ರೇಡಿಯೋದಿಂದ

ಉಲ್ಲಸಿತರಾಗುವಿರಿ




ಮಾಡೆಲ್ ೦೩೨೨: ೬ ವಾಲ್ವ ಅಲ್ ವೇವ್ಹ ೩
ಬ್ಯಾಂಡ ಏಸಿ ಇಲ್ಲವೆ ಏಸಿ/ಡಿಸಿ (೨ ಮಾಡಲ್)

MR.C-129




ಮೊಡೆಲ್ ೨೬೬
೭ ವಾಲ್ವ, ಅಲ್ ವೇವ್ಸ ೫ ಬ್ಯಾಂಡ,
ಪಿಯಾನೋ ಕೀ ಸ್ವಿಚ್ ಏಸಿ.




ನೊಡೆಲ್ ೦೭೨೪
೬ ವಾಲ್ವ
ಆಲ್ ವೇವ್ಸ
೮ ಬ್ಯಾಂಡ, ಪೂರ
ಬ್ಯಾಂಡ ಸ್ಪ್ರೆಡ್
ಏಸಿ ಇಲ್ಲವೆ ಎಸಿ
ಡಿಸಿ (೨ಮಾಡಲ್)
ನೊಡೆಲ್ ೦೭೩೭ :
(ಡ್ರಾಯ ಬ್ಯಾಟರಿ)
೭ ವಾಲ್ವ



ಮೊಡೆಲ್ ೦೩೫೨ :
■ ವಾಲ್ವ ಆಲ್ ವೇವ್ಸ ೩ ಬ್ಯಾಂಡ ಏಸಿ
ಇಲ್ಲವೆ ಏಸಿ/ಡಿಸಿ (ಎರಡು ಮಾಡಲ್)



ಮೊಡೆಲ್ ೦೭೨೬ :
೭ ವಾಲ್ವ, ಆಲ್
ವೇವ್ಸ ೮ ಬ್ಯಾಂಡ,
ಪೂರ್ಣ ಬ್ಯಾಂಡ
ಸ್ಪ್ರೆಡ್ ಎಸಿ ಇಲ್ಲವೆ
ಏಸಿ ಡಿಸಿ (ಎರಡು
ಮೊಡೆಲ್ಲು)



ಮೊಡೆಲ್ ೦೨೯೪
೫ ವಾಲ್ವ, ಅಲ್ ವೇವ್ಸ ೩ ಬ್ಯಾಂಡ
ಏಸಿ/ಡಿಸಿ ಹಾಗೂ ಮೊಡೆಲ್ ೦೨೯೯ :
(ಡ್ರಾಯ ಬ್ಯಾಟರಿ) ■ ವಾಲ್ವ



ನೊಡೆಲ್ ೦೭೫೨
೫ ವಾಲ್ವ, ಆಲ್
ವೇವ್ಸ ೩ ಬ್ಯಾಂಡ
ಏಸಿ ಇಲ್ಲವೆ
ಏಸಿ/ಡಿಸಿ
(ಎರಡು ಮಾಡಲ್)
ಹಾಗೂ
ನೊಡೆಲ್ ೦೭೫೧
(ಡ್ರಾಯ ಬ್ಯಾಟರಿ)

murphy radio
delights
the home!



ಅನ್ನನೀರೂ ಇಲ್ಲ, ಮಲಮೂತ್ರ ವಿಸರ್ಜನೆಯೂ ಇಲ್ಲದ ಯೋಗಿ ಯೊಬ್ಬನ ವೃತ್ತಾಂತ

ನಿರಾಹಾರ ಸಾಧು ಶ್ರೀ ಅಂಬಾ

ದೌಲತರಾವ್ ದೇಸಾಯಿ

ಮೂರು ವರ್ಷಗಳ ಹಿಂದೆ ೧೯೫೭ ರ ಎಪ್ರಿಲ್ ತಿಂಗಳ ಆರಂಭದಲ್ಲಿ ನನ್ನೊಬ್ಬ ಸುಶಿಕ್ಷಿತ ಮಿತ್ರರು "ನಡೆಯಿರಿ, ನಿಮಗೊಬ್ಬ ಚಮತ್ಕಾರಿಕ ವಿಭೂತಿಯ ದರ್ಶನ ಮಾಡಿಸುತೇನೆ" ಎಂದಾಗ ನಾನು ನಕ್ಕು ತಪ್ಪಿಸಿಕೊಳ್ಳಲೆತ್ನಿಸಿದೆ. ಅವರು ಇದು "ಹುಡುಗಾಟಿಕೆಯ ಮಾತಲ್ಲ. ಇಂದಿನ ನಾಸ್ತಿಕ ಯುಗದಲ್ಲಿ ನಿಮಗೆ ಸಾಧು-ಸಂತರ ಬಗ್ಗೆ ನಂಬಿಕೆಯಿಲ್ಲವೆಂದು ಬಲ್ಲೆ. ಆದರೆ ಇವರು ಅಂಥವರಲ್ಲ. ಇವರೊಬ್ಬ ಸಾಧಕ ತಪಸ್ವಿಗಳು. ಶ್ರೀ ಅಂಬಾಮಾತೆಯ ಪರಮ ಉಪಾಸಕರಾಗಿದ್ದಾರೆ. ಆಶ್ಚರ್ಯದ ಮಾತೆಂದರೆ ಕಳೆದ ಏಳು ವರ್ಷಗಳಿಂದ ಅವರು ಅನ್ನ ಜಲಗಳ ಸ್ಪರ್ಶವನ್ನು ಮಾಡಿಲ್ಲ. ಆದರೂ ಅವರ ದೇಹಶಕ್ತಿ ಅದ್ಭುತವಿದೆ" ಎಂದರು.

ನನಗೆ "ಕೊಡಗಿನ ಬಾಲೆ"ಯ ಅದ್ಭುತ ಕಥೆ ನೆನಪಿಗೆ ಬಂತು. ಅವಳು ಕೂಡ ಅನ್ನ ನೀರು ತ್ಯಜಿಸಿ ತಾನು ಕೇವಲ ವಾಯುಸೇವನೆಯಿಂದ ಬದುಕುತ್ತಿರುವೆನೆಂದು ಸಾರಿದ್ದಳು. ಆದರೆ ಆಸ್ಪತ್ರೆಯಲ್ಲಿ ಕಡುಕಾವಲಿನಲ್ಲಿ ಇಟ್ಟಾಗ ಅವಳ ಗುಟ್ಟು ರಟ್ಟಾಗಿಹೋಯಿತು. ಈ ಪರೀಕ್ಷೆಗೆ ಮುಂಚೆ ಅವಳ ದರ್ಶನಾರ್ಥವಾಗಿ ಸಾವಿರಾರು ಜನ ಹೋಗುತ್ತಿದ್ದರು.

ಆದ್ದರಿಂದಲೇ ಈ ವಿಭೂತಿ ಆಗ ಇರುತ್ತಿದ್ದ ಮುಂಬಯಿಯ ಶಿವ ಎಂಬ ಹೆಸರಿನ ಸ್ಥಾನಕ್ಕೆ ನನ್ನ ಮಿತ್ರರೊಂದಿಗೆ ಹೋದಾಗ ನನ್ನ ಮನಸ್ಸು ಸಂದೇಹಗ್ರಸ್ತವಾಗಿಯೆ ಇತ್ತು. ಅನ್ನ ನೀರುಗಳನ್ನು ಸೇವಿಸುವ, ಮಲಮೂತ್ರಗಳನ್ನು ವಿಸರ್ಜಿಸುವ ಸ್ವಾಭಾವಿಕ ಕ್ರಿಯೆಗಳನ್ನು ನಡೆಸದೆ ಮಾನವ ಶರೀರವು ಬದುಕಲಾರದೆಂದೇ ನನಗೆ ನಂಬಿಕೆಯಿತ್ತು.

ಶ್ರೀಅಂಬಾಮಾತೆಯ ಈ ಪರಮ ಉಪಾಸಕ ಮೂಲತಃ ಉತ್ತರ ಗುಜರಾತಿನ ಚರಾಡಾ ಗ್ರಾಮದವರು. ಅಂಬಾ ಮಾತೆ ಅವರಿಗೆ ಪ್ರಸನ್ನಳಾಗಿದ್ದಾಳೆ ಎಂದು ಜನ ತಿಳಿದಿದ್ದರು

* ಭಗಿನಿ ಕಿಸ್ಮತ್ * ಕೃಪೆಯಿಂದ

ಅರ್ಧನಾರಿ, ಅರ್ಧಪುರುಷ ಪೋಷಾಕನ್ನು ಧರಿಸುವ ಈ ಅರ್ಧನಾರೀ ನಟೇಶ್ವರ ವ್ಯಕ್ತಿಯನ್ನು ಅವರು ಶ್ರೀ ಜಯ ಅಂಬೇ ಎಂದು ಸಂಬೋಧಿಸುತ್ತಿದ್ದರು. ಪುರುಷರಾಗಿದ್ದರೂ ಇವರನ್ನು "ಮಾತಾಜಿ" ಎಂದೇ ಕರೆಯುತ್ತಿದ್ದರು.

ಇವರ ಮೂಲ ನಾಮ ಪ್ರಹ್ಲಾದ ಮಗನ-ಲಾಲ ಜಾನಿ ಎಂದು. ಈಗ ಹತ್ತು ಹನ್ನೊಂದು ವರ್ಷಗಳ ಹಿಂದೆ— ಆಗ ಅವರಿಗೆ ೨೦ ವರ್ಷ ವಯಸ್ಸಾಗಿತ್ತು— ಅವರು ಪುಣೆಯ ಒಂದು ವೈಷ್ಣವ ಕುಟುಂಬದಲ್ಲಿ ಅಡಿಗೆಯ ಭಟ್ಟನಾಗಿ ಕೆಲಸ ಮಾಡುತ್ತಿದ್ದರು. ಪುಣೆಯ ಬಹುಚರಾಜಿ ಮಾತೆಯ ಮಂದಿರಕ್ಕೆ ಅವರು ಇತರ ಭಕ್ತರೊಂದಿಗೆ ಭಜನೆ ಮಾಡಲು ಹೋಗುತ್ತಿದ್ದರು "ಒಮ್ಮೆ ಪ್ರಕಾಶಪುಂಜ ಸ್ವರೂಪದಲ್ಲಿ ಅಂಬಾ ಮಾತೆ ನನ್ನೆದುರು ಪ್ರತ್ಯಕ್ಷಳಾದಳು. ಆಗ ನನ್ನ ದೇಹದಲ್ಲಿ ಒಂದು ಪ್ರಚಂಡ ಶಕ್ತಿ ಪ್ರವೇಶಿಸಿದಂತೆ ಅನಿಸಿತು. ದೇಹದಲ್ಲಿ ಅಗ್ನಿ ಉರಿಯುತ್ತಿರುವ ಅನುಭವವಾಯಿತು. ನಾನು ಪ್ರಜ್ಞೆ ತಪ್ಪಿದೆ. ಅಂದಿನಿಂದಲೇ ನನ್ನ ಅನ್ನ ಮತ್ತು ಜಲ ಸೇವನೆ ನಿಂತುಹೋಯಿತು" ಎಂದು ಯೋಗಿರಾಜ ಮಾತಾಜಿ ಶ್ರೀ ಜಯ ಅಂಬೇ ಹೇಳುತ್ತಾರೆ.

ನಾನು ಅನೇಕ ಪ್ರಶ್ನೆಗಳನ್ನು ಕೇಳಿ ಅವರ ಬಾಯಿಂದಲೇ ಎಲ್ಲ ವಿಚಾರ ತಿಳಿದುಕೊಂಡೆ. ಅವರನ್ನು ಕಂಡಾಗ ಸೌಮ್ಯ, ಸಾತ್ವಿಕ, ನಿರಾಡಂಬರಿಯಾದ, ಮೋಸ ನಟನೆಗಳನ್ನು ತಿರಸ್ಕಾರದಿಂದ ಕಾಣುವ ಒರ್ವ ನಿಜ ಉಪಾಸಕರ ಮೂರ್ತಿಯನ್ನು ಕಂಡಂತಾಯಿತು. ನನ್ನ ಪ್ರಶ್ನೆಗಳಿಗುತ್ತರವಾಗಿ ಅವರು "ಮೊದಲು ಕಾಫಿ ಕುಡಿಯುತ್ತ ಕಾಲ ಕಳೆದೆ. ಆ ಮೇಲೆ ಅನ್ನ-ನೀರುಗಳನ್ನು ಸಂಪೂರ್ಣ ತ್ಯಜಿಸಿದೆ. ಈಗ ಧಾನ್ಯವನ್ನು ಕಂಡರೇನೆ ನನಗೆ ಜುಗುಪ್ಸೆಯೆನಿಸುತ್ತದೆ. ಅದರ ವಾಸನೆಯೂ ನನಗೆ ಸಹಿಸದಂತಾಗಿದೆ" ಎಂದರು.

"ಹಾಗಾದರೆ ನೀವೇನು ವಾಯುಸೇವನೆಯಿಂದ ಬದುಕುತ್ತಿದ್ದೀರಾ?"

"ನನಗೆ ತಿಳಿಯದು. ನನ್ನ ಬಾಯ ಅಂಗಳದ ಕೆಳಗೆ ಒಂದು ಛಿದ್ರವಿದೆ. ಅಲ್ಲಿ ಅಮೃತ ರಸ ಒಸರುತ್ತದೆ ಎಂದಿಷ್ಟೇ ನಾನು ಬಲ್ಲೆ. ಇದೇ ನನ್ನ ಜೀವನಾಧಾರವಾಗಿರಬಹುದು."

ಇಷ್ಟೆಂದು ಅವರು ನನ್ನ ಬೆರಳನ್ನು ತಾವು ಹೇಳಿದ ಸ್ಥಳದಲ್ಲಿ ಇಟ್ಟರು. ಅಲ್ಲಿ ಒಂದು ಛಿದ್ರವಿರುವುದೂ ಅಲ್ಲಿ ಏನೊ ದ್ರವಿಸುತ್ತಿರುವುದೂ ನನಗೆ ಅನುಭವವಾಯಿತು.

ಮಾತಾಜಿ ಇನ್ನೂ ಸ್ಪಷ್ಟೀಕರಣವೀಯುತ್ತ ಹೇಳಿದರು. "ನನಗೆ ಅನ್ನ-ನೀರುಗಳಲ್ಲಿ ಅರುಚಿಯೇಕುಂಟಾಯಿತು ಹೇಳಲಾರೆ. ಅವಿಲ್ಲದೆ, ನಾನು ಹೇಗೆ ಬದುಕಿರುವೆನೊ ಅದನ್ನೂ ಹೇಳಲಾರೆ. ನನ್ನ ಮಲಮೂತ್ರ ವಿಸರ್ಜನೆಯೂ ಬಂದಾಗಿದೆ. ಇಂಥ ಅನೈಸರ್ಗಿಕ ಕ್ರಮದಲ್ಲಿ ನಾನು ನೈಸರ್ಗಿಕ ಜೀವನವನ್ನು ಹೇಗೆ ನಡೆಸುತ್ತಿರುವೆನೊ ತಿಳಿಯದು. ಮೈಲುಗಟ್ಟಲೆ ಏನೂ ಆಯಾಸವಿಲ್ಲದೆ ವೇಗವಾಗಿ ನಡೆಯಬಲ್ಲೆ. ಪರ್ವತಗಳನ್ನೇರಬಲ್ಲೆ. ವೇಗದಿಂದ ಓಡಲೂ ಬಲ್ಲೆ. ಇಂದಿನ ಪ್ರಗತಿಶೀಲ ಜ್ಞಾನಕ್ಕೂ ಇದೊಂದು ಆಹ್ವಾನವೇ ಆಗಿದೆ. ಯಾರಾದರೂ ಆಸ್ಪತ್ರೆ-ಯಲ್ಲಾಗಲಿ, ಬೇರೆಡೆಯಲ್ಲಾಗಲಿ ಪರೀಕ್ಷಿಸ ಬಯಸಿದರೆ ಆನಂದದಿಂದ ಒಪ್ಪಿಕೊಳ್ಳುವೆ."

"ನಿಮಗೆ ಪುಣೆಯಲ್ಲಿ ಪ್ರಕಾಶಪುಂಜ ದರ್ಶನದ ಅನುಭವವಾಯಿತಲ್ಲ, ಅಂಥ ಅನುಭವ ಮತ್ತೆಷ್ಟು ಸಲ ಬಂದಿತು?"

"ಆಗಾಗ ಇಂಥ ಅನುಭವಗಳಾಗುತ್ತಲೇ ಇವೆ. ದೇಹದಲ್ಲಿ ಪ್ರಚಂಡ ಆವೇಶ ಸಂಚರಿಸಿದ ನಂತರ ಅದು ಶಿಥಿಲವೂ ಶಕ್ತಿಹೀನವೂ ಆಗುತ್ತದೆ. ಮೊದಮೊದಲಿಗೆ ಈ ಅಶಕ್ತಿ ಎಷ್ಟು ಅಸಹ್ಯವೆನಿಸುತ್ತಿತ್ತೆಂದರೆ ಸಾವು ಬಂದರೆ ಒಳ್ಳೆಯದಿತ್ತು ಎಂದು ಅನಿಸುತ್ತಿತ್ತು."

ಹಗಲಿನಲ್ಲಿ ಅವರಿಗೆ ಅಶಕ್ತಿಯೆನಿಸಿದರೂ ರಾತ್ರಿ ಮತ್ತೆ ದೇಹದಲ್ಲಿ ಶಕ್ತಿ ಸಂಚಾರವಾಗುತ್ತದೆ. ಆಗ ಅರನಿದ್ರೆಯಂಥ ಅವಸ್ಥೆಯಿರುತ್ತದೆ. ಬರಹೋಗುವವರ ಅಸ್ತಿತ್ವ ತಿಳಿದರೂ ಮಾತಾಡಲು ಆಗುವುದಿಲ್ಲ ಎಂಬೆಲ್ಲ ವಿವರಗಳನ್ನು ತಿಳಿದುಕೊಂಡೆ.

"ನೀವೇನಾದರೂ ಚಮತ್ಕಾರಗಳನ್ನು ಮಾಡುತ್ತೀರಾ? ರೋಗಾದಿಗಳನ್ನು ನಿವಾರಿಸುತ್ತೀರಾ?"

"ನಾನೇನು ಜ್ಞಾನಿ ಅಥವಾ ಮಹಾತ್ಮನಲ್ಲ. ಯಾರಿಗೂ ಉಪದೇಶ ಮಾಡುವುದಿಲ್ಲ. ಯಾವಾಗಾದರೊಮ್ಮೆ ಅಜ್ಞಾತ ಪ್ರೇರಣೆಯಿಂದ ನಾಲ್ಕಾರು ಶಬ್ದಗಳನ್ನಾಡಿದರೂ ಬಹಳ ಮಾತಾಡುವುದು ನನಗೆ ಸೇರುವುದಿಲ್ಲ. ನಾನು ಗುಜರಾತಿ ಐದನೆ ಇಯತ್ತೆಯ ವರೆಗೆ ಕಲಿತಿದ್ದರೂ ಯಾವುದೋ ಅದೃಶ್ಯ ಶಕ್ತಿಯ ಬಲದಿಂದ ಸಂಸ್ಕೃತ ಶ್ಲೋಕ-ಸ್ತೋತ್ರಗಳನ್ನು ಹೇಳಬಲ್ಲವನಾಗಿದ್ದೇನೆ. ಇಂಗ್ಲೀಷಿನಲ್ಲಿ ಸಂಭಾಷಿಸಬಲ್ಲೆ. ಮಾಂತ್ರಿಕ ಅದ್ಭುತಗಳಲ್ಲಿ ನನಗೆ ವಿಶ್ವಾಸವಿಲ್ಲ. ಆದರೂ ನನ್ನ ಆವೇಶಮಯ ಸ್ಥಿತಿಯಲ್ಲಿ ನಾನು ಮಾಡುವ ಕಾರ್ಯಗಳಲ್ಲಿ ಭಕ್ತರು ಚಮತ್ಕಾರವನ್ನೂ ಕಾಣುತ್ತಿರಬಹುದು. ಯಾರಾದರೂ ರೋಗದ ದೂರು ತಂದಾಗ ಒಂದು ಚಿಟಿಕೆಯಷ್ಟು ಕುಂಕುಮವನ್ನು ಮಾತ್ರ ಕೊಡುತ್ತೇನೆ. ಅದರಲ್ಲಿ ಶ್ರದ್ಧೆಯಿದ್ದರೆ ಅವರಿಗೆ ನೆಟ್ಟಗಾಗುತ್ತದೆ."

ಶ್ರೀ ಜಯ ಅಂಬೆಯವರ ಸಿದ್ಧಿಶಕ್ತಿಯಲ್ಲಿ ಅವರ ಭಕ್ತರಿಗೆ ಪೂರ್ಣ ಶ್ರದ್ಧೆಯಿದೆ.

ನವರಾತ್ರಿಯ ಸಮಯದಲ್ಲಿ ಒಮ್ಮೆ ಶ್ರೀ ಜಯ ಅಂಬೆ 'ಈಸ್ಟ್ ಆ್ಯಂಡ್ ವೆಸ್ಟ್‌ವಿಲಾ'ದಲ್ಲಿ ವಾಸಿಸುತ್ತಿದ್ದರು. ಆ ಕಟ್ಟಡದಲ್ಲಿಯೆ ವಿ ಪಿ. ಕಾಂಬಳಿ ಎಂಬವರಿದ್ದರು. ಅವರು ವಿಮಾ ಸಂಸ್ಥೆಯೊಂದರ ನೌಕರರು. ಅವರ ಎರಡು ವರ್ಷದ ಮಗುವಿಗೆ ಒಂದು ದಿನ ಅಕಸ್ಮಾತ್ತಾಗಿ ಮೂರ್ಛಾರೋಗ ಬಂದು ಕೈಕಾಲು ತಣ್ಣಗಾಗಿ ದೇಹ ಕಟ್ಟಿಗೆಯಂತಾಯಿತು. ಕೇವಲ ತಲೆಯಷ್ಟು ಬೆಚ್ಚಗಿತ್ತು. ಮನೆಯಲ್ಲಿ ಕೋಲಾಹಲವೆದ್ದಿತು. ಶ್ರೀ ಅಂಬೆ ಆಗ ಸ್ನಾನ ಮಾಡಿ ಹೋಮ ಕಾರ್ಯದಲ್ಲಿ ನಿರತರಾಗಿದ್ದರು. ಅವರು ಬಂದು ಹುಡುಗನ ಹಣೆಯ ಮೇಲೆ ಕೈಯಿಟ್ಟರು. ಹುಡುಗನ ದೇಹ ಬೆಚ್ಚಗಾಗತೊಡಗಿ ಏಳೆಂಟು ನಿಮಿಷಗಳಲ್ಲಿ ಆತ ಎದ್ದು ಕುಳಿತ. ಒಂದಿಷ್ಟೂ ಮೂಢನಂಬಿಕೆಗೆ ಒಳಪಡದ ಶ್ರೀ ಕಾಂಬಳಿಯವರೇ ಈ ಸಂಗತಿಯನ್ನು ನನಗೆ ಹೇಳಿದರು.

ಸರ್ ಹರಕಿಸನದಾಸ ಆಸ್ಪತ್ರೆಯಲ್ಲಿ ಡಾಕ್ಟರರು ಶ್ರೀ ಜಯ ಅಂಬೆಯವರನ್ನಿಟ್ಟು ಪರೀಕ್ಷಿಸಿದ್ದಾರೆ. ಅವರನ್ನಿಟ್ಟ ಕೋಣೆಯಲ್ಲಿ ಇಪ್ಪತ್ತು ನಾಲ್ಕು ತಾಸೂ ಡಾಕ್ಟರರು, ದಾಯಿಗಳು, ಸೇವಕರು ಇರುತ್ತಿದ್ದರು. ಶ್ರೀ ಜಯಅಂಬೆಯವರ ದರ್ಶನಕ್ಕಾಗಿಯೂ ಜನ ತುಂಬಿರುತ್ತಿದ್ದರು. ೭೨ ತಾಸುಗಳ ವರೆಗೆ ಸತತ ನಿರೀಕ್ಷಣೆ ಮಾಡಿದ ಮೇಲೆ ಡಾಕ್ಟರರಿಗೆ ಶ್ರೀ ಜಯ ಅಂಬೆಯವರು ಅನ್ನ ನೀರುಗಳನ್ನು ಮುಟ್ಟುವುದಿಲ್ಲ, ಮಲ-ಮೂತ್ರಗಳನ್ನು ವಿಸರ್ಜಿಸುವುದಿಲ್ಲ ಎಂದು ಖಾತ್ರಿಯಾಯಿತು.

ಈಗ ಶ್ರೀ ಜಯಅಂಬೆಯವರು ಗಿರನಾರದಲ್ಲಿ ತಪೋಮಗ್ನರಾಗಿದ್ದಾರೆ. ಅಲ್ಲಿ ಒಂದು ವರ್ಷ ಕಳೆದು ನಂತರ ಅಬುಪರ್ವತದಲ್ಲಿ ಒಂದು ವರ್ಷ, ಆ ಮೇಲೆ ಕೈಲಾಸ ಶಿಖರದಲ್ಲಿ ಎರಡು ವರ್ಷ ತಪಸ್ಸು ಮಾಡಲಿದ್ದಾರೆ. ★





ಉಲ್ಲಾಸದ ನಾಡು ಲಾವೋಸ್

ಕೆ. ಆರ್. ನಾಯಕ

ಲಾವೋಸ್ "ಯುದ್ಧ"ದ ವರದಿಗಳನ್ನು ತಮ್ಮ ಪತ್ರಿಕೆಗಳಿಗೆ ಕಳಿಸಲು ವಿದೇಶಿ ಸುದ್ದಿಗಾರರು ೧೯೬೦ ಒಂದೇ ವರ್ಷದಲ್ಲಿ ೧೩ ಲಕ್ಷ ರೂಪಾಯಿಗಳನ್ನು ಕೇಬಲ್ಲಿಗಾಗಿ ವೆಚ್ಚ ಮಾಡಿದರು. ದಕ್ಷಿಣ ದಿಕ್ಕಿನಿಂದ ಗುರುತು ಅಳಿಸಿದ ಅಮೇರಿಕನ್ ವಿಮಾನಗಳು ಪರ್ವತದಲ್ಲಿ "ಯುದ್ಧ" ಮಾಡುತ್ತಿದ್ದ ಸರಕಾರೀ ಪಕ್ಷದ ಪಡೆಗಳಿಗೆ ತೋಪುಗಳನ್ನೂ ಬಂದೂಕುಗಳನ್ನೂ ಮದ್ದು-ಗುಂಡುಗಳನ್ನೂ ಪ್ಯಾರಾಚೂಟ್ ಮೂಲಕ ಇಳಿಸಿದವು. ಎದುರುಗಡೆಯ ಸೈನಿಕರಿಗಾಗಿ ಉತ್ತರದಿಂದ ರಶಿಯದ ಇಲುಶಿನ್ ವಿಮಾನಗಳು ಅಂಥದೇ ಪೂರೈಕೆಗಳನ್ನು ಒದಗಿಸಿದವು. ಅಮೇರಿಕ-ರಶಿಯಗಳ ಧುರೀಣರು ಪರಸ್ಪರರನ್ನು ನಿಂದಿಸುವ ಘೋರ ಶಬ್ದಗಳನ್ನು ತೂರಿದರು. ತಟಸ್ಥ ರಾಷ್ಟ್ರಗಳು ಲಾವೋಸ್‌ನಲ್ಲಿ ಶಾಂತಿ ಸ್ಥಾಪಿಸಲು ಪ್ರಚಂಡ ಪ್ರಯತ್ನಗಳನ್ನು ಕೈಕೊಂಡು ಕೊನೆಗೊಮ್ಮೆ ಜಿನೆವಾದಲ್ಲಿ ೧೪ ರಾಷ್ಟ್ರಗಳ ಸಭೆ ಕೂಡಿಸಿದವು.

ಜಗತ್ತಿನಲ್ಲೆಲ್ಲ ಲಾವೋಸ್ ಬಗ್ಗೆ ಕೋಲಾಹಲ ಹಬ್ಬಿದ್ದಾಗ್ಗೆ ಸ್ವತಃ ಲಾವೋಸ್‌ನಲ್ಲಿ

ಯಾರೂ ಈ "ಯುದ್ಧ" ದಲ್ಲಿ ಆಸಕ್ತಿಯನ್ನು ತೋರುತ್ತಿಲ್ಲ. ಆಡಳಿತ ರಾಜಧಾನಿ ವಿಯೆಂಟೀನ್‌ನಲ್ಲಿ ಸುಂದರಿಯರಾದ ಲಾವೋ ತರುಣಿಯರು ತಂತಿ ಕಳಿಸಲು ಚಡಪಡಿಸುತ್ತಿರುವ ಸುದ್ದಿಗಾರರ ಮುಂದೆ ತಮ್ಮ ಮದಗಜಗಮನವನ್ನು ನಸುವೂ ಕಡಿಮೆ ಮಾಡಲಿಲ್ಲ. ಪರ್ವತಗಳಲ್ಲಿ ಸೈನಿಕರು ನಗುತ್ತ ಕೆಲೆಯುತ್ತ "ಶತ್ರು" ಗಳಿರುವ ದಿಕ್ಕಿಗೆ ಆಗೊಮ್ಮೆ ಈಗೊಮ್ಮೆ ತೋಪುಗಳನ್ನು ಹಾರಿಸಿ ಸುಮ್ಮನಾಗುತ್ತಿದ್ದರು. ಹೋರಾಟ ಶಿಖರಾವಸ್ಥೆಯಲ್ಲಿದ್ದಾಗ ಸರಕಾರಿ ಪಡೆಗಳು ಐದು ವಾರಗಳಲ್ಲಿ ಎಂಟು ಮೈಲುಗಳಷ್ಟು ಮುನ್ನಡೆದರೆ "ಬಂಡಾಯಗಾರ" ಸೈನ್ಯಗಳು ಮೂರು ತಿಂಗಳ ಯುದ್ಧದಲ್ಲಿ ಹೆಚ್ಚೆಂದರೆ ೫೦ ಜನರನ್ನು ಸಂಹರಿಸಿದವು.

ಅರಸನ ನಿವಾಸವಾದ ರಾಜಧಾನಿ ಲುವಾಂಗ್ ಪ್ರಬಾಂಗ್‌ನಲ್ಲಿ ಅರಸ ಸವಾಂಗ್ ವತ್ತನರವರು ನಿಶ್ಚಿಂತರಾಗಿದ್ದರು. ಅರಮನೆಯ ಸುವರ್ಣಮಯ ಬುದ್ಧಮೂರ್ತಿಯ ಮೇಲೆ ಮಾತ್ರ ಅವರು ಬಲವಾದ ಕಾವಲಿಟ್ಟಿದ್ದಾರೆ. ಅದು ತಮ್ಮ ಕೈಯಲ್ಲಿ ಸುರಕ್ಷಿತವಾಗಿದ್ದಷ್ಟು ಕಾಲ ತಮಗೂ ರಾಷ್ಟ್ರಕ್ಕೂ ಯಾವ ಅಪಾಯವೂ ಇಲ್ಲವೆಂದು ಅವರ ವಿಶ್ವಾಸವಿದೆ. ಲಾವೋಸಿನ ಹಳ್ಳಿಗರಲ್ಲಿ ಹೆಚ್ಚಿನವರು ಹೀಗೊಂದು ಯುದ್ಧ ನಡೆದಿದೆಯೆಂದೇ ಕೇಳಿಲ್ಲ. ಒಂದು ಮಾತಿನಲ್ಲಿ, ಲಾವೋಸ್ ಆನಂದ ಮತ್ತು ಆಲಸ್ಯದ ದೇಶ.

ನಾಡು. ನಾವು ಫ್ರೆಂಚ್ ಅಕ್ಷರ ರಚನೆಯನ್ನನುಸರಿಸಿ ಲಾವೋಸ್ ಎಂದು ಕರೆಯುವ ನಾಡಿನ ಹೆಸರಿನ ಸರಿಯಾದ ಉಚ್ಚಾರ ಲೌ ಎಂದು. ಯಾವ ಬದಿಯಿಂದಲೂ ಸಮುದ್ರಕ್ಕೆ ತಗಲದ ಈ ದೇಶ ೯೧೦೦ ಚದರ ಮೈಲು (ಮೈಸೂರು ರಾಜ್ಯದ ವಿಸ್ತಾರ ೭೪,೦೦೦ ಚದರ ಮೈಲು) ವಿಸ್ತಾರವಾಗಿದೆ. ಅರಣ್ಯಮಯ ಪರ್ವತ ಶ್ರೇಣಿ ಮತ್ತು ನದಿ ಕೊಳ್ಳಗಳಿಂದ ತುಂಬಿದ ಲಾವೋಸ್‌ನ ಜನಸಂಖ್ಯೆಯನ್ನು ಈ ವರೆಗೆ ಯಾರೂ ಸರಿಯಾಗಿ ಎಣಿಸಿಲ್ಲ. ೧೫ ಲಕ್ಷದಿಂದ ೩೦ ಲಕ್ಷದ ವರೆಗೂ ಇರಬಹುದೆಂದು ಅಂದಾಜು. ಅದರ ಪಶ್ಚಿಮ ಮತ್ತು ಆಗ್ನೇಯಕ್ಕೆ ಅಮೇರಿಕಾ ಪಕ್ಷಪಾತಿ ತಾಯಿಲಂಡ್ ಮತ್ತು ದಕ್ಷಿಣ ವಿಯತ್‌ನಾಮ್, ವಾಯುವ್ಯ ಮತ್ತು ದಕ್ಷಿಣಕ್ಕೆ ತಟಸ್ಥ ಬರ್ಮಾ ಮತ್ತು ಕೆಂಬೋದಿಯ, ಉತ್ತರಕ್ಕೆ ಕಮ್ಯುನಿಸ್ಟ್ ಚೀನ ಮತ್ತು ಉತ್ತರ ವಿಯತ್‌ನಾಮ್ ಇರುವುದೇ ಲಾವೋಸ್‌ನ ದುರ್ದೈವವಾಗಿದೆ. ಅದರಿಂದಲೇ ಅದು ತನಗೆ ಬೇಡವಾದ ಯುದ್ಧದಲ್ಲಿ ಸಿಲುಕಿಕೊಂಡಿದೆ.

ಇತಿಹಾಸ. ೧೦-೧೩ ನೇ ಶತಮಾನಗಳ ನಡುವೆ ಚೀನದ ಯುನಾನ್ ಪ್ರಾಂತದಿಂದ ಹೊರಗೋಡಿಸಲ್ಪಟ್ಟು ಇಂಡೋಚೀನದಿಂದ ಈಶಾನ್ಯ ಭಾರತದ ವರೆಗೆ ಅಲ್ಲಲ್ಲಿ ನೆಲೆಯೂರಿದ ತಾಯ್ ಜನರ ಒಂದು ಶಾಖೆಯೆ ಲಾವೋಸ್‌ನ ಮುಖ್ಯ ಜನಾಂಗ. ಅವರು ಮೆಕಾಂಗ್ ನದಿಯ ಕೊಳ್ಳಕ್ಕೆ ನುಗ್ಗಿ ಅಲ್ಲಿನ ತೀರ ಅನಾಗರಿಕ ಮೂಲ ನಿವಾಸಿಗಳನ್ನು ಗುಡ್ಡಗಾಡುಗಳಿಗೆ ತಳ್ಳಿ ನಾಡನ್ನು ತಮ್ಮದಾಗಿ ಮಾಡಿಕೊಂಡರು. ಅನಂತರವೂ ಅನೇಕ ಅನಾಗರಿಕ ಜನಾಂಗಗಳು ಬಂದು ಗುಡ್ಡಗಾಡುಗಳಲ್ಲಿ ನೆಲೆಯೂರಿದವು. ಈ ಎಲ್ಲ ಜನಾಂಗಗಳನ್ನು ಕೊಳ್ಳದ ಲಾವೋ ಜನ ತಿರಸ್ಕಾರಪೂರ್ವಕ ಖಾ (ದಾಸ) ಜನರೆಂದು ಕರೆಯುತ್ತಾರೆ. ಖಾ ಜನರಲ್ಲಿ ಕೆಲವರು ಎಷ್ಟು ಹಿಂದಿದ್ದಾರೆಂದರೆ, ವಸತಿಗಾಗಿ ಕಂಬವುಳ್ಳ ಮನೆಗಳನ್ನು ಕೂಡ ಕಟ್ಟದೆ ಗುಡ್ಡಗಳ ಕಡಿದಾದ ಪಕ್ಕಗಳಲ್ಲಿ ದಿಬ್ಬದ ಬದಿಯಿಂದ ತಗ್ಗಿನ ವರೆಗೆ ಇಳಿಜಾರಾದ ಛತ್ತುಗಳನ್ನು ಹಾಕಿಕೊಂಡು ಅದರೊಳಗೆ ವಾಸಿಸುತ್ತಾರೆ. ಈ ಜನಾಂಗಗಳ ಒಟ್ಟು ಜನಸಂಖ್ಯೆ ದೇಶದಲ್ಲಿ ಅರ್ಧದಷ್ಟಿದ್ದು ಕಣಿವೆಯ ಲಾವೋ ಜನರನ್ನು ಅವರು ಭಯಮಿಶ್ರಿತ ದ್ವೇಷದಿಂದ ಕಾಣುತ್ತಿದ್ದಾರೆ.

ದಕ್ಷಿಣಕ್ಕೆ ನುಗ್ಗಿ ಬಂದ ತರುಣದಲ್ಲಿ ಲಾವೋ

ಜನ ಪ್ರತಾಪಶಾಲಿಗಳೇ ಆಗಿದ್ದರು. ೧೪ ನೇ ಶತಮಾನದಲ್ಲಿ ೩೩ ಹಲ್ಲುಗಳುಳ್ಳವನೆಂದು ಪ್ರಸಿದ್ಧನಾದ ಫ್ಯಾನುಂಗುಮ್ ಎಂಬ ರಾಜ ದಂಡಯಾತ್ರೆಯಿಂದ ಈಗಿನ ತಾಯಿಲಂಡಿನ ಕೆಲ ಭಾಗವನ್ನು ಕೂಡ ಆಕ್ರಮಿಸಿಕೊಂಡು ದೊಡ್ಡ ಸಾಮ್ರಾಜ್ಯ ಕಟ್ಟಿದ. ಆತ ತನ್ನ ರಾಜ್ಯವನ್ನು ಮೌಂಗ್ ಲನ್ ಕ್ಸಂಗ್ ಹೋಂ ಖಾ (ಕೋಟಿ ಆನೆ ಮತ್ತು ಶ್ವೇತಚ್ಛತ್ರದ ನಾಡು) ಎಂದು ಕರೆದ. ಬೌದ್ಧ ಧರ್ಮವನ್ನು ಪ್ರಸಾರ ಪಡಿಸಿದವನೂ ಅವನೇ. ಇಂದಿಗೂ ಅರಮನೆಯಲ್ಲಿರುವ ಸುವರ್ಣಮಯ ಬುದ್ಧ ಪ್ರತಿಮೆಯನ್ನು ಸ್ಥಾಪಿಸಿದವನೂ ಅವನೇ.

ಮೆಕಾಂಗ್ ನದಿಯಾಚೆಯ ತಾಯಿಲಂಡಿನೊಡನೆ ಅಂದಿನಿಂದ ೧೯ ನೇ ಶತಮಾನದ ವರೆಗೂ ಲಾವೋ ಸಾಮ್ರಾಜ್ಯಕ್ಕೆ ತಿಕ್ಕಾಟ ನಿರಂತರವಾಗಿ ಸಾಗಿ ಸುವರ್ಣ ಬುದ್ಧ ಪ್ರಬಾಂಗ್ ವಿಗ್ರಹ ಎಷ್ಟೋ ಸಲ ಕೈಬದಲಾಯಿಸಿತು. ೧೮೯೩ ರಲ್ಲಿ ಫ್ರೆಂಚರ ಪ್ರವೇಶದ ನಂತರವೇ ಈ ತಿಕ್ಕಾಟ ಕೊನೆಗೊಂಡದ್ದು.

ಫ್ರೆಂಚರು ಲಾವೋಸಿನ ಅರಸೊತ್ತಿಗೆಯನ್ನು ನಷ್ಟಪಡಿಸದೆ ಅದನ್ನು ಕೈಗೊಂಬೆಯಾಗಿ ಮಾತ್ರ ಮಾಡಿಕೊಂಡರು. ಅರ್ಧ ಶತಮಾನದ ಫ್ರೆಂಚ್ ಆಳಿಕೆಯ ನಂತರ, ಜಪಾನಿ, ಅನಂತರ ಚೀನಿ, ಅನಂತರ ಮರಳಿ ಫ್ರೆಂಚ್ ಆಕ್ರಮಣಗಳಿಂದ ಸುಂದರ ಲಾವೋಸ್ ಧ್ವಂಸವಾಗಿ ಹೋಯಿತು. ೧೯೫೪ ರಲ್ಲಿ ಅದಕ್ಕೆ ಇತರ ಇಂಡೋಚೀನಿ ವಸಾಹತುಗಳೊಡನೆ ಸ್ವಾತಂತ್ರ್ಯ ದೊರೆಯಿತು.

ಕಳೆದ ಶತಮಾನದಲ್ಲಿ ಲಾವೋಸ್‌ಗೆ ಬಂದ ಫ್ರೆಂಚರು ಅದನ್ನು ನೋಡಿ ರೂಸೋ ಹೇಳಿದ "ಉದಾತ ಅನಾಗರಿಕ"ರೆಂದರೆ ಈ ಜನರೇ ಎಂದು ನಿರ್ಧರಿಸಿದರು. ಅವರು ಲಾವೋ ಜನರ ಉಲ್ಲಾಸವನ್ನು ಮೆಚ್ಚಿದರು, ಅವರ ಹಾಡನ್ನು ಮೆಚ್ಚಿದರು, ಅವರ ನಿಶ್ಚಿಂತೆಯನ್ನು ಮೆಚ್ಚಿದರು, ಅವರ ಉತ್ಸವಗಳನ್ನು ಮೆಚ್ಚಿದರು; ಅದಕ್ಕೂ ಹೆಚ್ಚಾಗಿ ಲಾವೋ ನಾರಿಯರ ಚೆಲುವನ್ನು, ಸಲುಗೆಯ ಸ್ವಭಾವವನ್ನು ಮೆಚ್ಚಿದರು.


ಮತ್ತು ಇದಾವುದನ್ನೂ ಬದಲಾಯಿಸದಿರಲು ನಿರ್ಧರಿಸಿದರು. ಜನರಿಗೆ ಶಿಕ್ಷಣ ಕೊಡಲು ಅವರು ಯತ್ನಿಸಲಿಲ್ಲ. ೫೦ ವರ್ಷಗಳ ಫ್ರೆಂಚ್ ಆಳಿಕೆಯಲ್ಲಿ ಶಾಲೆಗೆ ಹೋದವರೆಂದರೆ ಇಡೀ ಲಾವೋಸಿನಲ್ಲಿ ೭,೦೦೦ ಜನ; ಅವರಲ್ಲಿ ಹೈಸ್ಕೂಲನ್ನು ಮುಗಿಸಿದವರು ೬೧ ಜನ; ವಿಯೆಂಟೇನ್‌ನಲ್ಲಿರುವ "ಕಾಲೇಜು" ನಿಜವಾಗಿ ಹೈಸ್ಕೂಲೇ! ಇಡೀ ದೇಶದಲ್ಲಿ ಇಂದು ಕೇವಲ ನಾಲ್ಕು ಜನ ಪದವೀಧರರಿದ್ದಾರೆ!

ಜನಜೀವನ: ಲಾವೋಸಿನಲ್ಲಿ ನೂರಕ್ಕೆ ೯೦ ರಷ್ಟು ಜನ ಭೂಮಿ ಚಪ್ಪಟೆಯಾಗಿದೆಯೆಂದು ನಂಬುವಷ್ಟು ನಿರ್ವಿದ್ಯರು. ಅವರ ಅಂಧಶ್ರದ್ಧೆಗಳಿಗೆ ಕೊನೆಮೊದಲಿಲ್ಲ. ಮಾನವನಿಗೆ ೩೨ ಆತ್ಮಗಳಿವೆಯೆಂದೂ ಅವುಗಳಲ್ಲಿ ಯಾವುದಾದರೊಂದು ಯಾವುದೇ ಕಾರಣದಿಂದ ಶರೀರವನ್ನು ಬಿಟ್ಟು ಹೋದರೆ ಅದೇ ಅಸ್ವಸ್ಥವೆಂದೂ ಅವರ ವಿಶ್ವಾಸವಿದೆ. ಇದು ಸಾಮಾನ್ಯ ಜನಕ್ಕಷ್ಟೇ ಮೀಸಲಿರದೆ ಸುಶಿಕ್ಷಿತ ಅರಸು ಮನೆತನವನ್ನೂ ವ್ಯಾಪಿಸಿದೆ. ಗತಿಸಿದ ಮಹಾರಾಜ ಸಿಸವಂಗವಂಗರ ರಾಜಧಾನಿ ಲುವಾಂಗ್ ಪ್ರಬಾಂಗವನ್ನು ಹತ್ತು ವರ್ಷದ ಕೆಳಗೆ ಬಂಡಾಯಗಾರ ಪಡೆಗಳು ಸುತ್ತಲೂ ಮುತ್ತಿದಾಗ ಫ್ರೆಂಚ್ ಸಲಹೆಗಾರರು ರಾಜಚಿಹ್ನೆಗಳ ಸಮೇತ ಸುರಕ್ಷಿತ ಸ್ಥಳಕ್ಕೆ ಪಾರಾಗಿ ಹೋಗಬೇಕೆಂದು ಅರಸರಿಗೆ ಸೂಚಿಸಿದರು; ಅರಸರು ಅದರ ಬದಲಿಗೆ ವಿಜಯೋತ್ಸವದ ಸಿದ್ಧತೆಗಾಗಿ ಅಪ್ಪಣೆಯಿತ್ತರು. ಜೋಯಿಸರು ಸದ್ಯವೇ ಅರಸರಿಗೆ ಜಯವಾಗಲಿದೆಯೆಂದು ಭವಿಷ್ಯ ಹೇಳಿದ್ದರಂತೆ. ನಿಜವಾಗಿಯೂ ನೋಡನೋಡುತ್ತ ಬಂಡಾಯಗಾರರು ಹಿಂದೆ ಸರಿದು ಹೋದರು. ಉತ್ಸವವಾಯಿತು; ಜ್ಯೋತಿಷದಲ್ಲಿ ಜನರ ವಿಶ್ವಾಸ ದೃಢಪಟ್ಟಿತು;

ಆದರೆ ಶತ್ರುಗಳು ಓಡಿಹೋಗಲು ಕಾರಣ ಬೇರೆಯೆ ಇತ್ತು: ಅರಸ ತಮ್ಮ ಮಾತು ಕೇಳದ್ದನ್ನು ಕಂಡು ಫ್ರೆಂಚರು ತಮ್ಮ ಯುದ್ಧಯೋಜನೆಯನ್ನೇ ಬದಲಿಸಿದ್ದರು.

ಆದರೆ ಪ್ರಾಂಜಲ ಹೃದಯದಲ್ಲಿ, ಬಾಳಿನ ಪ್ರಶಾಂತ ಲಾವಣ್ಯದಲ್ಲಿ ಲಾವೊ ಜನರನ್ನು ಮೀರಿಸುವ ಜನಾಂಗ ಏಶಿಯದಲ್ಲೇ ಇಲ್ಲವೆಂದು ವಿದೇಶಿ ಯಾತ್ರಿಕರು ಏಕಕಂಠದಿಂದ ಹೇಳುತ್ತಾರೆ. ಬಡವರಲ್ಲಿ ಬಡವನೂ ಅತಿ ಶ್ರೀಮಂತ ಅತಿಥಿಯನ್ನು ನಿಸ್ಸಂಕೋಚವಾಗಿ ತನ್ನದೇ ಮಾದರಿಯಲ್ಲಿ ಆದರಿಸಿಳಿ ಕಸುತ್ತಾನೆ. ಈ ಜನ— ಗಂಡಸರೂ ಹೆಂಗಸರೂ— ನಡೆಯುವುದರಲ್ಲೇ ಒಂದು ಸೊಬಗಿದೆ.


ಲಾವೋ ಸ್ತ್ರೀಯರು ಏಶಿಯದ ಪರಮಸುಂದರಿಯರಲ್ಲಿ ಗಣಿಸಲ್ಪಡುತ್ತಾರೆ. ಬಿಳಿಯ ಬ್ಲೌಸ್, ಮೊಣಕಾಲಿಗಿಂತ ತುಸು ಕೆಳಗೆ ಬರುವ, ಬೆಳ್ಳಿ-ಬಂಗಾರಗಳ ಜರತಾರಿ ಅಂಚಿನ ಲಂಗ, ಮೇಲೊಂದು ಕಲಾಬತ್ತಿನ ಸೆರಗು ಹಾಕಿದ ತರುಣಿಯರು ಕಣ್ಣಿಗೆ ಹಬ್ಬದಂತಿದ್ದಾರೆ. ಅವರು



ಹುಟ್ಟುಕಲಾವತಿಯರು. ಅತಿ ಶ್ರೇಷ್ಠ ಅರಸು ಮನೆತನದ ತರುಣಿಯರಿಗೂ ಕೈಮಗ್ಗದ ನೇಯ್ಗೆಯ ಕಲೆ ತರಗತವಾಗಿರುತ್ತದೆ. ಅಧಿಕತರ ಸ್ತ್ರೀಯರು ತಾವೇ ನೇಯ್ದು ಕಸೂತಿ ಹಾಕಿದ ಬಟ್ಟೆಗಳನ್ನು ಧರಿಸುತ್ತಾರೆ.

ಅವರು ತುಂಬ ಸ್ವತಂತ್ರರೂ ಆಗಿದ್ದಾರೆ. ಯುದ್ಧದಲ್ಲಿ ಗಾಯಗೊಂಡವರಿಗೆ ಮಿಠಾಯಿ ಹಂಚಲು ವಿಯೆಂಟೀನ್ ಆಸ್ಪತ್ರೆಗಳಲ್ಲಿ ಪ್ರತಿ ಮುಂಜಾನೆ ಕುಲೀನ ಸ್ವಯಂಸೇವಿಕೆಯರು ಬರುವುದನ್ನು ಕಾಣಬಹುದು. ಅತ್ಯುಚ್ಚ ಮನೆತನದ ತರುಣಿಯರು ಪರಪುರುಷರೊಡನೆ— ವಿದೇಶೀಯರೊಡನೆ ಕೂಡ— ನರ್ತಿಸುತ್ತಾರೆ. ಆದರೆ ಇದು ಮೈಮುಟ್ಟದ ನೃತ್ಯ. ಯಾವಾತನೊಬ್ಬ ನೃತ್ಯ ಕಾಲದಲ್ಲಿ ಅವಳಿಗೆ ತೀರ ಸಮೀಪ ಹೋದನೋ ಅವನಿಗೆ ದೇವರೇ ಗತಿ. ಜೀವನದ ಸವಿಯನ್ನೀಂಟಿ ನಲುವತ್ತು ದಾಟಿದ ಮೇಲೆ ಸಾಮಾನ್ಯ ಲಾವೋ ಸ್ತ್ರೀಯರು ಕೂದಲನ್ನು ಕತ್ತರಿಸಿಬಿಡುತ್ತಾರೆ— ಇನ್ನು ಈ ಹೂವಿನಲ್ಲಿ ಮಕರಂದ ಉಳಿದಿಲ್ಲ ಎಂದು ಗಂಡಸರಿಗೆ ನೋಟೀಸು ಕೊಡಲು!

ಧರ್ಮ ಲಾವೋ ಜನರ ಜೀವನದಲ್ಲಿ ಮಹತ್ವದ ಪಾತ್ರ ವಹಿಸುತ್ತದೆ. ಪ್ರಥಮ ರಾಜಧಾನಿ ಲುವಾಂಗ್ ಪ್ರಬಾಂಗ್‌ನಲ್ಲಿ(ಜನ ಸಂಖ್ಯೆ ಒಂದು ಲಕ್ಷ) ನೂರಾರು ಪ್ರಾಚೀನ ಬೌದ್ಧ ಮಠ ಮಂದಿರಗಳಿವೆ. ೬೦ ಸಾವಿರ ಜನಸಂಖ್ಯೆಯ ಆಡಳಿತ ರಾಜಧಾನಿ ವಿಯೆಂಟೀನ್‌ನಲ್ಲಿ ೪೦ ಮಠ ಮಂದಿರಗಳು! ಪ್ರತಿಯೊಬ್ಬ ಲಾವೋ ಪುರುಷನೂ ಜೀವನದಲ್ಲಿ ಒಂದಲ್ಲ ಒಂದು ಸಲ ಕೆಲ ವಾರಗಳ ವರೆಗಾದರೂ ಈ ಮಠಗಳಲ್ಲಿ ಭಿಕ್ಷುವಾಗಿ ಕಾಲಕ್ಷೇಪ ಮಾಡಿರುತ್ತಾನೆ. ಕೇವಲ ಐದು ವರ್ಷದ ಹುಡುಗರು ಕೂಡ ಭಿಕ್ಷುಗಳಾಗಿರುವುದುಂಟು. ಪ್ರತಿ ಮುಂಜಾನೆ ಮಠದ ವೃದ್ಧ ಗುರುವಿನ ಹಿಂದೆ ಈ ತಲೆ ಬೋಳಿಸಿದ ತರುಣ ಮತ್ತು




‘ಅವಳ ಬಟ್ಟೆಗಳನ್ನು
ಈಗತಾನೇ ಬದಲಿಸಿದೆ,
...ಈಗ ಹೇಗಿದ್ದಾಳೆ ನೋಡಿ!’

‘ಅವಳ ಬಟ್ಟೆಗಳನ್ನು ಸುಲಭವಾಗಿ ನಿರ್ಮಲಗೊಳಿಸುವ ಉಪಾಯ ನನಗೆ ಗೊತ್ತಿರುವುದರಿಂದ ಹೇಗೋ ಸುಧಾರಿಸಿಕೊಂಡು ಹೋಗುತ್ತೇನೆ. ಇಂತಹ ತುಂಟ ಮಗಳು ಇರುವಾಗ ಎಲ್ಲವನ್ನೂ ತಿಳಿದುಕೊಳ್ಳಬೇಕಾಗುತ್ತದೆ, ಅಲ್ಲವೆ? ನಿಜವಾಗಿಯೂ ಸನ್‌ಲೈಟ್ ನನ್ನ ಬಟ್ಟೆಗಳನ್ನು ಬೆಳ್ಳಗೆ ಹಾಗೂ ಪ್ರಕಾಶಮಾನವಾಗಿ ಒಗೆಯುತ್ತದೆ—ಸಂಪೂರ್ಣವಾಗಿ ನಿರ್ಮಲಗೊಳಿಸುತ್ತದೆ. ಸನ್‌ಲೈಟ್ ನನಗೆ ಬೇಕಾದಷ್ಟು ನೊರೆಯನ್ನು ಕೊಡುತ್ತದೆ. ಒಗೆಯುವ ಕೆಲಸವನ್ನು ಬಹಳ ಸುಲಭಗೊಳಿಸುತ್ತದೆ

ನಂ. 2, ‘ಮೇಫೇರ್’, ಬಾಂದ್ರಾ, ಮುಂಬಯಿಯಲ್ಲಿರುವ ಶ್ರೀಮತಿ ಆತ್ಮಾರಾಮ್ ಬಟ್ಟೆಗಳನ್ನು ಶುದ್ಧವಾದ, ಸೌಮ್ಯವಾದ ಸನ್‌ಲೈಟ್‌ನಿಂದ ಒಗೆಯುತ್ತಾರೆ. ಸನ್‌ಲೈಟ್ ನಿಮ್ಮ ಬಟ್ಟೆಗಳನ್ನೂ ರಕ್ಷಿಸಲಿ.

ಸನ್‌ಲೈಟ್



ನಿಮ್ಮ ಬಟ್ಟೆಗಳಿಗೆ ಅತ್ಯಂತ ಹಿತಕರ!

ಹಿಂದುಸ್ಥಾನ್ ಲೀವರ್ ಅವರ ತಯಾರಿಕೆ

S. 29-X29 KN

ಬಾಲ ಭಿಕ್ಷುಗಳು ಕೇಸರೀ ವಸ್ತ್ರ ಧಾರಿಗಳಾಗಿ ಬೀದಿಯಲ್ಲಿ ಭಿಕ್ಷೆಗೆ ಹೊರಡುತ್ತಾರೆ. ಸ್ತ್ರೀಯರು ಬೀದಿಯ ಬದಿಯಲ್ಲಿ ಮಂಡಿಯೂರಿ ತಾವು ತಂದ ಅನ್ನದ ಮುದ್ದೆ ಮತ್ತು ಮೀನನ್ನು ಭಿಕ್ಷೆ ಹಾಕುತ್ತಿರುತ್ತಾರೆ. ಬಹುಶಃ ಈ ಅಲ್ಪಾವಧಿಯ ಸಂನ್ಯಾಸದಲ್ಲೇ ಲಾವೋ ಜನರು ತಮ್ಮ ರಾಷ್ಟ್ರೀಯ ಚರಿತ್ರವಾದ ವಿನಯ, ದಾನಬುದ್ಧಿ, ನಿರ್ವಿಕಾರತೆ, ಶಾಂತಿ, ವಿಧೇಯತೆ, ಸೌಜನ್ಯಗಳನ್ನು ಕಲಿಯುತ್ತಾರೆಂದು ತೋರುತ್ತದೆ.

ಆಲಸ್ಯ. ಪಶ್ಚಿಮ ದಂಡಿಗುಂಟವೆಲ್ಲ ಹರಿಯುವ ಮೆಕಾಂಗ್ ನದಿ ಮತ್ತು ಅದರ ಶಾಖೆಗಳು ಈ ಜನರ ಜೀವನಾಧಾರ. ಅಕ್ಕಿ ಮತ್ತು ಗೋವಿನ ಜೋಳ ಬೆಳೆಯುತ್ತದೆ. ಗುಡ್ಡಗಳಲ್ಲಿ ತೇಗ, ಆನೆ— ಮತ್ತು ಅಫೀಮು ಕೂಡ. ಅನ್ನದ ಮುದ್ದೆಯನ್ನು ಮೆಣಸಿನಕಾಯಿ ಪುಡಿಯಲ್ಲಿ ಅದ್ದಿ ಉಣ್ಣುತ್ತಾರೆ. ಭತ್ತದ ಗದ್ದೆಗಳಲ್ಲೇ ಸಿಗುವ ಮೀನು ಸಹ-ಆಹಾರ ಒಂದು ಕಾಲದಲ್ಲಿ ಲಾವೋಸ್‌ನ ಗೋಸಂಪತ್ತು ಪ್ರಸಿದ್ಧವಾಗಿತ್ತು. ಆದರೆ ಯುದ್ಧ ಕಾಲದಲ್ಲಿ ಜಪಾನೀಯರೂ ಅನಂತರ ಚೀನೀಯರೂ ಅದನ್ನು ತಿಂದುಹಾಕಿಬಿಟ್ಟರು. ಇಂದು ಒಂಭತ್ತು ವರ್ಷ ಮೀರದ ದನ-ಕರುಗಳನ್ನು ಕೊಲ್ಲಬಾರದೆಂದು ಆಜ್ಞೆ ಹೊರಡಿಸಿ ಸರಕಾರ ಆ ಸಂಪತ್ತನ್ನು ಪುನರುಜ್ಜೀವಿಸಲು ಯತ್ನಿಸುತ್ತಿದೆ.

ಆದರೆ ಯಾವ ಆರ್ಥಿಕ ಸಾಹಸಕ್ಕೂ ಲಾವೋ ಜನರ ಅಗಾಧ ಆಲಸ್ಯ ಅಡ್ಡ ಬರುತ್ತಿದೆ. ದೇಶದಲ್ಲಿ ಜಗತ್ಪ್ರಸಿದ್ಧ ಅಂತರ್ಯುದ್ಧವೊಂದು ನಡೆದಿರುವಾಗಲೂ ಆಡಳಿತ ರಾಜಧಾನಿ ವಿಯೆಂಟೇನ್‌ನಲ್ಲಿ ಮಧ್ಯಾಹ್ನ ೧೨ ರಿಂದ ೩ ರ ವರೆಗೆ ಸಕಲ ಚಟುವಟಿಕೆಗಳೂ (ವಾಮಕುಕ್ಷಿಗಾಗಿ) ಸ್ಥಗಿತವಾಗುತ್ತವೆ. ಇವರಿಗೆ ಸಹಾಯ ಮಾಡಲು ಬಂದ ಅಮೇರಿಕನ್ನರು ಮಾತ್ರ ಮಧ್ಯಾಹ್ನದಲ್ಲೂ ದುಡಿಯುವುದನ್ನು ನೋಡಿ ಲಾವೋ ಜನ ಸೋಜಿಗಪಡುತ್ತಾರೆ. ಅಮೇರಿಕನ್ ತಜ್ಞರು ರಸ್ತೆಗಳೇ ಇಲ್ಲದ ಈ ನಾಡಿನ ಹಳ್ಳಿಗಳಿಗೆ ಹೇಗಾದರೂ ಹೋಗಿ ಬೆಳೆಯನ್ನು ಇಮ್ಮಡಿ ಮಾಡುವ ಉಪಾಯಗಳನ್ನು ಬೋಧಿಸಿದರೆ ರೈತರು ಸೌಜನ್ಯದಿಂದ ಕೇಳಿಕೊಂಡು, ಬೆಳೆ ಇಮ್ಮಡಿಸುವ ಬದಲು ಕೆಲಸವನ್ನು ಅರ್ಧದಷ್ಟು ಕಡಿಮೆ ಮಾಡುವ ಉಪಾಯಗಳಿಲ್ಲವೇ ಎಂದು ಕೇಳಿದರಂತೆ. ಜನರು ಅಶುಭ ದಿನಗಳಲ್ಲಿ ಕೆಲಸ ಮಾಡುವುದಿಲ್ಲ, ಅಶುಭವೆಂದು; ಶುಭ ದಿನಗಳಲ್ಲಿಯೂ ಮಾಡುವುದಿಲ್ಲ, ಗುಡಿಗೆ ಹೋಗಬೇಕು, ಉತ್ಸವ ಆಚರಿಸಬೇಕು ಎಂದು!

ಮತ್ತೆ ಪ್ರತಿ ಉತ್ಸವವನ್ನೂ ಆದಷ್ಟು ಹೆಚ್ಚು ದಿನಗಳ ವರೆಗೆ ಎಳೆಯುತ್ತಾರವರು. ಈ ಉತ್ಸವಗಳಿಗಾಗಿ ಸುಂದರ ನಾರಿಯರು ಬೀದಿಗಳಲ್ಲಿ ಬಾಳೆಯೆಲೆಯಲ್ಲಿ ಕಟ್ಟಿದ ಸಿಹಿ ತಿಂಡಿಯನ್ನು "ಮಾರಿ" ಹಣ ಶೇಖರಿಸುತ್ತಾರೆ. ದೇಗುಲದ ವಠಾರದಲ್ಲಿ ವಾದ್ಯಘೋಷಗಳೊಡನೆ ಉತ್ಸವ ನೆರವೇರುತ್ತದೆ. ಸೊಂಗ್‌ಕ್ರಾಂ ಎಂಬ ಧಾರ್ಮಿಕ ಉತ್ಸವದಲ್ಲಿ ಅರಮನೆಗೆ ಅರಮನೆಯೇ ಭಾಗವಹಿಸುತ್ತದೆ. ಅರಮನೆಯ ಸಿಂಗರಿಸಿದ ಆನೆಗಳು ಕಾಲಿಗೆ ಗಂಟೆ ಕಟ್ಟಿಕೊಂಡು ನಸುಕಿನಲ್ಲೇ ಬೀದಿಗಳಲ್ಲಿ ಸಂಚರಿಸಿ ಜನರನ್ನೆಬ್ಬಿಸುತ್ತವೆ. ಬೌದ್ಧಯತಿಗಳನ್ನು ಜನ ಬುಟ್ಟಿಗಳಲ್ಲಿ ಹೊತ್ತು ಮೆರವಣಿಗೆ ತೆಗೆಯುತ್ತಾರೆ. ಮಂದಿರಗಳ ಹೊರಗಿರುವ ಬುದ್ಧ ವಿಗ್ರಹಗಳಿಗೆ ಅಭಿಷೇಕ ಮಾಡಿ ತೀರ್ಥವನ್ನು ಅರಸನನ್ನೊಳಗೊಂಡು ಸಕಲರಿಗೂ ಮೈ ಒದ್ದೆಯಾಗುವಂತೆ ಸಿಂಪಡಿಸಲಾಗುತ್ತದೆ.

ವಸಂತೋತ್ಸವ ಹೆಚ್ಚು ಲೌಕಿಕ ಹಬ್ಬ. ನಮ್ಮ ಹೋಳಿ ಹಬ್ಬದ ಸರಿಸಮವಾದ, ಆದರೆ ಹಲವು ದಿನ ನಡೆಯುವ, ಈ ಉತ್ಸವದಲ್ಲಿ ಕಾಮ ಚಿಹ್ನಗಳ ಮೆರವಣಿಗೆ, ಕಾಮೋತ್ತೇಜಕ ಹಾಡುಗಳ ಕೋಲಾಹಲವೇ ಕೋಲಾಹಲ. ಈ ಉತ್ಸವದ ಒಂದು ವೈಶಿಷ್ಟ್ಯವೆಂದರೆ ಜಾತ್ರೆಯ

ಒಂದು ಬದಿಯಲ್ಲಿರುವ "ಪ್ರೇಮಿಕೂಟ" ದ ವ್ಯವಸ್ಥೆ. ಮಾರಲಿಟ್ಟ ಸಿಹಿತಿಂಡಿಗಳ ಸ್ಟಾಲಿನ ಆ ಪಕ್ಕದಲ್ಲಿ ಅವಿವಾಹಿತ ತರುಣಿಯರು ಕುಳಿತಿರುತ್ತಾರೆ. ಈ ಪಕ್ಕದಲ್ಲಿ ತರುಣರು ಬಂದು ತಿಂಡಿಯನ್ನು ಕೊಂಡು ತಿನ್ನುತ್ತ ಚಕ್ಕಂದವಾಡುತ್ತಾರೆ. ಒಬ್ಬ ತರುಣನಿಗೂ ತರುಣಿಗೂ "ಹಿಡಿಸಿ" ತೆಂದರೆ ಹಿರಿಯರ ಅನುಮತಿ ಪಡೆದು ಮದುವೆಯಾಗಬಹುದು. ಆದರೆ ಈ "ಚಕ್ಕಂದ" ಎಲ್ಲೆ ಮೀರದಂತೆ ಸ್ವಲ್ಪ ದೂರದಲ್ಲಿ ಕುಳಿತ ಹಿರಿಯ ಹೆಂಗಸರು ಕಣ್ಣಿಟ್ಟಿರುತ್ತಾರೆ. ಲಾವೋ ಜನರ ಔಚಿತ್ಯಪ್ರಜ್ಞೆ ಯಾವಾಗಲೂ ಜಾಗೃತವಾಗಿರುತ್ತದೆ.

ರಾಜಕಾರಣ ಮತ್ತು ಯುದ್ಧ. ಲಾವೋಸ್ ರಾಜಕಾರಣ ಒಬ್ಬ ಅರಸ, ಮೂವರು ರಾಜಕುಮಾರರು ಮತ್ತು ಒಬ್ಬ ಸೇನಾಪತಿಯ ಸುತ್ತ ಚಲಿಸುತ್ತಿದೆ. ಅರಸ ಸವಾಂಗ ವತ್ಥನರು ಪ್ಯಾರೀಸಿನಲ್ಲಿ ಶಿಕ್ಷಣ ಹೊಂದಿದ ಸುಧಾರಕ ವಿಚಾರದ ಮನುಷ್ಯ. ಪ್ರತಿ ವರ್ಷ ಮೆಕಾಂಗ್ ನದಿಗುಂಟ ನೌಕಾಯಾತ್ರೆ ಮಾಡಿ ಸುಂದರಿ ತರುಣಿಯರನ್ನು ಹೆಂಡಂದಿರಾಗಿ ತರುತ್ತಿದ್ದ ಹಿಂದಿನ ಅರಸ ಸಿಸ-ವಂಗ ವಂಗರ ಮಾದರಿಯನ್ನು ತ್ಯಜಿಸಿ ಏಕಪತ್ನೀ ವ್ರತವನ್ನು ಕೈಕೊಂಡ ಈ ರಾಜ ೧೯೬೦ ರಲ್ಲಿ ಪಟ್ಟಕ್ಕೆ ಬಂದರು. ಯುವರಾಜನಾಗಿದ್ದಾಗ ಲಾವೋಸನ್ನು ಸುಧಾರಿಸಬೇಕೆಂದು ಕೆಲ ಕಾಲ ಯತ್ನಿಸಿ ಆ ಮೇಲೆ ಆ ಗೊಡವೆ ಬಿಟ್ಟ ವತ್ಥನರು ಈಗ "ನನ್ನ ಪ್ರಜೆಗಳಿಗೆ ಹಾಡಲು ಮತ್ತು ಪ್ರೇಮಿಸಲು ಮಾತ್ರ ಬರುತ್ತದೆ" ಎಂದು ಸುಮ್ಮನಿದ್ದಾರೆ. ಅವರಿಗೂ ತಮ್ಮ ಸುತ್ತಲ ಅಂಧಶ್ರದ್ಧೆ ತಗಲಿದೆ. ಅವರು ತಮ್ಮ ಸಿಂಹಾಸನವನ್ನು ರಕ್ಷಿಸಿಕೊಳ್ಳಲು ಆತುರರಾಗಿದ್ದರೂ ರಾಜಕಾರಣದಲ್ಲಿ ಅಷ್ಟು ಪರಿಣಾಮಕಾರಿ ವ್ಯಕ್ತಿಯಾಗಿಲ್ಲ.

ವಿಯೆಂಟೇನ್‌ನಲ್ಲಿ ಸ್ವತಂತ್ರ ರಾಜ್ಯಭಾರ ಮಾಡುತ್ತಿದ್ದು ಅನಂತರ ಲುವಾಂಗ್ ಪ್ರಬಂಗದ ಅರಸುಗಳಿಗೆ ಅಧೀನವಾದ ಇನ್ನೊಂದು ರಾಜಮನೆತನದ ಇಬ್ಬರು ರಾಜಕುಮಾರರೂ ದಕ್ಷಿಣದ ಚಂಪಾಸಕ ನಾಡಿನ ಇನ್ನೊಬ್ಬ ರಾಜಕುಮಾರನೂ ಇಂದಿನ ರಾಜಕಾರಣದ ಪ್ರಮುಖ ಪಾತ್ರಧಾರಿಗಳಾಗಿದ್ದಾರೆ. ವಿಯೆಂಟೇನ್‌ನ ರಾಜಕುಮಾರರ ಹೆಸರು ಸೌವನ್ನಫೌಮಾ ಮತ್ತು ಸೌಫನೌವಂಗ. ಪ್ಯಾರೀಸಿನಲ್ಲಿ ಎಂಜಿನಿಯರಿಂಗ್ ಕಲಿತು ಉಚ್ಚವರ್ಗದಲ್ಲಿ ತೇರ್ಗಡೆ ಹೊಂದಿದ ಈ ಮಲಅಣ್ಣ ತಮ್ಮಂದಿರು ಲಾವೋಸನ್ನು ಸುಧಾರಿಸಲು ಪಣತೊಟ್ಟವರು. ಜಪಾನಿಗಳು ಲಾವೋಸನ್ನಾಕ್ರಮಿಸಿದಾಗ ಅವರ ವಿರುದ್ಧ ಮತ್ತು ಫ್ರೆಂಚರು ಪುನರಾಕ್ರಮಿಸಿದಾಗ ಅವರ ವಿರುದ್ಧ ಕೂಟಯುದ್ಧವನ್ನು ಅವರು ಸಂಘಟಿಸಿದರು. ಜಪಾನೀಯರ ಸೋಲಿನ ನಂತರ ಅವರಿಬ್ಬರೂ ಮಂತ್ರಿಗಳಾದರು. ಆದರೆ ಫ್ರೆಂಚರು ಮರಳಿ ಅವರನ್ನು ಪದಚ್ಯುತಗೊಳಿಸಿದರು. ಸಮಾಜವಾದಿ ವಿಚಾರಧಾರೆಯ ಸೌಫನೌವಂಗರು ಉತ್ತರದ ಗುಡ್ಡಗಾಡುಗಳಿಗೆ ಮರಳಿ ತಮ್ಮ "ಪೆಥೆಟ್ ಲಾವೊ" ಕೂಟಯೋಧರನ್ನು ಕೂಡಿಸಿ ಫ್ರೆಂಚರ ವಿರುದ್ಧ ಯುದ್ಧವನ್ನು ಮುಂದುವರಿಸಿದರು. ಈಗಲೂ ಉತ್ತರದ ಎರಡು ಪ್ರಾಂತಗಳನ್ನು ಹಿಡಿದುಕೊಂಡಿರುವ ಅವರಿಗೆ ಕಮ್ಯುನಿಸ್ಟ್ ಬೆಂಬಲವಿದೆ.

ಇಂಡೋಚೀನದಲ್ಲೆಲ್ಲ ಪೆಟ್ಟು ತಿಂದು ಫ್ರೆಂಚರು ೧೯೫೪ ರಲ್ಲಿ ಲಾವೋಸನ್ನೊಳಗೊಂಡು ಇಂಡೋಚೀನದ ಮೂರು ರಾಜ್ಯಗಳನ್ನು ತೊರೆದು ಹೋದ ಮೇಲೆ ಅಣ್ಣ ಸೌವನ್ನಫೌಮಾ ಪುನಃ ಪ್ರಧಾನ ಮಂತ್ರಿಯಾದರು. ಆದರೆ ದೇಶ ಕಮ್ಯುನಿಸ್ಟರ ವಶವಾಗಬಾರದೆಂದು ಅಮೇರಿಕನ್ನರು ಲಾವೋಸ್‌ನಲ್ಲಿ ಪ್ರವೇಶಿಸಿದರು. ಸೌವನ್‌ಫೌಮರ ತಾಟಸ್ಥ್ಯ ನೀತಿ ಅವರಿಗೆ ಸರಿದೋರಲಿಲ್ಲ. ದೊಡ್ಡ ಪ್ರಮಾಣದಲ್ಲಿ ಲಾವೋಸ್‌ಗೆ ಧನಸಹಾಯ ಮಾಡಿ ಕಮ್ಯುನಿಸ್ಟ

ವಿರೋಧಿ ಸೈನಿಕರನ್ನು ತರಬೇತುಗೊಳಿಸುವ ಅಮೇರಿಕದ ನೀತಿಗೆ ಒಪ್ಪದ ಸೌವನ್ನಫೌಮಾರು ಒಳಸಂಚಿಗೆ ತುತ್ತಾಗಿ ನೆರೆಯ ಕೆಂಬೋದಿಯಾಕ್ಕೆ ಓಡಿ ಆಶ್ರಯ ಪಡೆಯಬೇಕಾಯಿತು. ಇಂದಿಗೂ ರಶಿಯ ಮೊದಲಾದ ಕಮ್ಯುನಿಸ್ಟ್ ಸರಕಾರಗಳು ಅವರನ್ನೇ ಪ್ರಧಾನಮಂತ್ರಿಯೆಂದೊಪ್ಪುತ್ತವೆ. ಅಮೇರಿಕನ್ನರು ಚಂಪಾಸಕದ ರಾಜಕುಮಾರನಾದ ಬೌನ್ ಓಂನನ್ನು ಪ್ರಧಾನಮಂತ್ರಿಯಾಗಿ ಅಂಗೀಕರಿಸಿದ್ದಾರೆ. ಆದರೆ ನಿಜವಾದ ಅಧಿಕಾರ ಕಮ್ಯುನಿಸ್ಟ್ ವಿರೋಧಿಯಾಗಿ ಅಮೇರಿಕನ್ನರು ಹೇಳಿದಂತೆ ಕೇಳುವ ಸೇನಾಪತಿ ಫೌಮಿ ನೌಸವಾನ್ ಕೈಯಲ್ಲಿದೆ.

ಅಮೇರಿಕವು ಇಂದಿನ ವರೆಗೆ ಲಾವೋಸ್ ನಲ್ಲಿ ರೂ. ೧೩೦ ಕೋಟಿಗಳನ್ನು ಸುರಿದಿದೆ. ಅದರ ಮುಖ್ಯ ಧ್ಯೇಯ ಲಾವೋಸ್ ಕಮ್ಯುನಿಸ್ಟರ ಕೈಗೆ ಬೀಳದಂತೆ ಮಾಡುವುದು. ಅದು ೨೦ ಲಕ್ಷ ಜನಸಂಖ್ಯೆಯ ಈ ದೇಶದಲ್ಲಿ ೨೯,೦೦೦ ಮಹಾಸೈನ್ಯವನ್ನು ತರಬೇತು ಮಾಡುತ್ತಿದೆ. ಅಮೇರಿಕನ್ನರ ಚಟುವಟಿಕೆ ನೋಡಿ ಉತ್ತರದಲ್ಲಿ ರಶಿಯನ್ನರು ಸೌಫನಾವಂಗರಿಗೆ ಅಪಾರ ಸಹಾಯ ನೀಡುತ್ತಿದ್ದಾರೆ. ಲಾವೋಸ್‌ನ ಗುಡ್ಡಗಾಡಿನ ಹಿಂದುಳಿದ ಉಗ್ರ ಜನಾಂಗಗಳನ್ನು ಅವರು ಈ ಹೋರಾಟದಲ್ಲಿ ಎಳೆದುಕೊಂಡಿದ್ದಾರೆ. ಸಾಮಾನ್ಯ ಲಾವೋ ಜನರಿಗೆ ಈ ಯುದ್ಧ ಬೇಕಿಲ್ಲ. ಅವರು ಇದು ರಾಜಕುಮಾರರೊಳಗಿನ ಜಗಳ, ನಮಗೇಕೆ ಗೊಡವೆ, ಎಂದು ಕಿವಿ ಕೊಡಹುತ್ತಾರೆ. ಆದರೆ ಇಂದು ನಿಜವಾದ ಯುದ್ಧ ರಶಿಯನ್ ಮತ್ತು ಅಮೇರಿಕನ್ನರೊಳಗೆ ನಡೆದಿದ್ದು ಲಾವೋಸ್‌ನ ರಾಜಕುಮಾರರು ಬರಿ ಚದುರಂಗದ ಪೇದೆಗಳು ಮಾತ್ರ ಆಗಿ ಉಳಿದಿದ್ದಾರೆ. *

ಪೂರ್ವಲಕ್ಷಣ

ಒಬ್ಬ ಮಹಿಳೆ ತನ್ನ ಚಿಕ್ಕ ಮಗನನ್ನು ಕರೆದುಕೊಂಡು ಒಬ್ಬ ಜೋಯಿಸರ ಬಳಿಗೆ ಹೋದಳು. "ಸ್ವಾಮಿ, ಇವನ ಭವಿಷ್ಯ ಹೇಳಿರಿ."

"ತಾಯಿ, ಇವನ ಯಾವ ಲಕ್ಷಣಗಳು ವಿಲಕ್ಷಣವಾಗಿ ಕಂಡವೊ ಅವನ್ನು ಹೇಳು."

"ರಾತ್ರಿ ನಿದ್ದೆಯಲ್ಲಿ ಕೂಗುತ್ತಾನೆ. 'ಏಳು, ಎಚ್ಚರಾಗು, ಹೊರಡು, ಮುನ್ನುಗ್ಗು, ನಡೆಮುಂದೆ' ಎನ್ನುತ್ತಾನೆ."

"ಬರೀ ಅನ್ನುತ್ತಾನೋ ಅಥವಾ—"

"ಬರೀ ಅನ್ನುತ್ತಾನಷ್ಟೆ."

"ಹಾಗಾದರೆ ಈತ ದೊಡ್ಡ ಮುಂದಾಳಾಗಲಿದ್ದಾನೆ." —ಹರಿಶಂಕರ ಪರಸಾಯಿ

*


ಸುಖವು ನಿಮ್ಮ ವೃತ್ತಿಗಿಂತಲೂ ಮನೋವೃತ್ತಿಯನ್ನವಲಂಬಿಸಿದೆ.

— ಗಿಲ್ ಕ್ರಾಫ್ಟರ್

*

ಚಿಂತೆ ಎಷ್ಟೋ ಸಲ ಚಿಕ್ಕ ಸಂಗತಿಗೆ ದೊಡ್ಡ ನೆರಳನ್ನು ಕೊಡುತ್ತದೆ.

— ಸ್ವೀಡಿಶ್ ಗಾದೆ



ನಿಮಗೆ
ಪುನಃ
ಸುಸ್ಥಿತಿ
ಅನಿಸುವದು

ಅರ್ಕಶಾಲಾ ಯೂಟೋನ್

ತನ್ನ ಸ್ತ್ರೀತ್ವ ಪ್ರತ್ಯೇಕ ಸಂಭವನೀಯ ಮಾರ್ಗದಿಂದ ಅನುಭವಿಸುವ ಹಕ್ಕು ಮಹಿಳೆಗೆ ಇರುವದು. ತನ್ನ ವೇಷಭೂಷೆಯಲ್ಲಿ, ಚಟುವಟಿಕೆಯಲ್ಲಿ ಮತ್ತು ವಿಶೇಷತಃ ತನ್ನು ಶಾರೀರಿಕ ಸ್ವಾಸ್ಥ ಮತ್ತು ಆರೋಗ್ಯದಲ್ಲಿ ಅವಳಿಗೆ ಈ ಅನುಭವ ಬರುವದು.

ಯುಟೋನದಿಂದ ಅವಳಿಗೆ ಸ್ತ್ರೀತ್ವದ ಈ ಭಾವನೆ ನಿಶ್ಚಿತವಾಗಿ ಪ್ರಾಪ್ತವಾಗುವುದು. ಮತ್ತು ಅವಳಿಗೆ ಸುಖಸ್ವಾಸ್ಥ ಮತ್ತು ಆರೋಗ್ಯದ ದ್ವಾರವು ದೊರೆಯುವದು. ಗೃಹಿಣಿಯರಿಗೆ ಮತ್ತು ಅವರ ತಾರುಣ್ಯಾವಸ್ಥೆಯಲ್ಲಿ ಪದಾರ್ಪಣೆಮಾಡುವ ಹೆಣ್ಣುಮಕ್ಕಳಿಗೆ ಯುಟೋನ ಉಪಯುಕ್ತ ಇರುವದು.



ಆಯುರ್ವೇದೀಯ ಅರ್ಕಶಾಲಾ ಲಿ., ಸಾತಾರಾ:

ಆಯುರ್ವೇದೀಯ ಔಷಧದಲ್ಲಿ ಹೋದ ೩೫
ವರ್ಷದಿಂದ ವಿಶ್ವಾಸಪಡೆದ ಹೆಸರು.

ಮುಂಬಯಿ ಡೆಪೋ : ಕೇಳೆವಾಡಿ ನಾಕಾ,
ಗಿರ್‌ಗಾಂವ್, ಮುಂಬಯಿ-೪.

ಒಂದು ಆಯುರ್ವೇದಿಕ ಔಷಧವು

PRATIBHA-61-3A



ಹರಟೆ

ತಿಮ್ಮಯ್ಯನ ಹೇರ್ ಕಟ್

ಟಿ. ಎನ್. ಗಲಗಲಿ

ಕಿವಿಯ ಮೇಲ್ಭಾಗದ ಕೂದಲು ಕಿವಿಯನ್ನೇರಿ ದಾಳಿ ಮಾಡುವಷ್ಟು ಬೆಳೆದವೆಂದರೆ ಆ ಬೆಳೆಯನ್ನು ಕೊಯ್ಯಲು ಸರಿಯಾದ ಕಾಲ. ಸಕಾಲಕ್ಕೆ ಬೆಳೆ ತೆಗೆಸದೆ ಇದ್ದರೆ, ತಲೆ ಕೆಟ್ಟಂತೆ ಕಂಡು ಮುಖ ಅಸಡ್ಡೆಯಾಗುತ್ತದೆ.

ಇಂತು ತಲೆಕೆಟ್ಟ ತಿಮ್ಮಯ್ಯ ಬಚ್ಚಲು ಬಳಿಯುವ ಬ್ರಶ್ಶಿನ ಕೂದಲಷ್ಟೇ ಉದ್ದವಾದ ಬಿರುಸಾದ ಗಡ್ಡದ ಮೇಲೆ ಕೈಯಾಡಿಸುತ್ತ ಸರಿಯಾದ ಸಲೂನಾನ್ವೇಷಣದ ಉದ್ದೇಶದಿಂದ ಓಣಿ ಓಣಿ ತಿರುಗುತ್ತಿದ್ದ. ಅಂದು ಮಂಗಳವಾರವಾದ್ದರಿಂದ ಅವನಿಗೆ ಬೇಕಾದ ಸ್ಥಳ ಸಿಗಲಿಲ್ಲ. ಬಹುಶಃ ಹೆಂಡತಿಯ ಹಳ್ಳಿಗೆ ಹೊರಟಿದ್ದನೆಂದು ಕಾಣುತ್ತದೆ. ಅಂದೇ ಅವನಿಗೆ ಹೇರ್‌ಕಟ್ ಮತ್ತು ಶೇವ್ ಆಗಲೇ ಬೇಕಿತ್ತು. "ಕನ್ನಿಕಾ ಕೇಶ-ಕರ್ತನಾಲಯ" ಬೋರ್ಡು ಕಾಣುತ್ತಿದ್ದರೂ ಬಾಗಿಲು ಮುಚ್ಚಿತ್ತು. "ಟಾಗೋರ ಹೇರ್ ಕಟಿಂಗ ಸಲೂನ" ಬೋರ್ಡಿನೊಟ್ಟಿಗೆ "ಮಂಗಳವಾರ ರಜಾ" ಎಂಬ ಬೋರ್ಡೂ ನೇತಾಡುತ್ತಿತ್ತು. "ಅನ್ನಪೂರ್ಣ ಆಯುಷ್ಕರ್ಮ ಶಾಲೆ"-ಅದೂ ತೆರೆದಿರಲಿಲ್ಲ. ತಲೆ ಭಾರವಾದ್ದರಿಂದ ಇನ್ನು ಹೆಚ್ಚು ಕಾಲ ಬರಿಯೇ ಬೋರ್ಡು ನೋಡುತ್ತ ತಿರುಗುವ ಸಹನೆ ಉಳಿಯಲಿಲ್ಲ. ಆ ಪೇಟೆಯಲ್ಲಷ್ಟು ನೋಡಿ ತಿರುಗಿಬಿಡೋಣವೆಂದುಕೊಂಡು ಹೊರಟ.

ರಸ್ತೆಯಲ್ಲಿ ಹೊರಟವರ ಹರಕು ಚಪ್ಪಲಿಯನ್ನೇ ನೋಡುತ್ತ ಕುಳಿತಿರುವ ಮೊಚ್ಚೆಗಾರ "ರಿಪೇರಿಯಾಗಬೇಕೆ" ಎಂದು ಕೇಳುವದಿಲ್ಲವೇ? ಅದೇ ರೀತಿ ತಿಮ್ಮಯ್ಯನ ಸ್ವರೂಪವನ್ನು ನೋಡಿ ಕಟ್ಟೆಯ ಮೇಲೆ ನಿಂತಿದ್ದ ವ್ಯಕ್ತಿ ಕರೆಯಿತು.

"ಬರ್ರಿ! ಒಳಗೇ ಬರ್ರಿ. ನಿಮಗೇನಾಗಬೇಕೆಂದು ನನಗೆ ಗೊತ್ತು."-

"ಯಾರಪ್ಪಾ ನೀನು?.... ಏನಂದೀ?... ತಮ್ಮಯ್ಯನಾ? ನಾನು ತಿಮ್ಮಯ್ಯ."

ತಮ್ಮಯ್ಯನ ಪಾಲಿಗೆ ತಿಮ್ಮಯ್ಯ ಯಾರಾದರೇನು? ಬೆಳೆದ ತಲೆ ಗಡ್ಡಗಳಿದ್ದರೆ ಆದರ-ಪೂರ್ವಕ ಸ್ವಾಗತ ಸಿಕ್ಕಿತೆಂದೇ ತಿಳಿಯಬೇಕು. ಹೊರಗೆ ನಿಶ್ಚಿತ ಬೋರ್ಡ್ ಇರದ್ದರಿಂದ, ತಾನೆ-

ಲ್ಲಿಗೆ ಬಂದದ್ದೆಂದು ತಿಳಿಯಲು ತಿಮ್ಮಯ್ಯನಿಗೆ ತುಸು ವೇಳೆ ಹಿಡಿಯಿತು.

ನಾಲ್ಕು ಎತ್ತರದ ಖುರ್ಚಿಗಳು, ಎದುರಿಗೆ ದೊಡ್ಡ ಕನ್ನಡಿಗಳು. ಕನ್ನಡಿಗಳ ಹತ್ತಿರವೇ ಇದ್ದ ಮಿಶನ್, ಕತ್ತರಿ, ರೇಝರ್ ನೋಡಿದ ಮೇಲೆ ಅದು Four seated (ನಾಲ್ಕು ಸೀಟಿನ) ಸಲೂನ್ ಎಂದು ತಿಳಿದು ತಿಮ್ಮಯ್ಯನಿಗೆ ಆನಂದವಾಯಿತು.

ತಮ್ಮಯ್ಯನೂ ಆನಂದದ ಭರದಲ್ಲಿ, ಊದಿನಕಡ್ಡಿ ಹಚ್ಚಿಟ್ಟು ಅಲ್ಲಿದ್ದ ಶ್ರೀ ಕೃಷ್ಣಪರಮಾತ್ಮನಿಗೂ ಮಧ್ವಾಚಾರ್ಯರಿಗೂ ಲಕ್ಷ್ಮಿ-ಸರಸ್ವತಿಯರಿಗೂ ದೀಪ ಹಚ್ಚಿ ಪೂಜೆ ಮಾಡಿದ. ಪೂಜೆಯ ನಂತರ ಮುಂದಿನ ಕಾರ್ಯಕ್ರಮ. ತಿಮ್ಮಯ್ಯ ಪೀಠವನ್ನೇರಿದ. ಹೆಣವನ್ನು ಸಿದಿಗೆಯ ಮೇಲೆ ಕೂಡ್ರಿಸಿ ಅರಿವೆ ಹೊದಿಸುವಂತೆ ತಿಮ್ಮಯ್ಯನ ದೇಹಕ್ಕೆಲ್ಲ ಬಿಳಿ ಅರಿವೆ ಹೊದಿಸಲಾಯಿತು. ತಮ್ಮಯ್ಯ ತಲೆಯನ್ನಷ್ಟೆ ಹೊರಗೆ ಇಟ್ಟುಕೊಂಡ. ಉಳಿದದ್ದರ ಸಂಬಂಧ ಅವನಿಗೇನು?

ಸಲೂನಿನಲ್ಲಿ ಬೇರೆ ಯಾರೂ ಕಾಣದ್ದರಿಂದ ತಿಮ್ಮಯ್ಯನಿಗೆ ಯೋಚನೆಗಿಟ್ಟುಕೊಂಡಿತು. ಖುರ್ಚಿಗಳು ನಾಲ್ಕು, ಕನ್ನಡಿಗಳೂ ನಾಲ್ಕು. ಬೇರೆ ಗಿರಾಕಿಗಳಿರದಿದ್ದರೂ ಉಳಿದ ಮೂವರು ಕ್ಷೌರಿಕರು ಸುಳಿದಾಡಬಾರದೆ? ತನ್ನ ಸಂಶಯ ಹೆದರಿಕೆ ಕಳೆದುಕೊಳ್ಳಲು ಕೇಳಲೇಬೇಕಾಯಿತು.

"ತಾವೇನೂ ಚಿಂತೆ ಮಾಡಬೇಡಿರಿ. ಇರುವವ ನಾನೊಬ್ಬನೇ. ಉಳಿದ ಮೂರು ಸೀಟುಗಳು ಶೋ ಬಿಸಿನೆಸ್ಸು. ಒಂದೇ ಸೀಟು ಕಂಡರೆ ಪಬ್ಲಿಕ್ ಬೇಜಾರುಪಟ್ಟುಕೊಳ್ಳುತ್ತಾರೆ. ಅದೆಲ್ಲ ಬಿಸಿನೆಸ್ಸು ಗುಟ್ಟು. ಹೆಸರಿಗೆ ಫೋರ್ ಸೀಟೆಡ್. ಇರುವವ ನಾನೊಬ್ಬನೇ."

ಅರ್ಧಂಬರ್ಧ ಇಂಗ್ಲೀಷಾದ್ದರಿಂದ ಪ್ರತಿಶಬ್ದವನ್ನು ತಿಳಿದುಕೊಳ್ಳುವ ತಾಕತ್ತು ಇರದಿದ್ದರೂ ತಿಮ್ಮಯ್ಯನ ಯೋಚನೆ ಮಾತ್ರ ಬಹುದೂರ ಓಡಿತು.

ಈ ಜೀವ ಅನಿಶ್ಚಿತವಾದದ್ದು. ಇರುವ ಇವನೊಬ್ಬ ತನ್ನ ತಲೆ ಅರ್ಧವೇ ಬೋಳಿಸಿದ ನಂತರ ಹಾರ್ಟ್ ಫೇಲಾಗಿ ಸತ್ತರೆ. . . ರೆ. . ರೆ! ಮುಂದೆ ತನ್ನ ಗತಿ? ದೇವರೇ ಗತಿ. ಅದೇ ಸಲೂನಿನಲ್ಲಿ ಮತ್ತೊಬ್ಬ ಕ್ಷೌರಿಕನಿದ್ದರೆ ಉಳಿದರ್ಧವನ್ನು ಅವನು ಬೋಳಿಸುತ್ತಿದ್ದ. ಅಂದು ಮಂಗಳವಾರ. ಬೇರೆ ಸಲೂನಿನವರೂ ತನ್ನ ಸಹಾಯಕ್ಕೆ ಬರುವ ಸಂಭವ ಇಲ್ಲ. ಮರುದಿನ ಉಳಿದ ಸಲೂನುಗಳು ತೆಗೆಯುವ ವರೆಗೂ ತಾನು ತಲೆಯನ್ನೇ ಹೊರಗೆ ಹಾಕುವಂತಿಲ್ಲ. ಆದರೂ ಅಂದೇ ಅವನಿಗೆ ತಲೆ ಸರಿಯಾಗಬೇಕಾದುದರಿಂದ ದೇವರ ಮೇಲೆ ಭಾರ ಹಾಕಿ ಕುಳಿತುಕೊಳ್ಳಬೇಕಾಯಿತು.

"ನಿನ್ನ ಸಲೂನಿಗೆ ಒಂದು ಬೋರ್ಡು ಬೇಡವೆ?"

"ನಾನಿಲ್ಲಿ ವ್ಯಾಪಾರ ಪ್ರಾರಂಭಿಸಿ ಎರಡು ತಿಂಗಳಾಯಿತು. ಸಾಕಷ್ಟು ಪ್ರಚಾರಾನೂ ಆಗಲಿ ಅಂದುಕೊಂಡು ಪೇಪರಿನಲ್ಲಿ ಜಾಹೀರಾತು ಕೊಟ್ಟೆ. 'ಗಾಂಧಿ ಬಝಾರ, ಲಕ್ಷ್ಮಿ ಗುಡಿಯ ಎದುರಿಗಿರುವ ಸಲೂನಿಗೆ ಮೂರು ಅಕ್ಷರದ ಹೆಸರು ಸೂಚಿಸಿ ಕಳಿಸಿರಿ. ಅದರಲ್ಲಿ ಯೋಗ್ಯವೆಂದು ಆರಿಸಿದ್ದಕ್ಕೆ, ರೂ. ೨೫ ಬಹುಮಾನ ಅಥವಾ ಎರಡು ವರುಷ ಅವರಿಗೂ ಅವರ ಮನೆಯವರಿಗೂ ಪುಕ್ಕಟೆ ಹಜಾಮತಿ.' ಬಹಳೇ ಹೆಸರುಗಳು ಬರೆದು ಬಂದವು. ಅವುಗಳಲ್ಲಿ 'ದಿಲೀಪ್ ಹೇರ್‌ಕಟಿಂಗ್ ಸಲೂನ್' ಯೋಗ್ಯವೆಂದು ಆರಿಸಿ ಬೋರ್ಡು ಹಾಕಿಸಿದೆ. ಅದನ್ನು ಸೂಚಿಸಿದ ಮಹಾಶಯ ಬಂದು ರೂ. ೨೫ ಬೇಡಿದ. 'ಕ್ಯಾಶ್' ಬೇಡ. ನಿಮ್ಮ ಮನೆಯವರೆಲ್ಲರಿಗೂ ಫ್ರೀ ಹಜಾಮತಿ ಮಾಡುತ್ತೇನೆ ಎಂದೆ. ಆದರೆ ಅವನಿಗೆ ವರ್ಷಕ್ಕೆ ಆರೇ ಸಾರೆ ಹಜಾಮತಿ. ಲೆಖ್ಖ ಹಾಕಿದರೆ ಎರಡು ವರ್ಷಕ್ಕೆ ೯ ರೂಪಾಯಿ ಮಾತ್ರ. ಮನೆಯವರೆಂದರೆ ಅವನ ಹೆಂಡತಿಯೊಬ್ಬಳೇ ಅಂತೆ; ಅವನಿರುವ ವರೆಗೂ ಅವಳ ಹಜಾಮತಿ ಇಲ್ಲ. ಕಾಡಿ ಬೇಡಿ ರೂ. ೨೫ ಕಿತ್ತುಕೊಂಡೇ ಬಿಟ್ಟ. ದಿಲೀಪನ ಹೆಸರಿನಲ್ಲಿ ವ್ಯಾಪಾರ ಚೆನ್ನಾಗಿ ನಡೆಯಲಿಲ್ಲ. ಅದನ್ನು ತೆಗೆಸಿಬಿಟ್ಟೆ."

"ಬೇರೆಯಾದರೂ ಒಂದು ಬೋರ್ಡು ಬೇಡವೇ?"

"ಒಂದು ವಿಚಾರ ಮಾಡಿದ್ದೇನೆ. ವಿನೋಬಾ ಭಾವೆ ಇಲ್ಲಿಗೆ ಬಂದಾಗ ಅವರ ಹಜಾಮತಿಯನ್ನು ಸ್ವತಃ ನಾನೇ ಮಾಡಿದ್ದೇನೆ. ಆಗ ಕಷ್ಟಪಟ್ಟು ತೆಗೆಸಿದ ಫೋಟೋ ಕೂಡ ಇದೆ. ಅದನ್ನೇ ದೊಡ್ಡದು ಮಾಡಿಸಿ ವಿನೋಬಾ ಹೇರ್ ಕಟಿಂಗ್ ಸಲೂನ್ ಎಂದು ಆ ಸಂತನ ಹೆಸರು ಹೇಳಿ ಕಾಲ ಹಾಕಬೇಕೆಂದಿದ್ದೇನೆ. ಅದಿರ್ಲಿ. ಕೂದಲು ಶಾರ್ಟ್ ಇರಲೇ, ಲಾಂಗ್ ಮಾಡಲೆ?"

ಲಾಂಗ್, ಶಾರ್ಟ್ ಶಬ್ದಗಳು ತಿಮ್ಮಯ್ಯನಿಗೆ ತನ್ನ ಧಂದೆಯಲ್ಲಿಯೂ ಪರಿಚಯವಿದ್ದವು. ಯಾವುದೋ ಭ್ರಮೆಯಿಂದಲೇ ಉತ್ತರಿಸಿದ.

"ಶಾರ್ಟ್ ಬೇಡ. ಲಾಂಗ್ ಮಾಡಿಬಿಡು."

ಹೆಂಗಸಾಗಿದ್ದರೆ ಇಲಿಯ ಬಾಲದಂತಿದ್ದ ಹೆರಳನ್ನು ಚವರಿಕೂದಲು ಹಚ್ಚಿ ಲಾಂಗ್ ಮಾಡಬಹುದು. ಆದರೆ ತಿಮ್ಮಯ್ಯನ ಕೂದಲು ಉದ್ದ ಮಾಡಲು ಎಲ್ಲಿಂದ ಸಪ್ಲಿಮೆಂಟ್ ತರಬೇಕು? ಬಾಯಿತಪ್ಪಿ ಪ್ರಶ್ನೆ ಉತ್ತರ ಹೇಗೆ ಬಂದರೂ ಭಾವನೆಗಳನ್ನು ಸರಿಯಾಗಿ ತಿಳಿದುಕೊಂಡ ಅವರಿಬ್ಬರೇ ಜಾಣರು.

ಹಿಂಭಾಗದ ಕೂದಲ ಮೇಲೆ ಪ್ರಯೋಗ ನಡೆದಾಗ ತಲೆ ಮುಂದೆ ತಗ್ಗಿಸಬೇಕು. ಎಡಗಡೆ ಆಗಬೇಕಾದರೆ ಬಲಗಡೆ, ಬಲಗಡೆಯಾಗಬೇಕಾದರೆ ಎಡಗಡೆ. ಕೆಳಗೆ, ಮೇಲೆ, ಮತ್ತೆ ಎಷ್ಟೋ ಸಲ ೬೦ ಅಂಶ, ೩೦ ಅಂಶ, ೪೫ ಅಂಶ ಕೋನ ಮಾಡಿ ತಲೆ ಸರಿದಾಡಿಸಬೇಕಾಗುತ್ತಿತ್ತು. ಪ್ರತಿ ಭಾಗದಲ್ಲಿಯೂ ಮಿಶನ್ನಿನ ಕಪ್ ಕಪ್ ಕತ್ತರಿಯ ಚಕ್‌ಚಕ್ ಕತ್ತಿಯ ಚರ್‌ಚರ್ ಹತ್ತೆಂಟು ಸಾರೆ ನಡೆಯುತ್ತಲೇ ಇತ್ತು. ತಿಮ್ಮಯ್ಯನ ಅಧೀನದಲ್ಲಿರದ ತಲೆ, ತಮ್ಮಯ್ಯನಿಗೆ ಬಗ್ಗುತ್ತಿತ್ತು. ಎತ್ತ ಬೇಕತ್ತ ತಿಮ್ಮಯ್ಯನ ತಲೆಯನ್ನು ಸರಿಸುತ್ತ ಅದರೊಡನೆ ಅಧಿಕಾರದಿಂದ ಆಟವಾಡುತ್ತಿದ್ದ.

ನಂತರ ಆಗಬೇಕಾದುದು ಮುಖಕ್ಷೌರ. ತಲೆಗಿಂತಲೂ ಇದು ಕಷ್ಟದ ಕೆಲಸವಾಯಿತು. ತಮ್ಮಯ್ಯ ಸೌಮ್ಯತೆಯನ್ನೂ ನಯವನ್ನೂ ಮರೆತೇ, ನಿಷ್ಕರುಣೆಯಿಂದ ಕರಕರ ತಿಮ್ಮಯ್ಯನ ಗಲ್ಲ ಕೆರೆಯುತ್ತಿದ್ದ. ತುಂಬಾ ಉರಿಯಹತ್ತಿದರೂ ತಿಮ್ಮಯ್ಯ ಬಾಯಿ ಬಿಡದೇ ಸುಮ್ಮನೆ ಕುಳಿತದ್ದು ಆಶ್ಚರ್ಯ. ಅದಕ್ಕೆ ಕಾರಣವೂ ಇದೆ. ಕಪಾಳದ ಮೇಲೆ ಕತ್ತಿಯ ಕ್ರೂರ ಹರಿದಾಟ ಅನುಭವಿಸುತ್ತಿದ್ದ ತಿಮ್ಮಯ್ಯನಿಗೆ ತನ್ನ ಉದ್ಯೋಗದ ಅರಿವು ಬಂದದ್ದು ಸಹಜವೇ. ಏರು ಕಚ್ಚೆ ಹಾಕಿ, ಬಕೀಟಿನಲ್ಲಿ ನೀರು ತುಂಬಿಟ್ಟುಕೊಂಡು, ಗಿಡದ ಕೆಳಗೆ ತನ್ನ ಗಿರಾಕಿಗಳೊಂದಿಗೆ ಇದಕ್ಕೂ ಕ್ರೂರತನದಿಂದ ವರ್ತಿಸುತ್ತಿದ್ದಿಲ್ಲವೆ? ಆಗ ತನ್ನ ಗಿರಾಕಿಗಳಾಗಲೀ, ಯಾರೇ ಆಗಲೀ ಏನೂ ಮಾಡುತ್ತಿರಲಿಲ್ಲ, ಅನ್ನುತ್ತಿರಲಿಲ್ಲ. ಬೇಗ ಬೇಗ ಕೆರೆದು ಮುಗಿಸಿ ಹಣವನ್ನು ಚೀಲಕ್ಕೆ ತುಂಬಿಕೊಂಡು, ಮತ್ತೆ ಓಣಿ, ಓಣಿ ಒದರುತ್ತ ಹೋಗುತ್ತಿದ್ದ 'ಎಮ್ಮೆ, ಕರ, ಕೋಣಗಳು ಅದಾವೇನ್ರಿss ಮೈ ಬೋಳಿಸುವವು?' ಬಿಸಿಲಲ್ಲಿ ಊರೂರು, ಓಣಿ ಓಣಿ ಗಂಟಲು ಒಣಗಿಸಿಕೊಂಡು ಒದರುತ್ತ ತಿರುಗಿದರೂ ದಿನಕ್ಕೆ ರೂ. ೧॥ ಬರುತ್ತಿದ್ದಿಲ್ಲ.

ಅದರ ಬದಲು . . .

ಎಮ್ಮೆ ಕೋಣಗಳಿಗಾದರೇನಾಯಿತು? ತಾನೂ ಈ ರೀತಿಯ ಒಂದು ಸಲೂನ್ ತೆಗೆಯಬಾರದೇಕೆ? ಇದೇ ಊರಲ್ಲಿ ಬಂದು ನೆಲಸಬೇಕು. ತಾನೇ ಗಿರಾಕಿಗಳನ್ನು ಹುಡುಕಿಕೊಂಡು ಹೋಗುವ ಹಾಗಿಲ್ಲ. ತನ್ನನ್ನೇ ಹುಡುಕಿಕೊಂಡು ಬರುವಂತಾದರೆ ಯೋಗ್ಯತೆ ಬೆಳೆದು ಲಾಭವೂ ಹೆಚ್ಚಬಹುದು. ಅದರ ಹೆಸರನ್ನು ನಿಶ್ಚಯಿಸಿದ: ಎ ಕೋ ತಿ ಸಲೂನ್ (ಎಮ್ಮೆ ಕೋಣಗಳಿಗಾಗಿ ತಿಮ್ಮಯ್ಯನ ಸಲೂನ್). ಎಮ್ಮೆ ಕೋಣಗಳು ಕ್ಯೂ ಹಚ್ಚಿ ನಿಂತುಕೊಳ್ಳಲು ಸ್ಥಳ ಇದಕ್ಕೂ ಹೆಚ್ಚು ಬೇಕು. ದನಗಳಿಗಲ್ಲದಿದ್ದರೂ ಅವುಗಳನ್ನು ಕರೆತರುವ ಜನರಿಗೆ ಕುಳಿತುಕೊಳ್ಳಲು ಖುರ್ಚಿಗಳು ಬೇಕು. ಆದರೆ ಕನ್ನಡಿ, ಹಣಿಗೆ ಸ್ನೋ, ಪೌಡರು ಅವಶ್ಯವಿಲ್ಲ. ಪಕ್ಕದಲ್ಲಿಯೇ ಹುಲ್ಲಿನ ವ್ಯಾಪಾರವನ್ನೂ ಮಾಡಬಹುದು. ಸಲೂನಿನಲ್ಲಿ ಎಮ್ಮೆ, ಕೋಣಗಳು ಹಾಕುವ ಸೆಗಣಿ ತೆಗೆಯಲು ಒಂದು ಆಳನ್ನು ಇಟ್ಟುಕೊಳ್ಳಬೇಕು. ಅದನ್ನು ಮಾರಿಯೂ ಹಣ ಗಳಿಸಬಹುದು.

ತಮ್ಮಯ್ಯ ಮುದ್ದು ಮಡದಿಗಿಂತಲೂ ಹೆಚ್ಚು

ಮೋಹಕವಾಗಿ ಸರಸವಾಡುತ್ತ ತಿದ್ದಿ ತೀಡಿ ಚೆನ್ನಾಗಿ ಎಣ್ಣೆ ಹಚ್ಚಿ ತಿಕ್ಕುತ್ತಿದ್ದನೆಂದೋ ಏನೋ ತಿಮ್ಮಯ್ಯನ ತಲೆಯಲ್ಲಿ ಈ ಮುದ್ದಾದ ವಿಚಾರ ಹೊಳೆದದ್ದು.

ತಮ್ಮಯ್ಯ ಹಿಂದೆ ಕನ್ನಡಿ ಹಿಡಿದು ತಿಮ್ಮಯ್ಯನಿಗೆ ಮುಂದಿನ ದೊಡ್ಡ ಕನ್ನಡಿಯಲ್ಲಿ ಅವನ ತಲೆಯ ಸಂಪೂರ್ಣ ದರ್ಶನ ಮಾಡಿಸಿದ.

"ಎಲ್ಲವೂ ಸರಿಯಾಯಿತೇ?" ತಮ್ಮಯ್ಯನ ಮಾಮೂಲು ಪ್ರಶ್ನೆ.

ಎಮ್ಮೆ ಬೋಳಿಸುವ ತಿಮ್ಮಯ್ಯನೇನು? ಕಮಿಶನ್‌ರ ಸಾಹೇಬರೇನು? ಶ್ರೀ ವಿನೋಬಾ ಸಂತರೇನು? ಅವನ ದೃಷ್ಟಿಯಲ್ಲಿ ಎಲ್ಲರೂ ಒಂದೇ. ತಾನು ಮಾಡಿದ ಕೃತಿಗೆ ತಿಮ್ಮಯ್ಯನಿಂದಲೂ ಉತ್ತಮ ಸರ್ಟಿಫಿಕೇಟ್ ಬರಲಿ ಎಂದೇ ತಮ್ಮಯ್ಯನ ಆಶೆ. ಹಾಗೆ ಕೇಳಿದ ಪ್ರಶ್ನೆಗೆ ತಮ್ಮಯ್ಯ ಎಲ್ಲರಿಂದಲೂ ಒಂದೇ ಉತ್ತರ ದೊರಕಿಸಿದ್ದ. "ಪರವಾಯಿಲ್ಲ. ಚೆನ್ನಾಗಿ ಮಾಡಿದ್ದೀಯಾ"

"ಅಪ್ಪಾ... ತಮ್ಮಯ್ಯ. ನನ್ನದೂ ಇಂಥದೇ ದಂಧೆಯಾದರೂ ಈ ತಲೆ ಬೋಳಿಸುವ ಉದ್ಯೋಗ ಕೈಕೊಂಡವನಲ್ಲ. ನಿನಗೆ ನಾನೇನು ಹೇಳಲಿ? ಈ ವ್ಯವಹಾರ ನನಗೆ ಅಷ್ಟಕ್ಕಷ್ಟೆ."

ಇಂಥ ತಲೆಯೊಡನೆ ಇನ್ನು ಹೆಚ್ಚು ಸಹವಾಸ ಸರಿಯಲ್ಲವೆಂದು ತಮ್ಮಯ್ಯ ಮುಗಿಸಿಬಿಟ್ಟ.

ಮುಕ್ಕಾಲು ತಾಸು ತನ್ನ ತಲೆಯನ್ನು ಸೇವರಿಸಿ, ಮುಖವನ್ನು ನುಣ್ಣಗೆ ಮಾಡಿದ ಅವನಿಗೆ ಏನು ಕೊಡುವದು? ಬದಲು ಅವನದೇನಾದರೂ ಒಂದೋ ಎರಡೋ ಎಮ್ಮೆಯಿದ್ದರೆ ಬೋಳಿಸಿ ಕೊಡುವದೇ ಸರಿಯೆನಿಸಿದರೂ ವೇಳೆ ಇರಲಿಲ್ಲ. ಚಿಲ್ಲರೆ ಇದ್ದರೂ ಇಂತಿಷ್ಟೆ ಕೊಡುವದೆಂದು ತಿಳಿಯದ್ದರಿಂದ ರೂಪಾಯಿಯ ನೋಟನ್ನು ತೆಗೆದು ಕೊಟ್ಟ. ಎಷ್ಟೆಂದು ಕೇಳಿ ತನ್ನ ಅಜ್ಞಾನವನ್ನೇಕೆ ವ್ಯಕ್ತ ಪಡಿಸುವದು? ತೆಗೆದುಕೊಳ್ಳುವಷ್ಟು ತೆಗೆದುಕೊಂಡು ಉಳಿದುದನ್ನು ತಾನೇ ತಿರುಗಿ ಕೊಡುವನೆಂದು, ಪ್ರೋಕ್ತವಾಗಿ ಈ ಸೂಕ್ತ ಮಾರ್ಗ ಅನುಸರಿಸಿದ್ದ. ತಿರುಗಿ ತನಗೆ ಸಲ್ಲಬೇಕಾದ ಚಿಲ್ಲರೆಯನ್ನು ತಮ್ಮಯ್ಯ ಎಣಿಸುತ್ತಿದ್ದಂತೆ ತಾನೂ ಎಣಿಸಿಕೊಂಡ. ಎಂಟಾಣೆಯಾದ ನಂತರ ತನ್ನ ಲಕ್ಷ ಬೇರೆ ಕಡೆ ತಿರುಗಿಸಿದ. ಹೇಗೂ ಇವನ ಚಾರ್ಜು ಎಂಟಾಣೆಗಿಂತಲೂ ಹೆಚ್ಚಿಲ್ಲವೆಂದು ಖಾತ್ರಿಯಾಯಿತು. ಕೊಟ್ಟದ್ದನ್ನೆಲ್ಲ ಜೇಬಿಗೆ ಸೇರಿಸಿ ಹೊರಬಿದ್ದನಷ್ಟೇ, ತಮ್ಮಯ್ಯ ಕೂಗಿ ಕರೆದ.

"ಕಾಸು ಕೊಡುವದಿಲ್ಲವೆ?"

"ಅದೇಕೆ? ಒಂದು ರೂಪಾಯಿ ಕೊಟ್ಟಿದ್ದೆ. ನೀನೇ ಕೊಟ್ಟೆಯಲ್ಲಾ ಉಳಿದ ಚಿಲ್ಲರೆಯನ್ನು."

"ಎಣಿಸಿಕೊಳ್ಳಿರಿ. ನಿಮ್ಮ ರೂಪಾಯಿಗೆ ರೂಪಾಯಿ ಚಿಲ್ಲರೆ ಕೊಟ್ಟಿದ್ದೇನೆ."

"ಅಲ್ಲಾ, ನಾ ನಿನಗೆ ರೂಪಾಯಿ ಕೊಟ್ಟದ್ದು ಚಿಲ್ಲರೆ ಕೊಡು ಎಂದಲ್ಲ. ನಿನ್ನ ಚಾರ್ಜು ನೀನು ತೆಗೆದುಕೊಳ್ಳಬೇಕಿತ್ತು."

"ಅದೆಲ್ಲಾ ನಮ್ಮ ಸ್ಪೆಶಲ್ ಸಿಸ್ಟಮ್. ಗಿರಾಕಿಗಳು ತಮ್ಮ ಖುಶಿ ತಿಳಿದಷ್ಟು ಕೊಡಬೇಕಷ್ಟೆ. ಇಂತಿಷ್ಟೇ ಎಂದು ನಾವು ಹೇಳಿ ತೆಗೆದುಕೊಳ್ಳುವದಿಲ್ಲ."

ತನಗೆ ತಿಳಿದಂತೆ ತಿಮ್ಮಯ್ಯ ನಾಲ್ಕಾಣೆಯ ಚೂರೊಂದನ್ನು ತೆಗೆದುಕೊಟ್ಟರೂ ತಮ್ಮಯ ತನ್ನ ಸ್ಪೆಶಲ್ ಸಿಸ್ಟಮ್ ಮುರಿದು ಇನ್ನು ನಾಲ್ಕಾಣೆ ನ್ಯಾಯವಾಗಿಯೇ ತೆಗೆದುಕೊಳ್ಳಬೇಕಾಯಿತು. ಅಂತೂ ಅವನ ಮಿನಿಮಮ್ ಎಂಟಾಣೆಯನ್ನು ಮಾತ್ರ ತಿಮ್ಮಯ್ಯ ಸಲ್ಲಿಸಿದ. ಉಳಿದ ಎಲ್ಲರಂತೆ ಎಂಟಾಣೆಯ ಬದಲು ಹನ್ನೆರಡಾಣೆ ಕೊಟ್ಟುದೊಡ್ಡಸ್ತನದ ಸೋಗು ಹಾಕಲು ತಿಮ್ಮಯ್ಯನಿಗೇನು ತಲೆಯಿಲ್ಲವೇ? ತಲೆಯಿರದಿದ್ದರೆ ಹೇರ್ ಕಟಿಂಗಕ್ಕೆ ಏಕೆ ಬರುತ್ತಿದ್ದ? ✶



'ಅನಾಸಿನ್'

ನಾಲ್ಕು ಔಷಧಗಳಿಂದ ಕೂಡಿದ

ನೋವನ್ನು ಗುಣಪಡಿಸುತ್ತದೆ


ನರಗಳನ್ನು ಶಾಂತಪಡಿಸುತ್ತದೆ

ನಿರುತ್ಸಾಹವನ್ನು ಹೋಗಲಾಡಿಸುತ್ತದೆ

ಜ್ವರವನ್ನು ಕಡಿಮೆಗೊಳಿಸುತ್ತದೆ

ಡಾಕ್ಟರರ ಸುರಕ್ಷಿತ ಔಷಧದಂತೆ ಶಾಸ್ತ್ರೀಯ ರೀತಿಯಲ್ಲಿ ಸಮ್ಮಿಲನವಾದ ನಾಲ್ಕು ಔಷಧಗಳಿಂದ ಕೂಡಿದ 'ಅನಾಸಿನ್'' ನೋವನ್ನು ಸಂಪೂರ್ಣವಾಗಿ, ಅತಿ ಶೀಘ್ರವಾಗಿ ಗುಣಪಡಿಸುತ್ತದೆ. ಅನಾಸಿನ್ (1) ತಲೆ ನೋವು, ಶೀತ, ಜ್ವರ, ಹಲ್ಲು ನೋವು ಹಾಗೂ ಸ್ನಾಯುಗಳ ನೋವನ್ನು ಅಧಿಕ ಶೀಘ್ರವಾಗಿ ಉಪಶಮನಗೊಳಿಸುತ್ತದೆ; (2) ಗಾಬರಿಗೊಳಿಸುವ ನರಗಳಿಗೆ ಶಾಂತತೆಯನ್ನೀಯುತ್ತದೆ—ನೀವು ಸುಖವಾಗಿ, ಆರಾಮದಿಂದಿರುವಂತೆ ಮಾಡುತ್ತದೆ; (3) ನಿರುತ್ಸಾಹವನ್ನು ಹೋಗಲಾಡಿಸುತ್ತದೆ; (4) ಜ್ವರವನ್ನು ಕಡಿಮೆ ಮಾಡುತ್ತದೆ. ನಾಲ್ಕು ಔಷಧಗಳಿಂದ ಕೂಡಿರುವ ಅನಾಸಿನ್, ನೋವನ್ನು ಉಪಶಮನಗೊಳಿಸುವುದಕ್ಕೆ ಅಧಿಕ ಉತ್ತಮವಾಗಿದೆ. ಯಾವಾಗಲೂ ಮನೆಯಲ್ಲಿ 'ಅನಾಸಿನ್'' ಇಟ್ಟುಕೊಳ್ಳಿರಿ.


● ಆರೋಗ್ಯಕರವಾಗಿರುವ ಸೆಲೋಫೇನ್ ಪ್ಯಾಕ್‌ನಲ್ಲಿ ಸೀಲ್‌ಮಾಡಿದ ಎರಡು ಬಿಲ್ಲೆಗಳೂ, ಭದ್ರವಾಗಿ ಪಿಲ್ಫರ್-ಪ್ರೂಫ್ ಪ್ಯಾಕಿಂಗ್‌ನಲ್ಲಿ ಮುಚ್ಚಲ್ಪಟ್ಟ ಸೀಸೆಗಳಲ್ಲಿ 32 ಬಿಲ್ಲೆಗಳೂ—ಮನೆಗಳಲ್ಲಿ ಉಪಯೋಗಿಸಲು ಅನುಕೂಲವಾಗುವಂತೆ—ದೊರೆಯುತ್ತವೆ.



ಅನಾಸಿನ್ ಅಧಿಕ ಉತ್ತಮವಾಗಿದೆ

Registered User: GEOFFREY MANNERS & CO. LIMITED

KAN. Z-43



ಅವಳ ಜೀವನವೆಲ್ಲ ಗಂಡಸೆಂದು ನಟಿಸಿ ದಕ್ಕಿಸಿಕೊಂಡಳು

ಜನರಲ್ ಆಗಿದ್ದ ಹೆಂಗಸು

ಲಂಡನ್ನಿನ ಉಪನಗರವೊಂದರ ಕೆನ್ಸಲ್ ಗ್ರೀನ್ ಸಿಮೆಟ್ರಿ (ಸ್ಮಶಾನ ಭೂಮಿ)ಯಲ್ಲಿ ಒಂದು ಗೋರಿಯ ಮೇಲೆ ಚಿಕ್ಕ ಕಲ್ಲೊಂದಿದೆ. ಅದರ ಮೇಲೆ :

ಡಾ. ಜೇಮ್ಸ್ ಬ್ಯಾರಿ
ಇನ್‌ಸ್ಪೆಕ್ಟರ್ ಜನರಲ್,
ಎಚ್. ಎಂ. ಆರ್ಮಿ ಹಾಸ್ಪಿಟಲ್ಸ್.

೨೫—೭—೧೮೬೫ ರಲ್ಲಿ ೭೧ ನೇ ವಯಸ್ಸಿನಲ್ಲಿ ಸತ್ತರು ಎಂದು ಬರೆದಿದೆ.

ಈ ಡಾ. ಜೇಮ್ಸ್ ಬ್ಯಾರಿಯ ಕಥೆ ಅದ್ಭುತವಾದದ್ದೂ ಸುಲಭದಲ್ಲಿ ನಂಬಲಾಗದಂಥದೂ ಇದೆ. ಸೈನ್ಯವನ್ನು ಸೇರಿ ಜೀವಮಾನವಿಡೀ ತಾನು ಹೆಂಗಸೆಂಬುದನ್ನು ಯಾರಿಗೂ ಪತ್ತೆಹತ್ತಗೊಡದ ಒಬ್ಬ ಅಸಾಮಾನ್ಯ ಮಹಿಳೆಯೆ ಈ ಡಾ. ಜೇಮ್ಸ್ ಬ್ಯಾರಿ. ಹುಂಬನೂ ಬಿರುನುಡಿಯವನೂ ಜಗಳಗಂಟನೂ ಆದ ಈ ಡಾಕ್ಟರ್ ನಿಜದಲ್ಲಿ ಒಬ್ಬ ಹೆಂಗಸು ಎಂದು ೪೦ ವರ್ಷಗಳ ವರೆಗೆ ಅವರ ಕೈ ಆಳಾಗಿ ಕೆಲಸ ಮಾಡಿದ ಜಾನ್ ಎಂಬಾತ-

ನಿಗೂ ತಿಳಿದಿರಲಿಲ್ಲ. ತಾನು ಸತ್ತ ನಂತರ ತನ್ನ ಶವವನ್ನು ಒಂದು ಕಂಬಳಿಯಲ್ಲಿಟ್ಟು ಹೊಲಿದು ಕೂಡಲೆ ಹುಗಿಯಬೇಕು ಎಂದು ಈ ಡಾಕ್ಟರ್ ವಿಧಿಸಿದ್ದರು. ಮರಣಾನಂತರವೇ ಅವಳ ನಿಜ ರೂಪ ಗೊತ್ತಾಯಿತು. ಈ ಸತ್ಯವನ್ನು ಆಗ ಹೊರಗೆಡಹಲಿಲ್ಲವಾದರೂ ಡಾ. ಬ್ಯಾರಿಯ ವ್ಯಕ್ತಿತ್ವ ಸುಲಭದಲ್ಲಿ ಮರೆಯುವಂಥದಿರಲಿಲ್ಲ. "ಮೋರ್ ಟ್ರ್ಯಾಂಪ್ಸ್ ಎಬ್ರಾಡ್" ಎಂಬ ಪುಸ್ತಕದಲ್ಲಿ ಮಾರ್ಕ್ ಟ್ವೇನ್ ಮತ್ತು ತಮ್ಮ "ನೆನಹು"ಗಳಲ್ಲಿ ಅಲ್ಬೆಮಾರ್ಲ್‌ದ ಅರ್ಲರೂ ಇವಳ ವಿಷಯವನ್ನು ಪ್ರಸ್ತಾಪಿಸಿದ್ದಾರೆ. ಈ ಮೊಟ್ಟ ಮೊದಲನೆಯ ಮಹಿಳಾ ಡಾಕ್ಟರಳ ವಿಚಾರ ಬ್ರಿಟಿಶ್ ಮೆಡಿಕಲ್ ಪತ್ರಿಕೆ "ದಿ ಲ್ಯಾನ್ಸೆಟ್" ಎಂಬುದರಲ್ಲಿಯೂ ಬಂದಿದೆ.

ಆದರೆ ಇವರಲ್ಲಿ ಒಬ್ಬರಾದರೂ ಇವಳು ಎಲ್ಲಿಯವಳು, ಇವಳ ತಂದೆ ತಾಯಿಗಳಾರು ಎಂಬಿತ್ಯಾದಿ ವಿಷಯಗಳನ್ನು ಹೊರಗೆಡಹಿಲ್ಲ. ಇವಳು ಬುಚನ್ ಎಂಬ ಸ್ಕಾಟಿಶ್ ಬ್ಯಾರೊನೆಟ್‌ನೊಬ್ಬನ ಮಗಳು ಎಂದಿಷ್ಟೇ ಇವಳ ಬಗ್ಗೆ ಗೊತ್ತಾಗಿದೆ.

ಇವಳಿಗೆ ೧೭ ವರ್ಷಗಳಾದಾಗ ಇವಳೊಬ್ಬ ಡಾಕ್ಟರನ ಪ್ರೇಮಪಾಶದಲ್ಲಿ ಸಿಲುಕಿದಳು. ಈ ಡಾಕ್ಟರನಿಗೆ ಸ್ಪೇನಿನಲ್ಲಿದ್ದ ವೆಲಿಂಗ್ಟನ್ನನ ಸೈನ್ಯದಲ್ಲಿ ಕೆಲಸ ಮಾಡಲು ಆಜ್ಞೆಯಾಯಿತು. ಇವನೊಂದಿಗೆ ಹೋಗಲು ಮನಸ್ಸಿದ್ದರೂ ಆ ಕಾಲದಲ್ಲಿ ಹೆಂಗಸೊಬ್ಬಳು ಏಕಾಕಿಯಾಗಿ ದೂರದ ಪ್ರಯಾಣ ಕೈಕೊಳ್ಳುವಂತಿರಲಿಲ್ಲ.

ಇವಳು ಕೈಚೆಲ್ಲಲಿಲ್ಲ. ತನ್ನ ಉಂಗುರಗೂದಲನ್ನು ಕತ್ತರಿಸಿಕೊಂಡು ಗಂಡಸಿನ ವೇಷ ಧರಿಸಿ ವೈದ್ಯಕೀಯವನ್ನು ಅಭ್ಯಸಿಸಲು ಎಡಿನ್‌ಬರ್ಗ್ ವಿಶ್ವವಿದ್ಯಾಲಯವನ್ನು ಸೇರಿದಳು. ಮೂರು ವರ್ಷಗಳ ನಂತರ ಒಂದು ಪ್ರಬುದ್ಧ ಪ್ರಬಂಧವನ್ನು ಬರೆದು ೧೮೧೩ ಜುಲೈ ೫ ರಂದು ಹಾಸ್ಪಿಟಲ್ ಅಸಿಸ್ಟಂಟ್ ಎಂದು ಸೈನ್ಯವನ್ನು ಸೇರಿದಳು. ಮಾಲ್ಟಾಕ್ಕೆ ಹೋದ ನಂತರ ಅವಳಿಗೆ ತನ್ನ ಪ್ರಿಯಕರ ಯುದ್ಧದಲ್ಲಿ ಸತ್ತ ವಾರ್ತೆ ತಿಳಿಯಿತು.

ಆದರೆ ಈಗ ಅವಳು ಹಿಂದೆಗೆಯುವಂತಿರಲಿಲ್ಲ. ಅವಳು ಅಮಾನುಷ ಆಸ್ಥೆಯಿಂದ ವೈದ್ಯಕೀಯ ವೃತ್ತಿಯಲ್ಲಿ ತೊಡಗಿದಳು. ಅವಳೀಗ ಗಂಡಸಿನಂತೆ ವಿಚಾರ ಮಾಡುತ್ತ ವರ್ತಿಸಹತ್ತಿದ್ದಳು. ವಿಕ್ಟೋರಿಯನ್ ಯುಗದಲ್ಲಿ ಹೆಂಗಸು ಬರೀ ವಿಲಾಸವಸ್ತುವಾಗಿದ್ದಳು.

ಗಂಡಸಿನ ಜಬರನ್ನು ಕಾಯ್ದುಕೊಳ್ಳಲು ಈ "ಪುಟ್ಟ ಡಾಕ್ಟರ್" (ಅವಳನ್ನು ಎಲ್ಲರೂ ಹಾಗೆಂದು ಕರೆಯುತ್ತಿದ್ದರು) ಸೈನಿಕರೋಪಾದಿಯಲ್ಲಿ ಚಿಕ್ಕ ಪುಟ್ಟ ಕಾರಣಗಳಿಗಾಗಿಯೂ ಅವಾಚ್ಯ ಪದಗಳನ್ನುಚ್ಚರಿಸುತ್ತಿದ್ದಳು. ಶಿಸ್ತು-ಭಂಗಕ್ಕಾಗಿ ಇವಳ ಬಂಧನವಾಗಿ ಇವಳನ್ನು ಸೈನಿಕ ನ್ಯಾಯಾಲಯದ ವಿಚಾರಣೆಗಾಗಿ ಸ್ವದೇಶಕ್ಕೆ ಕಳಿಸಿದರು. ಖಡ್ಗಯುದ್ಧವನ್ನು, ಪಿಸ್ತೂಲು ಉಪಯೋಗಿಸುವ ರೀತಿಯನ್ನು ಇವಳು ಕಲಿತಳು.

ವೃತ್ತಿಯಲ್ಲಿ ಇವಳ ಪ್ರಗತಿ ತ್ವರಿತಗತಿಯಿಂದಾಯಿತು. ೧೮೧೫ ರಲ್ಲಿ ಇವಳು ಸೈನ್ಯಾಸ್ಪತ್ರೆಗಳ ಅಸಿಸ್ಟಂಟ್ ಸರ್ಜನ್ನಳಾದಳು. ೫೭ ನೆಯ ವಯಸ್ಸಿನಲ್ಲಿ ಅಂದರೆ ೧೮೫೧ ರಲ್ಲಿ ಡೆಪ್ಯುಟಿ ಇನ್‌ಸ್ಪೆಕ್ಟರ್ ಜನರಲ್ ಆಗಿಯೂ ೧೮೫೮ ರಲ್ಲಿ ಇನ್‌ಸ್ಪೆಕ್ಟರ್ ಜನರಲ್ ಆಗಿಯೂ ನೇಮಕ ಹೊಂದಿ ೧೮೫೯ ರಲ್ಲಿ ಅರ್ಧ ಸಂಬಳದ ಮೇಲೆ ನಿವೃತ್ತಿಹೊಂದಿದಳು. ಟ್ರಿನಿದಾಡ್ ಮತ್ತು ಕೇಪ್ ಕಾಲನಿಯಲ್ಲಿ ಪ್ರಿನ್ಸಿಪಲ್ ಮೆಡಿಕಲ್ ಆಫೀಸರ್ ಎಂದು ಕೆಲಸ ಮಾಡಿದ್ದಲ್ಲದೆ ಕಾನಡಾ ಮತ್ತು ಜೆಮಾಯಿಕಾಗಳಲ್ಲೂ ಕೆಲಸ ಮಾಡಿದ್ದಳು.

ಕೇಪ್‌ಕಾಲನಿಯಲ್ಲಿ ಅವಳು ಅಲ್ಲಿಯ ಗವರ್ನರ್ ಲಾರ್ಡ್ ಚಾರ್ಲಸ್ ಸೋಮರ್‌ಸೆಟ್‌ರ ಪ್ರೀತಿಪಾತ್ರ ವ್ಯಕ್ತಿಯಾಗಿದ್ದಳು. ಕೇಪ್‌ಗೆ ಹೋಗಿದ್ದ ಲಾರ್ಡ್ ಅಲ್ಬೆಮಾರ್ಲರು "ಈತ ಅತಿ ಚತುರ ವೈದ್ಯ. ತೀರ ವಿಕ್ಷಿಪ್ತ ಮನುಷ್ಯ. ಭಾಷೆ

ಕಟುವಾದರೂ ಸಂಭಾಷಣೆ ರಸವತ್ತಾಗಿದೆ" ಎಂದಿದ್ದರು.

ಒಬ್ಬ ಹುಡುಗಿಯ ಬಗ್ಗೆ ಅಪಶಬ್ದವನ್ನಾಡಿದ ಒಬ್ಬನನ್ನು ಈಕೆ ಒಮ್ಮೆ ದ್ವಂದ್ವಯುದ್ಧಕ್ಕೆ ಆಹ್ವಾನಿಸಿದಳು. ಆಗ ಆ ಮನುಷ್ಯ "ಡಾಕ್ಟರರಿಗಾಗಿ ನೀರು ತನ್ನಿ. ಮದ್ಯ ಅವರಿಗೆ ದಕ್ಕುವುದಿಲ್ಲ" ಎಂದು ನಗೆಯಾಡಿದ. ಡಾ. ಜೇಮ್ಸ್ ಬ್ಯಾರಿ ಮದ್ಯವನ್ನು ಮುಟ್ಟುತ್ತಿರಲಿಲ್ಲ. ಡಾ. ಬ್ಯಾರಿ ತನ್ನ ಕೈಲಿದ್ದ ಗ್ಲಾಸಿನಲ್ಲಿದ್ದ ನೀರನ್ನು ಆತನ ಮುಖಕ್ಕೆ ಉಗ್ಗಿ ಅವನ ಮೈಮೇಲಿನ ಕೋಟನ್ನು ಜಗ್ಗಿ ಹರಿದಳು. ಅವಳನ್ನು ತಡೆಯಲು ಇತರರು ಯತ್ನಿಸಿದಾಗ "ಛೆ! ಕೈಮೀರಿದೆ ಮಾತು. ನಾನು ದ್ವಂದ್ವಯುದ್ಧ ಮಾಡಲೇಬೇಕು" ಎಂದಳು.

ಆ ಮನುಷ್ಯ ಅವಳ ಕಪಾಳಕ್ಕೆ ಹೊಡೆದ.

"ನಾನು ಈ ಸೊಕ್ಕಿನ ನಾಯಿಯೊಂದಿಗೆ ಕಾದಾಡುವೆ. ನಾನು ಸತ್ತರೆ ನನ್ನ ಹೆಣವನ್ನು ಕೆನವಾಸಿನಲ್ಲಿ ಹೊಲಿಯಿರಿ. ಬಾರೊ, ನಾಯಿ" ಎಂದವಳು ಅಹ್ವಾನಿಸಿದಳು. ಆ ದ್ವಂದ್ವದಲ್ಲಿ ಲಾರ್ಡ ಚಾರ್ಲಸ್ ,ಅವಳ ಅನುಮೋದಕನಾಗಿದ್ದರು. ಡಾ. ಬ್ಯಾರಿ ಎದುರಾಳಿಗೆ ಚಿಕ್ಕ ಗಾಯವನ್ನು ಮಾಡಿ ಸಮಾಧಾನ ಪಟ್ಟುಕೊಂಡಳು.

ಸ್ತ್ರೀಸಹಜ ಸ್ವಭಾವದಂತೆ ಇವಳಿಗೆ ಬಟ್ಟೆಬರೆ ತೊಡುವುದರಲ್ಲಿ ಹೆಚ್ಚಿನ ಆಸಕ್ತಿ ಇತ್ತು. ಬೂಟುಗಳಿಗೆ ಎತ್ತರದ ಹಿಮ್ಮಡಗಳನ್ನಿಡಿಸಿಕೊಳ್ಳುತ್ತಿದ್ದಳು.

ಗವರ್ನರರ ಏಡ್-ಡಿ-ಕ್ಯಾಂಪ್ ಸರ್ ಜೋಸಿಯಾ ಕೊವೆಟ್‌ರೊಂದಿಗೆ ಇವಳು ಸದಾ ಜಗಳಾಡುತ್ತಿದ್ದಳು. ಒಮ್ಮೆ ಆತ ಇವಳನ್ನು "ನಾಯಿಮರಿ" ಎಂದು ಕರೆಯಲು ಇವಳು "ಇನ್ನೊಮ್ಮೆ ಅನ್ನಿ, ನಿಮ್ಮ ಮೈಗೆ ಬಚ್ಚಲು ಮನೆಯ ವಾಸನೆ ಬರುವುದಾದರೂ ನಿಮ್ಮ ಎಲುವು ಮುರಿಯುತ್ತೇನೆ" ಎಂದಳು. ಸರ್ ಜೋಸಿಯಾ ಕೊವೆಟ್ ಆಗ "ನನ್ನನ್ನು ಅವಮಾನ ಮಾಡಲೆಳಸುವಿರೇನು?" ಎಂದು ಕೇಳಲು "ಛೆ! ಛೆ! ಎಳಸುತ್ತಿಲ್ಲ, ಅವಮಾನ ಮಾಡಿದ್ದೇನೆ" ಎಂದುತ್ತರವಿತ್ತಳು.

"ನೀವು ಹೆಂಗಸರಂತೆ ಕಾಣುತ್ತೀರಿ" ಎಂದುಬಿಟ್ಟರೆ ಅವಳಿಗೆ ಬ್ರಹ್ಮಾಂಡ ಕೋಪಬರುತ್ತಿತ್ತು. ರಿಚಾರ್ಡ್ ಬ್ಯಾಕ್ಸಂಡೇಲ ಎಂಬಾತ ಅವಳ ಸ್ವರ ಚೀರಾಗಿದೆ ಎಂದಾಗ ಅವನನ್ನು ಗುದ್ದಿ ಎಚ್ಚರತಪ್ಪುವಂತೆ ಮಾಡಿದಳು.

ಕ್ಷುಲ್ಲಕ ಜಗಳವೆಬ್ಬಿಸಿದ್ದಕ್ಕಾಗಿ ಲಾರ್ಡ್ ಚಾರ್ಲಸ್ ಅವಳನ್ನು ಗದರಿಸಿದಾಗ ಅವರನ್ನೆ ತನ್ನ ಬೂಟಿನ ಹಿಮ್ಮಡದಿಂದ ಒದ್ದಳು.

"ಹಾ! ಹೆಂಗಸಿನಂತೆ ಒದ್ದಿರಿ ಅಲ್ಲವೆ?" ಲಾರ್ಡ್ ಚಾರ್ಲಸ್ ನಕ್ಕರು.

"ಇಂಥ ಮಾತುಗಳನ್ನು ನಿಲ್ಲಿಸದಿದ್ದರೆ ನಿಮ್ಮನ್ನು ದ್ವಂದ್ವ ಯುದ್ಧಕ್ಕಾಹ್ವಾನಿಸುತ್ತೇನೆ. ಆಗ ನಿಮ್ಮ ಮರಣದ ಪಾಪ ನಿಮ್ಮ ತಲೆಯ ಮೇಲೆಯೆ."

"ನೀವು ಸರಿಯಾಗಿ ವರ್ತಿಸದಿದ್ದರೆ ನಿಮ್ಮನ್ನು ಇಂಗ್ಲಂಡಿಗೆ ಮರಳಿ ಕಳಿಸಬೇಕಾದೀತು." ಅವಳನ್ನು ನಿಯಂತ್ರಿಸುವ ಸಾಮರ್ಥ್ಯ ಲಾರ್ಡ್ ಚಾರ್ಲಸ್ ಒಬ್ಬರಿಗೇ ಇತ್ತು.

ತನ್ನ ಪುರುಷತ್ವದ ಜಂಭವನ್ನು ಕಾಯ್ದುಕೊಳ್ಳುವುದಕ್ಕಾಗಿ ತಾನು ಅವಳನ್ನು ಕೆಡಿಸಿದೆ, ಇವಳನ್ನು ಮೋಹದಲ್ಲಿ ಕೆಡವಿದೆ ಎಂದಿತ್ಯಾದಿಯಾಗಿ ಇವಳು ಹೇಳುತ್ತಿದ್ದಳು. ಜನ ಈ ಮಾತುಗಳನ್ನು ಎಷ್ಟರ ಮಟ್ಟಿಗೆ ನಂಬುವಂತಾಗಿತ್ತೆಂದರೆ ಜಮಾಯಿಕಾದಲ್ಲಿ ಡಾ. ಬ್ಯಾರಿ ಮೆಡಿಕಲ್ ಆಫೀಸರ್ ಆಗಿದ್ದಾಗ ಅಲ್ಲಿಯ ರೆಜಿಮೆಂಟಿನ ಎಜಂಟನು ತಾನಿಲ್ಲದಾಗ ತನ್ನ ಮನೆಗೆ ಬಂದು ತನ್ನ ಹೆಂಡತಿಯನ್ನು ಕಾಣಬೇಡಿ ಎಂದು ಎಚ್ಚರಿಕೆಯಿತ್ತಿದ್ದ.

ಕೇಪ್ ಕಾಲನಿಯಲ್ಲಿ ಇವಳ ವರ್ಚಸ್ಸು ತುಂಬ ಇತ್ತು. ತನ್ನೊಂದಿಗೆ ವಿಶೇಷ ಸಲಿಗೆ

ಬೆಳೆಸದ, ತನಗೆ ತೊಂದರೆದಾಯಕರಾಗದವರಿಗೆ ಒಳ್ಳೆಯದನ್ನು ಮಾಡುತ್ತಿದ್ದಳು. ಸರ್ವಾಧಿಕಾರಿಯೆಂಬಂತೆ ನಡೆದುಕೊಳ್ಳುತ್ತಿದ್ದರೂ ಇವಳು ಜೇಲಿನಲ್ಲಿ ಸುಧಾರಣೆ ಮಾಡಲು ಯತ್ನಿಸಿದಳು. ಅಧಿಕಾರಿಗಳು ಸೊಪ್ಪು ಹಾಕದಿರಲು ಸಾರ್ವಜನಿಕವಾಗಿ ಅವರನ್ನು ಖಂಡಿಸಿದಳು.

ಇವಳು ಅಜ್ಞಾನ, ಅಲಕ್ಷ್ಯಗಳೊಂದಿಗೆ ಸದಾ ಹೋರಾಡುತ್ತಿದ್ದಳು. ಕೊಲೊನಿಯಲ್ ಮೆಡಿಕಲ್ ಬೋರ್ಡಿನ ಇನ್ಸ್‌ಪೆಕ್ಟರ್ ಜನರಲ್ ಆಗಿದ್ದಾಗ ಪದವೀಧರರಲ್ಲದ ವೈದ್ಯರು ವೈದ್ಯವೃತ್ತಿ ನಡೆಸುವುದನ್ನು ವಿರೋಧಿಸಿದಳು. ತಾನು ರಾಜೀನಾಮೆ ಕೊಡುವ ಬೆದರಿಕೆ ಹಾಕಿ ತನ್ನ ಉದ್ದೇಶವನ್ನು ಅವಳು ಸಾಧಿಸಿದಳು. ತನ್ನ ಬಯಕೆಯಂತೆ ಸೆರೆಮನೆಗಳ ಇನ್‌ಸ್ಪೆಕ್ಟರ್, ಬಂದರದ ವ್ಯಾಕ್ಸಿನೇಶನ್ ಆಫೀಸರ್, ಗವರ್ನರರ ಕುಟುಂಬದ ಡಾಕ್ಟರ್ ಆಗಿ ಎಷ್ಟೋ ಸುಧಾರಣೆಗಳನ್ನು ಮಾಡಿದಳು.

ವಿಕ್ಟೋರಿಯನ್ ಯುಗದಲ್ಲಿ ಸಿಸೇರಿಯನ್ ಆಪರೇಶನನ್ನು ಸಹಸಾ ಮಾಡುತ್ತಿರಲಿಲ್ಲ. ಡಾ. ಬ್ಯಾರಿ ತಾನು ಸ್ವತಃ ಆ ಶಸ್ತ್ರಚಿಕಿತ್ಸೆಯನ್ನು ಎಂದೂ ಮಾಡಿರದಿದ್ದರೂ ಮಿನಿಕ್ ಎಂಬ ರಾಜಕಾರಣಿಯ ಹೆಂಡತಿಯ ಮೇಲೆ ಅಸಾಧ್ಯ ಪರಿಸ್ಥಿತಿಯಲ್ಲಿ ಎರಡು ಮೇಣಬತ್ತಿಗಳ ಪ್ರಕಾಶದಲ್ಲಿ ಮತ್ತು ತೀರ ಸಾಮಾನ್ಯ ಉಪಕರಣಗಳಿಂದ ಶಸ್ತ್ರಚಿಕಿತ್ಸೆ ಮಾಡಿ ಯಶಸ್ವಿಯಾದಳು. ಮಿನಿಕ್ ಅವಳಿಗೆ ಹಣ ಕೊಡಬಂದಾಗ ಸ್ವೀಕರಿಸದೆ ಹುಟ್ಟಿದ್ದ ಗಂಡು ಮಗುವಿಗೆ ತನ್ನ ಹೆಸರನ್ನಿಡಲು ಕೇಳಿಕೊಂಡಳು. ಡಾ. ಬ್ಯಾರಿಯ ಇಂಥ ಕೃತಿಗಳೇ ಅವಳೆಷ್ಟು ಒರಟಾಗಿ ನಡೆದುಕೊಳ್ಳುತ್ತಿದ್ದರೂ ಜನರಿಗೆ ಅವಳನ್ನು ಸಹ್ಯಳನ್ನಾಗಿ ಮಾಡಿದ್ದವು.

ಮುಂದೆ ಸರ್ ಜೋಸಿಯಾ ಕೊವೆಟ್ ವೆಸ್ಟ್ ಇಂಡೀಸಿನ ಗವರ್ನರರಾದಾಗ ಒಮ್ಮೆ "ನಾನು ಬಂದಿಷ್ಟಾದರೂ ಡಾ. ಬ್ಯಾರಿಯಂತೆ ಅಸಭ್ಯನೂ ತುಂಟನೂ ಆಗಿದ್ದಲ್ಲಿ ಎಂದಿಗೂ ಗವರ್ನರನಾಗುತ್ತಿರಲಿಲ್ಲ" ಎಂದರು. ಡಾ. ಬ್ಯಾರಿ ಸಾಯುವ ಮುನ್ನಾದಿನ ಅವರು ಡಾ. ಬ್ಯಾರಿಯೊಂದಿಗೆ ಇದ್ದರು.

"ನನಗೆ ಯಾರೂ ಇಲ್ಲ." ಎಂದಾಗ ಡಾ. ಬ್ಯಾರಿ ಹೇಳಿದಳು. ಆದರೂ ತನ್ನ ಗುಟ್ಟನ್ನೇನೂ ಅವಳು ಹೇಳಲಿಲ್ಲ ಅವಳ ನಿಷ್ಠಾವಂತ ಆಳು ಜಾನ್ ಅವಳು ಸಾಯುವ ವರೆಗೂ ಅವಳ ಜೊತೆ ಇದ್ದ.

ಹೆಣ್ಣಾಗಿ ಹುಟ್ಟಿ ಗಂಡಸಿನ ಸೋಗು ಹಾಕಿ ಆ ಸೋಗನ್ನು ದೀರ್ಘ ಕಾಲದ ವರೆಗೆ ನಟಿಸಿ ಮರಣ ಪರ್ಯಂತರವೂ ಯಾರಿಗೂ ಗುಟ್ಟು ತಿಳಿಯದಂತೆ ಸಾಧಿಸಿದ ಈ ಹೆಂಗಸು— ಡಾ. ಬ್ಯಾರಿ ಅದ್ಭುತ ವ್ಯಕ್ತಿಯಲ್ಲದೆ ಇನ್ನೇನು? ★

ಬಾಲಕವಿ

ತಾಯಿ ಮತ್ತು ಒಬ್ಬ ಸಣ್ಣ ಹುಡುಗ ಮೋಟಾರಿಗಾಗಿ ಕಾಯುತ್ತಿದ್ದಾಗ ರಸ್ತೆಯ ಮೇಲಿದ್ದ ನೀರ ಮೇಲೆ ಬಿದ್ದ ಪೆಟ್ರೋಲು ಬಣ್ಣ-ಬಣ್ಣವಾಗಿ ಮಿರುಗುತ್ತಿದ್ದುದನ್ನು ಹುಡುಗ ಕಂಡು ಹೇಳಿದ: "ನೋಡಮ್ಮಾ ಅಲ್ಲಿ, ಕಾಮನಬಿಲ್ಲಿನ ಹೆಣ!"

* *

ತನ್ನ ಹೆಂಡತಿ ತಾನು ಹೇಳಿದಂತೆ ಕೇಳುತ್ತಾಳೆಂದು ಹೇಳುವ ಮನುಷ್ಯ ಇತರ ಸಂಗತಿಗಳ ಬಗ್ಗೆಯೂ ಸುಳ್ಳು ಹೇಳದೆ ಬಿಡ.

—ಮೊನ್ಯಾಟೋ ಮೆಗಜೀನ್



ಕ್ರಾಯ್ಟ್ಸರ್ ಸೊನಾಟಾ

ಲಿಯೋ ಟಾಲ್‌ಸ್ಟಾಯಿಯ ಪ್ರಸಿದ್ಧ ಕಾದಂಬರಿ

ಕ್ರ್ಯುಯ್‌ತ್ಸರ್ ಸೊನಾಟಾ

ವಸಂತ ಋತು ಪ್ರಾರಂಭವಾಗಿತ್ತು ಅಂದು ನಮ್ಮ ಪ್ರವಾಸದ ಎರಡನೇ ದಿನ. ರೈಲು ಸಾಗಿತ್ತು. ಪ್ರವಾಸಿಕರು ಹತ್ತುತ್ತಿದ್ದರು, ಇಳಿಯುತ್ತಿದ್ದರು. ಆದರೆ ರೈಲು ಬಿಟ್ಟಾಗಿನಿಂದಲೂ ಯಾವ ನಡುವಿನ ಸ್ಟೇಶನ್ನಿಗೂ ಇಳಿಯದೆ ಇದ್ದವರೆಂದರೆ ನಮ್ಮ ಡಬ್ಬಿಯಲ್ಲಿ ನನ್ನನ್ನು ಬಿಟ್ಟು ಮೂರು ಜನರು ಮಾತ್ರ. ಅವರಲ್ಲಿ ಒಬ್ಬಳು ಪ್ರೌಢೆ. ಗಂಡಸರ ಕೋಟು ತೊಟ್ಟಿದ್ದಳು. ಸಿಗರೇಟು ಸೇದುತ್ತಿದ್ದಳು. ಇನ್ನೊಬ್ಬ ನಲುವತ್ತು ವರ್ಷ ಪ್ರಾಯದ ಮಾತುಗುಳಿ ವಕೀಲ. ಅಚ್ಚುಕಟ್ಟಾದ ಉಡುಪು. ಆ ಮಹಿಳೆಯ ಪರಿಚಯ ಮೊದಲಿನಿಂದಲೇ ಅವನಿಗಿತ್ತು. ಮೂರನೆಯವನೊಬ್ಬ ಕುಳ್ಳ. ವಯಸ್ಸಾಗಿದ್ದಿಲ್ಲವಾದರೂ ಕೂದಲು ಬೆಳ್ಳಗಾಗಿದ್ದವು. ಗಾಡಿ ಹತ್ತಿದಾಗಿನಿಂದಲೂ ಆತ ಮೂಕನಂತೆ ಕೂತಿದ್ದ. ಮುಖ ಉದ್ವಿಗ್ನವಾಗಿತ್ತು. ಆಗಾಗ ಅತ್ತಿತ್ತ ಕಣ್ಣು ಹೊರಳಿಸಿ ನೋಡುತ್ತಿದ್ದ. ಕಣ್ಣಲ್ಲಿ ಒಂದು ಬಗೆಯ ಮಿಂಚು ಇತ್ತು. 'ಅಸ್ತ್ರಾಖಾನ' ಮಾದರಿಯ ಟೊಪ್ಪಿಗೆ, ಅಂಥದೆ ಕಾಲರ್, ರಶಿಯನ್ ಶರ್ಟು – ಇದು ಅವನ ವೇಷ. ಅವನಲ್ಲಿದ್ದ ವೈಶಿಷ್ಟ್ಯವೆಂದರೆ ಆಗಾಗ ಆತನ ಬಾಯಿಂದ ಎಂಥದೊ ಒಂದು ವಿಚಿತ್ರ ಧ್ವನಿ ಬರುತ್ತಿತ್ತು— ಕಂಠ ಸರಿಪಡಿಸಲು ಖೇಕರಿಸುವಂತೆ ಅಥವಾ ನಗೆ ಪ್ರಾರಂಭವಾಗುತ್ತಲೆ ಅದನ್ನು ನಿಲ್ಲಿಸಿದರೆ ಆಗುವಂತೆ!

ಅವನಿಗೆ ಇನ್ನೊಬ್ಬರೊಂದಿಗೆ ಮಾತಾಡುವುದೇ ಬೇಡವಾಗಿತ್ತೇನೊ! ಏನಾದರೂ ಕೇಳಿದ್ದಕ್ಕೆ ಅಷ್ಟಕ್ಕಷ್ಟೇ ಉತ್ತರ ಕೊಟ್ಟು ಸುಮ್ಮನಿರುತ್ತಿದ್ದ. ಒಬ್ಬನೇ ಇದ್ದಾನೆ, ಬೇಸತ್ತಿರಬೇಕು, ಎಂದು ನಾನು ಮಾತಾಡಹೋದರೆ ನನ್ನ ದೃಷ್ಟಿಗೆ ದೃಷ್ಟಿ ತಾಕುತ್ತಲೆ ಆತ ಮುಖ ಹೊರಳಿಸಿ ಸಿಗರೇಟನ್ನಾದರೂ ಸೇದುತ್ತಿದ್ದ; ಇಲ್ಲವೆ ಪುಸ್ತಕವನ್ನಾದರೂ ಬಿಚ್ಚುತ್ತಿದ್ದ.

ಸಂಜೆ ದೊಡ್ಡ ಸ್ಟೇಶನ್ ಒಂದರಲ್ಲಿ ಗಾಡಿ ನಿಂತಿತು. ಆತ ಚಹಾ ಮಾಡಲೆಂದು ಎಸರು ಬಂದ ನೀರು ತಂದ. ವಕೀಲ ಮತ್ತು ಪ್ರೌಢೆ ಚ ಹಾ ಪಾ ನ ಕ್ಕೆಂ ದು ಎದ್ದು ಹೋಟೆಲ್ಲಿಗೆ ಹೋದರು.

ಅವರು ಹೋದ ಮೇಲೆ ಬೇರೆ ಎಷ್ಟೊ ಪ್ರವಾಸಿಕರು ಬಂದರು. ಅವರಲ್ಲೊಬ್ಬ ವೃದ್ಧ ವ್ಯಾಪಾರಿ ಗಡ್ಡಮೀಸೆ ತೆಗೆದಿದ್ದ. ಬೆಲೆ ಬಾಳುವ ಬಟ್ಟೆಗಳನ್ನು ಧರಿಸಿದ್ದ. ವಕೀಲ ಮತ್ತು ಪ್ರೌಢೆ ಕೂತಿದ್ದ ಬೆಂಚಿನ ಎದುರುಗಡೆ ಕೂತು ಒಬ್ಬ ಯುವಕನೊಂದಿಗೆ ಮಾತಾಡತೊಡಗಿದ. ಆ ಯುವಕ ಯಾವನೋ ವ್ಯಾಪಾರಿಯ ಕಾರಕೂನನಿದ್ದಿರಬೇಕು. ವ್ಯಾಪಾರಿ ಕಾರಕೂನನಿಗೆ, ತಾನು ಮುಂದಿನ ಸ್ಟೇಶನ್ನಿನಲ್ಲಿ ಇಳಿಯುವುದಾಗಿ ಹೇಳಿದ. ವ್ಯಾಪಾರ ಸಂಬಂಧದ ಮಾತುಕತೆ ಮುಗಿದ ಮೇಲೆ ಕಾರಕೂನ 'ನೊವಾಗರೋಡ್' ಜಾತ್ರೆಯ ವರ್ಣನೆ ಆರಂಭಿಸಿದ. ಯಾವನೊ ಒಬ್ಬ ಧನಾಢ್ಯ ವ್ಯಾಪಾರಿ ಮದ್ಯಪಾನ ಮಾಡಿ ಜಾತ್ರೆಯಲ್ಲಿ ಅರಿವುಗೆಟ್ಟು ಕುಣಿದಾಡುತ್ತಿದ್ದನಂತೆ. ಅದನ್ನು ಕೇಳಿ ವೃದ್ಧ ವ್ಯಾಪಾರಿ ತಾನೂ ಹೀಗೆ ಕುನಾಬಿನ್ ಜಾತ್ರೆಯಲ್ಲಿ ಕುಣಿದಾಡಿದ್ದೆನೆಂದು ಕಾರಕೂನನ ಕಿವಿಯಲ್ಲಿ ಹೇಳಿದ. ಗಟ್ಟಿಯಾಗಿ ಹೇಳಲು ಬಾರದಷ್ಟು ಅಶ್ಲೀಲವಾಗಿತ್ತು ಅವನ ಕಥೆ. ಮುದುಕನ ಮಾತು ಕೇಳಿ ಕಾರಕೂನ ಗಹಗಹಿಸಿ ನಕ್ಕ.

ಅಂಥ ಮಾತುಗಳಲ್ಲಿ ನನಗೆ ರುಚಿಯಿರಲಿಲ್ಲವಾದ್ದರಿಂದ ನಾನು ಕೆಳಗೆ ಇಳಿದೆ. ಡಬ್ಬಿಯ ಬಾಗಿಲಲ್ಲೇ ವಕೀಲ ಮತ್ತು ಪ್ರೌಢೆ ಭೆಟ್ಟಿಯಾದರು. ನಾನು ಇಳಿಯುವುದನ್ನು ಕಂಡು ಗಾಡಿ

ಹೊರಡಲಿದೆ ಎಂದು ವಕೀಲ ಹೇಳಿದ್ದರಿಂದ ಮರಳಿ ಬಂದು ಸೀಟಿನ ಮೇಲೆ ಕೂತೆ.

ವಕೀಲ ಗಟ್ಟಿಯಾಗಿ ಹೇಳತೊಡಗಿದ. "ಆಕೆ ತನ್ನ ಗಂಡನೊಂದಿಗೆ ಸಂಸಾರ ಮಾಡುವುದಿಲ್ಲ ವೆಂದು ಸ್ಪಷ್ಟವಾಗಿ ಹೇಳಿದಳು. ಅವಳ ಮಾತು ಸರಿಯಾಗಿತ್ತು. ಯಾಕೆಂದರೆ—"

ಗಾಡಿ ಹೊರಟಿತು. ಪ್ರವಾಸಿಕರು ತಮ್ಮ ತಮ್ಮ ಸ್ಥಳಗಳಿಗೆ ನುಗ್ಗುತ್ತಿದ್ದ ಗದ್ದಲದಲ್ಲಿ ನನಗೆ ವಕೀಲನ ಮುಂದಿನ ಮಾತು ಕೇಳಿಸಲಿಲ್ಲ. ಸ್ವಲ್ಪ ಹೊತ್ತಿನಲ್ಲಿ ಗದ್ದಲ ಶಾಂತವಾದ ಮೇಲೆ ವಕೀಲ ಮುಂದುವರಿಸಿದ. "ಯುರೋಪಿನ ಪ್ರಭಾವವೇ ನಮ್ಮ ಮೇಲೂ ಆಗುತ್ತಿದೆಯೇನೊ. ರಶಿಯ ದಲ್ಲೂ ವಿವಾಹ-ವಿಚ್ಛೇದಗಳ ಸಂಖ್ಯೆ ಹೆಚ್ಚು ತ್ತಿದೆ" ಇಷ್ಟೆಂದು ವಕೀಲ ಮುಂದೆ ಕೂತಿದ್ದ ವ್ಯಾಪಾರಿಯತ್ತ ತಿರುಗಿ "ಈ ಬಗ್ಗೆ ನಿಮ್ಮ ಅಭಿಪ್ರಾ ಯವೇನು? ನಿಮ್ಮ ಕಾಲಕ್ಕೆ ಪತಿಪತ್ನಿಯರಲ್ಲಿ ಘರ್ಷಣೆ ಉಂಟಾಗುವ ಸಂಭವ ಈಗಿನಂತಿತ್ತೆ?" ಎಂದ.

"ಬಹಳ ಕಡಿಮೆ."

"ಆದರೆ ಇಂದು ಘರ್ಷಣೆಯಾಗುವುದು ಸ್ವಾಭಾವಿಕವೇ ಆಗಿದೆ. ಯಾಕೆಂದರೆ ಅವಶ್ಯ ವಿರುವುದಕ್ಕಿಂತ ಹೆಚ್ಚು ಶಿಕ್ಷಣ ಈಗ ದೊರೆಯು ತ್ತಿದೆ."

ರೈಲಿನ ಗಾಲಿಗಳ ಸಪ್ಪಳದಲ್ಲಿ ಸ್ಪಷ್ಟವಾಗಿ ಕೇಳಿಸುತ್ತಿರಲಿಲ್ಲ. ಆದರೂ ಚರ್ಚೆ ಆಕರ್ಷಕ ವಾಗಿತ್ತು. ನಾನು ಮುಂದೆ ಸರಿದೆ. ತನ್ನ ಸ್ಥಳ ದಲ್ಲಿ ಕೂತ ಆ ಹೊಳಪುಳ್ಳ ಕಣ್ಣಿನ ಮುದುಕ ಈ ಮಾತನ್ನು ಕಿವಿಗೊಟ್ಟು ಕೇಳುತ್ತಿದ್ದಾನೆಂದು ತೋರಿತು.

"ಶಿಕ್ಷಣದ್ದೇನು ತಪ್ಪು?" ಮಹಿಳೆ ಪ್ರಾರಂಭಿಸಿ ದಳು. "ಹಿಂದಿನ ಕಾಲದ ವಿವಾಹ ಪದ್ಧತಿ ಸದೋಷವಾಗಿತ್ತೆಂಬುದರ ಬಗ್ಗೆ ಭಿನ್ನಾಭಿ ಪ್ರಾಯವಿರಲು ಸಾಧ್ಯವೇ ಇಲ್ಲ. ಯಾರೋ ಇಬ್ಬರನ್ನು ಹಿಡಿತಂದು ಲಗ್ನಮಾಡಿ ಒತ್ತಟ್ಟಿಗೆ ಸಂಸಾರ ನಡೆಸಬೇಕೆಂದು ಹೇಳುತ್ತಿದ್ದ ಆ ರೀತಿ ತಪ್ಪಲ್ಲದೆ ಇನ್ನೇನು? ದೈವದ ಮೇಲೆ ಭಾರ ಹಾಕಿ ಬಂದದ್ದೆಲ್ಲ ಬರಲೆಂದು ಸುಮ್ಮನಿರಲು ಮಾನವರೇನು ಬುದ್ಧಿ ಇಲ್ಲದ ಪಶುಗಳೇ?"

"ಸಮಾಜವನ್ನು ಕಟ್ಟುವ ಮಾನವನನ್ನು ಪಶು ವಿಗೆ ಹೋಲಿಸಬಹುದೆ?"

"ಪ್ರೇಮವೇ ಇಲ್ಲದಿದ್ದರೆ ಸಂಸಾರ ಸಾಗ ಬೇಕು ಹೇಗೆ?"

"ಇಂಥಾ ಸಣ್ಣ ವಿಚಾರಗಳಿಗೆ ಆಗ ಮಹ ತ್ವವೇ ಇರಲಿಲ್ಲ. ಈಗಿನ ಸಮಾಜ ರಚನೆಯೆ ಹೀಗಾಗಿದೆ. ಸಣ್ಣ ಪುಟ್ಟ ಮಾತಿಗಾಗಿ ವಿಚ್ಛೇದ ಮಾಡಿಕೊಳ್ಳುವ ಪದ್ಧತಿ ಈಗ ಬಂದಿದೆ. ಈ ರೋಗ ಶಹರದಿಂದ ಹಳ್ಳಿಗಳಿಗೂ ಹೋಗಿದೆ. ಈಗಿನ ಹೆಂಗಸರಿಗೆ ಗಂಡಸರ ಹೆದ ರಿಕೆಯೆ ಇಲ್ಲದಂತಾಗಿದೆ."

"ಆ ಕಾಲ ಹೋಯಿತು, ಸ್ವಾಮಿ," ಮಹಿಳೆ ಜಬರಿನಿಂದ ಹೇಳಿದಳು.

"ಪುರುಷನಿಂದಲೇ ಸ್ತ್ರೀಯ ಉತ್ಪತ್ತಿಯಾಗಿದೆ. ಆದ್ದರಿಂದ ಪುರುಷನ ಯೋಗ್ಯತೆ ಸ್ತ್ರೀಗೆ ಎಂದಿಗೂ ಬರಲಾರದು."

"ಇದು ದಬ್ಬಾಳಿಕೆ. ಹೀಗೆ ಮಾಡಿಯೆ ನೀವು ಪುರುಷರು ಸ್ತ್ರೀಯರನ್ನು ಮರೆಯಲ್ಲಿಟ್ಟು ಮನ ಬಂದಂತೆ ವರ್ತಿಸುತ್ತೀರಿ."

"ಬೇಕಾದ ಹಾಗೆ ವರ್ತಿಸಿ ದಕ್ಕಿಸಿಕೊಳ್ಳುವ ಸ್ವಾತಂತ್ರ್ಯ ಸೌಲಭ್ಯ ಪುರುಷರಂತೆ ಸ್ತ್ರೀಯರಿಗ ಇಲ್ಲದ್ದು ಪ್ರಕೃತಿ ರಚನೆ. ಅದಕ್ಕಾಗಿ ಶಪಿಸುವು ದಾದರೆ ದೇವರನ್ನು ಶಪಿಸಬೇಕು. ಪುರುಷರ ನ್ನಲ್ಲ!"

ಈ ಮಾತಿನಿಂದ ಮಹಿಳೆ ಪರಾಜಿತಳಾದಳು. ಅವಳ ದನಿ ಒಮ್ಮೆಲೆ ಕುಗ್ಗಿತು. "ಸ್ತ್ರೀಯೂ ಮಾನವಳು. ಅವಳಿಗೂ ಹೃದಯವಿದೆ. ಇಷ್ಟ ನ್ನಾದರೂ ಒಪ್ಪುವಿರಲ್ಲವೆ? ಪತಿಯ ಬಗ್ಗ ಪ್ರೇಮವೇ ಇಲ್ಲದಿದ್ದರೆ ಪತ್ನಿ ಏನು ಮಾಡ ಬೇಕು?"

"ಇಲ್ಲದಿದ್ದರೆ ಅಂದರೆ ಏನು? ಇರಲಿಕ್ಕೇ ಬೇಕು. ಇದ್ದೇ ಇರುತ್ತದೆ."

"ಪತ್ನಿ ಪತಿವ್ರತೆಯಾಗಿರದಿದ್ದರೆ?" ವಕೀಲರ ಪೃಚ್ಛೆ.

"ಅದು ಗಂಡನಾದವನ ತಪ್ಪು. ಮೊದಲಿನಿಂದಲೇ ಸರಿಯಾಗಿ ನಡೆಸಿಕೊಂಡರೆ ಹೆಂಡತಿ ಎಂದೂ ತಲೆಗೇರಳು. ಹೊರಗೆ ಕುದುರೆ, ಒಳಗೆ ಹೆಂಡತಿ ಇವರ ಮೇಲಿನ ಹಿಡಿತ ಎಂದೂ ತಪ್ಪಬಾರದು."

"ಆದರೆ ಸ್ವಾಮಿ, ಇದೀಗ ನೀವು 'ಕುನಾಬಿನ್' ಜಾತ್ರೆಯ ನಿಮ್ಮ ಸಮಾಚಾರ ಹೇಳಿದಿರಲ್ಲ ಅದೇನು ?" ನಾನು ವ್ಯಂಗ್ಯವಾಗಿ ಕೇಳಿದೆ.

"ಅದು ಬೇರೆ" ಮುದುಕ ಮಾತು ಹಾರಿಸಿದ. ಮುಂದಿನ ಸ್ಟೇಶನ್ನಿಗೆ ಮುದುಕ ಇಳಿದ. ಮಹಿಳೆ ಮುಂದುವರಿಸಿದಳು. "ಪಾಣಿಗ್ರಹಣದ ಬುನಾದಿ ಪ್ರೇಮದಲ್ಲಿದೆ ಎನ್ನುವ ಮಾತೇ ಈ ಜನರಿಗೆ ತಿಳಿಯುವುದಿಲ್ಲ."

ನನ್ನ ಹಿಂದೆ ಕೂತಿದ್ದ ಆ ಕುಳ್ಳನ ಕೆಮ್ಮಿನ ಸದ್ದು ಕೇಳಿಸಿತು. ಆತ ಯಾವಾಗ ನನ್ನ ಹಿಂದೆ ಬಂದು ನಿಂತಿದ್ದನೊ ನನಗೆ ಗೊತ್ತೇ ಆಗಿರಲಿಲ್ಲ. ಅವನ ಮುಖ ಸತೇಜವಾಗಿತ್ತು. ಆತ ಉತ್ತೇಜಿತನಾಗಿ ನುಡಿದ. "ಪ್ರೇಮ! ಪ್ರೇಮವೆಂದು ನೀವು ಯಾವುದನ್ನು ಕರೆಯುತ್ತೀರಿ ? ಯಾವ ಪ್ರೇಮ ಲಗ್ನ ಬಂಧನದ ಬಿಗಿಯನ್ನು ಉಳಿಸಬಲ್ಲದು? ನಿಮ್ಮ ಪ್ರೇಮದ ಲಕ್ಷಣ ಏನು ?"

ಮಹಿಳೆ ತಿಳಿಸಿ ಹೇಳತೊಡಗಿದಳು. "ನಿಜವಾದ ಪ್ರೀತಿ! ಸತ್ಯ-ಪ್ರೇಮ! ನಿಜವಾದ ಪ್ರೀತಿ ಇದ್ದರೇನೆ ದಾಂಪತ್ಯ ಸಫಲವಾಗಬಹುದು."

"ನಿಮ್ಮ ಸತ್ಯಪ್ರೇಮದ ಲಕ್ಷಣ ಏನು ?"

"ಸತ್ಯ ಪ್ರೇಮವೆಂದರೆ ಒಂದು ವ್ಯಕ್ತಿಯನ್ನು ಜಗತ್ತಿನಲ್ಲಿ ಸರ್ವೋಪರಿ ಎಲ್ಲಕ್ಕಿಂತ ಹೆಚ್ಚು ಎಂದು ತಿಳಿಯುವುದು."

"ಎಷ್ಟು ದಿನ ಹಾಗೆ ತಿಳಿದರೆ ಅದು ನಿಮ್ಮ ಲಕ್ಷಣವನ್ನು ಪೂರೈಸುವುದು? ಒಂದು ತಿಂಗಳೊ? ಎರಡು ದಿನಗಳೊ? ಒಂದೆರಡು ಗಂಟೆಯೊ ? ನಿಜವಾದ ಪ್ರೀತಿಯನ್ನು ನಿರ್ಧರಿಸಲು ವೇಳೆಯ ಒಂದು ಮಿತಿ ಹೇಳಿರಿ."

"ಆಜೀವ!"

"ಏನೋ ಕಾದಂಬರಿಯ ಮಾತಾಯಿತು. ನಿಜವಾಗಿ ನೋಡಲಾಗಿ ಇಂಥ ಪ್ರೀತಿ ಕೆಲ ಗಂಟೆ ಮಾತ್ರ ಉಳಿಯಬಲ್ಲದು. ಒಂದು ವೇಳೆ ನಿಮ್ಮ ಮಾತನ್ನು ಒಪ್ಪಿಕೊಂಡರೂ ದಾಂಪತ್ಯ ಜೀವನದಲ್ಲಿ ಈ ಭಾವನೆ ಉಭಯ ಪಕ್ಷೀಯವಾಗಿ ಉಳಿಯುವುದು ಅಸಂಭವ." ಇಷ್ಟು ಹೇಳಿ ಕುಳ್ಳ ಸಿಗರೇಟು ಹೊತ್ತಿಸಿದ.

"ನೀವು ಹೇಳಿದ್ದು ವಾಸನಾಜನ್ಯ ಪ್ರೇಮ. ಆದರ್ಶಪ್ರೇಮ ಇರಬಲ್ಲದೆಂಬ ಮಾತನ್ನು ನೀವು ಒಪ್ಪುವುದಿಲ್ಲವೆ? ಆಧ್ಯಾತ್ಮಿಕ ಅಭಿನ್ನತೆಯ ಮೇಲೆ ಆಧರಿಸಿರುವ ಪ್ರೇಮವನ್ನು ಒಪ್ಪುವುದಿಲ್ಲವೆ?"

"ಆಧ್ಯಾತ್ಮಿಕ ಅಭಿನ್ನತೆ! ಹಾಗಿದ್ದರೆ ಗಂಡು-ಹೆಣ್ಣಿನ ಸಂಯೋಗ ಯಾಕೆ ಬೇಕು? ಅಥವಾ ತಾದಾತ್ಮ್ಯವನ್ನು ಸಿದ್ಧಪಡಿಸಲು ಆ ಕ್ರಿಯೆಯೊ?" ಕುಳ್ಳ ತನ್ನ ವಿಚಿತ್ರ ಧ್ವನಿಯಿಂದ ನಕ್ಕ.

"ನೀವೇನೇ ಅನ್ನಿ. ಲಗ್ನವಾದ ಬಹು ಜನರ ದಾಂಪತ್ಯಜೀವನ ಸಫಲವಾಗಿದೆ."

"ನೋಡಿರಿ. ನೀವು ಮೊದಲು ಪ್ರೇಮವೇ ವಿವಾಹದ ಆಧಾರವೆಂದಿರಿ. ಈಗ ನಾನು ಪ್ರೇಮವೆಂದರೆ ಬರಿ ವಾಸನೆ ಎಂದೊಡನೆಯೆ ಪ್ರೇಮವನ್ನು ಬಿಟ್ಟು ವಿವಾಹವನ್ನು ಪ್ರತಿಪಾದಿಸಲಾರಂಭಿಸಿದ್ದೀರಿ. ಈ ಕಾಲದ ವಿವಾಹವೆಂಬುದು ಒಂದು ವಂಚನೆಯೆ ಆಗಿಬಿಟ್ಟಿದೆ."

"ಹಾಗಿದ್ದರೂ ವಿವಾಹಗಳು ನಡೆಯುತ್ತಲೇ ಬಂದಿವೆ. ಈಗಲೂ ನಡೆಯುತ್ತಿವೆ."

"ವಿವಾಹವೆಂದರೇನು? ಒಂದು ಗೂಢ ರಹಸ್ಯ. ಈಶ್ವರ ಸೃಷ್ಟಿಯಲ್ಲಿ ಎರಡು ಪ್ರಾಣಿಗಳು ಒಟ್ಟಿಗೆ ಉಳಿಯಬಹುದಾದ ಒಂದು ಬಂಧನ. ಆದರೆ ನಮ್ಮಲ್ಲಿ ಎಷ್ಟು ಜನರಿಗೆ ಈ ಅರ್ಥ ತಿಳಿಯುತ್ತದೆ? ಮದುವೆಯೆಂದರೆ ಸಂಭೋಗವೆಂದೇ ನಾವು ತಿಳಿಯುತ್ತೇವೆ. ಅಂತೆಯೇ ಇದರ ಪರಿಣಾಮ ಪ್ರವಂಚನೆ ಇಲ್ಲವೆ ವಿವಶತೆ. ಪ್ರವಂಚನೆಯಲ್ಲಿ ತೋರಿಕೆಗೆ ಪತಿ ಪತ್ನಿಯರಲ್ಲಿ ಮೇಳವಿದ್ದಂತಿದ್ದರೂ ವಾಸ್ತವದಲ್ಲಿ ವ್ಯಭಿಚಾರದ ಪಾಪಾಚರಣೆ ನಡೆಯುತ್ತಿರುತ್ತದೆ

ಇದು ದುಸ್ಥಿತಿಯಾಗಿದ್ದರೂ ಹೇಗೋ ತೂಗಿಸಿಕೊಂಡು ಹೋಗಬಹುದು. ಆದರೆ ವಿವಶತೆಯ ಸಂದರ್ಭ ಇನ್ನೂ ಭಯಂಕರವಾದದ್ದು. ಯಾಕೆಂದರೆ ಈ ಸ್ಥಿತಿಯಲ್ಲಿ ದಂಪತಿಗಳು ಒಟ್ಟಿಗೆ ಇರಬೇಕಾದ ಕರ್ತವ್ಯಭಾರದಿಂದ ಮುಕ್ತಿ ಹೊಂದಲಾರದೆ ಒಬ್ಬರನ್ನೊಬ್ಬರು ತಿರಸ್ಕಾರದ ದೃಷ್ಟಿಯಿಂದ ನೋಡುತ್ತಾ, ಪರಸ್ಪರರ ಬಗ್ಗೆ ಜುಗುಪ್ಸೆಯಲ್ಲೇ ಒಟ್ಟಾಗಿ ಬಾಳುತ್ತಾರೆ. ಇದರ ದುಷ್ಪರಿಣಾಮವಾಗಿ ಜನರು ಮದ್ಯಪಾನ ಮಾಡುತ್ತಾರೆ. ದುರ್ವ್ಯಸನಕ್ಕೊಳಗಾಗುತ್ತಾರೆ. ಹತ್ಯೆ, ಆತ್ಮಹತ್ಯೆ ಮಾಡುತ್ತಾರೆ." ಆ ಗಿಡ್ಡ ವ್ಯಕ್ತಿ ಉತ್ತೇಜಿತನಾಗಿ ತೆರಪಿಲ್ಲದೆ ಮಾತಾಡುತ್ತಿದ್ದ. ಮತ್ತಾರಿಗೂ ಮಾತಾಡಲು ಅವಕಾಶವನ್ನೇ ಕೊಡಲಿಲ್ಲ. ಅವನ ಮಾತು ಕೇಳಿ ನಾವೆಲ್ಲ ಅಪ್ರತಿಭರಾಗಿಬಿಟ್ಟೆವು. ಕೆಲ ಹೊತ್ತಿನ ಮೇಲೆ ಮೆಲ್ಲಗೆ ವಕೀಲ ನುಡಿದ: "ಇಂಥ ದುರ್ಘಟನೆಗಳು ದಾಂಪತ್ಯ ಜೀವನದಲ್ಲಿ ಸಂಭವಿಸುವುದು ಸುಳ್ಳಲ್ಲ."

ಕುಳ್ಳ ಒಮ್ಮೆಲೆ, "ಹಾಗಾದರೆ ನನ್ನನ್ನುಗುರುತಿಸಿದಿರಾ?" ಎಂದ ನಾಚಿಕೆ-ಸಂಕೋಚಗಳಿಂದ.

"ಇಲ್ಲ...."

"ನನ್ನ ಜೀವನದಲ್ಲೇ ಇಂಥ ದುರ್ಘಟನೆ ಯಾಗಿದೆ. ನಾನು ಕೊಲೆಗಡಕ. ಪತ್ನಿಯ ಕೊಲೆ ಮಾಡಿದಾತ— ಪಾಜ್ನಿಶೆವ್."

ಕುಳ್ಳನ ಮಾತಿನಿಂದ ನಾವೆಲ್ಲರೂ ಸಂದಿಗ್ಧದಲ್ಲಿ ಬಿದ್ದೆವು. ಯಾರೂ ಏನೂ ಹೇಳಲಾರದೆ ಹೋದೆವು. "ನನ್ನನ್ನು ಕ್ಷಮಿಸಿ" ಎಂದು ಕುಳ್ಳ ಮರಳಿ ಹೋಗಿ ತನ್ನ ಸೀಟಿನ ಮೇಲೆ ಕೂತ.

ಆಮೇಲೆ ನಾನು ಮಲಗಬೇಕೆಂದೆ. ನಿದ್ರೆ ಬರಲಿಲ್ಲ. ನಾನು ಕಣ್ಣು ತೆರೆಯುತ್ತಲೆ ಪಾಜ್ನಿಶೆವ್ ಅಂದ: "ನನ್ನ ಹತ್ತಿರ ಕೂತುಕೊಳ್ಳಲು ನೀವು ಹೇಸುವಿರಾ? ಹಾಗಿದ್ದರೆ ನಾನು ಎದ್ದು ಹೋಗುತ್ತೇನೆ."

"ಛೆ ಛೆ! ಹಾಗೇನೂ ಇಲ್ಲವಲ್ಲ."

"ಹಾಗಾದರೆ ತಗೊಳ್ಳಿರಿ. ಚಹಾ ಕುಡಿಯೋಣ."

ಚಹಾ ಕುಡಿದೆವು.

"ನಿದ್ದೆ ಬರಲೊಲ್ಲದೇ?"

"ಹುಂ."

"ಹಾಗಾದರೆ ನಿಮಗೆ ನನ್ನ ಕತೆ ಹೇಳಲೆ? ಕೇಳಬಯಸುವಿರಾ?"

"ನಿಮಗೇನೂ ತೊಂದರೆಯೆನಿಸದಿದ್ದರೆ ಅವಶ್ಯವಾಗಿ ಕೇಳುವೆ." ಗಾಡಿ ನಿಂತಿತು. ವಕೀಲ ಮತ್ತು ಆ ಮಹಿಳೆ ಇಳಿದು ಹೋದರು.

ಪ್ರಥಮ ಪತನ

"ಕೇಳಿ ಹಾಗಾದರೆ, ಪ್ರಾರಂಭದಿಂದಲೆ ಹೇಳುತ್ತೇನೆ. ನಾನೊಬ್ಬ ಜಮೀನುದಾರ. ವಿಶ್ವವಿದ್ಯಾಲಯದ ಸ್ನಾತಕ. ಒಮ್ಮೆ ಉಚ್ಚಾಧಿಕಾರಿಯೂ ಆಗಿದ್ದೆ. ನನ್ನ ವರ್ಗದ ಉಳಿದವರಂತೆಯೆ ನಾನೂ ಮದುವೆಗೆ ಮೊದಲು ವ್ಯಭಿಚಾರಿಯಾಗಿದ್ದೆ. ಆದರೂ ನೀತಿವಂತನೆಂದು ಭಾವಿಸುಕೊಳ್ಳುತ್ತಿದ್ದೆ. ಯಾಕೆಂದರೆ ಉಳಿದವರ ಹಾಗೆ ನಾನು ಲಂಪಟ ವೃತ್ತಿಯಿಂದ ವ್ಯಭಿಚಾರ ಮಾಡುತ್ತಿರಲಿಲ್ಲ. ಸ್ವಾಸ್ಥ್ಯದ ಸಲುವಾಗಿ ಮಾಡುತ್ತಿದ್ದೆ. ಮೇಲಾಗಿ ವ್ಯಭಿಚಾರ ಗೈದನಂತರ ಆ ಹುಡುಗಿಯರಿಗೆ ನಾನು ದುಡ್ಡು ಕೊಡುತ್ತಿದ್ದೆ. ನಾನು ಅನ್ಯಾಯಿಯಲ್ಲ ಎಂದು ಹೆಮ್ಮೆ ಪಟ್ಟುಕೊಳ್ಳುತ್ತಿದ್ದೆ."

ಸ್ವಲ್ಪ ತಡೆದು ಮತ್ತೆ ಪ್ರಾರಂಭಿಸುವಾಗ ಆ ವಿಚಿತ್ರ ಶಬ್ದವನ್ನು ಆತ ಮತ್ತೊಮ್ಮೆ ಮಾಡಿದ.

"ಶಾರೀರಿಕ ಸಹವಾಸವೆಂದರೆ ನಿಜವಾದ ವ್ಯಭಿಚಾರವಲ್ಲ. ಆದರೆ ಸುಖಕೊಟ್ಟ ಆ ಸ್ತ್ರೀಗೆ ಸಲ್ಲಬೇಕಾದದ್ದನ್ನು ಸಲ್ಲಿಸಲು ತಾನು ಬಾಧ್ಯನಲ್ಲ ಎಂದು ತಿಳಿಯುವುದು ಲಂಪಟತನ. ಒಮ್ಮೆ ಒಬ್ಬ ಹುಡುಗಿ ನನ್ನ ಮೇಲೆ ಮುಗ್ಧಳಾಗಿದ್ದಳು. ಆದರೆ ಅವಳಿಗೂ ದುಡ್ಡು ಕೊಟ್ಟಾಗಲೇ ನಾನು ಕರ್ತವ್ಯ ಪೂರೈಸಿದೆನೆಂದು ಸಮಾಧಾನಗೊಂಡೆ. ಬಹುಶಃ ನಿಮ್ಮ ಅಭಿಪ್ರಾಯವಾದರೂ ನನ್ನಂತೇ ಇರಬಹುದು. ತಪ್ಪುತಿಳಿಯಬೇಡಿ. ಆದರೂ ಈ ವಿಚಾರ ಎಷ್ಟು ಭಯಂಕರವಾಗಿದೆ, ಅಲ್ಲವೆ?"

"ಭಯಂಕರ?"

"ಹೌದು. ಇದೂ ನನಗೆ ನನ್ನ ಜೀವನದ ಆ ದುರ್ಘಟನೆ ಘಟಿಸಿದ ಮೇಲೆ, ನಾನೇ ಬೇರೆ ದೃಷ್ಟಿಯಿಂದ—ನನ್ನ ಜೀವನವನ್ನು ನೋಡಿದಾಗ ತಿಳಿಯಿತು."

"ಇರಲಿ. ಆ ಭೀಷಣ ಕಾಂಡದ ಕಾರಣ ಹೇಳುತ್ತೇನೆ ಕೇಳಿ. ನಾನು ೧೬ ವರ್ಷದವನಿದ್ದಾಗ ಎಲ್ಲ ಹುಡುಗರಂತೆ ಸ್ತ್ರೀಯ ಅಂಗಾಂಗಗಳ ಆಕರ್ಷಣೆ ನನಗೂ ಅನಿಸುತ್ತಿತ್ತು. ಬಾಲ್ಯದ ನಿರ್ಮಲ ಮನಸ್ಸು ಉಳಿದಿರಲಿಲ್ಲ. ಸ್ತ್ರೀಯ ಬಗ್ಗೆ ನನ್ನ ವಿಚಾರಗಳು ಭ್ರಷ್ಟವಾಗಿದ್ದವು. ಆದರೂ ನಾನಿನ್ನೂ ಸ್ತ್ರೀಸುಖವನ್ನರಿತಿರಲಿಲ್ಲ.

"ಆದರೆ ಒಬ್ಬ ಮಿತ್ರ ನನ್ನನ್ನು ಒಂದು ದಿನ ಆ ಪಾಪಕ್ಕೂ ತಳ್ಳಿದ. ನಾನು ಪಾಪ ಕೂಪದಲ್ಲಿ ಬಿದ್ದೆ. ನಾನೇನು ಮಾಡುತ್ತಿದ್ದೇನೆಂಬ ಅರಿವು ಕೂಡ ನನಗಾಗ ಇರಲಿಲ್ಲ. ಹೀಗೆ ಮಾಡುವುದು ಕೆಟ್ಟದ್ದೆಂದು ಶ್ರೇಷ್ಠ ಜನರು ಕೂಡ ಹೇಳಿಲ್ಲ. ಬೈಬಲ್ಲಿನಲ್ಲಿ ಹತ್ತು ಆದೇಶಗಳಲ್ಲಿ ಇದು ಕೆಟ್ಟದ್ದೆಂದು ಹೇಳಿರುವುದು ನಿಜ. ಆದರೆ ಅವುಗಳ ಅಗತ್ಯ ಪಾದ್ರಿಯ ಮುಂದೆ ಧಾರ್ಮಿಕ ಪರೀಕ್ಷೆಯಲ್ಲಿ ಪಾಸಾಗಲು ಮಾತ್ರವೇ ಇರುವುದಲ್ಲವೆ?"

"ನಾನು ಹಿರಿಯರೆಂದು ತಿಳಿದಿದ್ದ ವ್ಯಕ್ತಿಗಳಲ್ಲಿ ಕೆಲವರಂತೂ ಸ್ತ್ರೀ-ಗಮನ ಶರೀರಕ್ಕೆ ಆರೋಗ್ಯಕರವೆಂದು ಹೇಳಿದ್ದನ್ನು ನಾನು ಕೇಳಿದ್ದೆ. ನನ್ನ ಓರಗೆಯವರಂತೂ ಇದನ್ನು ಸ್ಫೂರ್ತಿದಾಯಿ ಎಂದು ತಿಳಿದಿದ್ದರು. ಡಾಕ್ಟರರ ಅಭಿಪ್ರಾಯವೂ ವ್ಯಭಿಚಾರ ಸ್ವಾಸ್ಥ್ಯದಾಯಕವೆಂದೇ ಆಗಿತ್ತು. ಇಂದಿನ ವಿಜ್ಞಾನ ಯುವಕರಿಗೆ ವೇಶ್ಯಾಗಮನದ ಶಿಕ್ಷಣ ನೀಡುತ್ತದೆ."

"ವಿಜ್ಞಾನದ ಬಗ್ಗೆ ತಮ್ಮ ಅಭಿಪ್ರಾಯ ಸ್ಪಷ್ಟವಾಗಲಿಲ್ಲ."

"ಉಪದಂಶ ರೋಗದ ನಿವಾರಣೆಗೆ ಔಷಧಿ ಹುಡುಕಲು ಎಷ್ಟು ಪ್ರಯತ್ನ ನಡೆಯುತ್ತಿದೆಯೊ ಅದರ ಒಂದು ಶತಾಂಶವಾದರೂ ವ್ಯಭಿಚಾರ ನಿರೋಧಕ್ಕಾಗಿ ಆಗಿದ್ದರೆ ಇಂದು ಅಂಥ ಔಷಧ ಹುಡುಕುವ ಕಾರಣವೇ ಉಳಿಯುತ್ತಿರಲಿಲ್ಲ. ಸ್ವಾಸ್ಥ್ಯಕ್ಕಾಗಿ ಡಾಕ್ಟರರು ಅನಾಚಾರವನ್ನೇ ಪ್ರತಿಪಾದಿಸುತ್ತಾರಲ್ಲವೆ?

"ನನ್ನ ಪತನಕಾಲದಲ್ಲಿ ಈ ಆಶಯವೇನೂ ನನ್ನ ಮುಂದಿರಲಿಲ್ಲ. ಆದರೂ ಪ್ರಥಮ ಪತನದ ತರುವಾಯ ನನ್ನ ಕೌಮಾರ್ಯಭಂಗವಾಯಿತಲ್ಲ ಎಂದು ನಾನು ಅಕ್ಷರಶಃ ಕಣ್ಣೀರಿಟ್ಟೆ. ಅಂದಿನಿಂದ ಸ್ತ್ರೀಯೊಂದಿಗೆ ಪವಿತ್ರ ಸಂಬಂಧವಿಡಲು ನನಗೆ ಸಾಧ್ಯವಾಗಲಿಲ್ಲ. ಆಗುವುದಿಲ್ಲ. ವ್ಯಭಿಚಾರವೂ ಒಂದು ವ್ಯಸನ. ಸೆರೆಗುಡುಕ ಸೆರೆಯನ್ನು ನೋಡಿ ನಿರ್ಲಿಪ್ತವಾಗಿ ಹೇಗೆ ಉಳಿಯಲಾರನೊ ಹಾಗೇ ಪತಿತ ವ್ಯಕ್ತಿಯಾದರೂ ಸ್ತ್ರೀಯನ್ನು ವಿಶುದ್ಧ ಭಾವದಿಂದ ನೋಡಿರು ಎಂದು ಭಾವಿಸಲಾರ. ಹೂಂ. ಅಂತೂ ನಾನು ವ್ಯಭಿಚಾರಿಯಾದೆ. ಅದೇ ನನ್ನ ಸರ್ವನಾಶಕ್ಕೆ ಕಾರಣವಾಯಿತು.

ಪ್ರವಂಚನೆ

"ಆ ಮೇಲೆ ದಿನದಿನಕ್ಕೆ ನನ್ನ ಪತನ ಹೆಚ್ಚುತ್ತಲೇ ಹೋಯಿತು. ಇಂದು ಅದನ್ನು ನೆನೆಸಿಕೊಂಡರೆ ಮೈಯೆಲ್ಲ ಉರಿಯುತ್ತದೆ. ಆಗಿನ ಹುಡುಗರಲ್ಲಿ ತೀರ ಸಂಭಾವಿತನೆನ್ನಿಸಿಕೊಳ್ಳುತ್ತಿದ್ದ ನನ್ನಂಥವನ ಹಾಡೇ ಹೀಗಾದರೆ ಸ್ವೇಚ್ಛಾಚಾರಿ ಯುವಕರ, ಅಧಿಕಾರಿಗಳ ಮತ್ತು ಪ್ಯಾರಿಸ್ ಅನುಯಾಯಿಗಳ ವಿಚಾರ ಬೇರೆ ಕೇಳಬೇಕೆ? ಆದರೆ ಈ ಎಲ್ಲ ಮಹಾ ಪಾಪಿಗಳು ಹಗಲೆಲ್ಲ ಪಾಪ ಮಾಡಿ ಅನಂತರ ಅಭ್ಯಂಗ ಸ್ನಾನ ಮಾಡಿ ಮಡಿಯುಟ್ಟು ಶುದ್ಧರಾಗಿ ನೈತಿಕತೆಯ ಪ್ರತೀಕರೆಂದು ಸಮಾಜದಲ್ಲಿ ಮೆರೆಯುತ್ತಾರೆ. ವಾಹ್! ಎಂಥ ವಿಡಂಬನೆ!

"ಇಂಥ ಮಹನೀಯರು ನಮ್ಮ ಮನೆಯ ಹೆಣ್ಣುಮಕ್ಕಳ ಹತ್ತಿರ ಬಂದರೆ ನಾವು ನ್ಯಾಯವಾಗಿ ಇವರನ್ನು ಬದಿಗೆ ಕರೆದು, 'ಅಯ್ಯಾ, ಪುಣ್ಯಾತ್ಮರೆ, ನಿಮ್ಮ ಇತಿಹಾಸವೆಲ್ಲ ನಮಗೆ ಗೊತ್ತು. ಆದ್ದರಿಂದ ದಯವಿಟ್ಟು ಇಲ್ಲಿಂದ ಹೊರಟು ಹೋಗಿರಿ. ಇಲ್ಲಿ ಸಭ್ಯರು ಬರಬೇಕು.

ನಿಮ್ಮ ಸ್ಥಾನ ಇದಲ್ಲ' ಎಂದು ಹೇಳಬೇಕು. ಆದರೆ ನಾವು ಹಾಗೆ ಮಾಡುವೆವೆ? ಇಲ್ಲ. ತದ್ವಿರುದ್ಧವಾಗಿಯೆ ವರ್ತಿಸುತ್ತೇವೆ. ಪ್ರೀತ್ಯಾದರಗಳಿಂದ ಅವರನ್ನು ಕರೆತಂದು, ಮನೆಯ ಹೆಣ್ಣುಮಕ್ಕಳಿಗೂ ಅವರ ಪರಿಚಯ ಮಾಡಿಕೊಡುತ್ತೇವೆ. ಇವರೊಂದಿಗೆ ನೃತ್ಯ ಸಿನೇಮಾಗಳಿಗೆ ಹೆಣ್ಣುಮಕ್ಕಳನ್ನು ಕಳಿಸುತ್ತೇವೆ. ಹೀಗೆ ಮಾಡದಿದ್ದರೆ ನಾವು ಅಸಭ್ಯರೆನ್ನಿಸಿಕೊಳ್ಳುತ್ತೇವಲ್ಲ. ಹೀಗಿದೆ ನಮ್ಮ ಸಭ್ಯತೆ. ಭೇಷ್! ಆದರೆ ನಿಜವಾಗಿ ಇದು ಆತ್ಮವಂಚನೆ; ಮತ್ತೇನೂ ಅಲ್ಲ! ಈ ಪರಿಸ್ಥಿತಿಯೂ ಒಂದಿಲ್ಲೊಂದು ದಿನ ಬದಲಾದೀತು."

ನಡುನಡುವೆ ಆ ವಿಚಿತ್ರ ಶಬ್ದ ಮಾಡುತ್ತ ಆಗಾಗ ತಲೆಯ ಟೊಪ್ಪಿಗೆ ತೆಗೆದು ಮತ್ತೆ ಹಾಕಿಕೊಳ್ಳುತ್ತ ಬಿಸಿ ಬಿಸಿ ಚಹಾ ಕುಡಿಯುತ್ತಿದ್ದ ಆತ. ಬಿಸಿ ಚಹಾದಿಂದ ಅವನಿಗೆ ಇನ್ನಷ್ಟು ಉತ್ತೇಜನ ಸಿಗುತ್ತಿತ್ತೇನೊ!

ವಿವಾಹ

“ಮೂವತ್ತು ವರ್ಷದವನಾಗುವವರೆಗೆ ಈ ರೀತಿ ಕಳೆದೆ. ವಿವಾಹದ ವಿಚಾರವನ್ನು ಮಾತ್ರ ಎಂದೂ ಬಿಟ್ಟಿರಲಿಲ್ಲ. ನಾನು ಪಾಪಿಯಾದರೂ ಇನ್ನೊಬ್ಬ ಮುಗ್ಧ ಕುವರಿಯನ್ನು ಲಗ್ನವಾಗಿ ಅವಳ ಸಂಬಂಧ ಬೆಳೆಸಬೇಕೆಂಬ ಹೀನ ವಿಚಾರ ನನ್ನನ್ನು ಬಿಡುತ್ತಿದ್ದಿಲ್ಲ.

“ಅಂಥ ಕುವರಿಯೂ ಒಬ್ಬಳು ಸಿಕ್ಕಳು. ಪೆಂಜಾದ ಜಮೀನ್‌ದಾರನ ಮಗಳು ಅವಳು. ಅವಳ ಪ್ರಮಾಣಬದ್ಧ ಶರೀರ, ಉಂಗುರಗೂದಲು ನನ್ನನ್ನು ಮುಗ್ಧಗೊಳಿಸಿದವು. ದೇಹದ ಆಕಾರಕ್ಕೆ ನಿಜವಾದ ಸೌಂದರ್ಯವೆಂದು ತಿಳಿಯುತ್ತಾರಲ್ಲ ಜನ, ಎಂಥ ಮೋಸ! ಸುಂದರಿಯ ಅರ್ಥಶೂನ್ಯ ಮೂರ್ಖ ಹರಟೆಯೂ ಸರಸ ವಾಕ್ಯವೆನಿಸುವುದು ಈ ಜನರಿಗೆ!

“ಹುಂ. ಮದುವೆ ನಿಶ್ಚಯವಾಯಿತು. ಲಗ್ನ; ಶುದ್ಧ ವಿಡಂಬನೆ! ಈ ಮೊದಲೇ ಸಾವಿರ ಸಲ ಲಗ್ನವಾಗಿ ಈಗೊಮ್ಮೆ ವಿಧಿವತ್ ವಿವಾಹ! ನಾವು ತಿಳಿದೂ ತಿಳಿದೂ ಸುಮ್ಮನುಳಿಯುತ್ತೇವೆ. ಓದುವ ಪುಸ್ತಕಗಳಲ್ಲಿ ಪ್ರೇಮಿ ಪ್ರೇಯಸಿಯರ ವರ್ಣನೆ ಇರುತ್ತದೆ. ಅವರೆಲ್ಲಿ ನಿಂತರೊ ಆ ಸೇತುವೆಯ ವರ್ಣನೆ ಇರುತ್ತದೆ. ಅವರು ಯಾವಾಗ ಪ್ರೀತಿಸಿದರೋ ಆ ಸಂಜೆಯ ಅರುಣ ಕಾಂತಿಯ ವರ್ಣನೆ ಇರುತ್ತದೆ. ಆದರೆ ಅವರ ಪೂರ್ವ ಜೀವನದ ಸರಿಯಾದ ಕಲ್ಪನೆ ಸಿಗುವುದೆ? ಯಾವ ಲೇಖಕನೂ ತನ್ನ ನಾಯಕ ವಿವಾಹಪೂರ್ವದಲ್ಲಿ ಅಡಿಗೆಯವಳನ್ನು, ಕೆಲಸದವಳನ್ನು, ಇತರ ಗುರುತಿನವರ ಪತ್ನಿಯರನ್ನು ಎಷ್ಟು ಸಲ ಉಪಭೋಗಿಸಿದ್ದಾನೆಂಬುದನ್ನು ಹೇಳುವ ಸಾಹಸ ಮಾಡುವುದಿಲ್ಲ.

“ಯಾಕೆ ಹೇಳಿದೆನೆಂದರೆ ಈ ಮೋಸಕ್ಕೆ ಗುರಿಯಾಗುವ ಕುವರಿಯರಿಗೆ ಲೆಕ್ಕವೇ ಇಲ್ಲ. ಇದಕ್ಕಿಂತ ಕೆಡುಕೆನಿಸುವ ಸಂಗತಿ ಎಂದರೆ ಕಲಿತ ಮಾತೆಯರು ತಮ್ಮ ಅನುಭವದಿಂದಾದರೂ ಇದನ್ನು ಮನಗಂಡು ತಮ್ಮ ಮುಂದಿನ ಪೀಳಿಗೆ ಅದನ್ನೆ ಮತ್ತೆ ಮಾಡದಂತೆ ನೋಡಿಕೊಳ್ಳುವುದಿಲ್ಲ ಎಂಬುದು.

“ಪ್ರೇಮದ ಸರ್ವೋಚ್ಚ ಆದರ್ಶದ ಸಂಬಂಧ ನೈತಿಕ ಗುಣಗಳೊಂದಿಗಿಲ್ಲ; ಬಿಳಿ ತೊಗಲಿನೊಂದಿಗಿದೆ; ಅಂದವಾದ ಬಟ್ಟೆಯೊಂದಿಗಿದೆ. ಇದನ್ನು ಸ್ತ್ರೀಯರು ತಿಳಿದಿರುತ್ತಾರೆ. ಪುರುಷರು ತಿಳಿದಿಲ್ಲ. ಕಾರಣ ಇಷ್ಟೇ. ಅವರು ತಿಳಿಯಬಯಸುವುದಿಲ್ಲ. ಮಹಿಳೆ ಬೇಕಾದ ಆರೋಪವನ್ನಾದರೂ ಸಹಿಸಬಲ್ಲಳು. ಆದರೆ ಪ್ರೇಮಿಯ ಎದುರು ಸಿಂಗಾರವಾಗಿ ಬರುವುದನ್ನು ಬಿಡೆಂದರೆ ಅವಳಿಗೆ ಸಾಧ್ಯವಿಲ್ಲ!

“ತಮ್ಮ ಶರೀರವನ್ನೇ ಈ ಗಂಡಸರು ಪ್ರೀತಿಸುತ್ತಾರೆಂಬುದನ್ನು ಅವರು ಚೆನ್ನಾಗಿ ಅರಿತಿರುತ್ತಾರೆ. ಅಂತೆಯೆ ಕುತ್ತಿಗೆ, ಹೆಗಲು, ಬಗಲು, ಅರ್ಧ ಮೊಲೆ, ಅರ್ಧ ಹೊಟ್ಟೆ ತೆರೆದು ತೋರಿಸುವ ಫ್ಯಾಶನ್‌ಗಳು ಬೆಳೆಯುತ್ತಿವೆ. ಮೇಲ್ಮಟ್ಟದವರ ಜೀವನವೆಂದರೆ ಈ ಬಹಿರಂಗದ ನಿರ್ಲಜ್ಜತೆಯಲ್ಲದೆ ಬೇರೆ ಇನ್ನೇನು?

“ಸೂಳೆಯರಿಗೂ ಇವರಿಗೂ ಭೇದವಿದೆ,



ಸಾರಿಡಾನ್ ನೋವು ಮತ್ತು ಸಿಡಿತಗಳನ್ನು ಬೇಗ ನಿವಾರಿಸುತ್ತದೆ. ತನ್ನ ತ್ರಿವಿಧ ಕ್ರಿಯೆಯಿಂದ ಅದು ಉಪಶಮನವನ್ನೂ, ವಿಶ್ರಾಂತಿಯನ್ನೂ, ಉಲ್ಲಾಸವನ್ನೂ ನೀಡುತ್ತದೆ. ತಲೆನೋವು, ಮೈಕೈನೋವು, ಹಲ್ಲುನೋವು, ಮೈಬಿಸಿಯಾಗುವುದು, ಅಸ್ವಸ್ಥತೆ ಮುಂತಾದುವುಗಳಿಗೆ ಸಾರಿಡಾನ್ ಸೇವಿಸಿರಿ. ಅದು ಬೇಗನೆ, ನಿರಪಾಯಕರವಾಗಿ ಮತ್ತು ನಿಶ್ಚಯವಾಗಿ ಗುಣಪಡಿಸುತ್ತದೆ. ದೊಡ್ಡವರಿಗೆ ಒಂದು ಮಾತ್ರೆ ಮತ್ತು ಮಕ್ಕಳಿಗೆ ¼ ರಿಂದ ½ ಮಾತ್ರೆ ಸಾಕು.

'ರೋಶ್' ಉತ್ಪಾದನ

ಸೋಲ್ ಡಿಸ್ಟ್ರಿಬ್ಯೂಟರ್ಸ್ : ವೋಲ್ಟಾಸ್ ಲಿಮಿಟೆಡ್

ಇಬ್ಬರ ಲಕ್ಷ್ಯ, ಉದ್ದಿಶ್ಯ ಬೇರೆ ಬೇರೆ ಎಂದು ನೀವು ವಾದಿಸಬಹುದು. ಆದರೆ ತಲೆ ಸ್ವಲ್ಪ ಶಾಂತವಾಗಿಟ್ಟು ವಿಚಾರಿಸಿ. ನಿಜವಾಗಿಯೆ ಏನಾದರೂ ಅಂತರವಿದ್ದಿದ್ದರೆ ಆ ಅಂತರ ವ್ಯವಹಾರದ ರೀತಿಯಲ್ಲೇ ತೋರಿಬರುತ್ತಿತ್ತು. ಆದರೆ ನಡೆದದ್ದೇನು? ಅದೇ ಎಣ್ಣೆ, ಅದೇ ಬಣ್ಣ, ಅದೇ ಕಣ್ಣು, ಅದೇ ಮೊಲೆ ತೋರಿಸುವ ಹವ್ಯಾಸ! ಸೂಳೆಯರು ಮಾಡುವುದನ್ನೇ ಘನವಂತರೂ ಮಾಡುತ್ತಿದ್ದಾರೆ!

"ಈ ಬಾಹ್ಯ ಆಡಂಬರಕ್ಕೇ ನಾನೂ ಮಾರು ಹೋದೆ. ಮೋಸಹೋದೆ. ಬೇರೆ ದಾರಿಯೆ ಇರಲಿಲ್ಲ. ಹೊಟ್ಟೆತುಂಬ ತಿಂದು ಕೆಲಸ ಇಲ್ಲದೆ ಉರುಳಾಡುವ ಸ್ಥಿತಿ ಇದ್ದರೆ ವಾಸನೆಯ ಅಭಿವೃದ್ಧಿಯಲ್ಲದೆ ಇನ್ನೇನಾಗಬೇಕು? ಸಂಯುಮದಿಂದ ವಾಸನೆಯನ್ನು ತಡೆಯಲೆಳಸಿದ್ದೆ. ಆದರೆ ವಾಸನೆಯನ್ನು ತಡೆಯುವುದೆಂದರೆ ವಾಸನೆಯ ಆಸಕ್ತಿಯನ್ನು ಹೆಚ್ಚಿಸಿಕೊಳ್ಳುವುದು ಮಾತ್ರ. ನಾನು ಅವಳಲ್ಲಿ ಮೋಹಿತನಾದೆ. ಸಂಪೂರ್ಣ ಆಸಕ್ತನಾದೆ!"

ಆತ ಚಹಾದ ಗಾಸಿನಲ್ಲಿಯ ಸಕ್ಕರೆ ತಿರುವಿದ.

"ನನ್ನ ಮದುವೆ ಆಯಿತು. ಅಥವಾ ನಾನು ಮದುವೆಯ ಬಲೆಯಲ್ಲಿ ಸಿಕ್ಕಿಬಿದ್ದೆ ಎಂದು ಹೇಳಬಹುದು. ಹೌದು. ಲಗ್ನ ಒಂದು ಜಾಲವೆ! ಇಂದಿನ ವಿವಾಹ ಪದ್ಧತಿ ಸರಿಯಾಗಿಲ್ಲ. ತಂದೆ ತಾಯಿ ವಿಚಾರಪೂರ್ವಕ ಯೋಗ್ಯ ವಧೂವರರನ್ನು ಕೂಡಿಸಿ ವಿವಾಹ ಮಾಡುತ್ತಿದ್ದ ಹಳೇ ರೀತಿಯೆ ಯೋಗ್ಯವಾಗಿತ್ತು. ಹಿಂದು, ಮುಸಲ್ಮಾನ, ಚೀನಿ—ಎಲ್ಲರಲ್ಲೂ ಇದೇ ರೀತಿ ಇದೆ. ಜಗತ್ತಿನ ತೊಂಭತ್ತು ಪಾಲು ಜನರಲ್ಲಿ ಇದೇ ರೀತಿ ಇದೆ. ಆದರೆ ನಮ್ಮಲ್ಲಿ ವಿವಾಹವು ಹುಡುಗಿಯ ಬಿಂಕ ಬಣ್ಣಗಳನ್ನವಲಂಬಿಸಿರುತ್ತದೆ. ಜಗತ್ತನ್ನೇ ತ್ರಸ್ತಗೊಳಿಸಿರುವ ಹೆಣ್ಣಿನ ವರ್ಚಸ್ಸು, ಆಳಿಕೆ—ಇಲ್ಲಿಂದಲೇ ಪ್ರಾರಂಭವಾಗುತ್ತದೆ."

"ಹೆಣ್ಣಿನ ವರ್ಚಸ್ಸು ಎನ್ನುವಿರಾ? ಆದರೆ ಪ್ರಕೃತದಲ್ಲಂತೂ ಪುರುಷನೇ ಸರ್ವಾಧಿಕಾರಿಯಾಗಿದ್ದಾನಲ್ಲ!"—ನಾನು.

"ನಾನಾದರೂ ಹೇಳುವುದು ಅದನ್ನೇ! ಒಂದು ಕಡೆ ನಾರಿ ಪೂರ್ಣ ಪದದಲಿತಳೆನಿಸಿದರೂ ಇನ್ನೊಂದು ಕಡೆ ಅವಳೇ ಸರ್ವಾಧಿಕಾರಿಯಾಗಿರುವುದನ್ನು ಕಾಣಬಹುದು. ಜ್ಯೂ ಜನರು ತಮ್ಮ ಮೇಲಾದ ಅನ್ಯಾಯವನ್ನು ವಿತ್ತಾರ್ಜನೆಯಿಂದ ಪರಿಮಾರ್ಜಿಸಿಕೊಳ್ಳುವಂತೆ ಸ್ತ್ರೀಯರಾದರೂ ಪುರುಷನು ವಾಸನೆಯ ಗುಲಾಮನೆಂಬುದನ್ನು ಅರಿತು ಅವನನ್ನು ಚೆನ್ನಾಗಿ ಹಣ್ಣು ಮಾಡುತ್ತಾರೆ."

"ನಾರಿಯ ಈ ಪ್ರಭುತ್ವ ಎಲ್ಲಿ ಇದೆ?"

"ಎಲ್ಲೆಲ್ಲಿಯೂ ಇದೆ! ಪೇಟೆಯಲ್ಲಿ ಒಂದು ಸುತ್ತು ಹಾಕಿ ಬನ್ನಿರಿ. ಅಲ್ಲಿಯ ಮುಕ್ಕಾಲು ಪಾಲು ವಸ್ತುಗಳೆಲ್ಲ ಸ್ತ್ರೀಯರಿಗಾಗಿಯೆ ಇರುತ್ತವೆ. ಜೀವನದ ಎಲ್ಲ ವಿಲಾಸ ವಸ್ತುಗಳು ಸ್ತ್ರೀಯರಿಗಾಗಿ. ಸ್ತ್ರೀಯರಿಗಾದರೂ ಇವುಗಳಿಂದ ಉಪಯೋಗವೇನು ಗೊತ್ತೆ? ಅವರು ತಮ್ಮ ಕಳೆದುಹೋದ ಅಧಿಕಾರವನ್ನು ಈ ರೀತಿ ಪುರುಷನನ್ನು ಸೂತ್ರದ ಬೊಂಬೆಯಂತಾಡಿಸಿ ಮರಳಿ ಪಡೆಯಲೆತ್ನಿಸುತ್ತಾರೆ.

"ವಿಲಾಸವಸ್ತುಗಳ ಪ್ರಚಾರ ಎಷ್ಟಾಗಿದೆ ಎಂದರೆ ನೀವು ಒಬ್ಬ ಯುವತಿಯನ್ನು ಮಾತಾಡಿಸಿದರೆ ಸಾಕು. ಕಾಮುಕತೆಯ ಸಂಚಾರವಾಗಿಯೆ ಬಿಡುತ್ತದೆ! ಜೂಜನ್ನು ನಿಲ್ಲಿಸಿದ್ದೇವೆ; ಆದರೆ ಅರೆಬತ್ತಲೆ ಹೆಂಗಸರಿಗಾಗಿ ಏನಾದರೂ ತಡೆ ಮಾಡಿದ್ದೇವೆಯೆ?"

ಕುಳ್ಳ ಪಾಜ್ನಿಶೆವ್ ದಣಿದಿದ್ದ. ಆದರೂ ಸಿಗರೇಟಿನ ಹೊಗೆ ಎಳೆದು ತುಟಿಯ ಸಂದುಗಳನ್ನು ಒರಸಿಕೊಂಡು ಮತ್ತೆ ಪ್ರಾರಂಭಿಸಿದ. ಮಧ್ಯರಾತ್ರಿ ಆಗಲೇ ಮೀರಿತ್ತು.

"ಲಗ್ನವಾಯಿತು. ಪ್ರಥಮ ರಾತ್ರಿಗೆಂದು ನಾವು ಪ್ಯಾರಿಸಿಗೆ ಹೋದೆವು. ಪ್ರಥಮ ರಾತ್ರಿಯ ಬಗ್ಗೆ ಹೇಳಲಾಗುವುದೆಲ್ಲ ಸುಳ್ಳು. ಕೆಟ್ಟ ಆಟ ನೋಡಿ ಹೊರಬಿದ್ದಾಗ ಆಟ ಕೆಟ್ಟಾಗಿತ್ತು ಎಂದು ಹೇಳಲು ನಾಚಿ ಅದು ಚೆನ್ನಾಗಿತ್ತು ಎಂದು ಹೇಳುವಂತೆಯೆ ಇದೂ ಒಂದು ರೀತಿ! ಮೊದಮೊ-

ದಲು ಇಬ್ಬರೂ ನಾಚುತ್ತಾರೆ. ಹೇಸುತ್ತಾರೆ. ಮೊದಲನೇ ಬಾರಿ ಸಿಗರೇಟು ಎಳೆಯುವಾಗಿನ ವ್ಯಥೆಯೆ ಇಲ್ಲಿಯಾದರೂ ಇರುತ್ತದೆ. ಈ ಪಾಪ ಕರ್ಮದಲ್ಲಿಯೂ ಸುಖ ಎಂಬುದು ಸಿಗುತ್ತಿದ್ದರೆ ಅದು ಕೇವಲ ಅಭ್ಯಸ್ತರಾದ ಮೇಲೆ ಮಾತ್ರ."

"ಇದಕ್ಕೆ ಪಾಪವೆನ್ನುತ್ತೀರಾ? ಇದು ಮನುಷ್ಯನಿಗೆ ಸ್ವಾಭಾವಿಕವಲ್ಲವೆ?"

"ಹಾಂ. ಇದು ಸ್ವಾಭಾವಿಕವಲ್ಲ. ಊಟ ಸಾಭಾವಿಕ. ಮಗುವಿರುವಾಗಿನಿಂದಲೂ ಊಟ ಮೆಚ್ಚಿಗೆಯಾಗುತ್ತದೆ.

"ಸ್ವಾಭಾವಿಕ ಕಾರ್ಯಕ್ಕೆ ಮನಸ್ಸು ಹೇಸುವುದಿಲ್ಲ. ಆದರೆ ಸಂಭೋಗವು ಲಜ್ಜಾಸ್ಪದ. ಪೀಡಾಕಾರಕ. ನಿರ್ಮಲಾಂತಃಕರಣದ ಹುಡುಗಿಯರು ಇದನ್ನು ಘೃಣಾಸ್ಪದವೆಂದೇ ತಿಳಿಯುತ್ತಾರೆ."

"ಆದರೆ ಇದನ್ನು ಬಿಟ್ಟರೆ ಜಗತ್ತು ಹೇಗೆ ನಡೆಯಬೇಕು?"

"ಜಗತ್ತು ನಡೆಯುವುದಕ್ಕೆ ಈ ಪಾಪ ಬೇಕಾಗಿದ್ದರೆ ಮಾತು ಬೇರೆ. ಆದರೆ ಇಂದು ಮಕ್ಕಳಾಗದಂತೆ ನೋಡಿಕೊಳ್ಳುವ ಶಿಕ್ಷಣ ಸಿಗುತ್ತದಲ್ಲ. ಅದು ಯಾಕೆ? ಸ್ತ್ರೀಯ ಸೌಂದರ್ಯ ಹಾಳಾಗಬಾರದೆಂಬುದಕ್ಕಾಗಿಯೆ ಅಲ್ಲವೆ? ಜನಸಂಖ್ಯೆಯ ಸಮಸ್ಯೆಯೂ ಒಂದು ಕಾರಣವಿರಬಹುದು. ಸರಿ. ಆದರೆ ನೈತಿಕತೆಯ ಹೆಸರಿನಲ್ಲಿ ಈ ಶಿಕ್ಷಣ ಕೊಡಿರಿ, ಆಗ ಇದರಿಂದ ಸೃಷ್ಟಿಕಾರ್ಯವೇ ನಿಂತು ಹೋದಿತೆಂಬ ಉತ್ತರ ಬರುತ್ತದೆ."

"ಸರಿ. ಆದರೆ ಎಲ್ಲರೂ ಹೀಗೆ ಮಾಡತೊಡಗಿದರೆ ಮಾನವ ಜಾತಿಯ ಅಸ್ತಿತ್ವವೇ ಇಲ್ಲದಂತಾದೀತು."

"ಅರ್ಥವಿಲ್ಲದ ಜಗತ್ತು ಇದ್ದಾದರೂ ಏನು ಪ್ರಯೋಜನ? ಹಾಗೆ ನೋಡಿದರೆ ಶಾಪೆನ್‌ಹಾವರ್, ಹಾರ್ಟ್‌ಮ್ಯಾನ್ಸ್ ಮತ್ತು ಮಹಾತ್ಮಾ ಬುದ್ಧರ ಅನುಯಾಯಿಗಳು ಹೇಳುವುದೇ ಸರಿಯಾಗಿದೆ. ಜೀವನಕ್ಕೆ ಏನಾದರೂ ಲಕ್ಷ್ಯ, ಗುರಿ ಇದ್ದದ್ದಾದರೆ ಅದರ ಪ್ರಾಪ್ತಿಯೊಂದಿಗೇ ಅದರ ಮುಕ್ತಾಯವೂ ಅಗತ್ಯವಾಗಿದೆ.

"ಮಾನವ ಜಾತಿಯ ಲಕ್ಷ್ಯ ವಿಶುದ್ಧ ಪ್ರೇಮ, ವಿಶ್ವಬಾಂಧವ್ಯವೆ ಇರುವುದು ನಿಜವಾದರೆ ಶಸ್ತ್ರಗಳು ಸಂಹಾರದ ಸಾಧನವಾಗದೆ ಉಪಜೀವನಕ್ಕೆ ಸಹಾಯಕವಾಗಬೇಕು. ಇದಕ್ಕೆ ಅಡ್ಡಿ ಮಾಡುವವು ಕಾಮ, ಕ್ರೋಧ, ಮದ, ಮೋಹ ಮತ್ತು ಲೋಭ. ಇವುಗಳಲ್ಲೆಲ್ಲ ಕಾಮೋನ್ಮಾದ ಹೆಚ್ಚು ಪ್ರಬಲವಾದದ್ದು. ಈ ಕಾಮವಾಸನೆ ಅಳಿದರೇನೇ ಜೀವನ ಲಕ್ಷ್ಯ ಸಾಧ್ಯವಾಗುವುದು. ಮಾನವಜಾತಿ ಒಂದಾಗುವುದು. ಮಾನವತೆ ಜೀವಂತವಿರುವ ವರೆಗೂ ಜಗತ್ತಿನ ಆದರ್ಶ ಸಂಯಮ-ನಿಯಮಗಳಿಂದ ಸಾಧಿಸಿದ ಸಾಧುತ್ವವೇ ಇರಬಲ್ಲದು.


"ಆದರೆ ಈ ಆದರ್ಶ ನಮ್ಮಲ್ಲಿ ಬಹಳ ಸಡಿಲಾಗಿದೆ. ವಿವಾಹವಾಗುವ ವರೆಗೆ ಸಂಯಮಾದಿಗಳನ್ನು ಸಾಧಿಸಿಕೊಳ್ಳುವವರೂ ವಿವಾಹಾನಂತರ ತಾವು ಈ ಬಂಧನದಿಂದ ಮುಕ್ತರೆಂದು ತಿಳಿದುಕೊಂಡು ವಾಸನೆಯ ದಾಸರಾಗುತ್ತಾರೆ. ವಿವಾಹವೆಂದರೆ ಲಂಪಟತೆಯ ಅನುಜ್ಞಾಪತ್ರವೆಂದಂತಾಗಿದೆ! ಆದರೆ ನೈತಿಕ ನಿಯಮವನ್ನು ಮೀರಿದಾತ ಲಗ್ನವಾದ ಕೆಲ ದಿನಗಳಲ್ಲೇ ಪ್ರಾಯಶ್ಚಿತ್ತ ಹೊಂದಲೇಬೇಕಾಗುತ್ತದೆ. ನನ್ನ ದಾಂಪತ್ಯ ಜೀವನ ಹದಗೆಟ್ಟಿತು."


ಕಲಹ

"ಜೀವನಕ್ಕೆ ನಾವು ಬೇಸತ್ತೆವು. ಪತ್ನಿ ಉದಾಸಳಾದಳು. ಕೇಳಿದರೆ ತೌರಿನ ನೆನಪಾಗುವುದೆನ್ನುತ್ತಿದ್ದಳು. ನಾನು 'ಸುಳ್ಳು' ಎಂದೆ. ಆಕೆ ಸಿಟ್ಟಾದಳು. ನಾನು ಸ್ವಾರ್ಥಿ ಎಂದಳು. ನಾನು ನಿರ್ದಯಿ ಎಂದಳು. ನನ್ನ ಬಗ್ಗೆ ಅವಳಲ್ಲಿ ಹೇಸಿಕೆ ಹುಟ್ಟಿತು. ಕಾಮತೃಪ್ತಿಯ ತರುವಾಯ ನಮ್ಮ ನಿಜಸ್ವರೂಪ ನಮಗೆ ಗೋಚರವಾಯಿತು. ವಿರೋಧವು ಹೆಚ್ಚೀತೆಂದು ನಾನು ಹೆದರಿದೆ. ಹೆಚ್ಚಬಾರದೆಂದು ಮತ್ತೆ ಕಾಮಕ್ಕೇ ಮೊರೆಹೋದೆ.

"ಆದರೆ ಕಲಹ ಕುಗ್ಗುವ ಬದಲು ಇನ್ನಷ್ಟು ಹೆಚ್ಚಿತು. ಸಣ್ಣ ಸಣ್ಣ ಮಾತಿಗಾಗಿ ಜಗಳ.

ಇಂದಿನ ಮನೆಗಳಲ್ಲಿ ಸರ್ಫ್...





"ನಾನು ಕಾಣಲು ಬಯಸುವ ಹೊಸ ಕ್ರಮ..."

ಎಂದು ಮುಂಬಯಿಯ ಸಮಾಜ ಸೇವಿಕಾ ಶ್ರೀಮತಿ ನೋರೀನ್ ಆಮೋಲಿಕ್ ಹೇಳುತ್ತಾರೆ.

'ನಾನು ಕಾಣಲು ಬಯಸುವ ಹೊಸ ಕ್ರಮ ಮನೆಗಳಿಗೆ ಅನ್ವಯಿಸುತ್ತದೆ.' ಎಂದು ಸಮಾಜ ಸೇವಿಕಾ ಶ್ರೀಮತಿ ನೋರೀನ್ ಅಮೋಲಿಕ್ ಹೇಳುತ್ತಾರೆ. 'ಉದಾಹರಣೆಗೆ ಸರ್ಫನ್ನೆ ತೆಗೆದುಕೊಳ್ಳಿರಿ. ನಾನು ಸಂದರ್ಶಿಸಿದ ಅನೇಕ ಮನೆಗಳಲ್ಲಿ ಅದು ಪ್ರಗತಿಯ ಪ್ರತೀಕವಾಗಿದೆ. ಸೀರೆಗಳು, ಷರ್ಟುಗಳು ಇತ್ಯಾದಿ ಮನೆಯ ಎಲ್ಲ ಬಟ್ಟೆಗಳನ್ನು ಸರ್ಫ್ ಚೆನ್ನಾಗಿ, ಬೆಳ್ಳಗೆ ಒಗೆಯುತ್ತದೆ.' ಆಧುನಿಕ ಗೃಹಿಣಿಯರು ಒಪ್ಪುತ್ತಾರೆ—ಸರ್ಫ್ ಬಟ್ಟೆಗಳಿಗೆ ಅನುಪಮ ಬಿಳುಪು ಬರುವಂತೆ ಒಗೆಯುತ್ತದೆ, ಎಂದು. ನಿಮ್ಮ 'ಮನೆಯಲ್ಲಿಯೂ' ಸರ್ಫನ್ನು ಏಕೆ ಉಪಯೋಗಿಸಬಾರದು?

ಸರ್ಫ್ ನಿಮ್ಮ ಬಟ್ಟೆಗಳಿಗೆ

ಅನುಪಮ ಬಿಳುಪು ಬರುವಂತೆ ಒಗೆಯುತ್ತದೆ

ಹಿಂದುಸ್ಥಾನ್ ಲೀವರ್ ಅವರ ತಯಾರಿಕೆ

SU. 17-X29 KN

ಅದಕ್ಕಿಂತ ಕ್ಷುಲ್ಲಕ ಸುಳ್ಳಿನಿಂದ ಸಾಂತ್ವನ. ಪಶ್ಚಾತ್ತಾಪದ ಪಾಠ. ಕಣ್ಣೀರಿನ ಎರಡು ಹನಿ. ಹೀಗಾಯಿತು ಪರಿಮಾರ್ಜನೆಯ ರೀತಿ. ಸಿಟ್ಟಿನಲ್ಲಿ ಕಣ್ಣು ಕಣ್ಣಿಗೆ ಕೂಡುತ್ತಿದ್ದವು. ಮನಸ್ಸು ನಾಚಿಕೊಳ್ಳುತ್ತಿತ್ತು. ಆಕೆ ನಾನು ಕೂಡಿಯೆ ನಗುತ್ತಿದ್ದೆವು. ಚುಂಬಿಸುತ್ತಿದ್ದವು. ಇಶ್. ನೆನಸಿಕೊಂಡರೂ ಮೈಮೇಲೆ ಮುಳ್ಳೇಳುವುದು. ಎಲ್ಲ ಕೃತ್ರಿಮ! ಜಳ್ಳು. ಆಭಾಸ. ಆದರೆ ಆಗ ಇದಾವುದೂ ಹೊಳೆಯುತ್ತಿರಲಿಲ್ಲ."

ಗಾಡಿ ನಿಂತಿತು. ಯಾರೊ ಹತ್ತಿದರು. ಹತ್ತಿದವರು ಒಂದು ಕಡೆ ಕೂಡುವ ವರೆಗೂ ಆತ ತಡೆದ. ಮತ್ತೆ ತನ್ನ ಮಾತಿನ ಎಳೆ ಹುಡುಕಿಕೊಂಡು ಪ್ರಾರಂಭಿಸಿದ:

"ಈ ಒಳಜಗಳ, ಈ ದ್ರೋಹ ನನ್ನಲ್ಲಿ ಆಶ್ಚರ್ಯ ಉಂಟು ಮಾಡಿತ್ತು. ಆದರೂ ಅದು ಅನಿವಾರ್ಯವಾಗಿತ್ತು. ಯಾಕೆಂದರೆ ಪಾಪದ ಸಹವರ್ತಿಯಾದ ದ್ರೋಹ ಪಾಪದೊಂದಿಗೆ ಬರಲೇ ಬೇಕಷ್ಟೆ? ಪಾಪ! ಹೌದು. ಪಾಪವಲ್ಲದೆ ಇನ್ನೇನು? ಲಗ್ನವಾದ ಒಂದು ತಿಂಗಳಲ್ಲೇ ನನ್ನ ಹೆಂಡತಿ ಗರ್ಭಿಣಿಯಾದಳು. ಆದರೂ ನಮ್ಮ ಪಾಶವೀ ಕೃತ್ಯ ಪೂರ್ವವತ್ ಮುಂದುವರಿಯಿತು.

"ವಿಷಯಾಂತರ ಮಾಡುತ್ತಿದ್ದೇನೆಂದು ನೀವು ತಿಳಿಯಬಹುದು. ಆದರೆ ನಾನು ನನ್ನ ಪತ್ನಿಯ ವಧೆ ಹೇಗೆ ಮಾಡಿದೆ ಎನ್ನುವುದನ್ನೇ ನಾನು ವಿವರಿಸುತ್ತಿದ್ದೇನೆ. ಮೊಕದ್ದಮೆ ನಡೆದಾಗ ವಧೆಯ ಬಗ್ಗೆ ನನ್ನನ್ನು ಪ್ರಶ್ನಿಸಲಾಗಿತ್ತು. ಐದನೇ ಅಕ್ಟೋಬರದಂದು ನಾನು ಅವಳನ್ನು ಕತ್ತಿಯಿಂದ ಇರಿದು ಕೊಂದೆನೆಂಬ ವರ್ತಮಾನ ಅವರಿಗೆ ಗೊತ್ತಿತ್ತು. ಆದರೆ ಆ ಮೊದಲೆ ಎಂದೊ ನಾನು ಅವಳನ್ನು ಕೊಂದಿದ್ದೆನೆಂದು ಅವರಿಗೇನು ಗೊತ್ತು?

"ಇತ್ತೀಚಿನ ಡಾಕ್ಟರರು ಗರ್ಭಿಣಿ ಸ್ತ್ರೀಯೊಂದಿಗೂ ಕೂಡಲು ಅನುಮತಿ ಈಯುತ್ತಾರೆ. ಯಾಕೆ? ಪುರುಷರ ವಾಸನೆಗೆ ಸದಾ ತೃಪ್ತಿ ದೊರೆಯಲೆಂದು! ಪಶುಗಳಲ್ಲಿರುವ ಒಂದು ನಿಯಮಿತತನವೂ ಮನುಷ್ಯರೆನ್ನಿಸಿಕೊಳ್ಳುವವರಲ್ಲಿಲ್ಲವಲ್ಲ! ಮೇಲೆ ಈ ಕೀಳು ಅನುಭವವನ್ನು ಪ್ರೇಮವೆಂದು ಕರೆಯುವರಲ್ಲ! ಮಾನವತೆಯ ಕೊಲೆ ಇದು.

THE
SADVAIDYASALA
(PRIVATE) LTD
NANJANGUD

Mysore Mallik
KERCHIEF PERFUME

"ಸತ್ಯ ಮತ್ತು ಸದ್ಭಾವಗಳ ಶೋಧದಲ್ಲಿ ಪುರುಷನ ಬೆಂಬಲಕ್ಕೆ ಬರುವ ಸ್ತ್ರೀ ಅವನ ಶತ್ರುವಾಗುತ್ತಾಳೆ. ಆಗ ಮಾನವತೆಗೆ ತಡೆಯುಂಟಾಗುತ್ತದೆ. ಹೆಣ್ಣಿನಿಂದಲೇ ತಡೆ... ಹೌದು!.."

ಆತ ಜೋರಾಗಿ ಸಿಗರೆಟ್ ಎಳೆದ. "ಸ್ತ್ರೀಗೆ ಬೇಕಾದಷ್ಟು ಶಿಕ್ಷಣ ಕೊಡಿರಿ. ಸಮಾನ ಅಧಿಕಾರಿಗಳನ್ನು ಕೊಡಿರಿ. ಏನೂ ಪ್ರಯೋಜನವಾಗದು. ಎಲ್ಲಿಯ ವರೆಗೆ ಹೆಣ್ಣು ಗಂಡಸಿನ ವಾಸನೆಯ ತೃಪ್ತಿಯ ವಸ್ತು ಎಂಬ ಭಾವ ಅಳಿಯುವುದಿಲ್ಲವೋ ಅಲ್ಲಿಯವರೆಗೆ ಸುಧಾರಣೆಯಾಗದು. ಈ ಸತ್ಯ ಹೆಂಗಸಿಗೆ ಗೊತ್ತಿರುವುದರಿಂದ ಪುರುಷರನ್ನು ಮುಗ್ಧಗೊಳಿಸುವುದೇ ಅವಳ ಜೀವನದ ಉದ್ದೇಶವಾಗುವುದು. ಲಗ್ನಾನಂತರವೂ ಗಂಡನನ್ನು ಮುಷ್ಟಿಯಲ್ಲಿಟ್ಟುಕೊಳ್ಳಲು ಹೆಂಗಸು ಇದೇ ಪ್ರಯತ್ನದಲ್ಲಿಯೇ ಇರುವಳು.

"ತಾಯಿಯಾದ ಮೇಲೆ ಕೂಸಿನ ಬಾಯಲ್ಲಿ ಮೊಲೆ ಇಡಲಿಕ್ಕೆ ಹೆಣ್ಣು ಕಲಿತಮೇಲೆ ಉಪರ್ಯುಕ್ತ ಭಾವನೆ ಕೆಲ ಮಟ್ಟಿಗೆ ಕಡಿಮೆಯಾಗುವುದೇನೊ ನಿಜ. ಆದರೆ ಇಲ್ಲಿಯೂ ಡಾಕ್ಟರರು ವಿಘ್ನವನ್ನು ತಂದೊಡ್ಡುತ್ತಾರೆ. ನನ್ನ ಹೆಂಡತಿಯೂ ಇದನ್ನೇ ಮಾಡಬಯಸಿದಳು. ಮೂರು ಮಕ್ಕಳ ಬಾಯಲ್ಲಿ ಮೊಲೆಯನ್ನು ಇಟ್ಟಳು. ಆದರೆ ಮೊದಲ ಬಾರಿ ಗರ್ಭಿಣಿಯಾದ ಅವಳನ್ನು ನೋಡಲಿಕ್ಕೆ ಬಂದ ಡಾಕ್ಟರ ಅವಳನ್ನು ಬತ್ತಲೆ ಮಾಡಿ ಇಡೀ ಶರೀರ ಮುಟ್ಟಿ ಪರೀಕ್ಷಿಸಿದ. ಅದಕ್ಕಾಗಿ ನಾನು ಅವನಿಗೆ ಫೀ ಕೊಟ್ಟೆ. ಕೂಸಿಗೆ ಮೊಲೆ ಹಾಲು ಕುಡಿಸಬಾರದಾಗಿ ಸೂಚನೆ ಇತ್ತ. ಇದರ ಪರಿಣಾಮವೇನಾಯಿತೆಂದರೆ ಗರ್ಭಾಧಾನವಿಲ್ಲದಾಗ ಮತ್ತು ಮೊಲೆ ಕುಡಿಸದಿದ್ದಾಗ ಅವಳ ಶೃಂಗಾರ ಹೆಚ್ಚೆಚ್ಚು ಬಲಿಯುತ್ತಿತ್ತು. ಅದನ್ನು ಕಂಡು ನನ್ನ ದ್ವೇಷ ಭಾವನೆ ಕೂಡ ಅಷ್ಟೇ ವೇಗದಿಂದ ಹೆಚ್ಚುತಿತ್ತು.

ಮಾತೃಕರ್ತವ್ಯದಿಂದ ಇಷ್ಟು ಸುಲಭವಾಗಿ ಮುಕ್ತಳಾಗಬಲ್ಲ ಈಕೆ ತನ್ನ ಪತ್ನೀಧರ್ಮಕ್ಕೂ ಮೋಸ ಮಾಡಲು ಹಿಂಜರಿಯಲಾರಳೆಂಬ ಭಾವನೆ, ಭೀತಿ ನನ್ನಲ್ಲಿ ಹುಟ್ಟಿತು.

ಐದು ಮಕ್ಕಳು

"ಎಂಟು ವರ್ಷಗಳಲ್ಲಿ ನಮಗೆ ಐದು ಮಕ್ಕಳಾದವು."

"ನಿಮ್ಮ ಮಕ್ಕಳು ಈಗೆಲ್ಲಿರುತ್ತಾರೆ?"

"ಕೇಳಿರಿ, ಅದನ್ನೂ ಹೇಳುವೆ. ಮಕ್ಕಳೆಂದರೆ ದೈವೀದಾನವೆಂದು ಹೇಳುತ್ತಾರೆ. ಮಕ್ಕಳ ಹೊರತು ಮನೆ ಶೂನ್ಯವೆನ್ನುತ್ತಾರೆ. ಆದರೆ ಅದೆಲ್ಲವೂ ಸುಳ್ಳು. ಹಿಂದೆಂದೊ ಈ ಮಾತಿನಲ್ಲಿ ತಥ್ಯವಿದ್ದಿರಬಹುದು. ಆದರೆ ಇಂದಂತೂ ಇದರಲ್ಲೇನೂ ಹುರುಳಿಲ್ಲದಂತಾಗಿದೆ. ಉಚ್ಚ ವರ್ಗದ ಮಾತೆಯರನ್ನು ಕೇಳಿ. ಮಕ್ಕಳು ಸತ್ತರೆ ಶೋಕವಾಗಬಾರದೆಂದೇ ಅವರು ಮಕ್ಕಳನ್ನು ಹೆಚ್ಚು ಹಚ್ಚಿಕೊಳ್ಳುವುದಿಲ್ಲ. ಮೊಲೆ ಕೂಡ ಕುಡಿಸುವುದಿಲ್ಲ. ಶಿಶುವಿನ ಪುಟ್ಟ ಪುಟ್ಟ ಅಂಗಗಳ ಸ್ಪರ್ಶಸುಖವೂ ಅವುಗಳ ಬೇನೆ, ಅವುಗಳ ಸಾವು—ಇವುಗಳ ಕಲ್ಪನೆಯಿಂದ ಬೇಡವೆನಿಸುತ್ತದೆ.

"ಮಕ್ಕಳಿಂದ ಮನೆ ಬೆಳಗುವ ಬದಲು ನಮ್ಮ ಕಲಹವೇ ಬೆಳೆಯಿತು. ಎಲ್ಲರಿಗಿಂತ ಸಣ್ಣವಳಾದ ಲೀಸಾಳನ್ನು ನಾನು ಪ್ರೀತಿಸುತ್ತಿದ್ದೆ. ಹಿರಿಯ ಹುಡುಗ ವಾಸ್ಯಾನನ್ನು ಆಕೆ ಬಹಳ ಪ್ರೀತಿಸುತ್ತಿದ್ದಳು. ಈ ಹುಡುಗರೇ ನಮ್ಮ ಕಲಹದ ಅಸ್ತ್ರಗಳಾದವು. ಬೆಳೆದಂತೆ ಅವೂ ನಮ್ಮ ಕದನದಲ್ಲಿ ಭಾಗಿಯಾದವು. ಕೆಲವರು ನನ್ನ ಕಡೆ, ಕೆಲವರು ಅವಳ ಕಡೆ.

ಕೊನೆಗೆ ಯಾರೂ ಯಾರೊಂದಿಗೂ ಯಾವ ಮಾತಿನಲ್ಲೂ ಸಹಮತದಿಂದ ವರ್ತಿಸಲಾರದ ಸ್ಥಿತಿ ನಮ್ಮಲ್ಲಿ ಉಂಟಾಯಿತು. ಆದರೆ ಈ ಜಗಳದ ಪರಿಸಮಾಪ್ತಿ ಮತ್ತೆ ಪ್ರೇಮಾಲಾಪದಿಂದೇ ಆಗುತ್ತಿದ್ದದ್ದೂ ಇನ್ನೂ ಆಶ್ಚರ್ಯ. ಪ್ರೇಮ, ವಿರೋಧ—ಎರಡೂ ಚಕ್ರದಂತೆ ತಿರುಗುತ್ತಿದ್ದವು. ಎರಡೂ ಒಂದೇ ಪಾಶವೀ ಭಾವನೆಯ ಎರಡು ಅಂಗಗಳು. ಆದರೆ ಇದು ಆಗ ನಮಗೆ ತಿಳಿಯಲಿಲ್ಲ. ತಿಳಿದಿದ್ದರೆ ಜೀವನ ದುಷ್ಕರವಾ-

ಗುತ್ತಿತ್ತು.

"ನನ್ನ ಜೀವನದಲ್ಲಿ ಆ ದುಷ್ಕಾಂಡ ನಡೆಯುತ್ತಿದ್ದಿಲ್ಲವಾದರೆ ನಾನೂ ಎಲ್ಲರಂತೆ ಸಾಯುವಾಗ ಸಮಾಧಾನದ ಉಸಿರೆಳೆಯುತ್ತಿದ್ದೆನೇನೊ!

ನಗರದಲ್ಲಿ

"ಮಕ್ಕಳ ಶಿಕ್ಷಣಕ್ಕಾಗಿ ಹಳ್ಳಿಯನ್ನು ಬಿಟ್ಟು ನಾವು ನಗರಕ್ಕೆ ಹೋದೆವು." ಇಷ್ಟು ಹೇಳಿದವನೆ ಆತ ಬಿಕ್ಕಲಾರಂಭಿಸಿದ. ಮತ್ತೆ ಅದನ್ನು ತಡೆದು "ಗಂಟೆ ಎಷ್ಟಾಗಿದೆ?" ಎಂದು ಕೇಳಿದ.

"ಎರಡು" ನಾನಂದೆ.

"ನೀವು ದಣಿದಿರಬಹುದು."

"ಆದರೆ ನೀವು ಮಾತ್ರ ಖಂಡಿತವಾಗಿ ಆಯಾಸಗೊಂಡಿದ್ದೀರಿ," ನಾನು.

"ಹೌದು. ನನ್ನ ಕಂಠ ಬಿಗಿಯುತ್ತಿದೆ. ಬಾಯಿ ಆರುತ್ತಿದೆ. ಕ್ಷಮಿಸಿ, ನಾನು ಸ್ವಲ್ಪ ನೀರು ಕುಡಿದು ಬರುತ್ತೇನೆ."

ನಾನು ಎಷ್ಟು ವಿಚಾರಮಗ್ನನಾಗಿದ್ದೆನೆಂದರೆ ಆತ ನೀರು ಕುಡಿದು ಬಂದದ್ದು ನನಗೆ ಗೊತ್ತೇ ಆಗಲಿಲ್ಲ. ಆತ ಮುಂದುವರಿಸಿದ.

"ನೂರಾರು ವರ್ಷ ನಗರದಲ್ಲಿ ನಿಂತರೂ ತಾನು ಜೀವನ್ಮೃತನಾದದ್ದು ಯಾವಾಗ ಎಂಬುದನ್ನು ಯಾರೂ ತಿಳಿಯಲಾರರು. ಯೋಚಿಸಿ ತಿಳಿದುಕೊಳ್ಳಬೇಕೆಂದರೆ ಸಮಯವೇ ಇರುವುದಿಲ್ಲ. ಉಪಜೀವನದ ಕೆಲಸ, ಸಾಮಾಜಿಕ ಕಾರ್ಯಕಲಾಪ, ಕೌಟುಂಬಿಕ ಚಿಂತೆ, ವಿಚಾರ, ಮಕ್ಕಳ ಶಿಕ್ಷಣ, ಇಂದು ಯಾರಾದರೂ ಮನೆಗೆ ಬರುವವರಿರುತ್ತಾರೆ ನಾಳೆ ಯಾರದಾದರೂ ಮನೆಗೆ ಹೋಗುವುದಿರುತ್ತದೆ, ಹೀಗೆ ಒಂದಿಲ್ಲೊಂದು ಕೆಲಸ ಇದ್ದೆ ಇರುತ್ತದೆ.

"ಒಂದು ವರ್ಷ ಕಳೆದಿರಬೇಕು. ನನ್ನ ಪತ್ನಿಯ ಆರೋಗ್ಯ ಕೆಟ್ಟಿತು. ಸಂತಾನೋತ್ಪತ್ತಿಯನ್ನು ತಡೆಯಬೇಕೆಂದು ಡಾಕ್ಟರರು ಸಲಹೆ ಇತ್ತರು. ನನ್ನ ವಿರೋಧ ವಿಫಲವಾಯಿತು. ಫಲವಾಗಿ ನನ್ನ ಜೀವನ ಇನ್ನಷ್ಟು ಬರಿದಾಯಿತು.

"ಮತ್ತೆರಡು ವರ್ಷಗಳು ಕಳೆದವು. ಡಾಕ್ಟರರ ಹೇಳಿಕೆ ನಿಜವಾಗತೊಡಗಿತು. ನನ್ನ ಹೆಂಡತಿಯ ಆರೋಗ್ಯ ಸುಧಾರಿಸತೊಡಗಿತು. ಬೆಡಗು ಹೆಚ್ಚತೊಡಗಿತು. ಮೂವತ್ತು ವರ್ಷದ ತುಂಬು ಪ್ರೌಢೆಯ, ಸಂತಾನೋತ್ಪತ್ತಿ ನಿಲ್ಲಿಸಿದಾಗಿನ ಉನ್ಮತ್ತ ಸೌಂದರ್ಯ ಅದಾಗಿತ್ತು. ನಾನು ಹುಚ್ಚಾದೆ. ಹೆದರಿದೆ!"

ಆತ ಕಿಟಕಿಯ ಬಳಿ ಹೋಗಿ ಕೂತ. "ಕ್ಷಮಿಸಿ" ಎಂದು ಸಾವಕಾಶವಾಗಿ ನುಡಿದ. ಐದು ನಿಮಿಷ ಮೌನದಿಂದಿದ್ದು ಒಂದು ದೀರ್ಘ ಶ್ವಾಸವನ್ನೆಳೆದುಕೊಂಡು ಬಂದು ಮರಳಿ ತನ್ನ ಮೊದಲಿನ ಜಾಗದಲ್ಲಿ ಕೂತ. ಕಣ್ಣಲ್ಲಿ ಕರುಣೆ ತೇಲುತ್ತಿತ್ತು. ತುಟಿ ಅಲುಗುತ್ತಿದ್ದವು. ಅಳುತ್ತಿರುವಂತೆ ತೋರಿತು. "ದಣಿದಿದ್ದೇನೆ. ಆದರೂ ಎಲ್ಲವನ್ನು ಹೇಳಿ ಬಿಡುವೆ. ಬೆಳಗಾಗಲಿಕ್ಕೆ ಇನ್ನೂ ತುಂಬ ಸಮಯವಿದೆ."

ಸಿಗರೇಟು ಹೊತ್ತಿಸಿ ಪುನಃ ಪ್ರಾರಂಭಿಸಿದ. "ಅವಳು ಸ್ಥೂಲಳಾಗತೊಡಗಿದ್ದಳು. ಅವಳ ಚರ್ಯೆಯಲ್ಲಿ ಗ್ಲಾನಿಯಳಿದು ಉಲ್ಲಸಿತ ಭಾವ ಮೆರೆಯುತ್ತಿತ್ತು. ಅವಳು ಈಗ ಹಿಂದೆಂದೂ ದೊರಕಿಸದ ಪ್ರೀತಿಯನ್ನು ಅಪೇಕ್ಷಿಸುತ್ತಿದ್ದಳು. ಕ್ರುದ್ಧ ಗಂಡನ ಪ್ರೀತಿಯನ್ನಲ್ಲ; ಶುದ್ಧ, ಸ್ವಚ್ಛ, ನವೀನ ಪ್ರೇಮ! ಮಕ್ಕಳಿಗಿಂತ ಮನೋರಂಜನೆಯತ್ತ ಅವಳ ಮನಸ್ಸು ಹೆಚ್ಚು ಆಕರ್ಷಿತವಾಗುತ್ತಿತ್ತು. ಅವಳು ಪುನಃ ಪಿಯಾನೊ ಬಾರಿಸತೊಡಗಿದಳು. ಅಲ್ಲಿಗೇ ನನ್ನ ಸತ್ಯಾನಾಶದ ಶ್ರೀಗಣೇಶವಾಯಿತು."

ಆತ ಕಿಡಿಕಿಯತ್ತ ಮುಖ ಹೊರಳಿಸಿದ. ಆತನ ಮುಂದೆ ಸ್ಮೃತಿ ಮೈತಾಳಿರಬೇಕು. ನನ್ನತ್ತ ಹೊರಳಿದಾಗ ದಣಿವು ಕಣ್ಣಲ್ಲಿ ಸ್ಪಷ್ಟವಾಗಿ ವ್ಯಕ್ತವಾಗಿತ್ತು.

ತ್ರುಖಾಚೆವಸ್ಕಿ

"ಹುಂ. ಅಂತೂ ಈ ರೀತಿ ಆ ಮನುಷ್ಯನ ಆಗಮನವಾಯಿತು." ಭಾವೋದ್ರಿಕ್ತನಾದ ಅವನ ಮುಖದಿಂದ ಮತ್ತೊಮ್ಮೆ ಆ ವಿಚಿತ್ರ ಶಬ್ದವಾ



ಓ ಡಿ ಕೊಲೋನ್‌ನಿಂದ ಕೂಡಿದ್ದು, ಬಂಗಾರ ಬಣ್ಣದ ಕಾಗದದಿಂದ (ಫೋಯಿಲ್) ಪ್ಯಾಕ್ ಮಾಡಲ್ಪಟ್ಟಿರುತ್ತದೆ.


TESY-14

ಯಿತು. ಪಾಜ್ನಿಶೇವನು ಆ ಮೂರನೆ ವ್ಯಕ್ತಿಯ ಸ್ಮರಣೆಯಿಂದ ಎಷ್ಟೊಂದು ಯಾತನೆಗೊಳಗಾಗಿದ್ದನೆಂಬುದು ಅವನ ಮುಖಭಾವದಿಂದ ಸ್ಪಷ್ಟವಾಗುತ್ತಿತ್ತು. ಆದರೂ ಪ್ರಯತ್ನಪೂರ್ವಕ ಆತ ಆವೇಶವನ್ನು ನಿಯಂತ್ರಿಸಿ ಪ್ರಾರಂಭಿಸಿದ—

"ಆತ ಅಧಮನಿದ್ದ. ನನ್ನ ಜೀವನದ ದುರ್ಘಟನೆಗೆ ಕಾರಣನಾದನೆಂಬುದಕ್ಕಾಗಿ ಅಲ್ಲ. ಆದರೂ ಆತ ಅಧಮನೇ ಇದ್ದ. ಅವನನ್ನು ದೂಷಿಸುವುದರಿಂದಾದರೂ ಏನು ಪ್ರಯೋಜನ? ಎಲ್ಲ ತಪ್ಪೇನೂ ಅವನೊಬ್ಬನದೇ ಇರಲಿಲ್ಲ. ಅವನಲ್ಲದಿದ್ದರೆ ಅವನ ಸ್ಥಳದಲ್ಲಿ ಮತ್ತೊಬ್ಬನಾದರೂ ಬಂದೇಬರಬಹುದಿತ್ತು.

"ಆತ ಸಂಗೀತಗಾರ. ಪಿಯಾನೊ ಮತ್ತು ಪಿಟೀಲುಗಳನ್ನು ಉತ್ಕೃಷ್ಟವಾಗಿ ಬಾರಿಸುತ್ತಿದ್ದ. ಆ ಪ್ರಾವೀಣ್ಯವೇ ನನ್ನ ದುಷ್ಕಾಂಡದ ನಾಂದಿಯಾಯಿತು. ಮೊಕದ್ದಮೆ ನಡೆದಾಗ ಕ್ರೋಧದ ಭರದಲ್ಲಿ ನಾನು ಕೊಲೆಗೈದಿದ್ದೆನೆಂದು ಸಾಧಿಸಲಾಗಿತ್ತು. ಅದೂ ಸುಳ್ಳಿರಲಿಲ್ಲ. ನ್ಯಾಯಾಲಯದ ನಿರ್ಣಯ ಆತ ನನ್ನ ಅಭಿಮಾನವನ್ನು ಅಪಹರಿಸಿದ್ದರಿಂದ ಕ್ರುದ್ಧನಾಗಿ ನಾನು ಕೊಲೆ ಮಾಡಿದ್ದೆನೆಂದು ಆಯಿತು. ನಾನು ಮುಕ್ತನಾದೆ. ಕೋರ್ಟಿಗೆ ನಾನು ನಿಜವಾದ ಕಾರಣ 'ತಾತ್ಕಾಲಿಕ ಕೋಪ'ವಲ್ಲ. ಬಹು ಹಿಂದಿನಿಂದಲೇ ಬೆಳೆದು ಬಂದ 'ಅಂತಃಕಲಹವೆಂ'ದು ಹೇಳಲೆತ್ನಿಸಿದೆ. ಆದರೆ ನನ್ನ ಮಾತನ್ನು ಯಾರೂ ಕೇಳಲಿಲ್ಲ. ನನ್ನ ಹೆಂಡತಿಯು ಸಚ್ಛೀಲಳೆಂದು ಸಿದ್ಧಮಾಡಲು ನಾನು ಹೀಗೆ ಹೇಳುತ್ತೇನೆಂದೇ ನನ್ನ ಮಾತಿಗೆ ಅವರು ಅರ್ಥ ಹಚ್ಚಿದರು.

"ಅವನ ಹೆಸರು ತ್ರುಖಾಚೆವಸ್ಕಿ ಎಂದಿತ್ತು. ಮೊದಲಿನಿಂದಲೂ ನನಗೆ ಅವನ ಪರಿಚಯವಿತ್ತು. ಅದೇ ಈಗ ಬೆಳೆಯುತ್ತಿತ್ತು. ಮೊದಲ ಭೆಟ್ಟಿಯಲ್ಲೇ ನನಗೆ ಅವನ ಬಗ್ಗೆ ಕೆಟ್ಟ ಭಾವನೆ



ಹುಟ್ಟಿತ್ತು. ನಾನು ಔಪಚಾರಿಕವಾಗಿ ಮಾತಾಡಿ ಮುಗಿಸಿದ್ದೆ. ಹೆಂಡತಿಗೆ ಅವನ ಪರಿಚಯ ಮಾಡಿಕೊಟ್ಟೆ. ಸಂಗೀತದ ಮಾತು ಬಂತು. ಆತ ಹೇಳಿದ, 'ನಾನು ಕಲಿಸುತ್ತೇನೆ.' ಈಕೆ ಒಪ್ಪಿದಳು. ಅದೇ ದಿನ ಸಂಜೆ ಆತ ಪಿಟೀಲು ಹಿಡಿದುಕೊಂಡು ಬಂದ. ಆತ ನನ್ನ ಪತ್ನಿಗೆ ಶಿಕ್ಷಣ ಕೊಡಲು ದಿನಾಲೂ ಬರತೊಡಗಿದ. ಸ್ನೇಹ ಬೆಳೆಯಿತು.

"ನಾನು ಮಾತ್ರ ಅವನನ್ನು ಕಂಡಕೂಡಲೇ ಹೆದರುತ್ತಿದ್ದೆ. ಒಂದು ದಿನ ನಾನು ಹೊರಗಿನಿಂದ ಬಂದಾಗ ಡ್ರಾಯಿಂಗ್ ರೂಮಿನಲ್ಲಿ ಆತನ ಓವರ್‌ಕೋಟ್ ಇದ್ದದ್ದು ಕಾಣಿಸಿತು. ಕೇಳಿದಾಗ ಆತ ಬಂದಿರುವನೆಂದು ತಿಳಿಯಿತು. ಕೋಣೆಯತ್ತ ಹೋದೆ. ಪಿಯಾನೊ ಬಾರಿಸುತ್ತಿದ್ದುದು ಕೇಳಿಸಿತು. ಅದು ಕೇವಲ ಮರೆಮಾಚುವ ಸಾಧನವಾಗಿರಬೇಕು.... ಮಾತುಗಳು ಕೇಳಿಬರುತ್ತಿದ್ದರೂ ಶಬ್ದಗಳ ಅರ್ಥವಾಗುತ್ತಿರಲಿಲ್ಲ ಪಿಯಾನಿನ ಸದ್ದಿನಲ್ಲಿ. ದ್ವೇಷದಿಂದ ನಾನು ಉರಿದೆದ್ದೆ. ಅಂದಿನ ನನ್ನ ಪಶುವೃತ್ತಿಯನ್ನು ನೆನೆದು ಇಂದಿಗೂ ನಾನು ನಡುಗುತ್ತೇನೆ. ಆಗ ಕ್ಷಣಮಾತ್ರ ನನ್ನ ಹೃದಯಕ್ರಿಯೆ ನಿಂತಂತೆನಿಸಿತು. ಮತ್ತೆ ಜೋರಾಗಿ ಉಸಿರಾಡಿಸಲಾರಂಭಿಸಿದೆ. ಚಿತ್ತಗ್ಲಾನಿಯಿಂದ ತುಂಬಿ ಹೋಗಿತ್ತು."

"ಮರುದಿನ ನಾನು ಆಕೆಯೊಂದಿಗೆ ಮಾತಾಡಲಿಲ್ಲ. ಸಂಜೆ ಆಕೆ ನನ್ನ ಹತ್ತರ ಬಂದು ಕೂತಳು. ನನ್ನ ಹೆಗಲಮೇಲೆ ತಲೆಯಾನಿಸಿದಳು. ಆದರೆ ನಾನು ದೂರ ಸರಿದೆ. ನನಗೆ ಅವಳ ಸ್ಪರ್ಶವೂ ಬೇಡವಾಗಿತ್ತು."

"'ನಿಮಗೆ ಇಷ್ಟು ಸಿಟ್ಟು ಬರುವುದಾದರೆ ಪ್ರತಿ ರವಿವಾರ ನಾನು ಪಿಟೀಲು ಕಲಿಯಲಾರೆ.'

"'ನಾನೇಕೆ ಬೇಡವೆನ್ನಲಿ? ನಾನು ನಿನ್ನನ್ನು ಅಭಿನಂದಿಸಬಯಸುತ್ತೇನೆ.'

"'ಎಂಥಾ ಮಾತು ಆಡುತ್ತೀರಿ! ನಿಮ್ಮ ಸಂದೇಹ ನಿರಾಧಾರವೆಂದು ನಾನು ಪ್ರಮಾಣ ಪೂರ್ವಕ ಹೇಳುತ್ತೇನೆ.'

"'ದಯವಿಟ್ಟು ದೂರ ಸರಿ ಮಹಾರಾಯಳೆ. ನಿನಗಲ್ಲದಿದ್ದರೂ ನನಗೆ ಮನೆತನದ ಗೌರವ ಹೆಚ್ಚು ಪ್ರಿಯವಾಗಿದೆ.'

"'ಅಷ್ಟು ನಾನು ಅಯೋಗ್ಯಳೆಂದು ಮನವರಿಕೆ ಮಾಡಿಕೊಂಡಿರುವಿರಾದರೆ ನನ್ನನ್ನು ಹೊರ ದೂಡಿರಿ. ನಿಮ್ಮಂಥವರೊಂದಿಗೆ ನಾನೇ ಏನು ಒಬ್ಬ ದೇವತೆಗೂ ಸಂಸಾರ ಮಾಡುವುದು ಸುಲಭವಲ್ಲ.'

"'ನನ್ನ ಅವಮರ್ಯಾದೆ ಎಷ್ಟು ಸಾಧ್ಯವೊ ಅಷ್ಟು ಮಾಡು. ಎಲ್ಲ ದೋಷ ನನ್ನದೇ ಎಂದು ಸಿದ್ಧಮಾಡು.'

"ಕ್ರೋಧಾವಿಷ್ಟನಾಗಿ ನಾನು ಪೇಪರವೇಟನ್ನೆತ್ತಿ ಅವಳತ್ತ ಬೀಸಾಡಿದೆ. ಹೇಗೊ ತಪ್ಪಿಸಿಕೊಂಡಳು. ನಾನು ಮೇಜಿನ ಮೇಲಿನ ವಸ್ತುಗಳನ್ನೆಲ್ಲ ಚಲ್ಲಾಪಿಲ್ಲಿಯಾಗಿ ಬೀಸಾಡಿದೆ. ಅದುವರೆಗೆ ಅವಳು ನಿಶ್ಚಲಳಾಗಿ ಅಲ್ಲಿಯೇ ನಿಂತಿದ್ದಳು. ನಾನು ಚೀರಿಕೊಂಡೆ, 'ನನ್ನ ಕಣ್ಮುಂದಿಂದ ಹೋಗು. ಹೊರಗೆ ಹೋಗು.' ಆಕೆ ಹೋದಳು. ಚಕಾರ ಶಬ್ದವೆತ್ತದೆ ಹೋದಳು. ಕೆಲ ಹೊತ್ತಿನ ಮೇಲೆ ನನ್ನ ತಲೆ ಶಾಂತವಾಯಿತು.

"ಹಿಂದಿನಂತೆ ಈಗಲೂ ನಮ್ಮಲ್ಲಿ ಮತ್ತೆ ಒಪ್ಪಂದವಾಯಿತು. ನನ್ನ ಸಂದೇಹ ನಿರಾಧಾರವೆಂದು ನಾನು ಒಪ್ಪಿಕೊಂಡೆ. ಸಂಗೀತ ಒಂದನ್ನು ಬಿಟ್ಟರೆ ಬೇರಾವ ಬಗೆಯಲ್ಲೂ ತ್ರುಖಾಚೆವಸ್ಕಿಯಲ್ಲಿ ಆಸ್ಥೆವಹಿಸಿಲ್ಲವೆಂದು ಅವಳೂ ಪ್ರಮಾಣಪೂರ್ವಕ ಹೇಳಿದಳು. ಮರು ರವಿವಾರ ಹಾಡಿನ ಕಾರ್ಯಕ್ರಮ ನಿಶ್ಚಿತವಾಯಿತು. ಮಿತ್ರಪರಿವಾರಕ್ಕೆ ಆಮಂತ್ರಣ ಕಳಿಸಿಯಾಯಿತು.

"ರವಿವಾರ ರಾತ್ರಿ ಭೋಜನಾನಂತರ ಸಂಗೀತ ಕಾರ್ಯಕ್ರಮ ಪ್ರಾರಂಭವಾಯಿತು. ತ್ರುಖಾಚೆವಸ್ಕಿ ಮತ್ತು ನನ್ನ ಪತ್ನಿ ಸೇರಿ ಪಿಯಾನೊ ಮೇಲೆ ಬಿಥೋವೆನ್ ಕೃತ ಕ್ರಾಯ್‌ತ್ಸರ್ ಸೊನಾಟಾ ಗೀತವನ್ನು ಬಾರಿಸಿದರು. ಎಂಥ ಭಯಾನಕ ರಾಗವದು! ಸಭ್ಯ ಸಮಾಜದ ಅರ್ಧನಗ್ನ ಸ್ತ್ರೀಯರ ನಡುವೆ



ಅದನ್ನು ಬಾರಿಸಲೇಬಾರದು. ನನ್ನನ್ನು ಕೇಳಿದರೆ ಸಂಗೀತವಿರಲೇಬಾರದು. ಏನೊ ಸಂದರ್ಭ-ವಶಾತ್ ಸಂಗೀತ ಅಗತ್ಯವೆನಿಸಬಹುದಾದರೂ ಮನೋರಂಜನೆಗಾಗಿ ಇದನ್ನು ಸಾಧನೆ ಎಂದು ತಿಳಿಯುವುದು ಘಾತಕವೆ ಸರಿ.

"ನನ್ನ ಪತ್ನಿ ತನ್ಮಯಳಾಗಿದ್ದಳು. ಅವನನ್ನು ಕಂಡು ತನ್ಮಯತೆಯಿಂದ ಕಿರುನಗೆ ಬೀರಿದಳು. ಆದರೆ ಇದು ಸಂಗೀತ-ಸಹಯೋಗಿಗಳ ನಡುವಿನ ಸಾಮಾನ್ಯ ಅಭಿನಯ ಮಾತ್ರವೆಂದು ನಾನು ತಿಳಿದೆ.

"ಎರಡೇ ದಿನಗಳಲ್ಲಿ ನಾನು ಜಿಮೆಸ್ಟೊವ್‌ಗೆ ಸಮ್ಮೇಳನಕ್ಕೆ ಹೋಗಬೇಕಿತ್ತು. ಇದನ್ನು ಕೇಳಿ ತ್ರುಖಾಚೆವಸ್ಕಿ ಹೇಳಿದ, 'ಮಾಸ್ಕೊಕ್ಕೆ ಮರಳಿ ಬಂದಮೇಲೆ ಪುನಃ ಭೆಟ್ಟಿಯಾಗುವೆ.' ನಾನಿಲ್ಲದಾಗ ಈತ ನನ್ನ ಮನೆಗೆ ಬರುವುದಿಲ್ಲವೆಂದು ಖಾತ್ರಿಯಾಯಿತು, ನಾನು ಪ್ರಸನ್ನನಾದೆ. ನನ್ನ ಪತ್ನಿಗೂ ಕೊನೆಯ ನಮಸ್ಕಾರ ಹೇಳಿ ಆತ ಹೋದ.

ಸಮ್ಮೇಳನದಿಂದ ಮರಳಿ ಬಂದೆ

"ಹೊರಡುವಾಗ ಆನಂದದಿಂದ ಹೆಂಡತಿಗೆ 'ಹೋಗಿಬರುವೆ' ನೆಂದು ಹೇಳಿದ್ದೆ. ಮರು-ದಿನವೆ ಅವಳ ಪತ್ರವು ಬಂತು. ಕುಶಲ ಸಮಾಚಾರ ಬರೆದಾದ ಮೇಲೆ ಆಕೆ 'ತ್ರುಖಾಚೆವಸ್ಕಿ ಬಂದು ಒಂದು ಹೊಸ ರಾಗವನ್ನು ಕಲಿಸಿಹೋದನೆ'ಂದು ಬರೆದಿದ್ದಳು. ಮತು ಆತ ಮತ್ತೆ ಬರುವುದಾಗಿ ಹೇಳಿದರೂ ತಾನು ಬೇಡವೆಂದು ಹೇಳಿದ್ದನ್ನೂ ಬರೆದಿದ್ದಳು. ಕೆಲಸದ ಗದ್ದಲದಲ್ಲಿ ಪತ್ರವನ್ನು ಜೇಬಿಗೆ ಸೇರಿಸಿ ಮಲಗುವ ಮುಂಚೆ ಮತ್ತೊಮ್ಮೆ ಓದಿದೆ.

"ಅವನ ಬರವಿನ ಸುದ್ದಿ ನನ್ನಲ್ಲಿ ಮತ್ತೆ ದ್ವೇಷವನ್ನು ಹೊತ್ತಿಸಿತು. ಆದರೂ ಮನಸ್ಸನ್ನು ಸ್ತಿಮಿತಗೊಳಿಸಿ, 'ಅಂಥದೇನಾದರೂ ಇದ್ದರೆ ಆಕೆ ಈ ವಿಷಯ ಬರೆದು ತಿಳಿಸುತ್ತಿದ್ದಳೇಕೆ?' ಎಂದೂ ಯೋಚಿಸಿದೆ.

"ನಿದ್ದೆ ಬಂತು. ಆದರೆ ನಡುವೆ ಒಮ್ಮೆಲೆ ಎಚ್ಚ

ರಾಯಿತು. ನನ್ನ ಕಣ್ಮುಂದೆ ಅವರಿಬ್ಬರ ಪ್ರೇಮಾಲಾಪದ ಚಿತ್ರಗಳೇ ಕುಣಿಯಲಾರಂಭಿಸಿದವು. ತರಹತರಹದ ವಿಚಾರಗಳು ತಲೆಯಲ್ಲಿ ಸುಳಿಯಲಾರಂಭಿಸಿದವು. ನನ್ನ ಸಂದೇಹ ಸುಳ್ಳೆಂದೂ ಒಬ್ಬ ಗೃಹಿಣಿಯಾದ ನನ್ನ ಪತ್ನಿ ಹೀಗೆ ವರ್ತಿಸಲಾರಳೆಂದೂ ನನಗೆ ಹೇಳಿಕೊಂಡೆ. ಮತ್ತೊಮ್ಮೆ ಕ್ರ್ಯಾಯ್ಟ್ಸರ್ ಸೋನಾಟಾದ ನೆನಪಾಯಿತು. ಅವರ ಹಾವಭಾವಗಳು ಕಣ್ಮುಂದೆ ಬಂದವು. ನನ್ನ ಮನಸ್ಸು ವಿಕೃತವಾಯಿತು. ಪರಿಷತ್ತಿಗೆ ಸೂಚನೆಯಿತ್ತು ನಾನು ಬೆಳಗಿನ ಎಂಟು ಗಂಟೆಗೇ ಮಾಸ್ಕೋಕ್ಕೆ ಮರಳಿ ಹೊರಟೆ."

ಪ್ರಾತಃಕಾಲ ಸಮೀಪಿಸಿತ್ತು. ಡಬ್ಬಿಯೊಳಗಿನ ದೀಪಗಳು ಆರಿದ್ದವು. ಪಾಜ್ನಿಶೇವನೂ ಒಂದು ನಿಟ್ಟುಸಿರು ಬಿಟ್ಟ. ಕಿಡಿಕಿಗಳ ಬಾಗಿಲು ಪಟಪಟನೆ ಬಡಿದುಕೊಳ್ಳುವುದರಿಂದಲೂ ಎದುರಿಗಿದ್ದ ಕಾರಕೂನನ ಗೊರಕೆಯಿಂದಲೂ ಡಬ್ಬಿಯೊಳಗಿನ ಶಾಂತತೆ ಭಂಗವಾಗುತ್ತಿತ್ತು. ಅರುಣೋದಯದ ಮಂದ ಬೆಳಕಿನಲ್ಲಿ ಪಾಜ್ನಿಶೇವನ ಮುಖ ನನಗೆ ಸ್ಪಷ್ಟವಾಗಿ ಗೋಚರವಾಗುತ್ತಿದ್ದಿಲ್ಲ. ಆತ ಮತ್ತೆ ಶುರು ಮಾಡಿದ. ಸ್ವರ ಉತ್ತೇಜಿತವಾಗಿತ್ತು.


"೨೪ ಮೈಲು ರಾಜಮಾರ್ಗದಿಂದಲೂ ಮುಂದೆ ೮ ಮೈಲು ರೈಲಿನಿಂದಲೂ ನಾನು ಹೋಗಬೇಕಾಗಿತ್ತು. ದಾರಿಯಲ್ಲಿ ಬಂದು ಹೋಗುತ್ತಿದ್ದ ದೃಶ್ಯ, ಜನಜೀವನದ ಚಿತ್ರಗಳಲ್ಲಿ ನಾನು ಎಲ್ಲಿ ಹೋಗುತ್ತಿದ್ದೇನೆಂಬುದನ್ನೂ ನಾನು ಮರೆಯುತ್ತಿದ್ದೆ. ಹೀಗೇ ತಿರುಗಾಡಲಿಕ್ಕೆ ಹೊರಟಿರುವೆನೆಂದೇ ಅನಿಸುತ್ತಿತ್ತು.

"ಏನೆಂಬುದನ್ನು ಹೋದ ಮೇಲೆ ನಿರ್ಣಯಿಸಬೇಕೆಂದು ನಾನು ಮನಸ್ಸು ಮಾಡಿದೆ. ಆದರೆ ರೈಲಿನಲ್ಲಿ ಕೂತೊಡನೆಯೆ ನನ್ನ ಚಿತ್ತ ದೋಲಾಯಮಾನವಾಯಿತು. ಭಯ ಶಂಕಿತ ಭಾವನೆಗಳು ತಲೆತುಂಬ ಬರತೊಡಗಿದವು. ನಾನೀಗ ಮನೆಗೇ ಬಂದೆನೆಂದು ಅನ್ನಿಸಿತು. ಅವರಿಬ್ಬರ ಕ್ರೀಡಾರತ ಚಿತ್ರಗಳು ಕಣ್ಮುಂದೆ ಬಂದು ಸಂತೆ ಹೂಡತೊಡಗಿದವು. ತಲೆ ಕೆಟ್ಟು ಹೋಯಿತು. ಕ್ಷೋಭೆ, ಅಪಮಾನ, ಕ್ರೋಧ ಒಂದೊಂದಾಗಿ ಬರತೊಡಗಿದವು. ಅವುಗಳನ್ನು ಮರೆಯಬೇಕೆಂದಷ್ಟೂ ಅವು ನನ್ನ ಚಿತ್ತದ ಮೇಲೆ ತಮ್ಮ ಅಚ್ಚನ್ನು ಆಳವಾಗಿ ಒತ್ತುತ್ತಿದ್ದವು. ನನ್ನ ಸಂದೇಹ ಸತ್ಯವೆಂದೇ ತೋರತೊಡಗಿತು.

"ಮತ್ತೆ ವಿಚಾರಧಾರೆ ಹೊರಳಿತು. ನನ್ನ ಪತ್ನಿಯ ವಯಸ್ಸು ಮೂವತ್ತು. ಅವಳ ಒಂದು ಹಲ್ಲು ಬಿದ್ದಿದೆ. ಆಕೆ ಗೃಹಕೃತ್ಯದಲ್ಲಿ ಮೈಮರೆತ ಗೃಹಿಣಿ. ಹೀಗೆಂದೂ ಮಾಡಲಾರಳು. ಸಂದೇಹ ಸುಳ್ಳೆಂದು ತೋರಿತು.

"ಒಮ್ಮೆ ಹಾಗೆ ಒಮ್ಮೆ ಹೀಗೆ ಹೊಯ್ದಾಡುತ್ತಿತ್ತು ಚಿತ್ತ. ಗಾಡಿ ನಿಂತಿತು. ಪ್ಲ್ಯಾಟ್‌ಫಾರ್ಮ್ ಮೇಲೆ ಇಳಿದೆ. ಹೊರಗೆ ಬಂದೆ. ಚಳಿಯಿಂದ ನಡುಗುತ್ತಿದ್ದೆ. ಹಲ್ಲುಗಳು ಕಟಕಟ ಬಡಿದುಕೊಳ್ಳುತ್ತಿದ್ದವು. ಟಾಂಗಾದಲ್ಲಿ ಕೂತು

Bellezza
WHITENING CREAM
A Perfect non-oily Foundation Cream



Also Other Beauty - Aids

FOR FREE ADVICE ON BEAUTY PROBLEMS CONSULT:
SALONE di BELLEZZA
9, Hampton Court, Near Colaba Bus-stop, Bombay 5.
Sole Distributors for MYSORE & MADRAS STATES:
C. R. & BROS.,
AVENUE ROAD, BANGALORE 2.
MIPL - E2

ಮನೆಗೆ ಹೊರಟೆ. ಸ್ಟೇಶನ್ನಿನಿಂದ ಅರ್ಧ ಮೈಲು ಹೋಗಿರಬೇಕು; ನಾನು ಸಾಮಾನನ್ನು ಮರೆತು ಬಂದದ್ದು ನೆನಪಾಯ್ತು. ಹೇಗೂ ರಸೀದಿ ಇದೆ, ಆ ಮೇಲೆ ತರಿಸಿಕೊಂಡರಾಯಿತೆಂದು ಮುಂದೆ ಸಾಗಿದೆ."

ಅಂತರ್ದ್ವಂದ್ವ

"ಎಷ್ಟು ನೆನಸಿಕೊಂಡರೂ ಆ ಸಮಯದ ಮನಃಸ್ಥಿತಿಯ ಸ್ಪಷ್ಟ ಚಿತ್ರ ಕಣ್ಮುಂದೆ ಬರಲೊಲ್ಲದು. ಇಷ್ಟು ಮಾತ್ರ ನಿಜ. ನನ್ನ ಜೀವನದಲ್ಲಿ ಏನೋ ಭೀಷಣ ಘಟನೆ ಘಟಿಸಲಿದೆ ಎಂದು ಮಾತ್ರ ನನಗೆ ಅನ್ನಿಸುತ್ತಿತ್ತು. ಗೇಟಿನಲ್ಲಿ ಗಾಡಿ ನಿಂತಿತು. ಅರ್ಧ ರಾತ್ರಿಯಾಗಿತ್ತು. ನನ್ನ 'ಭೆಟ್ಟಿಯಾಗುವ ಕೋಣೆ' ಯಲ್ಲೂ ನೃತ್ಯದ ಕೋಣೆಯಲ್ಲೂ ಬೆಳಕು ಬಿದ್ದಿತ್ತು. ಗೇಟಿನ ಒಳಗಡೆ ಮೊದಲೇ ಒಂದು ಟಾಂಗಾ ಬಂದು ನಿಂತಿದ್ದು ಕಾಣಿಸಿತು. ಬಾಗಿಲ ಗಂಟೆ ಬಾರಿಸಿದೆ. ಆಳು ಬಂದ. ಒಳ ಹೊಕ್ಕೊಡನೆ ಗೂಟದ ಮೇಲೆ ತೂಗು ಹಾಕಿದ ತ್ರುಖಾಚೆವಸ್ಕಿಯ ಕೋಟು ನನ್ನ ದೃಷ್ಟಿಗೆ ಬಿತ್ತು. ನನಗೆ ಆಶ್ಚರ್ಯವೆನ್ನಿಸಲಿಲ್ಲ. ಏಕೆಂದರೆ ಆಗುವುದೆಲ್ಲ ನನ್ನ ಸಂದೇಹಕ್ಕೆ ಪುಷ್ಟಿಕರವೇ ಆಗಿತ್ತು. ಆಳು ಎಗೋರನನ್ನು ಕೇಳಲಾಗಿ 'ಆತ' ಬಂದಿರುವುದು ಗೊತ್ತಾಯಿತು.

" 'ಮತ್ತಾರಾದರೂ ಬಂದಿರುವರೆ ?' ನಾನು.

" 'ಇಲ್ಲ ಬುದ್ಧಿ.'

" 'ಹುಡುಗರು ?'

" 'ಮಲಗಿಕೊಂಡು ಬಹಳ ಹೊತ್ತಾಯ್ತು ಬುದ್ಧಿ.'


"ನನ್ನ ಸಂದೇಹ ದೃಢವಾಯಿತು. ನನ್ನ ಕಣ್ಮುಂದೆ ಅವರ ಮಿಲನದ ಚಿತ್ರ ಬಂತು. ಶೋಕದಿಂದ ನಾನು ಉದ್ವಿಗ್ನನಾದೆ. ಆದರೆ ನನ್ನೊಳಗಿನ ರಾಕ್ಷಸ ಗಟ್ಟಿಯಾಗಿ ಹೇಳಿದ: 'ಹೆದರಬೇಡ. ಕುಗ್ಗಬೇಡ. ಇಂಥ ಸಮಯ ಮತ್ತೆ ಸಿಗಲಾರದು. ಆತ ಓಡಿಹೋದರೆ ನಿನ್ನ ಬಳಿ ಯಾವ ಆಧಾರವೂ ಉಳಿಯಲಾರದು.' ಆತ್ಮಗ್ಲಾನಿ ಸರಿಯಿತು. ನನ್ನ ಮನಸ್ಸಿನ ಸಂಯಮ ತಪ್ಪುತ್ತಿತ್ತು. ಅದಕ್ಕಾಗಿ ನನಗೆ ಸಂತೋಷವಾಗುತ್ತಿತ್ತು. ನಾನು ನಿರ್ದಯಿಯಾದೆ. ಸೈತಾನನಾದೆ.

" ಎಗೋರ್ ಭೆಟ್ಟಿಯಾಗುವ ಕೋಣೆಯ ಬಾಗಿಲು ತೆರೆಯಲಿಕ್ಕೆ ಹೊರಟಿದ್ದ. ಅವನನ್ನು ತಡೆದು ರಸೀದಿ ಕೊಟ್ಟು ಸ್ಟೇಶನ್ನಿಗೆ ಸಾಮಾನು ತರಲು ಕಳಿಸಿದೆ. ಆತ ಹೋದ ಮೇಲೆ ಬಾಗಿಲನ್ನು ಸಾವಕಾಶವಾಗಿ ಮುಚ್ಚಿಕೊಂಡೆ. ಎಲ್ಲವೂ ಸಮಾಪ್ತವಾಗಿದೆ ಎಂದುಕೊಂಡೆ. ಇನ್ನು ಸಂದೇಹ ಸಂದೇಹವಾಗಿ ಉಳಿದಿರಲಿಲ್ಲ. ಸತ್ಯವಾಗಿತ್ತು. ನಾನು ಪಾಪಿಯನ್ನು ದಂಡಿಸಬೇಕಿತ್ತು. ಕೂಡಲೇ ಹೊತ್ತು ಕಳೆಯದೆ ದಂಡಿಸಬೇಕಿತ್ತು.

"ನನ್ನ ಅಪ್ಪಣೆ ಇಲ್ಲದೆ ಇಂಥ ನಡುರಾತ್ರಿ ಈಕೆ ಆತನೊಂದಿಗೆ ಬಾಗಿಲು ಮುಚ್ಚಿದ ಕೋಣೆಯಲ್ಲಿ ಕೂತಿರುವಳೆ ? ನಾಚಿಕೆಗೇಡು ! ಎಷ್ಟು ಧಾರ್ಷ್ಟ್ಯ ! ಹೌದು. ಪಾಪಿ ತನ್ನ ಪಾಪವನ್ನು ಮುಚ್ಚಲೆಂದೇ ಇಂಥ ಸಾಹಸ ಮಾಡುತ್ತಾನೆ. ನಾನು ಬಂದುದು ಅವರಿಗೆ ತಿಳಿಯಬಾರದೆಂದು ಸದ್ದಿಲ್ಲದೆ ನಾನು ಹೆಜ್ಜೆ ಇಡುತ್ತಿದ್ದೆ. ಕೈಯೂರಿ ಮುಂದೆ ಸಾಗಿ 'ನೃತ್ಯದ ಕೋಣೆ' ಯ ಬಾಗಿಲಿಗೆ ಹೋದೆ.

" ಬದಿಯ ಕೋಣೆಯಲ್ಲಿ ಹುಡುಗರು ನಿದ್ರಿಸಿದ್ದರು. ಅವರನ್ನು ಆಕೆ ಪ್ರೀತಿಸುವುದು ಬರಿಯ ನಾಟಕವಾಗಿತ್ತು. ನನಗೆ ಬರೆದ ಪತ್ರ ಶುದ್ಧ ಸುಳ್ಳಾಗಿತ್ತು. ಈಗ ಆಕೆ ಅವನನ್ನು ಆಲಿಂಗಿಸಿಕೊಂಡಳು. ಆದರೆ ಇದು ಎಷ್ಟು ದಿನ ಹಿಂದಿನಿಂದ ? ಯಾರಿಗೆ ಗೊತ್ತು? ಅಥವಾ–ನನ್ನವೆನಿಸುವ ಈ ಮಕ್ಕಳು–ನನ್ನ ಆಳೇ ನನ್ನ ಹೆಂ..!

" ನಾನು ಸತ್ತೇಹೋಗುವೆನೆನಿಸಿತು. ಆದರೆ ಇಲ್ಲ. ನಾನು ಅವನನ್ನು ಕೊಂದೇ ತೀರಬೇಕು. ನಾನು ಬಟ್ಟೆ ಬಿಚ್ಚಿದೆ. ಬೂಟು ಬಿಚ್ಚಿದೆ. ಗೋಡೆಗಿದ್ದ ಕತ್ತಿ ರಿವಾಲ್ವರ್ ತಕ್ಕೊಂಡೆ. ನೃತ್ಯದ ಕೋಣೆಯ ಬಾಗಿಲನ್ನು ತೆರೆದೆ. ನನ್ನನ್ನು ನೋಡಿ ಅವರು ದಿಗ್ಭ್ರಾಂತರಾದರು. ಸಾವರಿಸಿ



ಮನೆಯೇ ತಾಯಿಯ ಮಮತೆಯ ಜಗತ್ತು — ಉತ್ತಮ ವಸ್ತುಗಳೇ ಅಲ್ಲಿ ಬೇಕು...

ರಕ್ಷಿಸುವ ತಾಯಿ 'ಡಾಲ್ಡ'ವನ್ನೇ ಬಳಸುತ್ತಾಳೆ

ತಾಯಿಯ ಪ್ರೀತಿಗೆ ಸಮಾನವಾದ ಪ್ರೀತಿ ಬೇರೆ ಇದೆಯೇ? ಆಕೆ ಕೊಳ್ಳುವ ವಸ್ತುಗಳಿಗಿಂತ ಹೆಚ್ಚು ಉತ್ತಮವಾದ ವಸ್ತುಗಳು ಬೇರೆ ಇವೆಯೇ? ತನ್ನವರ ಕಲ್ಯಾಣಕ್ಕಾಗಿ ಸಣ್ಣ ವಿಷಯಗಳಲ್ಲಿಯೂ ಅತ್ಯಂತ ಜಾಗರೂಕತೆ ವಹಿಸುತ್ತಾಳೆ ತಾಯಿ. ಹಾಗಿರುವಾಗ ಮನೆ ಮಂದಿಗೆ ಅಡಿಗೆ ಮಾಡುವಂತಹ ಮುಖ್ಯ ಕೆಲಸಕ್ಕೆ ಅವಳು ಉತ್ಕೃಷ್ಟವಾದ ಡಾಲ್ಡ ವನಸ್ಪತಿಯನ್ನು ಉಪಯೋಗಿಸುವುದರಲ್ಲಿ ಆಶ್ಚರ್ಯವೇನು? 'ಡಾಲ್ಡ' ಉತ್ತಮ ವನಸ್ಪತಿ ಎಣ್ಣೆಗಳಿಂದ ತಯಾರಿಸಲ್ಪಡುತ್ತದೆ. ಶರೀರದ ಬೆಳವಣಿಗೆಗಾಗಿ ಅದಕ್ಕೆ ವಿಟಮಿನ್‌ಗಳು ಸೇರಿಸಲ್ಪಡುತ್ತವೆ. 'ಡಾಲ್ಡ' ಅಡಿಗೆಯ ಶುದ್ಧ ಹಾಗೂ ಉತ್ಕೃಷ್ಟವಾದ ಸಾಧನ. ಅದರಿಂದ ಮಾಡಿದ ಅಡಿಗೆ ಅತ್ಯಂತ ರುಚಿಕರವಾಗುತ್ತದೆ. ನಿಮ್ಮ ಮನೆಯಲ್ಲಿಯೂ 'ಡಾಲ್ಡ' ಅದರ ನ್ಯಾಯವಾದ ಸ್ಥಾನವನ್ನು ಪಡೆಯಲಿ!



ಡಾಲ್ಡ ವನಸ್ಪತಿ

ರುಚಿಕರ ಅಡಿಗೆಗೆ ಸೊಗಸಾದ ಸಾಧನ

DL. 67-X29 KN

ಹಿಂದುಸ್ಥಾನ್ ಲೀವರ್ ಅವರ ತಯಾರಿಕೆ

ಕೊಳ್ಳುತ್ತಾ ಆತ ಹೊಸ ರಾಗ ಕಲಿಸುತ್ತಿದ್ದೆ ನೆಂದ. ನನ್ನ ಕೈಯಲ್ಲಿ ಕತ್ತಿಯನ್ನು ನೋಡಿ ಹೆದರಿದ. ನನ್ನ ಕೈ ಹಿಡಿದು 'ಇದನ್ನೇನು ಮಾಡುತ್ತೀ?' ಎಂದ. ಕೈ ಕೊಸರಿಕೊಂಡೆ. ಹೆದರಿ ಬಾಗಿಲಿನತ್ತ ಓಡಿದ. ಬೆನ್ನಟ್ಟಬೇಕೆಂದೆ. ಆದರೆ ಪತ್ನಿ ಇನ್ನೊಂದು ಕೈ ಹಿಡಿದಿದ್ದಳು. ಬಲ ವಾಗಿ ಝಾಡಿಸಿದೆ. ಹೊರಳಿ ಬಿದ್ದಳು. ಅವಳ ಮುಖ ಭಯಭ್ರಾಂತವಾಗಿತ್ತು. 'ನಿಮ್ಮಾಣೆ ಯಾಗಿಯೂ ನಾನು ಪಾಪಿ ಅಲ್ಲ' ಎಂದು ಆಕ್ರೋಶ ಮಾಡಿದಳು. ನನ್ನ ಮಸ್ತಕ ಸುಡು ತ್ತಿತ್ತು. 'ಕುಲಟೆ!' ಎಂದೆ. ನನ್ನನ್ನು ತಡೆಯ ಬಂದಿದ್ದವಳು ಹೆದರಿ ಸರಿದಳು. ಎಡಗೈಯನ್ನು ಅವಳ ಕುತ್ತಿಗೆಗಿಟ್ಟು ಹಿಂದೆ ಒತ್ತಿದೆ. ಅವಳು ಅಸಹಾಯಳಾಗಿದ್ದಳು. ನಾನು ಆವೇಶದಿಂದ ಕತ್ತಿಯನ್ನು ಅವಳ ಹೊಟ್ಟೆಯಲ್ಲಿ ಇರಿದೆ. ನಾನು ಅರಿವುಗೆಟ್ಟು ಮಾಡಿರಲಿಲ್ಲ. ಪೂರ್ವ ಯೋಜನೆ ಯಂತೆ ಮಾಡಿದೆ. ನನಗೆ ಪೂರ್ಣ ಸ್ಮರಣೆ ಇತ್ತು. ಬಹುಶಃ ಈಗಿನ ಪಶ್ಚಾತ್ತಾಪಕ್ಕಾಗಿ ಸ್ಮೃತಿ ತಪ್ಪಿರಲಿಲ್ಲವೇನೊ!

"ಅವಳ ಬಗಲಲ್ಲಿ ಕತ್ತಿ ತಿವಿದಿದ್ದೆ. ಮೊದು ವಾದ ಭಾಗವನ್ನದು ಸೀಳಿತ್ತು. ಕೈಯಿಂದ ಹಿಡಿ ಯಲೆತ್ನಿಸಿ ಆಕೆ ಕೈಯನ್ನು ಕೊರೆದುಕೊಂಡಿ ದ್ದಳು. ಅಸಹಾಯ ಅಬಲೆಯ ಕೊಲೆ ಮಾಡು ತ್ತಿರುವೆನಲ್ಲ ಎನಿಸಿ ಕತ್ತಿಯನ್ನು ಹಿಂದೆ ಎಳ ಕೊಂಡೆ. ಹತ್ಯೆ ತಡೆದೀತೆಂಬ ನನ್ನ ಕ್ಷಣಮಾ-ತ್ರದ ಭ್ರಮೆ!

"ಆವೇಶದಿಂದಲ್ಲ; ಯೋಜಿಸಿದಂತೆ ವರ್ತಿ ಸಿದ್ದೆ. ಹೌದು.

"ಆಕೆಯ ಕೂಗನ್ನು ಕೇಳಿ ಆಯಾ ಬಂದಳು. ಪತ್ನಿಯ ಎದೆಯಿಂದ ರಕ್ತ ಧಾರೆಯಾಗಿ ಹರಿಯು ತ್ತಿತ್ತು. ಇನ್ನೂ ನನ್ನ ಚಿತ್ತ ಹೊಯ್ದಾಡುತ್ತಲೇ ಇತ್ತು. ಇನ್ನೇನು ಮಾಡಲಿ ಎಂದು ಅಭ್ಯಾಸದ



ದಿನ ನಿತ್ಯದ ಸೇವನೆಯಲ್ಲಿ ದಿನವಿಡೀ ಉಲ್ಲಾಸ ಕೊಡುವ

ಮಂಗಳೂರು ಪಿ. ವಿ. ಎಸ್. ಬೀಡಿಗಳನ್ನೇ ಸೇದಿ

ಆನಂದ ಪಡೆಯಿರಿ



Manufacturers : **P. V. S. BEEDIES PRIVATE LTD.**

Post Box No. 7, Kodiyalbail MANGALORE – 3

Telegrams: "PUTHUBIDIS" PHONE: 83, 83 A RESIDENCE: 593

J 5–19


ಕೋಣೆಗೆ ಹೋದೆ. ಸೋಫಾದಲ್ಲಿ ಮೈಚೆಲ್ಲಿದೆ. ಮನಸ್ಸು ಶೂನ್ಯವಾಗಿತ್ತು. ಎಷ್ಟೋ ಹೊತ್ತಿನ ಮೇಲೆ ಹೊರಗೆ ಸದ್ದಾಯಿತು. ಟಾಂಗಾ ಬಂದಿತ್ತು. ಎಗೋರ್ ಸಾಮಾನು ತಂದಿದ್ದ. ಯಾರಿಗೆ ಬೇಕಾಗಿತ್ತೋ ಆ ಸಾಮಾನು?

"'ಏನಾಯಿತು ಕೇಳಿದೆಯಾ? ಹೋಗು ಪೋಲೀಸರಿಗೆ ಫೋನ್ ಮಾಡಿ ತಿಳಿಸು' ಎಂದೆ. ಆತ ಹಾಗೇ ಹೊರಟುಹೋದ. ಬಾಗಿಲನ್ನು ಮುಚ್ಚಿದೆ. ಸಿಗರೇಟು ಹೊತ್ತಿಸಿದೆ. ಪೂರಾ ಸುಡುವ ಮೊದಲೆ ಜಂಪು ಹತ್ತಿತು. ಕನಸು ಬಿತ್ತು. ನಾವಿಬ್ಬರೂ ಸುಖವಾಗಿದ್ದೆವು. ಜಗಳಾಡಿದ್ದೆವು. ಪುನಃ ಕೂಡಿದ್ದೆವು. ಸಮಸ್ಯೆಗಳಿದ್ದವು. ಮತಭೇದಗಳಿದ್ದವು. ಆದರೂ ಒಂದಾಗಿದ್ದೆವು. ಅಷ್ಟರಲ್ಲಿ ಬಾಗಿಲು ಬಡಿದ ಸದ್ದಾಯಿತು. ಎಚ್ಚರಾದೆ. ಪೋಲೀಸರೇ ಬಂದಿರಬೇಕೆನಿಸಿತು. ಆದರೆ ನನ್ನ ಪತ್ನಿಯೆ ಇರಬಹುದೆ? ನಾನು ಸುಮ್ಮನೆ ಕುಳಿತೆ. ನಿಜವಾಗಿಯೆ ಏನಾದರೂ ಆಗಿದೆಯೊ ಅಥವಾ ಇಲ್ಲವೊ ಎಂಬುದೇ ನನ್ನ ಮನಸ್ಸಿಗೆ ನಿರ್ಧಾರವಾಗಿ ತಿಳಿಯುತ್ತಿದ್ದಿಲ್ಲ.

"ಹೌದು. ಎಲ್ಲ ಮುಗಿದದ್ದೇ ನಿಜ! ಕುಪ್ಪಸವನ್ನು ಸೀಳಿ ಹೋದ ಕತ್ತಿ, ಸೋರಿದ ರಕ್ತಧಾರೆ, ನನ್ನ ಕಣ್ಮುಂದೆ ಬಂತು. ನನ್ನ ಎದೆ ಜುಮ್ಮೆಂದಿತು. ಇನ್ನೇನು ಮಾಡಲಿ ಎಂದುಕೊಂಡೆ. ರಿವಾಲ್ವರ್ ಎತ್ತಿಕೊಂಡೆ. ಹಿಂದೆಷ್ಟೋ ಸಲ ಆತ್ಮಹತ್ಯೆಯ ವಿಚಾರ ಮಾಡಿದ್ದೆ. ಆದರೆ ಆಕೆಯ ತಾಟಸ್ಥ್ಯ ನನ್ನನ್ನು ಆ ಸಾಹಸಕ್ಕೆ ದೂಡಿರಲಿಲ್ಲ. ಇಂದು ತಕ್ಕ ಸಮಯವಿತ್ತು. ಆದರೆ ಆತ್ಮಹತ್ಯೆಯ ವಿಚಾರವೂ ದೃಢವಾಗಲಿಲ್ಲ. ಆತ್ಮಹತ್ಯೆಯನ್ನೇಕೆ ಗೈಯಲಿ? ಮೊದಲು ಬಾಗಿಲು ತೆರೆಯುವಾ. ಆ ಮೇಲೆ ವಿಚಾರಮಾಡಿದರಾಯಿತು.

"ಎದ್ದು ಬಾಗಿಲನ್ನು ತೆರೆದೆ. ನನ್ನ ಪತ್ನಿಯ ವಿಧವೆ ಸೋದರಿ ಬಂದಿದ್ದಳು. 'ಏನು ಮಾಡಿದೆ ವಾಸ್ಯಾ' ಎಂದು ಭೋರಿಟ್ಟಳು.

"'ನಿನಗೇನು ಬೇಕು?' ನಾನಂದೆ. 'ಆಕೆ



ಸಾಯುತ್ತಿದ್ದಾಳೆ ವಾಸ್ಯಾ. ಡಾಕ್ಟರರು ಹೇಳುತ್ತಾರೆ ಆಕೆ ಉಳಿಯಲಾರಳು ಎಂದು. ನಡೆ ಅವಳ ಹತ್ತಿರ ನಡೆ. ಎಂಥಾ ಭಯಾನಕ ದೃಶ್ಯ ಅದು.'

"'ನಾನು ಬರಲೆ?' ನಾನು ಯೋಚಿಸಿದೆ. ಹೌದು. ಹೋಗಬೇಕಿತ್ತು. ಪತಿ ತನ್ನ ಪತ್ನಿಯ ವಧೆ ಮಾಡಿದ್ದಾಗ ಹೀಗೆಂದೆ ಆತ ಯೋಚಿಸುತ್ತಾನೆ. ನಾನೂ ಹೋಗುವೆ. ನಾನೂ ಸಾಯುವುದಾದರೆ ಆಮೇಲೆ ಬೇಕಾದಷ್ಟು ಸಮಯವಿದೆ. ಆದರೆ ಸಾಯುವ ಮುಂಚೆ ಅವಳನ್ನು ನೋಡಬೇಕು. ಒಂದು ವೇಳೆ ಅವಳ ಮುಖ ಕಿರುನಗೆಯಿಂದ ಅರಳಿದರೆ! ನೋಡಬೇಕು. ಆದರೆ ನಾನು ಅದರಿಂದ ಉತ್ತೇಜಿತನಾಗಲಾರೆ!

"ನಾನು ಹೊರಟೆ. ಕಾರ್ಬೋಲಿಕ್ ಸಾಬೂನು ಮತ್ತು ಐಡೊಫಾರ್ಮಿನ ವಾಸನೆಯಿಂದ ನನ್ನ ಸ್ವಪ್ನ ಭಂಗವಾಯಿತು. ಸತ್ಯ ಮತ್ತೊಮ್ಮೆ ನನಗೆ ತಟ್ಟಿತು. ನಾನು ಸ್ತಂಭಿತನಾದೆ. ಎಲ್ಲ ಮುಗಿದಿತ್ತು. ಆದರೂ ಮತ್ತೇಕೆ ಯೋಚಿಸುತ್ತಿದ್ದೆ ನಾನು?

"ದಾರಿಯಲ್ಲೇ ನನ್ನ ಐದೂ ಮಕ್ಕಳು ಸಿಕ್ಕವು. ಹೆದರಿದ್ದವು ಪಾಪ! ನನ್ನ ಕಡೆ ಬರಲಿಲ್ಲ ಕೂಡ! ಹೆಣ್ಣಾಳು ಬಂದು ಕೋಣೆಯ ಬಾಗಿಲನ್ನು ತೆರೆದಳು. ನೋಡಿದೆ. ಒಳಗೆ ಹೋದೆ. ನನ್ನ ಹಾಸಿಗೆಯ ಮೇಲೆ ಆಕೆಯನ್ನು ಮಲಗಿಸಲಾಗಿತ್ತು. ಔಷಧೋಪಚಾರ ಮಾಡಲಾಗಿತ್ತು. ಆಕೆಯ ಮುಖ ಉಬ್ಬಿತ್ತು. ಕಣ್ಣ ಕೆಳಗಿನ ಭಾಗ ನೀಲಿಯಾಗಿತ್ತು. ಅಲ್ಲಿಯೂ ಒಂದು ಕಚ್ಚಾಗಿತ್ತು.

"ಅವಳ ಸೌಂದರ್ಯ ಸಂಪೂರ್ಣ ನಷ್ಟವಾಗಿತ್ತು. ಹೇಸಿಕೆ ಬರುವಂತಾಗಿತ್ತು ಅವಳ ರೂಪ. ನಾನು ದೂರದಲ್ಲೇ ಉಳಿದೆ. 'ಮುಂದೆ ಹೋಗು. ಅವಳ ಹತ್ತಿರ ಹೋಗು' ವಿಧವೆ

Estd 1943

Tel:-"Sunandafac"

ಸುಗಂಧ ಸುಮಧುರವಾದ ಸುಗಂಧ ದ್ರವ್ಯಗಳಿಗೆ ನಾಡಿನಾದ್ಯಂತ
ಪ್ರಖ್ಯಾತವಾದ

* ಸುನಂದರಾಜ ಅಗರಬತ್ತಿ
* ಸುನಂದ ರೋಸ್ ಬತ್ತಿ
* ಪೂಜಾರಿಣಿ ಬತ್ತಿ
* ಗುಲಾಬ್-ಕೆ-ಫೂಲ್ ಅಗರಬತ್ತಿ

ಸುನಂದ ಅಂಬರ್ ಬತ್ತಿ, ಅಲ್ಲದೆ ಸುನಂದ ಡೀಲಕ್ಸ ಪರ್‌ಫ್ಯೂಮ್ಡುಬ್ಯಾಗ್, ಮತ್ತು ಪರಿಮಳಯುಕ್ತವಾದ ದ್ರವ್ಯಗಳನ್ನೇ ಯಾವಾಗಲೂ ಉಪಯೋಗಿಸಿರಿ.

ತಯಾರಕರು:— ಕೆ. ರಾಮಕೃಷ್ಣಪ್ಪ

ಮಾಲೀಕರು:— ಸುನಂದ ಅಗರಬತ್ತಿ ಫ್ಯಾಕ್ಟರಿ
1820, ಅಕ್ಬರ್ ರಸ್ತೆ, ಮೈಸೂರು.

ಹೇಳುತ್ತಿದ್ದಳು. ನನಗನಿಸಿತು, ಆಕೆ ಅಪರಾಧವನ್ನು ಒಪ್ಪಿ ನನ್ನ ಕ್ಷಮೆ ಕೇಳಬಹುದು ಎಂದು. ಅವಳು ಕಷ್ಟದಿಂದ ನನ್ನತ್ತ ಕಣ್ಣು ಹೊರಳಿಸಿ ಶಬ್ದಗಳನ್ನು ಉಚ್ಚರಿಸಿದಳು. 'ನಿಮ್ಮ ಇಷ್ಟ ಈಡೇರಿಸಿಕೊಂಡಿರಿ. ನನ್ನನ್ನು ಕೊಂ....' ಮೃತ್ಯುಮುಖದಲ್ಲಿದ್ದ ಅವಳಲ್ಲಿ ಅದೇ ಚಿರಪರಿಚಿತ ದ್ವೇಷಭಾವ ವ್ಯಕ್ತವಾಗಿತ್ತು.

"'ಮಕ್ಕಳು ನಿಮ್ಮ ಬಳಿ ಉಳಿಯಲಾರವು. ಈಕೆಯೊಂದಿಗೆ ಹೋಗುತ್ತವೆ' ಎಂದು ತನ್ನ ಅಕ್ಕನನ್ನು ತೋರಿಸಿದಳು. ತನ್ನ ವ್ಯಭಿಚಾರ, ಅನೀತಿಗಳ ಬಗ್ಗೆ ಆಗ ಚಕಾರಶಬ್ದವೆತ್ತಲಿಲ್ಲ. ಬಾಗಿಲ ಕಡೆ ದೃಷ್ಟಿ ಹೊರಳಿಸಿ 'ನೋಡಿರಿ. ನಿಮ್ಮ ಕೃತ್ಯ!' ಎಂದಳು. ನನ್ನ ಮಕ್ಕಳು ನಿಂತಿದ್ದವು. ಅವರನ್ನೊಮ್ಮೆ ವಿಕಾರಳಾದ ಇವಳನ್ನೊಮ್ಮೆ ನೋಡು-ನೋಡುತ್ತಿದ್ದಂತೆ ನನ್ನ ಸ್ವಾಭಿಮಾನದ ಗರ್ವ ಇಳಿಯಿತು. ಅವಳಲ್ಲಿಯ ಮಾನವತೆ ತೋರಿತು. ಅವಳ ಅನೀತಿ, ಅಪರಾಧ, ಒಂದೂ ಲೆಕ್ಕಕ್ಕೆ ಬರದಂತಾಯಿತು. ನನ್ನ ಹೀನ ಕೃತ್ಯಕ್ಕಾಗಿ ಮನ ಮರುಗಿತು. ಅವಳೆದುರು ಮಂಡಿಯೂರಿ ಕ್ಷಮಾಯಾಚನೆ ಮಾಡಲೇ ಎನಿಸಿತು. ಆದರೆ ಅಷ್ಟು ನೈತಿಕ ಬಲ ನನ್ನಲ್ಲಿ ಎಲ್ಲಿಂದ ಬಂದೀತು?

"ಸ್ವಲ್ಪ ಹೊತ್ತಿನಲ್ಲಿ ಅವಳು ತುಟಿ ಅಲುಗಾಡಿಸಿದಳು. ಏನೋ ಕೇಳುವಂತಿದ್ದಳು. 'ಯಾಕೆ ....ಯಾಕೆ ಮಾಡಿದಿರಿ?' ಎಂದಳು. 'ಕ್ಷಮಿಸು' ನಾನು ಬಾಯಿಬಿಟ್ಟೆ.

"'ಕ್ಷಮೆ! ಸಾವನ್ನು ತಪ್ಪಿಸಿಕೊಳ್ಳಲು ನಿಮಗೀಗ ಕ್ಷಮೆ! ನನ್ನನ್ನು ಕೊಂದ ...' ಅವಳು ಜೋರಾಗಿ ಚೀರಿದಳು. ನಿಟ್ಟಿಸಿ ನನ್ನನ್ನು ನೋಡಿದಳು. 'ನಿಮಗೆ ಬೇಕಾದ್ದನ್ನು ನೀವು ಮಾಡಿದಿರಿ. ಹೇಡಿಗಳು. ನಿಮ್ಮನ್ನು ಕಂಡು ಹೇಸಿಕೆ ಹುಟ್ಟುತ್ತದೆ....ಗುಂಡು ಹಾಕುವಿರಾ?.... ಹಾಕಿರಿ....ಎಲ್ಲರಿಗೂ ಹಾಕಿರಿ....ನನಗೇನು ಭಯ? ....ಆತ ಹೋದ....ಹೊರಟು ಹೋದ...."

ಆಮೇಲೆ ಆಕೆ ಸ್ಮೃತಿ ತಪ್ಪಿದಳು. ಮರಳಿ ಅವಳಿಗೆ ಎಚ್ಚರ ಬರಲಿಲ್ಲ. ಮಧ್ಯಾಹ್ನದ ವರೆಗೆ ಚಡಪಡಿಸುತ್ತ ಆಕೆ ಅಂದೇ ದೇಹವಿಟ್ಟಳು.

"ನಾನೇ ಪೋಲೀಸರಿಗೆ ತಿಳಿಸಿ ಜೈಲು ಸೇರಿದೆ. ೧೧ ತಿಂಗಳ ಕಾರಾವಾಸದಲ್ಲಿ ಆತ್ಮ ಪರೀಕ್ಷಣೆ ಮಾಡಿದೆ. ನನ್ನ ಕಳೆದ ಜೀವನದ ವಿಶ್ಲೇಷಣೆ ಮಾಡಲೆತ್ನಿಸಿದೆ. ಹಾಗೆ ನೋಡಿದರೆ ಮೂರನೇ ದಿನದಿಂದಲೇ ನಾನು ವಿಚಾರ ಮಾಡತೊಡಗಿದ್ದೆ. ತಿಳಕೊಳ್ಳಲಾರಂಭಿಸಿದ್ದೆ. ಮೂರನೇ ದಿನವೇ ಅವಳ ಪ್ರೇತಯಾತ್ರೆ ಹೊರಟದ್ದು. ಆ ಯಾತ್ರೆಗೆ ನನ್ನನ್ನೂ ಒಯ್ದಿದ್ದರು."

ಪಾಜ್ನಶೇವನ ಶೋಕ ಮತ್ತೊಮ್ಮೆ ಮರುಕಳಿಸಿತು. ಆದರೂ ಪ್ರಯತ್ನಪೂರ್ವಕ ತಡೆದ. "ಅವಳ ಹೆಣ ನೋಡಿದಾಗಲೇ ನನಗೆ ನನ್ನ ಕೃತ್ಯದ ಕಲ್ಪನೆ ಬಂತು. ನಗುವ ಮಾತಾಡುವ ನಡೆದಾಡುವ ಜೀವಂತ ಪತ್ನಿಯನ್ನು ನಾನು ನಿಶ್ಚಲ ಕಾಷ್ಠವನ್ನಾಗಿ ಮಾಡಿದ್ದೆ. ಮತ್ತೆಂದೂ ಆ ಕಾಷ್ಠ ಬೆಚ್ಚಗಾಗಿ ನಡೆದಾಡುವಂತಿರಲಿಲ್ಲ. ಇದರ ವೇದನೆ ಇಂಥ ಕೃತ್ಯಮಾಡಿದವನೆ ತಿಳಿಯಬಲ್ಲ. ಅನ್ಯರಿಗೆ ಅದು ತಿಳಿಯದು. ತಿಳಿಯದು. ಉಫ್!...."

ಕೆಲಹೊತ್ತು ಯಾರೂ ಮಾತಾಡಲಿಲ್ಲ. ಮತ್ತೆ ಆತನೇ ಸುರುಮಾಡಿದ. "ಇಂದು ಬಂದಿರುವ ಬುದ್ಧಿ ನನಗೆ ಅಂದೇ ಬಂದಿದ್ದರೆ ನಾನು ಎಂದೆಂದಿಗೂ ಅವಳನ್ನು— ಅವಳನ್ನೇ ಏನು? ಯಾರನ್ನೂ ಲಗ್ನವಾಗುತ್ತಿದ್ದಿಲ್ಲ!

"ನನ್ನನ್ನು ಕ್ಷಮಿಸಿ. ಇನ್ನು ಸಾಕು." ಎಂದಾತ ಎದ್ದು ತನ್ನ ಸ್ಥಳದಲ್ಲಿ ಹೋಗಿ ಒರಗಿಕೊಂಡ. ಎಂಟು ಗಂಟೆಗೆ ನಾನು ಸ್ಟೇಶನ್‌ನಲ್ಲಿ ಇಳಿಯುವಾಗ ಅವನನ್ನು ನಮಸ್ಕರಿಸೋಣವೆಂದು ಹೋದೆ. ಆತ ನಿದ್ರಿಸಿರಲಿಲ್ಲ. ರೋದಿಸುತ್ತಿದ್ದ.

ನಮಸ್ಕರಿಸಿದೆ. ಕೈ ಒಡ್ಡಿದೆ. ಕ್ಷೀಣವಾಗಿ ತನ್ನ ಕೈ ಚಾಚಿದ. ಹಸ್ತಾಂದೋಲನವಾಯಿತು. ಕ್ಷೀಣವಾಗಿ ತುಟಿ ಅಗಲಿಸಿದ. ಅದನ್ನು ಕಂಡು ನನಗೂ ದುಃಖ ಉಮ್ಮಳಿಸಿ ಬಂತು. *



ASP/N 2



ಮನೋರಂಜನೆಯ ಜಗತ್ತಿನಲ್ಲಿ ಎರಡು ನವೋದಿತ ತಾರೆಗಳು...


ನ್ಯಾಷನಲ್ ಎಕ್ಕೋ ರವರ

2 ಹೊಸ ರೇಡಿಯೋಗಳು

ಅಧಿಕ ಶ್ರವಣಸುಖದ ಸುಗ್ಗಿ !

ನಿಮಗೆ ಅಧಿಕ ಶ್ರವಣಸುಖವನ್ನು ನೀಡಲು ನ್ಯಾಷನಲ್-ಎಕ್ಕ್ಯೋರವರು ನಿರ್ಮಿಸಿರುವ ಈ ಸುಂದರವಾದ ಎರಡು ಹೊಸ ರೇಡಿಯೋಗಳನ್ನು ನೋಡಿರಿ. ಅವುಗಳಲ್ಲಿ ಒಂದು ಎಸಿ/ಡಿಸಿ ಕರೆಂಟಿನಿಂದ ನಡೆಯುತ್ತದೆ, ಇನ್ನೊಂದು ಬ್ಯಾಟರಿಯಿಂದ ನಡೆಯುತ್ತದೆ. ಸುಂದರ ವಿನಿಯರ್ ಕ್ಯಾಬಿನೆಟ್, ಉತ್ತಮವಾದ 'ಹೈ-ಫೈ' ಲೌಡ್‌ಸ್ಪೀಕರ್, ಆಕರ್ಷಕವಾದ ಡಾಯಲ್, ಅತ್ಯಂತ ಸ್ಪಷ್ಟವಾದ ಸ್ವಾಭಾವಿಕ ಧ್ವನಿ...ಇವು ಈ ರೇಡಿಯೋಗಳ ಕೆಲವು ವಿಶಿಷ್ಟತೆಗಳು! ಮಾತ್ರವಲ್ಲದೆ ಅವು ಸಂಪೂರ್ಣವಾಗಿ 'ಮಾನ್ಸೂನ್‌ಪ್ರೂಫ್' ಕೂಡ ಮಾಡಲ್ಪಡುತ್ತವೆ!

ಈ ರೇಡಿಯೋಗಳನ್ನು ಉಚಿತವಾಗಿ ಹಾಕಿ ತೋರಿಸುವಂತೆ ನಿಮ್ಮ ಹತ್ತಿರದ ನ್ಯಾಷನಲ್-ಎಕ್ಕ್ಯೋ ವ್ಯಾಪಾರಿಗೆ ಇಂದೇ ಹೇಳಿರಿ!



ಮಾಡೆಲ್ ಯು-755 :
ಎಸಿ/ಡಿಸಿ ಸೆಟ್. 6 ವಾಲ್ವ್‌ಗಳು, 3 ಬ್ಯಾಂಡ್‌ಗಳು, ಟೋನ್ ಕಂಟ್ರೋಲ್.
ರೂ. 325.00. ಎಕ್ಸೈಸ್ ಮತ್ತು ಸ್ಥಳೀಯ ತೆರಿಗೆಗಳು ಪ್ರತ್ಯೇಕ

ಮಾಡೆಲ್ ಬಿ-755 :
ಡ್ರೈ ಬ್ಯಾಟರಿ ಸೆಟ್. 5 ವಾಲ್ವ್‌ಗಳು, 3 ಬ್ಯಾಂಡ್‌ಗಳು, ಟೋನ್ ಕಂಟ್ರೋಲ್.
ಬ್ಯಾಟರಿ ಬಹಳ ಕಡಿಮೆ ಖರ್ಚಾಗುತ್ತದೆ.
ರೂ. 325.00. ಎಕ್ಸೈಸ್ ಮತ್ತು ಸ್ಥಳೀಯ ತೆರಿಗೆಗಳು ಪ್ರತ್ಯೇಕ

ನ್ಯಾಷನಲ್-ಎಕ್ಕ್ಯೋ ರೇಡಿಯೋಗಳು ಉತ್ತಮತರ...
ಅವು ಮಾನ್ಸೂನ್‌ಪ್ರೂಫ್ ಮಾಡಲ್ಪಡುತ್ತವೆ!

ಜನರಲ್ ರೇಡಿಯೋ ಅಂಡ್ ಅಪ್ಲಯನ್ಸಸ್ ಲಿ.
ಬೊಂಬಾಯಿ • ಕಲ್ಕತ್ತ • ಮದರಾಸು • ದೆಹಲಿ • ಪಾಟ್ನ
ಬೆಂಗಳೂರು • ಸಿಕಂದರಾಬಾದು

JWT-GRA. 2259

ಕನ್ನಡದಲ್ಲಿ ತೀರ ಹೊಸಬಗೆಯ ಗ್ರಂಥ !

ಸಂಗೀತ ವಿದುಷಿ ಕುಮಾರಿ ಗಾಯತ್ರಿ ರಾಜಾಪೂರ ಇವರು

ಗಾಯನ ಕಲೆಯಲ್ಲಿ ಪ್ರವೀಣತೆಯನ್ನು ಗಳಿಸಿ ಸ್ವಾನುಭವದಿಂದ ಬರೆದ ಗ್ರಂಥ !!

ಭಾರತೀಯ ಸಂಗೀತ ದರ್ಶನ

ಡೆಮ್ಮಿ ಅಷ್ಟಪತ್ರ ೩೦೦ ಕ್ಕೂ ಮಿಕ್ಕಿ ಪುಟಗಳು

ಬೆಲೆ : ೫ ರೂಪಾಯಿ ಮಾತ್ರ

ಅಂಚೆ ವೆಚ್ಚ ಬೇರೆ. ವಿ. ಪಿ. ಯಿಂದ ಕಳಿಸಲಾಗುವದಿಲ್ಲ.

ಲೋಕ ಶಿಕ್ಷಣ ಟ್ರಸ್ಟಿನ ಪ್ರಕಾಶನ

ದೊರೆಯುವ ಸ್ಥಳ : **ಸಂಯುಕ್ತ ಕರ್ನಾಟಕ**, ಕೊಪ್ಪೀಕರರೋಡ, **ಹುಬ್ಬಳ್ಳಿ**

ಸಂಯುಕ್ತ ಕರ್ನಾಟಕ, ೨ ರೆಸಿಡೆನ್ಸಿ ರೋಡ, **ಬೆಂಗಳೂರು-೧.**

ಹೊಸದರಲ್ಲಿ ಹೊಸತರ . . . . .

ಜೀವನದ ವಿವಿಧರಂಗಗಳಲ್ಲಿ
ನಿತ್ಯೋಪಯೋಗಿ

ಓದುವದು ಬರಿ ರಂಜನೆಗಾಗಿರದೆ
ಜ್ಞಾನಾರ್ಜನೆಗಾಗಿ ಎನ್ನುವುದನ್ನು
ಸಾರಿಹೇಳುವ ಏಕೈಕ ಮಾಸಪತ್ರಿಕೆ


ಕಾಮಧೇನು

ವಾ. ಚಂದಾ ೫ ರೂ. ಬಿ. ಸಂ. ೫೦ ನ. ಪೈ.

ಹುಬ್ಬಳ್ಳಿ — ಬೆಂಗಳೂರು ೧

This Magazine owned by The Loka Shikshana Trust, Hubli is printed and published by Shri H. R. Purohit at the Samyukta Karnatak Press, Koppikar Road, Hubli.

ಶ್ರೀ ದಿವಾಕರ ರಂಗರಾಯರ **ಗೀತೆಯ ಗುಟ್ಟು** ೫ ನೇ ಆವೃತ್ತಿ
ಪುಟ: ೨೬೦ ಬೆಲೆ: ರೂ. ೩-೦೦ (ಅ. ವೆ. ಪ್ರತ್ಯೇಕ)
ಅಧ್ಯಾತ್ಮ ಕಾರ್ಯಾಲಯ, ಹುಬ್ಬಳ್ಳಿ ಹಾಗೂ ೨, ರೆಸಿಡೆನ್ಸಿ ರೋಡ್ ಬೆಂಗಳೂರು-೧



ತಯಾರಕರು:
ಶ್ರೀ ರಾಮಕೃಷ್ಣ ಆಯಿಲ್ ಮಿಲ್ಸ್
ತುಮಕೂರು. H. O. ಮಂಗಳೂರು.

Regd. No. B
KASTU
A KANNA
MONTHLY D
Circulates thro
the Mysore
and outside wh
Kannada is sp
Command
the highest nu
of reader
Caters to all
75nP.
A Loka Shiks
Trust Public